UNIVERSAL LIBRARY
OU_200054
UNIVERSAL LIBRARY

Osmania University Library

Call No K

Accession No. K 617

Author K

Title

This book should be returned on or before the date last marked below.

# ಸೌಭಾಗ್ಯ ತಿಲಕ.

# Soubhagya Tilaka.

ಲೇಖಕ:—

ಬಿ. ಪ. ಕಾಳೆ.

1928.

ಆ. ೨ ಬೇರೆ. ಬೆಲೆ ೧ ರೂ.

ಶ್ರೀ ಶೇಷಾಚಲ ಪ್ರೆಸ್ಸ, ಆನಂದವನ.

# ಸೌಭಾಗ್ಯತಿಲಕ.

[ಸಾಮಾಜಿಕ ಕಾದಂಬರಿ.]

ಲೇಖಕ

## ಚಿ. ಪ. ಕಾಳೆ.

[ಶಕ್ತಿಮಯಿ, ಮಿತ್ರದುಃಖ, ಭಗವಾನ್‌ದಾಸ,

ಅಡಿಗೆಯೂ-ಊಟವೂ, ಪ್ರಗತಿ ಅಥವಾ ದಾಸ್ಯವಿಮೋಚನ, ಮಹಾತ್ಮಾಗಾಂಧಿ,

ಹಿಂದೂ-ಮುಸಲ್ಮಾನರ ಐಕ್ಯ ಮುಂತಾದ

ಪುಸ್ತಕಗಳ ಕರ್ತೃ.]

ಪ್ರಕಾಶಕ

ಯ. ಗು. ಕುಲಕರಣಿ,

ಆನಂದವನ.

೧೯೨೩

ಬೆಲೆ ೧ ರೂಪಾಯಿ.


“ಆನಂದವನ-ಅಗಡಿಯ, ಶ್ರೀ
ಶೇಷಾಚಲ ಪ್ರಿಂಟಿಂಗ ಪ್ರೆಸ್ಸಿ”
ನಲ್ಲಿ ಛಿ. ವಿ. ಕಾಳೆ, ಇವರಿಂದ
ಮುದ್ರಿಸಲ್ಪಟ್ಟಿತು.

Checked 1969

# ಪೀಠಿಕೆ.

ಈ ಸಾಮಾಜಿಕ ಕಾದಂಬರಿಯನ್ನು ಬರೆಯುವ ಮುಖ್ಯ ಉದ್ದೇಶವೇನಂದರೆ, ದ್ವೀಪಾಂತರಗಳಲ್ಲಿ ನಮ್ಮ ಹಿಂದೂಬಾಂಧವರಿಗಾಗುತ್ತಿರುವ ಎಲ್ಲವಿಧದ ಅಪಮಾನ-ಪೀಡೆಗಳನ್ನು ನಮ್ಮ ದೇಶಬಾಂಧವರಿಗೆ ಯಥಾಸ್ಥಿತವಾಗಿ ತಿಳಿಸುವದು. ಈ ನನ್ನ ಉದ್ದೇಶವು ಎಷ್ಟರ ಮಟ್ಟಿಗೆ ಸಾಧಿಸಿರುವದೆಂಬದನ್ನು ವಾಚಕರೇ ಪರೀಕ್ಷಿಸಿಕೊಳ್ಳಬೇಕೆಂತಲೂ, ನನ್ನ ಇತರ ಪುಸ್ತಕಗಳಿಗೆ ಆಶ್ರಯಕೊಟ್ಟು ಶ್ರೀ ಶಿವಾಜಿ ಪಾಠಶಾಲಾ ಸಂಸ್ಥೆಗೆ ಸಹಾಯ ಮಾಡಿರುವಂತೆ ಈ ಪುಸ್ತಕಕ್ಕೂ ಆಶ್ರಯಕೊಟ್ಟು ಶ್ರೇಯೋಭಾಗಿಗಳಾಗಬೇಕೆಂತಲೂ ಪ್ರಾರ್ಥಿಸಿ, ಇನ್ನು ನಾನು ಬೇರೆ ಕೆಲಸಕ್ಕೆ ತೊಡಗುವೆನು.

ಆನಂದವನ,

ತಾ|| ೪-೧-೧೯೨೩.

ಲೇಖಕ.

# ಅನುಕ್ರಮಣಿಕೆ.


| ಪರಿಚ್ಛೇದ | ವಿಷಯ | ಪುಟ |
|---|---|---|
| ೧ | ಗುರುತರ ಹೃದಯೋದಾಪ | ೧ |
| ೨ | ಕಲಂಕಿತ ಪತ್ರ | ೭ |
| ೩ | ಉದ್ಧಟ ಸ್ಟೇಶನ್ ಮಾಸ್ತರ | ೧೩ |
| ೪ | ಕೃತಘ್ನನಾದ ರಾಮಚಂದ್ರ | ೧೯ |
| | ಭೀಷಣವಾದ ಹತಾಶೆ | ೩೦ |
| | ಅಂತರಂಗದ ಕಾಲಕೂಟವು ಮೋರೆಯಲ್ಲಿ ಒಡೆದು ಕಾಣಿಸಿತು | ೩೭ |
| ೭ | ವಿಮಲೆಯ ಪೂರ್ವವೃತ್ತ | ೪೭ |
| ೮ | ಕ್ಷೇತ್ರನಿವಾಸ | ೫೬ |
| ೯ | ತನ್ನ ಪೇಚು ತನಗೇ ತಿರುಗಿತು | ೬೩ |
| ೧೦ | ದ್ವೀಪಾಂತರ ಗಮನ | ೭೩ |
| ೧೧ | ಸವತಿಮತ್ಸರ | ೯೨ |
| ೧೨ | ಸರ್ವಂ ಖಲ್ವಿದಂ ಬ್ರಹ್ಮ | ೧೦೭ |
| ೧೩ | ನ ಬ್ರೂಯಾತ್ ಸತ್ಯಮಪ್ರಿಯಮ್ | ೧೧೨ |
| ೧೪ | ಪಲಾಯನ | ೧೧೯ |
| ೧೫ | ಮುಪ್ಪಿಗೆ ಆಯುಷ್ಯವು ಹೆಚ್ಚು | ೧೨೮ |
| ೧೬ | ಸವತಿಯ ಸುಹೃದಯ | ೧೩೪ |
| ೧೭ | ಅಪವಿತ್ರ ಪರದೇಶೀ ಸಕ್ಕರೆ | ೧೪೫ |
| ೧೮ | ಪಾಪಿಯ ಪಶ್ಚಾತ್ತಾಪ | ೧೫[illegible] |
| ೧೯ | ಸೌಭಾಗ್ಯವಿಹೀನ ಸವತಿಯರು | [illegible] |
| ೨೦ | ಸೌಭಾಗ್ಯತಿಲಕ | |
| ೨೧ | ಉಪಸಂಹಾರ | ೧೮೬ |

# ಸೌಭಾಗ್ಯತಿಲಕ.

## ಒಂದನೆಯ ಪರಿಚ್ಛೇದ.

## ಗುರುತರ ಹೃದಯೋದಾಹ.

ಇಂದು ಸಾವಿತ್ರೀ ವ್ರತವು; ಈ ವ್ರತದ ಫಲದಿಂದಲೇ ಸಾವಿತ್ರಿಯು ತನ್ನ ಮೃತಪತಿಯನ್ನು ಪುನಃ ಸಂಜೀವನಿಗೊಳಿಸಿಕೊಂಡಿರುವಳು. ಹೆಣ್ಣುಮಕ್ಕಳ ವ್ರತೋಪಾಸನೆಗಳಲ್ಲಿ ಈ ಸಾವಿತ್ರೀ ವ್ರತವೇ ಪ್ರಾಮುಖ್ಯವಾದದ್ದು. ಕಮಲಾಸುಂದರಿಯು ಈ ದಿವಸ ಈಶ್ವರೋಪಾಸನೆಯ ಸಮಸ್ತ ಸಾಮಗ್ರಿಯನ್ನು ಸಿದ್ಧಮಾಡಿಟ್ಟುಕೊಂಡು ಪತಿಯ ಆಗಮನವನ್ನು ನಿರೀಕ್ಷಿಸುತ್ತಿದ್ದಳು. ಲಗ್ನವಾದ ಎರಡು ವರ್ಷಗಳಲ್ಲಿಯೇ ಕಮಲೆಯು ಗಂಡನ ಮನೆಗೆ ಬಂದಿದ್ದಳು. ಆಗಲೆ ಅವಳು ಈ ಪರಮ ಪವಿತ್ರವ್ರತವನ್ನು ಕೈಕೊಳ್ಳಲು ಹವಣಿಸಿದಳು; ಆದರೆ ಆಗ ಆಕೆಯ ವಯಸ್ಸು ಕೇವಲ ಹದಿಮೂರೇ ವರ್ಷದ್ದಾಗಿತ್ತು. ಇಷ್ಟು ಚಿಕ್ಕ ವಯಸ್ಸಿನಲ್ಲಿ ಇಂಥ ಕಠಿಣ ವ್ರತವನ್ನು ಕೈಕೊಳ್ಳಬೇಡೆಂದು ಎಲ್ಲ ಹಿರಿಯರೂ ಆಕೆಗೆ ಅಡ್ಡಿಯನ್ನುಂಟು ಮಾಡಿದ್ದರಿಂದ ಅವಳು ಆಗ ವ್ರತಗ್ರಹಣ ಮಾಡಿದ್ದಿಲ್ಲ. ಈಗ ಎರಡು ವರ್ಷಗಳ ಹಿಂದೆ ಅವಳೀ ವ್ರತವನ್ನು ಪ್ರಾರಂಭಮಾಡಿದ್ದಳು. ಅವಳ ಗಂಡನಾದ ಶಿವರಾಯನು ಎಲ್ಲಿದ್ದರೂ, ಎಂಥ ಅವಶ್ಯಕಾರ್ಯದಲ್ಲಿ ತೊಡಗಿದ್ದರೂ ಸಾವಿತ್ರೀ ವ್ರತದ ದಿವಸ ಅವನು ಮನೆಗೆಬಂದೇ ತೀರಬೇಕಾಗುತ್ತಿತ್ತು. ಯಾಕಂದರೆ, ಅಂದು ಆ ವ್ರತವುಮುಗಿದ ಬಳಿಕ ಕಮಲೆಯು ಗಂಡನ ಪಾದಪೂಜೆಯನ್ನು ಮಾಡಿದವಿನಃ ಯಾವ ಆಹಾರವನ್ನೂ ಗ್ರಹಿಸುತ್ತಿರಲಿಲ್ಲ.

ವಿವಾಹಕಾಲಕ್ಕೆ ಕಮಲೆಯು ಹನ್ನೊಂದೇ ವರುಷದವಳಿದ್ದಳು. ಆಗ ಅವಳ ಅತ್ತೆ-ಮಾವಂದಿರಾರೂ ಬದುಕಿರಲಿಲ್ಲ. ಆದರಿಂದ ಕಮಲೆಯ ತಾಯಿಯು

ಶಿವರಾಯನೊಡನೆ ಮಗಳನ್ನು ಲಗ್ನಮಾಡಿಕೊಡಲಿಕ್ಕೆ ಸಮ್ಮತಿಸಿದ್ದಿಲ್ಲ; ಆದರೆ
ಕಮಲೆಯ ತಂದೆಯಾದ ಸದಾಶಿವರಾಯನು ಶಿವರಾಯನ ವಂಶಜರ ನಿರ್ಮಲ ಚಾರಿ
ತ್ರ್ಯವನ್ನೂ ಅಳಿಯನ ಉಚ್ಚತರದ ಶಿಕ್ಷಣ ಹಾಗು ಸಚ್ಛೀಲತೆ ಇವುಗಳನ್ನೂ
ಮನಗಂಡು ಹೆಂಡತಿಯು ಸಮ್ಮತಿಸದಿದ್ದರೂ ಕಮಲೆಯನ್ನು ಅವನಿಗೆ ಕೊಟ್ಟು ಲಗ್ನ
ಮಾಡಿದ್ದನು. ಲಗ್ನವಾದವರ್ಷವೇ ಶಿವರಾಯನು ಭೂಗರ್ಭಶಾಸ್ತ್ರ ವಿಷಯವನ್ನು
ತಕ್ಕೊಂಡು ಎಂ. ಎ. ಪರೀಕ್ಷೆಯಲ್ಲಿ ಫರ್ಸ್ಟ್‌ಕ್ಲಾಸಿನಲ್ಲಿ ಪಾಸಾದನು. ಪರೀಕ್ಷೆಯ
ರಿಝಲ್ಟಾದ ಕೆಲವು ವಾರಗಳಲ್ಲಿಯೇ ಬಹು ದೊಡ್ಡ ಪಗಾರದ ಒಂದು ಸರಕಾರೀ
ನೌಕರಿಯು ಅವನಿಗೆ ಮಾಲೆಹಾಕಬಂದಿತು; ಆದರೆ ಶಿವರಾಯನು ಆ ನೌಕರಿಗೆ
ಬದ್ಧನಾಗಲಿಲ್ಲ. ಯಾಕೆಂದರೆ ಪರಾಧೀನ ನೌಕರಿಯ ವಿಷಯವಾಗಿ ಬಾಲ್ಯದಿಂ
ದಲೂ ಅವನಲ್ಲಿ ತಿರಸ್ಕಾರವುಂಟಾಗಿತ್ತು. ಆದ್ದರಿಂದ ಅವನು ವಿಶ್ವ ವಿದ್ಯಾಲಯ
ದಿಂದ ಹೊರಬಿದ್ದಬಳಿಕ ಛೋಟಾ ನಾಗಪೂರ, ನಾಗಪೂರ, ಮಧ್ಯಪ್ರಾಂತ ಮುಂ
ತಾದ ಖನಿಜ ಪದಾರ್ಥಗಳ ಆಗರವಾದ ಪ್ರದೇಶಗಳಲ್ಲಿ ಸಂಚರಿಸಿ ಅಲ್ಲಿಯ ಬೇರೆ
ಬೇರೆ ಮೂರು ಸ್ಥಾನಗಳನ್ನು ತನ್ನ ಕಾರ್ಯಕ್ಷೇತ್ರಕ್ಕಾಗಿ ಆರಿಸಿಕೊಂಡನು;
ಹಾಗು ಆ ಕ್ಷೇತ್ರಗಳಲ್ಲಿಯ ಖನಿಜ ಪದಾರ್ಥಗಳನ್ನು ತೆಗೆದುಕೊಳ್ಳುವ ಸಲುವಾಗಿ
ಸರಕಾರದಿಂದ ಪರವಾನಿಗೆಯು ಪಡೆದನು. ಇವುಗಳ ಹೊರತು ನಿಜಾಮ ಇಲಾಖೆಯ
ಒಂದುಜಮೀನಿನಲ್ಲಿ ಹಲಿಗೆ ಕಲ್ಲುಗಳು ಹೊರಡುವದನ್ನು ಪರೀಕ್ಷಿಸಿ, ಅದನ್ನೂ
ಆ ಸರಕಾರದಿಂದ ಗುತ್ತಿಗೆ ಹಿಡಿದನು. ಶಿವರಾಯನು ಅಲ್ಪಶ್ರಮದಿಂದಹೊರಡಬಹು
ದಾದ ಈ ಕಲ್ಲಿನ ಕಾರಖಾನೆಯನ್ನೇ ಎಲ್ಲಕ್ಕೂ ಮೊದಲು ಪ್ರಾರಂಭಿಸಿದ್ದನು.

ಎಷ್ಟುವಿದ್ವಾಂಸನಿದ್ದರೂ, ಎಂಥ ಸಚ್ಛೀಲನಾಗಿದ್ದರೂ ಶಿವರಾಯನಲ್ಲಿ ಬಂಡ
ವಾಳವೇನೂ ಇರಲಿಲ್ಲ. ಆದ್ದರಿಂದ ಕಲ್ಲಿನ ಕಾರಖಾನೆಯನ್ನು ಪ್ರಾರಂಭಿಸುವ ಮೊದ
ಲು ಆತನು ಕೆಲವು ಸಾವಿರರೂಪಾಯಿಗಳನ್ನು ಸಾಲಮಾಡಬೇಕಾಗಿತ್ತು; ಆದರೆ ಆ
ಕಾರಖಾನೆಯಿಂದ ವಿಶೇಷಪ್ರಯೋಜನವಾಗಿ ಎರಡೇ ವರ್ಷಗಳಲ್ಲಿ ಅವನ ಆ ಸಾಲ
ವೆಲ್ಲ ತೀರಿಹೋಯಿತು. ಮೂರನೇ ವರ್ಷ ಪುಣ್ಯಪತ್ತನದಲ್ಲಿ ಅವನೊಂದು ಬಾಡಿಗೆಯ
ಮನೆಯನ್ನು ಹಿಡಿದು, ಹೆಂಡತಿಯನ್ನು ಅಲ್ಲಿಗೆ ಬರಮಾಡಿಕೊಂಡಿದ್ದನು. ಹೆಂಡ
ತಿಯ ವಿನಃ ಸಂಸಾರದಲ್ಲಿ ಅವನಿಗೆ ಯಾವ ಸಮೀಪದ ಸಂಬಂಧಿಕರೂ ಇರಲಿಲ್ಲ.
ಬೇರೆ ಬೇರೆ ಕಡೆಗಳಲ್ಲಿ ಕಾರಖಾನೆಗಳನ್ನಿಟ್ಟು ಕಾರ್ಯಪ್ರವೃತ್ತನಾಗಬೇಕಾದ್ದರಿಂದ,
ಅವನು ಸದಾಮನೆಯಲ್ಲಿರುವಂತಿರಲಿಲ್ಲ. ಆದರಿಂದ ಅವನು ತನ್ನೊಬ್ಬ ದೂರ ಸಂಬಂ
ಧಿಕ ಅಬಚಿಯನ್ನು ಕರೆತಂದು ಹೆಂಡತಿಯ ಜೊತೆಗೆ ಮನೆಯಲ್ಲಿ ಇರಹೇಳಿದ್ದನು.

ಬರಬರುತ್ತ ಲಕ್ಷ್ಮಿಯು ಶಿವರಾಯನನ್ನು ಕೃಪಾದೃಷ್ಟಿಯಿಂದ ನೋಡಹತ್ತಿದಳು. ಕಲ್ಲಕಾರಖಾನೆಯಿಂದ ಅವನಿಗೆ ವಿಪುಲ ಉಳಿತಾಯವಾಗತೊಡಗಿತು. ಮರುವರ್ಷವೇ ಅವನು ಮೊದಲು ನೋಡಿಕೊಂಡು ಬಂದಿದ್ದ ಮೂರು ಖನಿಗಳಲ್ಲಿ ಒಂದು ತಾಮ್ರದ ಖಣಿಯ ಕೆಲಸಕ್ಕೆ ಆರಂಭಿಸಿದನು. ಮುಂದೆ ಎರಡುವರ್ಷಗಳಲ್ಲಿ ಆ ಖನಿಯಿಂದ ಅವನು ಬಯಸಿದಷ್ಟು ಲಾಭವಾಗದಿದ್ದರೂ, ಕೆಲವು ಉಳತಾಯವಾಗಲುಪಕ್ರಮಿಸಿತು. ಹೀಗೆ ಕಲ್ಲಿನ ಹಾಗು ತಾಮ್ರದ ಖಣಿಗಳಿಂದ ಕೈಯಲ್ಲಿ ದುಡ್ಡಾಡಹತ್ತಲು ಶಿವರಾಯನು ಬೆಳ್ಳಿಯ ಖನಿಯ ಕೆಲಸಕ್ಕೂ ಪ್ರಾರಂಭಮಾಡಿದನು.

ಮೂರು ವರ್ಷಗಳ ವರೆಗೆ ಅಗಣಿತ ದ್ರವ್ಯವನ್ನು ವ್ಯಯಮಾಡಿ ಅವಿಶ್ರಾಂತ ಶ್ರಮಬಟ್ಟ ಬಳಿಕ ಆ ರಜತ ಖಣಿಯಿಂದಲೂ ಚೆನ್ನಾಗಿ ಉಳಿತಾಯವಾಗಲಾರಂಭಿಸಿತು. ಆಗ ಶಿವರಾಯನು ತನ್ನ ಮನೋಭಿಪ್ರಾಯದಂತೆ ಪುಣ್ಯಪತ್ತನದಲ್ಲಿ ಸ್ವಂತದ್ದೇ ಒಂದು ಅಚ್ಚುಕಟ್ಟಾದ ವಾಡೆಯನ್ನು ಕಟ್ಟಿಸಿದನು. ಲಕ್ಷ್ಮಿಯು ನಿತಾಂತ ಚಂಚಲಳೆಂದು ಪ್ರಸಿದ್ಧವಾಗಿದ್ದರೂ ಶಿವರಾಯನ ಮನೆಯಲ್ಲಿ ಅವಳು ಕಾಲು ಮುರಕೊಂಡು ಬಿದ್ದಿದ್ದಳು. ಸಂಸಾರದಲ್ಲಿ ಪ್ರೇಮಮಯಿಯೂ, ಪತಿಪರಾಯಣಳೂ, ಸುಶೀಲಳೂ, ಸುಂದರಿಯೂ ಆದ ಪತ್ನಿಯೂ, ಅಕ್ಷುಣ್ಣವಾದ ಶರೀರಸೌಖ್ಯವೂ ಇದ್ದು ಯಾವನಿಗೆ ಹಣ-ಕಾಸುಗಳ ಕೊರತೆಯಿಲ್ಲವೋ ಆ ಶಿವರಾಯನು ಸುಖದಿಂದ ಕಾಲಕಳೆಯುತ್ತಿದ್ದನೆಂಬದನ್ನು ಬೇರೆ ಹೇಳಬೇಕೆ?

ಕಮಲೆಯನ್ನು ಒಂದೇ ಒಂದು ದುಃಖವು ಆವರಿಸಿಕೊಂಡಿತ್ತು. ಈ ವರೆಗೆ ಆಕೆಗೆ ಸಂತಾನವಾಗದಿದ್ದದ್ದೇ ಆ ದುಃಖದ ಮೂಲವು. ವ್ರತ-ಉದ್ಯಾಪನೆಗಳಿಂದಲೂ, ಕವಚ-ಧಾರಣಗಳಿಂದಲೂ, ನಾಗಬಲಿ-ನಾರಾಯಣಬಲಿಗಳಿಂದಲೂ ಅವಳ ಆ ಆಶೆಯು ಪೂರ್ಣವಾಗದಿರಲು, ಒಂದುದಿನ ಅವಳು ಶಿವರಾಯನನ್ನು ಕುರಿತು—''ಪ್ರಾಣಕಾಂತರೇ, ಸಂತಾನ ಪ್ರಾಪ್ತಿಗಾಗಿ ನೀವು ಮತ್ತೊಂದು ಲಗ್ನ ಮಾಡಿಕೊಳ್ಳಬೇಕೆಂದು ನನ್ನ ಇಚ್ಛೆಯಿರುತ್ತದೆ'' ಎಂದು ಸೂಚಿಸಿದಳು. ಅದನ್ನು ಕೇಳಿ ಶಿವರಾಯನು:—''ಕಮಲಾ, ದೈವದಲ್ಲಿದ್ದದ್ದೇ ಆದರೆ, ನಿನಗೇ ಸಂತಾನವೇಕಾಗಬಾರದು? ಮತ್ತು ಸಂತಾನವಾಗುವದು ದೈವದಲ್ಲಿಯೇ ಇರದಿದ್ದರೆ ಇನ್ನು ಒಂದು ಏಕೆ, ಹತ್ತೆಂಟು ಲಗ್ನಗಳನ್ನು ಮಾಡಿಕೊಂಡರೂ ಸಂತಾನವಾಗಬಲ್ಲದೆ? ನನ್ನ ಪುನರ್ವಿವಾಹದ ಸುದ್ದಿಯನ್ನು ನಿನ್ನ ಬಾಯಿಯಿಂದ ಕೇಳಿ ನನಗೆ ಅತ್ಯಂತ ಕಷ್ಟವಾಗುತ್ತದೆ. ಸಂತಾನಕ್ಕಾಗಿ ನೀನೆನ್ನೆಂದೂ ದುಃಖಿಸಬೇಡ. ಅದು ಆಗಲಿಕ್ಕೂ, ಆಗದಿರಲಿಕ್ಕೂ ಭಗವಂತನ ಇಚ್ಛೆಯೇ ಕಾರಣವಾಗಿರುತ್ತದೆಂಬದನ್ನು ದೃಢವಾಗಿನಂಬು.''

ಈ ಪ್ರಕಾರ ಅಂದು ಅವರ ಭಾಷಣವಾದ ಮೇಲೆ ಕಮಲೆಯು ಆ ವಿಷಯವನ್ನು ಗಂಡನ ಮುಂದೆ ಮತ್ತೆ ಎಂದೂ ತೆಗೆಯಲಿಲ್ಲ; ಆದರೆ ಆಕೆಯ ಮನಸ್ಸಿನಿಂದ ಮಾತ್ರ ಆ ವಿಷಯವು ಮರೆಯಾಗುವಂತಿರಲಿಲ್ಲ!

ಕಮಲೆಯು ಈಗ ಇಪ್ಪತ್ತೆರಡು ವರ್ಷದವಳಾಗಿದ್ದಳು. ಇದೇ ವರ್ಷ ಶಿವರಾಯನು ತನ್ನ ಮೂರನೇ ಹರಳು-ಕಲ್ಲಿನ(ರತ್ನದ) ಖಣಿಯ ಕೆಲಸಕ್ಕೆ ಪ್ರಾರಂಭಿಸಿದನು. ಆದ್ದರಿಂದ ಅವನು ವಿಶೇಷವಾಗಿ ಆ ಖಣಿಯ ಪ್ರದೇಶದಲ್ಲಿಯೇ ಇರಬೇಕಾಗುತ್ತಿತ್ತು. ಎಂದಾದರೊಮ್ಮೆ ಪುಣ್ಯಪತ್ತನಕ್ಕೆ ಬರುತ್ತಿದ್ದನು. ಆದರೆ ಕಾರ್ಯಗೌರವದ ಸಲುವಾಗಿ ಅವನು ಕ್ಷಿಪ್ರದಲ್ಲಿಯೇ ಹಿಂದಿರುಗಿ ಹೋಗುತ್ತಿದ್ದನು. ಆದ್ದರಿಂದ ಈ ಇಡಿ ವರ್ಷದಲ್ಲಿ ಕಮಲೆಯ ಕೂಡ ಆತನು ಒಂದೇಸವನೆ ನಾಲ್ಕಾರು ದಿನಗಳವರೆಗೆ ಸಹ ಇರಲಿಲ್ಲ. ಒಮ್ಮೆ ಕಮಲೆಯು ಈ ಬಗ್ಗೆ ಆತನನ್ನು ಕುರಿತು— "ಪ್ರಿಯರೇ, ಇಷ್ಟು ಕಷ್ಟಪಟ್ಟು ನೀವು ದೇಶ-ವಿದೇಶಗಳನ್ನು ಸುತ್ತುತ್ತಿರುವುದೇಕಕ್ಕಾಗಿ? ಜಗದೀಶನು ನಮಗೆ ಎಷ್ಟು ಸಂಪತ್ತಿಯನ್ನು ಕೊಟ್ಟಿರುವನೋ ಅದೇ ವಿಪುಲವಾಗಿರುತ್ತದೆ. ಈಪರಿ ಕಷ್ಟಶ್ರಮಗಳನ್ನೆಲ್ಲ ನೀವು ಯಾರ ಸಲುವಾಗಿ ಮಾಡುವದು?"

ಬಾಯಿಬಿಚ್ಚಿ ನುಡಿಯದಿದ್ದರೂ ಸಂತಾನಾಭಾವದ ಸಲುವಾಗಿ ಪತ್ನಿಯು ಹೀಗೆ ನುಡಿದಿರುವಳೆಂಬದನ್ನು ತಿಳಿದ ಶಿವರಾಯನು ಮನದಲ್ಲಿ ಕಳವಳಗೊಂಡನು. ಬಳಿಕ ಅವನು ಹೆಂಡತಿಯನ್ನು ಆದರದಿಂದ ಬಿಗಿದಪ್ಪಿಕೊಂಡು—"ಪ್ರಿಯೇ, ಕಮಲೆ, ಈ ಎಲ್ಲ ಕಷ್ಟಗಳನ್ನು ನಿನ್ನ ಸಲುವಾಗಿಯೇ ನಾನು ಸಹಿಸುತ್ತಿರುತ್ತೇನೆ. ನಿನ್ನನ್ನು ಸೌಖ್ಯವಾಗಿಡುವದಕ್ಕಾಗಿಯೇ ನನ್ನ ಈ ದೀರ್ಘಪ್ರಯತ್ನಗಳು ನಡೆದಿರುತ್ತವೆ."

"ಹಾಗಾದರೆ ನಾನೀಗ ಅಸಂತುಷ್ಟಳಿರುವೆನೆಂದು ನಿಮಗೆ ಭಾಸವಾಗಿದೆಯೇನು? ನನಗೆ ದುಃಖವೇ ಆಗುತ್ತದೆಂದು ನೀವು ಕಲ್ಪಿಸಿದ್ದರೆ, ಅದು ಧನ-ಕನಕಗಳ ಸಲುವಾಗಿ ಆಗುವದಿಲ್ಲ; ಒಂದೇಸವನೆ ಕೆಲವು ದಿವಸಗಳ ವರೆಗಾದರೂ ನನಗೆ ನಿಮ್ಮ ಸೇವಾ-ಸಹವಾಸಗಳು ದೊರೆಯದಿದ್ದ ಕಾರಣಕ್ಕಾಗಿ ಆಗುತ್ತಿರುತ್ತದೆ. ಈ ಸಂಪತ್ತಿಯನ್ನು ಯಾರಸಲುವಾಗಿ ಗಳಿಸುವದು? ಈ ವರೆಗೆ ಎಷ್ಟು ಸಂಪಾದಿತವಾಗಿದೆಯೋ ಅದೇ ಯಥೇಷ್ಟವಾಗಿರುತ್ತದೆ. ಕುಳಿತು ತಿಂದರೂ ಸಾಯುವ ವರೆಗೆ ನಮಗೆ ಯಾವ ಕೊರತೆಯೂ ಬೀಳಲಿಕ್ಕಿಲ್ಲ. ಅರ್ಥ ಸಂಪಾದನೆಗಾಗಿ ನೀವಿನ್ನು ಅಲ್ಲಲ್ಲಿ ಸುತ್ತಾಡುವ ಕಾರಣವಿಲ್ಲೆಂದು ನನಗೆ ತೋರುತ್ತದೆ."

ಪತ್ನಿಯನ್ನು ಶಾಂತಳನ್ನಾಗಮಾಡಿ, ಶಿವರಾಯನು—"ಇನ್ನು ಮುಂದೆ ವಿಶೇಷ ದಿವಸಗಳವರೆಗೆ ನಾನೀ ಕಠೋರ ಪರಿಶ್ರಮವನ್ನು ಮಾಡುವ ಕಾರಣವಿಲ್ಲ. ಈಗ ಆ ರತ್ನದ ಖಣಿಯು ಕೆಲಸಕ್ಕೆ ಪ್ರಾರಂಭವಾಗಿರುತ್ತದೆ; ಹಾಗೂ ಇನ್ನು ಸ್ವಲ್ಪ ದಿವಸಗಳಲ್ಲಿಯೇ ಅದು ಸುವ್ಯವಸ್ಥೆಯಿಂದ ನಡೆಯಬಹುದಾಗಿದೆ" ಎಂದು ನುಡಿದು, ಬಳಿಕ ಅವನೇ ಸುಹಾಸ್ಯವದನನಾಗಿ—"ಪ್ರಿಯೇ, ನೀನಿನ್ನು ಬಹಳ ದಿವಸಗಳವರೆಗೆ ವಿರಹತಾಪದಿಂದ ಬಳಲುವ ಅವಶ್ಯಕತೆಯಿಲ್ಲ ಕಾಣೆ. ಸ್ವಲ್ಪಕಾಲದಲ್ಲಿಯೇ ರಾಜಾ-ರಾಣಿಯರಂತೆ ನಾವೀರ್ವರೂ ಸುಖದಿಂದ ಕಾಲಕಳೆಯೋಣ" ಎಂದು ನುಡಿದು ಶಿವರಾಯನು ಪತ್ನಿಯನ್ನು ಹತ್ತರಕ್ಕೆ ಜಗ್ಗಿಕೊಂಡನು.

ಕಮಲೆಯು ಲಜ್ಜೆಯುಕ್ತ ಮುಗುಳುನಗೆಯಿಂದ ನಗುತ್ತ ಶಿವರಾಯನ ಪಾರ್ಶ್ವದಲ್ಲಿ ಕುಳಿತು ಕೃತ್ರಿಮ ಕೋಪದಿಂದ—"ನನ್ನ ಅಂತರಂಗದ ಗುಟ್ಟನ್ನೇ ಹೊರಗೆಡವಿದಿರಲ್ಲ!"

"ನೀನು ನಿನ್ನ ಗುಟ್ಟನ್ನು ಬಾಯಿಂದ ನುಡಿದು ನನಗೆ ತಿಳಿಸದಿದ್ದರೂ ನಾನು ನಿನ್ನ ಮನೋದ್ವಾರಗಳ ಸಂದಿನೊಳಗಿನಿಂದ ಇಣಿಕಿ ಹಾಕಿ ಎಲ್ಲವನ್ನೂ ತಿಳಕೊಂಡಿರುತ್ತೇನೆ."

"ಮನಸ್ಸಿಗೆ ಬಾಗಿಲ-ಕದಗಳು ಬೇರೆ ಇರುತ್ತವಲ್ಲವೆ?" ಎಂದು ನುಡಿದು ಕಮಲೆಯು ಪ್ರೇಮದ ನಗೆಯನ್ನು ನಕ್ಕಳು.

"ಇನ್ನೂ ನಿನಗದು ಗೊತ್ತಿಲ್ಲವೆ? ತುಸ ಇತ್ತತ್ತ ಸರಿದು ಬಾ. ನಿನಗಾ ಮನೋದ್ವಾರಗಳನ್ನು ತೋರಿಸುವೆನು" ಎಂದವನೇ ಶಿವರಾಯನು ಕಮಲೆಯನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಂಡು, ಆಕೆಯ ಹರಿಣಾಕ್ಷಿಗಳನ್ನು ಚುಂಬಿಸಿದನು; ಹಾಗು—"ನೋಡಿದಿಯಾ, ಈ ನಿನ್ನ ಮನೋದ್ವಾರಗಳನ್ನು?" ಎಂದು ಹೆಂಡತಿಯನ್ನುದ್ದೇಶಿಸಿ ನುಡಿದನು.

"ಛೀ; ಇದೇನು? ಸುತ್ತಲೂ ಜನರು ಹಾದಾಡುತ್ತಿರುವಾಗ್ಗೆ ಇದೆಂಥ ನಿರ್ಲಜ್ಜ ಹುಡುಗಾಟಿಕೆಯು?" ಎಂದು ನುಡಿದವಳೇ ಕಮಲೆಯು ಅಲ್ಲಿಂದ ಕಾಲ್ತೆಗೆದಳು.

ಒಮ್ಮೆ ಶಿವರಾಯನು ತನ್ನ ರತ್ನದ ಖಣಿಗೆ ಹೊರಟನು ಹೋಗುವ ಕಾಲಕ್ಕೆ ಕಮಲೆಯು ಗಂಡನಿಗೆ ಸಾವಿತ್ರೀ ವ್ರತದ ದಿವಸಕ್ಕಿಂತ ಮೊದಲೇ ಎರಡು ದಿವಸ ತಪ್ಪದೆ ಮನೆಗೆ ಬರಬೇಕೆಂದು ನೆನಪು ಕೊಟ್ಟಳು. ಅವನು ಅದಕ್ಕೊಪ್ಪಿಕೊಂಡು ಹೋದನು. ವ್ರತವು ಸಮೀಪಿಸಿದ ಹಾಗೆಲ್ಲ ಕಮಲೆಯು ಗಂಡನ ಆಗಮ

ನದ ವಿಷಯವಾಗಿ ಆತುರಳಾದಳು. ಗಂಡನಿಗಾಗಿ ಬರೆಯುತ್ತಿದ್ದ ಪ್ರತಿಯೊಂದು ಪತ್ರದಲ್ಲಿ ವ್ರತಕ್ಕೆ ಬರಲೇಬೇಕೆಂದು ಅವಳು ಕೇಳಿಕೊಳ್ಳುತ್ತಿದ್ದಳು. ಶಿವರಾಯನಾದರೂ ವ್ರತಕ್ಕೆ ಮುಂಚೆಯೇ ಬಂದು ಬಿಡುವೆನೆಂದು ಹೆಂಡತಿಗೆ ಬರೆದು ತಿಳಿಸುತ್ತಿದ್ದನು. ಆದರೆ ವ್ರತದ ದಿವಸವು ಇನ್ನೂ ಎಂಟು ದಿವಸಗಳಿರಲಿಕ್ಕೆ ಶಿವರಾಯನ ಪತ್ರವೊಂದು ಕಮಲೆಗೆ ಬಂದಿತ್ತು. ಅದರಲ್ಲಿ ಅವನು ಬರೆದುದೇನಂದರೆ—

"ಈ ಮೊದಲು ಸಾವಿತ್ರೀ ವ್ರತಕ್ಕಿಂತ ಮೊದಲು ಎರಡು ದಿನ ಬರುವೆನೆಂದು ಬರೆದಿದ್ದೆನು. ಈ ಮಧ್ಯದಲ್ಲಿ ವಿಶೇಷ ಕೆಲಸವುಂಟಾದ್ದರಿಂದ ಮುಂಗಡ ಬರಲಿಕ್ಕಾಗುವದಿಲ್ಲ. ವ್ರತದ ದಿವಸ ಬೆಳಗಿನ ಗಾಡಿಗೆ ಎಲ್ಲಿದ್ದರೂ ತಪ್ಪದೆ ಬರುವೆನು.''

ಇಂದು ಕಮಲೆಯು ದೊಡ್ಡ ನಸುಕಿನಲ್ಲೆದ್ದು, ಪ್ರಾತರ್ವಿಧಿಗಳನ್ನು ತೀರಿಸಿ, ಮೈತೊಳಕೊಂಡು, ಪತಿದೇವನಿಗಾಗಿ ಉಪಾಹಾರವನ್ನು ಮಾಡಿಟ್ಟು, ಅವನ ಮಾರ್ಗವನ್ನು ನಿರೀಕ್ಷಿಸುತ್ತಾ ಕುಳಿತಿದ್ದಳು. ಬೆಳಿಗ್ಗೆ ಆರಕ್ಕೆ ಬರುವ ರೈಲಿನಿಂದ ಅವನು ಬರಬಹುದೆಂದು ತಿಳಿದು, ತತ್ಪೂರ್ವದಲ್ಲಿಯೇ ಮನೆಯ ವಿಕ್ಟೋರಿಯಾ ಬಂಡಿಯನ್ನು ಸ್ಟೇಶನ್ನಿಗೆ ರವಾನಿಸಿದ್ದಳು. ಕೆಲಹೊತ್ತಿನ ಮೇಲೆ ಬಂಡಿಯು ಮರಳಿ ಬಂದಿತು. ಆದರೆ ಅದು ಹೆಬ್ಬಾಗಿಲ ಕಡೆಗೆ ಬರದೆ, ನೆಟ್ಟಗೆ ಗಾಡೀಖಾನೆಯ ಒಳಗೆ ಹೋಯಿತು. ಆದರಿಂದ ಕಿಟಿಕಿಯಲ್ಲಿ ದೃಷ್ಟಿಯನ್ನಿಟ್ಟು ಪ್ರಿಯನಾಗಮನವನ್ನು ನಿರೀಕ್ಷಿಸುತ್ತಲಿದ್ದ ಕಮಲೆಗೆ ಪತಿಯ ಸವಾರಿಯು ಬರಲಿಲ್ಲವೆಂದು ತಿಳಿಯಿತು. "ಅವರೇಕೆ ಬಂದಿರಲಿಕ್ಕಿಲ್ಲ? ಅವರಿಗೇನಾಗಿರಬಹುದು? ಇಂದು ತಪ್ಪದೆ ಬರುವೆನೆಂದು ಪತ್ರ ಬರೆದಿರುವ ಪ್ರಾಣಕಾಂತರು ಯಾಕೆ ಬರಲಿಲ್ಲ?'' ಎಂಬೀ ಪ್ರಶ್ನತ್ರಯಗಳ ಏಕೋಪ್ರಕಾರದ ಚಲನವಲನದಿಂದ, ಮಳೆಗಾಲದಲ್ಲಿ ತಾರಾಯಂತ್ರಗಳ ತಂತಿಗಳಲ್ಲಿ ವಿದ್ಯುಲ್ಲತೆಯು ಎಡೆಬಿಡದೆ ಪ್ರವಹಿಸುತ್ತಿರುವಂತೆಯೂ, ಬಿರುಗಾಳಿಯ ಹೊಡತದಿಂದ ಗಿಡ-ಮರಗಳು ಒಂದೇಸವನೆ ಅಲೆದಾಡುವಂತೆಯೂ ಅವಳ ಮನಸ್ಸು ನಿತಾಂತ ಚಂಚಲವಾಯಿತು. ಬರಬರುತ್ತ ಅವಳ ಮನಸ್ಸಿನಲ್ಲಿ ಇಲ್ಲದ ಕುಶಂಕೆಗಳುಂಟಾಗಹತ್ತಿದವು. ಆ ಕುಶಂಕೆಗಳ ಆಭಾಸದಿಂದ ಅವಳ ಹೃದಯಕ್ಕೆ ಗುರುತರವಾದ ದಾಹವಾಗತೊಡಗಿತು. ಆಗ ಅವಳು ಆ ಭೀಕರವಾದ ದಾಹವನ್ನು ಸಹಿಸಲಾರದವಳಾಗಿ, ತಟ್ಟನೆ ಕುಳಿತಲ್ಲಿಂದೆದ್ದು, ನೆಟ್ಟಗೆ ಮಲಗುವ ಕೋಣೆಗೆ ಹೋಗಿ, ಮುಸುಕು ಹಾಕಿ ಬಿದ್ದುಕೊಂಡಳು.

---

## ಎರಡನೆಯ ಪರಿಚ್ಛೇದ.

# ಕಲಂಕಿತಪತ್ರ.

ಆ ದಿವಸ ಸಾವಿತ್ರೀ ವ್ರತವಾದ್ದರಿಂದ ಮನೆಯ ದಾಸ-ದಾಸಿಯರು ಮನೆಯನ್ನು ಸಾರಿಸಿ-ಉಡುಗುವದರಲ್ಲಿಯೂ, ತಳಿರು-ತೋರಣಗಳನ್ನು ಕಟ್ಟಿ ರಂಗವಲ್ಲಿಗಳನ್ನು ಹಾಕಿ ಶೃಂಗರಿಸುವದರಲ್ಲಿಯೂ ತೊಡಗಿದ್ದರು. ಆದರಿಂದ ಕಮಲೆಯು ಹೋಗಿ ಹುದುಗಿಕೊಂಡು ಬಿದ್ದದ್ದು ಮೊದಲು ಯಾರಿಗೂ ತಿಳಿಯಲಿಲ್ಲ. ಕೆಲಹೊತ್ತಿನ ಮೇಲೆ ಕಮಲೆಯ ಮುಖ್ಯ ದಾಸಿಗೆ ಅದು ತಿಳಿಯಲು, ಅವಳು ಕಮಲೆಯ ಬಳಿಗೆ ಹೋಗಿ—"ಅವ್ವನವರೇ, ಇಂದು ಮನೆಯಲ್ಲಿ ಸಾವಿತ್ರೀ ವ್ರತವಿರುವದಲ್ಲವೆ? ಹೀಗಿದ್ದು, ನೀವು ಹೀಗೆ ಅಕಾಲದಲ್ಲಿ ಹಾಸಿಗೆ ಹಿಡಿದು ಮಲಗಿರುವದೇಕೆ? ತಲೆ-ಗಿಲೆ ನೊಯ್ಯುತ್ತಿರುವದೇನು?" ಎಂದು ಪ್ರಶ್ನೆ ಮಾಡುತ್ತಿರಲು, ಕಮಲೆಯು ಅವಳ ಪ್ರಶ್ನೆಗಳಿಗೆ ಉತ್ತರಕೊಡದೆ—"ಮಾಲಿ, ಮಾಧವನನ್ನು ನಾನು ಕರೆಯುತ್ತೇನೆಂದು ಹೇಳಿಕಳಿಸಿಕೊಡು ನೋಡುವಾ" ಎಂದು ಅಪ್ಪಣೆಮಾಡಿದಳು.

ದಾಸಿಯು ಅಲ್ಲಿಂದ ಹೋದ ಕೆಲವು ನಿಮಿಷಗಳಲ್ಲಿಯೇ ಮಾಧವನು ಕಮಲೆಯ ಬಳಿಗೆ ಬಂದು—"ಅಕ್ಕಾ, ಕರೆದೆಯೇನು?" ಎಂದುಪ್ರಶ್ನೆ ಮಾಡಿದನು.

"ಅಪ್ಪಾ ಮಾಧವಾ, ನಿಮ್ಮ ಅಣ್ಣಂದಿರು ಬೆಳಗಿನ ರೈಲಿಗೆ ಬರಬೇಕಾಗಿತ್ತು; ಇನ್ನೂ ಬಂದಿರುವದಿಲ್ಲ? ನಾಗಪೂರ ಕಡೆಯಿಂದ ಮತ್ತೆ ಯಾವಾಗ ರೈಲು ಬರುವದು? ಗೊತ್ತಿದೆಯೇ?"

"ನೋಡಿ ಹೇಳುವೆನು" ಎಂದು ನುಡಿದವನೇ ಮಾಧವನು ತನ್ನ ಕೋಣೆಗೆ ಹೋಗಿ ಅಲ್ಲಿಂದ ರೈಲ್ ಟಾಯಿಂಟೇಬಲ್ಲನ್ನು ತಕ್ಕೊಂಡು ಬಂದು, "ನಾಗಪೂರದಿಂದ ಮಧ್ಯಾಹ್ನ ಒಂದಕ್ಕೆ ಒಂದು ಗಾಡಿಯಿರುವದು. ಅಲ್ಲದೆ ಸಾಯಂಕಾಲ ಏಳಕ್ಕೂ ಒಂದು ಗಾಡಿಯಿದೆ. ಅಣ್ಣನು ಬಹುಶಃ ಮಧ್ಯಾಹ್ನ ಒಂದರ ಎಕ್ಸಪ್ರೆಸ್ಸಿಗೆ ಬರಬಹುದು. ಬೆಳಗಿನ ಮೇಲ್‌ಟ್ರೇನು ತಪ್ಪಿರಬಹುದಾಗಿದೆ."

"ಹಾಗಾದರೆ ಒಂದು ಗಂಟೆಯ ಗಾಡಿಗೆ ವ್ಹಿಕ್ಟೋರಿಯಾ ಬಂಡಿಯನ್ನು ಪುನಃ ಸ್ಟೇಶನ್ನಿಗೆ ಕಳುಹಿಸು" ಎಂದು ನುಡಿದವಳೇ ಕಮಲೆಯು ತನ್ನ ಕೋಣೆಯನ್ನು ಸೇರಿ ಮಲಗಿಕೊಂಡಳು. ಆಗ ಅವಳ ಮನಸ್ಸು ಅತ್ಯಂತ ವ್ಯಾಕುಲವಾ

ಗಿದ್ದದರಿಂದ ಅವಳಿಗೇನೂ ಸೊಗಸಾಗಲೊಲ್ಲದು. ತನ್ನ ಮನಸ್ಸನ್ನು ಸ್ಥಿರವಾಗ ಮಾಡುವದಕ್ಕಾಗಿ ಅವಳು ಎಷ್ಟು ಪ್ರಯತ್ನಪಟ್ಟರೂ, ಆಗಾಗ್ಗೆ ಅವಳ ಕರ್ಣರಂಧ್ರದಲ್ಲಿ ತಂತಿಯಿಲ್ಲದ (ವಾಯರ ಲೆಸ್ ಟೆಲಿಗ್ರಾಫ) ತಾರಾಯಂತ್ರದಿಂದ ಕೇಳ ಬರುವಂತೆ "ತಂಗೀ ಕಮಲೆ, ನಿನ್ನ ಸೌಭಾಗ್ಯದ ದಿವಸಗಳು ಪೂರಯಿಸಿ ಹೋದವು. ನಿನ್ನ ಗಂಡನು ಇನ್ನು ಖಂಡಿತವಾಗಿ ಬರುವದಿಲ್ಲ." ಎಂಬ ಸಂದೇಶವು ಪ್ರವೇಶಿಸಿ ಅವಳನ್ನು ಮತ್ತಿಷ್ಟು ಹೈರಾಣಾಗಮಾಡುತ್ತಿತ್ತು. ಅದರಿಂದ ಅವಳ ಶರೀರವು ಶೀತಜ್ವರಗ್ರಸ್ತರಾದವರ ಹಾಗೆ ಥರಗುಟ್ಟಿ ನಡುಗುತ್ತಿತ್ತು. ದಾಸಿಯ ಮುಖದಿಂದ ಸೊಸೆಯ ದೇಹಮಾಂದ್ಯವನ್ನು ತಿಳಿದ ಶಿವರಾಯನ ಅಬಚಿಯು ಕಮಲೆಯ ಬಳಿಗೆ ಬಂದು—"ತಂಗೀ ಕಮಲಕ್ಕಾ, ಇದೇನು? ಸಾವಿತ್ರೀ ವ್ರತದ ದಿವಸ ಹೀಗೆ ಮಲಗಿಕೊಳ್ಳುವರೇ? ಎದ್ದೇಳವ್ವಾ ಎದ್ದೇಳು" ಎಂದು ಅಂದಳು.

"ಅತ್ತೆಯವರೇ, ನನ್ನ ಶರೀರವು ತುಂಬಾ ಅಸ್ವಸ್ಥವಾದುದರಿಂದ ನಾನೀಗ ಏಳಲಾರದವಳಾಗಿರುತ್ತೇನೆ. ಆದ್ದರಿಂದ ನೀವೇ ಇಂದಿನ ಎಲ್ಲ ಕಾರ್ಯಭಾಗವನ್ನು ಸಾಗಿಸಬೇಕಾಗಿ ವಿನಂತಿಸುತ್ತೇನೆ." ಆ ಮುದುಕಿಯು ವಿಶೇಷವೇನೂ ಮಾತಾಡದೆ ಅಲ್ಲಿಂದ ಹೊರಟು ಹೋದ ಮೇಲೆ, ಕಮಲೆಯು ಪುನಃ ವಿಚಾರ ಮಾಡಹತ್ತಿದಳು. 'ಅವರಿಗೆ ಯಾವ ಸಂಕಟವು ಪ್ರಾಪ್ತವಾಗಿರಬಹುದು? ಅವರು ಸಂಕಟಗ್ರಸ್ತರಾದದ್ದೇ ನಿಜವಾಗಿದ್ದರೆ ನಾನು ಮುಂದೇನು ಮಾಡಲಿ! ಒಂದು ವೇಳೆ ಅವರೀ ಮರ್ತ್ಯಲೋಕದಿಂದ........" ಮುಂದೆ ಕಮಲೆಯ ತಲೆಯಲ್ಲಿ ವಿಚಾರ ಸ್ವಾತಂತ್ರ್ಯಕ್ಕೆ ಅನುವು ದೊರೆಯದೆ ಅವಳು ಎಚ್ಚರದಪ್ಪಿಬಿದ್ದಳು. ಅಷ್ಟರಲ್ಲಿ ಒಬ್ಬ ದಾಸಿಯು ಒಂದು ಪತ್ರವನ್ನು ತಕ್ಕೊಂಡು ಅಲ್ಲಿಗೆ ಬರಲು, ಅದನ್ನು ನೋಡಿ, ಅವಳು ಪುನಃ ಸ್ಮೃತಿ ಹೊಂದಿದಳು. ದೂರಿಂದಲೇ ಆ ಪತ್ರದ ಮೇಲಿನ ವಿಳಾಸದ ಅಕ್ಷರಗಳ ಗುರುತು ಅವಳಿಗೆ ಚೆನ್ನಾಗಿ ಹತ್ತಿತು. ತನ್ನ ಗಂಡನು ಬರೆದ ಪತ್ರವೆಂದು ತಿಳಿದು, ಚರಕ್ಕನೆ ಆ ಲಕ್ಕೋಟೆಯನ್ನು ಹರಿದಳು. ಅದರಲ್ಲಿ ಗಂಡನ ಹಸ್ತಾಕ್ಷರದ ಒಂದು ಚೀಟಿಯಿದ್ದು, ಅದಕ್ಕೆ ಜೋಡಿಸಿ ಟಾಚಣಿಹಚ್ಚಿದ ಇನ್ನೊಂದು ವಿಸ್ತೃತ ಪತ್ರವೂ ಇತ್ತು. ಗಂಡನು ಬರೆದಿದ್ದ ಆ ಪುಟ್ಟ ಪತ್ರವನ್ನೋದಿ ಅವಳ ಹಾಹಾರಿ 'ಅಯ್ಯೋ ದೈವವೇ!' ಎಂದು ಅವಳು ನೆಲಕ್ಕೆ ದೊಪ್ಪನೆ ಬಿದ್ದುಬಿಟ್ಟಳು. ಆಕೆಯ ವ್ಯಸನಾಕ್ರಾಂತ ಅವಸ್ಥೆಯನ್ನೂ, ಕಟ್ಟಕಡೆಗೆ ಅವಳು ಹಾಹಾರಿ ನೆಲಕ್ಕೆ ಬಿದ್ದದ್ದನ್ನೂ ಮರೆಗೆ ನಿಂತ ದಾಸಿಯು ನೋಡಿದವಳೇ ಚಟ್ಟನೆ ಚೀರಿದಳು. ಕೂಡಲೆ ಕಮಲೆಯ ಅತ್ತೆಯೂ, ಇತರ ದಾಸಿಯರೂ ಅಲ್ಲಿಗೆ ಲಗಬಗೆಯಿಂದ ಬಂದು

ನೋಡುತ್ತಾರೆ, ಕಮಲೆಯು ಛಿನ್ನಲತಿಕೆಯಂತೆ ಎದುರಿಗಿನ ಫರಸುಗಲ್ಲಿನಮೇಲೆ ಬಿದ್ದಿರುತ್ತಾಳೆ. ಆಗಲವಳ ಹಣೆಗೆ ಫೋಟಬಿದ್ದಿದ್ದು, ಅದರೊಳಗಿಂದ ನೆತ್ತರವು ಒತ್ತರವಾಗಿ ಚಿಮ್ಮುತ್ತಲಿದೆ.

"ರಾವಸಾಹೇಬರೇ, ಇತ್ತ ಬನ್ನಿರಿ; ಅವ್ವನವರು ಹ್ಯಾಗೆ ಎಚ್ಚರದಪ್ಪಿ ಬಿದ್ದುಕೊಂಡಿರುತ್ತಾರೆಂಬದನ್ನು ನೋಡಬನ್ನಿರಿ" ಎಂದು ದಾಸಿಯು ಕಮಲೆಯ ಕೋಣೆಯ ಹೊರಗೆ ನಿಂತು ಗಟ್ಟಿಯಾಗಿ ಕೂಗಿಕೊಂಡಳು. ಈ ಮೊದಲು ಕಮಲೆಯ ಕೋಣೆಗೆ ಬಂದು ಹೋಗಿದ್ದ ಮಾಧವರಾಯನು ಕೋಠಿಯವನಿಗೆ ಅಂಗಡಿಯಿಂದ ತರುವ ಸಾಮಾನುಗಳ ಪಟ್ಟಿಯನ್ನು ಬರೆದು ಕೊಡುವದರಲ್ಲಿ ತೊಡಗಿದ್ದನು. ದಾಸಿಯ ಚೀತ್ಕಾರ ಧ್ವನಿಯು ಕಿವಿಗೆ ಬಡಿಯುತ್ತಲೇ, ಅವನು ತನ್ನ ಅಟ್ಟದಮೇಲಿನ ಕೋಣೆಯಿಂದ ಧಾವಿಸಿ ಕೆಳಕ್ಕೆ ಬಂದನು. ಇಷ್ಟರಲ್ಲಿ ಶಿವರಾಯನ ಅಬಚಿಯು ಕಮಲೆಯ ಗಾಯಕ್ಕೆ ತಣ್ಣೀರಿನ ಪಟ್ಟಿಯನ್ನು ಕಟ್ಟಿ ನೆತ್ತರ ಹೊರಡುವದನ್ನು ನಿಲ್ಲಿಸಿದ್ದಳು; ಹಾಗು ಆಕೆಗೆ ಸ್ಮೃತಿಯುಂಟಾಗುವ ಉಪಾಯಗಳನ್ನು ಮಾಡುತ್ತಿದ್ದಳು. ಮಾಧವನು ಅಲ್ಲಿಗೆ ಬರುತ್ತಲೆ, ಅವರೀರ್ವರೂ ಸೇರಿ ಕಮಲೆಯನ್ನೆತ್ತಿ ಆಕೆಯ ಪಲ್ಲಂಗದ ಮೇಲೆ ಮಲಗಿಸಿದರು. ಪಲ್ಲಂಗದಮೇಲೆ ಮಲಗಿದ ಕೆಲಹೊತ್ತಿನಲ್ಲಿಯೇ ಕಮಲೆಗೆ ದೇಹಭಾನವುಂಟಾಯಿತು. ಅವಳು ಮೆಲ್ಲಮೆಲ್ಲನೆ ಕಣ್ಣುಗಳನ್ನು ತೆರೆಯುತ್ತ ತನ್ನಷ್ಟಕ್ಕೆ ತಾನೇ ನುಡಿದದ್ದೇನಂದರೆ, "ನನ್ನ ಹಣೆಗೆ ಈ ಪರಿ ನೋವು ಏಕೆ ಉಂಟಾಗಿದ್ದೀತು? "ಅಷ್ಟರಲ್ಲಿ ಅವಳಿಗೆ ಅವಳ ಗಂಡನ ಪತ್ರದ ನೆನಪಾಗಲು ಬವಳಿಬಂದು ಬೀಳುವಾಗ ಅವಸರವಸರದಿಂದ ತಾನು ಅದನ್ನು ತನ್ನ ಸೆರಗಿನೊಳಗೆ ಹೇಗೆ ಅಡಗಿಸಿಟ್ಟಿದ್ದಳೋ ಹಾಗೆಯೇ ಅದಿತ್ತು. ಕಮಲೆಯ ನೋವಿನ ಮಾತನ್ನು ಕೇಳಿ ಶಿವರಾಯನ ಅಬಚಿಯು ಅವಳನ್ನುದ್ದೇಶಿಸಿ—ತಂಗೀ, ಇಂದು ನಿನ್ನ ಪುನರ್ಜನ್ಮವೇ ಆಯಿತು! ನೀನು ನಿಂತಲ್ಲಿಂದಲೇ ಈ ಫರಸುಗಲ್ಲಮೇಲೆ ಬಿದ್ದದರಿಂದ ನಿನ್ನ ಹಣೆಯೊಡೆದು ಇದೋ ಈ ಕಲ್ಲೆಲ್ಲ ರಕ್ತಮಯವಾಗಿ ಹೋಗಿದೆ, ಎಂದು ನುಡಿದು, ಮಾಧವನನ್ನು ಕುರಿತು—ತಮ್ಮಾ ಮಾಧವರಾಯಾ, ಒಬ್ಬ ಜಲ್ದೀ ಡಾಕ್ಟರನನ್ನು ಕರೆಯಲಿಕ್ಕೆ ಬೇಗನೆ ಯಾರನ್ನಾದರೂ ಓಡಿಸಪ್ಪಾ, ಎಂದು ಹೇಳಿದಳು.

ಆಗ ಕಮಲೆಯು —ಬೇಡ-ಬೇಡ, ಅತ್ತೆಯವರೇ, ಡಾಕ್ಟರರನ್ನು ಕರೆಯಿಸುವ ಅವಶ್ಯಕತೆಯಿಲ್ಲ. ಒಮ್ಮಿಂದೊಮ್ಮೆ ಬವಳಿ ಬಂದುದರಿಂದ ಹೀಗೆ ಬಿದ್ದು ತುಸ ಪೆಟ್ಟಾಗಿದೆ. ಇಷ್ಟಕ್ಕೇಕೆ ಡಾಕ್ಟರನು? ತುಸ ಹೊತ್ತು ಮಲಗಿ ಎದ್ದನೆಂದರೆ

ಆರಾಮವೆನಿಸಬಹುದು; ನನಗೆ ಏನೂ ಭಯವಿಲ್ಲ; ಯಾರೂ ಚಿಂತಿಸಬೇಡಿರಿ. ನಡೆಯಿರಿನ್ನು ವಿಶ್ರಾಂತಿಗಾಗಿ ನನಗಷ್ಟು ಮಲಗಗೊಡಿರಿ; ಆದರೆ ಮಾಧವರಾಯಾ, ಇನ್ನರ್ಧ ಗಂಟೆಗೆ ಬಂದು ನನ್ನನ್ನು ಕಾಣು, ಎಂದು ಹೇಳಲು, ಎಲ್ಲರೂ ಅಲ್ಲಿಂದ ಹೊರಟು ಹೋದರು. ನಂತರ ಕಮಲೆಯು ತನ್ನ ಕೋಣೆಯ ಬಾಗಿಲನ್ನಿಕ್ಕಿಕೊಂಡು ಪಲ್ಲಂಗದಮೇಲೆ ಅಡ್ಡಾಗಿ ಪುನಃ ಆ ತನ್ನ ಸ್ವಾಮಿಯ ಪತ್ರವನ್ನು ಓದಲಾರಂಭಿಸಿದಳು. ಆ ಪತ್ರದ ಸಂಗತಿಯು ಈ ಬಗೆಯಾಗಿತ್ತು:—

"ಪ್ರಿಯ ಕಮಲೆ, ನನ್ನಿಂದ ನಿನಗೆ ನಿಜವಾದ ಸುಖವಾಗುವದಿಲ್ಲೆಂಬದನ್ನು ನಾನೀಗೆಷ್ಟೋ ದಿನಗಳಹಿಂದೆ ಅನುಮಾನಿಸಿದ್ದೆನು; ಆದರೆ ಈ ವರೆಗೂ ನಾನು ಆ ಸಂದೇಹಕ್ಕೆ ನನ್ನ ಹೃದಯದಲ್ಲಿ ಸ್ಥಿರವಾಗಿ ಆಶ್ರಯ ಕೊಟ್ಟಿರಲಿಲ್ಲ. ಈಗ ನಡೆದಿರುವ ಸಂಗತಿಯಿಂದ ತಿಳಿದು ಬರುವದೇನಂದರೆ, ಆಗಿನ ನನ್ನ ಅನುಮಾನವು ನಿರಾಧಾರವಿದ್ದಿಲ್ಲ. ಈ ಕಠಿಣ ಆಘಾತವು ನನ್ನಿಂದ ಸಹಿಸಲಶಕ್ಯವು. ನನ್ನ-ನಿನ್ನ ಋಣವು ಇಂದಿಗೆ ಹರಿದಂತಾಯಿತು. ನಾನಿನ್ನು ಎಂದೂ ನಿನ್ನ ಕಣ್ಣಿಗೆ ಬೀಳಲಾರೆನು. ನಿನ್ನ ಸೌಖ್ಯಕ್ಕೆ ಕಂಟಕಪ್ರಾಯನಾಗಬಾರದೆಂದೇ ನಾನು ನಿನಗೆ ಕಾಣಿಸಿಕೊಳ್ಳುವದಿಲ್ಲ. ಚಿರ ಸೌಖ್ಯದಿಂದಿರೆಂದು ನಿನ್ನನ್ನು ಆಶೀರ್ವದಿಸುವೆನು. ಯಾವ ವಿಷಯದಲ್ಲಿಯೂ ನಿನಗೆ ಕೊರತೆಯುಂಟಾಗುವಂತೆ ಮಾಡಿರುವದಿಲ್ಲ. ಇತಿ......

ಶಿವರಾಯ."

ಈ ಶ್ಲೇಷಾರ್ಥದ ಪತ್ರವನ್ನು ಒಮ್ಮೆಬಿಟ್ಟು ಮತ್ತೊಮ್ಮೆ ಓದಿದರೂ ಕಮಲೆಗೆ ಇದರ ನಿಜಾರ್ಥವು ತಟ್ಟನೆ ಹೊಳೆಯದಾಯಿತು. "ಅವರಿಗೆ ನನ್ನಬಗ್ಗೆ ಯಾತರಿಂದ ಸಂದೇಹವುಂಟಾಗಿರಬಹುದು? ನಾನು ಮಾಡಿದ್ದಾದರೂ ಏನು? ಸ್ವಾಮಿಯ ಮನಸ್ಸಿಗೆ ಬೇಸರವುಂಟಾಗುವಂಥ ಅದಾವ ನಿಂದ್ಯಕೃತ್ಯವು ನನ್ನಿಂದ ಸಂಭವಿಸಿರುವದು?" ಎಂದು ಬಹಳ ಹೊತ್ತಿನವರೆಗೆ ಜ್ಞಾಪಿಸಿಕೊಂಡರೂ ಆವಳ ಸ್ಮರಣಕ್ಕೆ ಬರಲೊಲ್ಲದು. ಹಾಗಾದರೆ, ಮೋಡವಿಲ್ಲದ ಆಕಾಶದಿಂದ ಈ ವಜ್ರಾಘಾತದಂಥ ಭಯಂಕರ ವೃಷ್ಟಿಯೇಕೆ? ಯಾವನು ನನ್ನ ಸ್ವಾಮಿಯೋ,-ನನ್ನ ಪೂಜ್ಯದೈವತವೋ ಹಾಗು ಯಾವನು ನನ್ನ ಇಹಪರಗಳ ಸರ್ವಸ್ವವೋ ಆ ನನ್ನ ಪ್ರಿಯಪತಿಯು ನನಗೆ ಈ ಪ್ರಕಾರದ ಕಠೋರ ಪತ್ರವನ್ನೇಕೆ ಬರದಿರುವನು? ನಾನು ನನ್ನ ಪತಿಯಹೊರತ್ತು ಅನ್ಯ ಯಾವ ಪುರುಷನನ್ನೂ ಕಣ್ಣೆತ್ತಿ ನೋಡಿದವಳಲ್ಲ. ಹೀಗಿದ್ದು ನನ್ನ ಪತಿಯು ಯಾವ ಅನುಮಾನಕ್ಕೊಳಪಟ್ಟು ನನಗೆ ಹೀಗೆ ಬರೆದನು? ಎಂದು ಕಮಲೆಯು ಬಹಳ ಹೊತ್ತಿನವರೆಗೆ ಆಲೋಚಿಸಿದಳು. ಆದರೂ ಆವಳಿಗೆ ಕಾರಣವು ತಿಳಿಯದಾಯಿತು.

ಇಷ್ಟರಲ್ಲಿ ಗಂಡನ ಪತ್ರದ ಹಿಂಬದಿಗೆ ಟಾಚಣಿಯಿಂದ ಜೋಡಿಸಿದ ಬೇರೊಂದು ಪತ್ರ ಇರುವದೆಂಬದು ಅವಳ ಸ್ಮರಣೆಗೆ ಬರಲು, ಕೂಡಲೆ ಅವಳು ಆ ಎರಡನೆಯ ಪತ್ರದ ಸಂಗತಿಯನ್ನು ಬಳ್ಳೇ ಆತುರದಿಂದ ಅವಲೋಕಿಸಹತ್ತಿದಳು.

"ಪೋಷಕ ಮಹಾನುಭಾವರ ಸನ್ನಿಧಿಗೆ—ಸಾಷ್ಟಾಂಗ ಪ್ರಣಾಮಗಳು; ಸಾಂಪ್ರತ ನಾನು ತಮ್ಮ ಉಪ್ಪನ್ನು ತಿಂದು ಬೆಳೆದಿರುವೆನು; ಹಾಗು ಈಗಲೂ ತಿನ್ನುತ್ತಿರುವೆನು. ಸಂಕಟ ಸಮಯದಲ್ಲಿ ತಾವು ನನ್ನನ್ನು ದಯಾಮಯ ದೃಷ್ಟಿಯಿಂದ ನೋಡಿ, ನನಗೆ ಆಶ್ರಯವನ್ನಿತ್ತಿರುವಿರಿ; ಆ ತಮ್ಮ ಉಪಕಾರಕ್ಕೆ ಈ ಬಗೆಯ ಪ್ರತ್ಯುಪಕಾರವನ್ನು ಮಾಡುವ ಪ್ರಸಂಗವುಂಟಾಗಬಹುದೆಂದು ನನಗೆ ಮೊದಲೇ ತಿಳಿದಿದ್ದರೆ, ನಾನು ಆಗಲೇ ನಿಮ್ಮ ಆಶ್ರಯವನ್ನು ತ್ಯಜಿಸಿ ಬಿಡುತ್ತಿದ್ದೆನು. ತಾವು ಆ ವಿಶ್ವಾಸಘಾತಕ ರಾವಸಾಹೇಬ-ಮಾಧವರಾಯನನ್ನು ಎಲ್ಲಿಂದ ಕರೆತಂದು ತಮ್ಮ ಸುಖಮಯ ಸಂಸಾರದಲ್ಲಿ ಸೇರಿಸಿಕೊಂಡಿರುವಿರೋ ದೇವರೇ ಬಲ್ಲ! ಅವನ ಮೋರೆಯನ್ನು ನೋಡಿದರೆ ಪಾಪವು ಘಟಿಸಬಹುದಾಗಿದೆ. ಕೂಡಲೆ ಅವನನ್ನು ತಮ್ಮ ಮನೆಯಿಂದ ಹೊರ ಹೊರಡಿಸಿರಿ. ಅವನಬಗ್ಗೆ ಕಂಡಕಂಡವರು ಈಗಾಗಲೆ ಗುಣಗುಟ್ಟುತ್ತಿರುವರು. ತಾವು ಮನಸರಿಮಾಡಿ ಬಿಟ್ಟರೆ, ಈ ಕಲಂಕಿತ ವಿಷಯವು ಸಾಮಾನ್ಯ ಜನರ ಸಂಭಾಷಣಕ್ಕೆ ಪ್ರಾಮುಖ್ಯ ವಿಷಯವಾಗಬಹುದು. ತಾವು ಬಳ್ಳೇ ಬುದ್ಧಿವಂತರಿರುವಂತೆ, ಸುವಿಚಾರಕರೂ ಆಗಿರುತ್ತೀರಿ. ಈ ವಿಷಯದಲ್ಲಿ ಇದಕ್ಕೂ ಹೆಚ್ಚು ಬರೆಯಲಿಕ್ಕೆ ನಾನು ಶಕ್ತನಾಗಿರುವದಿಲ್ಲ ಆದರೂ ಕಟ್ಟಕಡೆಗೆ ನಾನು ಕೇಳಿರುವ ಒಂದು ಮಾತನ್ನು ತಮಗೆ ತಿಳಿಸಿ, ಈ ನನ್ನ ಪತ್ರವನ್ನು ಮುಗಿಸುತ್ತೇನೆ. ಅದೇನಂದರೆ, ತಾವು ತಮ್ಮವನೆಂದು ಭಾವಿಸಿ ಯಾವನಿಗೆ ಆಶ್ರಯ ಕೊಟ್ಟಿರುವಿರೋ, ಆ ಮಾಧವರಾಯನು ತಮ್ಮ ಹೆಂಡತಿಯ ಉಪಪತಿಯಾಗಿರುವನಂತೆ!

ಯೋಗ್ಯಕಾಲಕ್ಕೆ ನಿಜಸಂಗತಿಯನ್ನು ಸ್ಪಷ್ಟವಾಗಿ ತಿಳಿಸಿದ್ದಕ್ಕಾಗಿ ನನ್ನನ್ನು ಕ್ಷಮಿಸಬೇಕು. ತಮ್ಮ ದಯಾಮಯ ಉಪಕಾರದಿಂದ ಪೋಷಿತನಾದ ನಾನು ವಜ್ರಾಘಾತದಂಥ ಈ ಕಠಿಣ ಸಂಗತಿಯನ್ನು ಕೇವಲ ಸರಳ, ಉದಾರ ಹಾಗು ಸಂದೇಹರಹಿತರಾದ ತಮ್ಮ ಮುಂದೆ ತೀರ ಅನಿವಾರ್ಯವೆಂದು ಹೇಳಬೇಕಾಗಿದೆ. ಇದಕ್ಕಾಗಿ ನನ್ನ ಅಂತರಂಗದಲ್ಲಿ ಎಷ್ಟು ಕಷ್ಟವಾಗುತ್ತಿರುವದೆಂಬದನ್ನು ಬಾಯಿಲೆ ಹೇಳಲಾರೆನು. ಇತಿ ಸವಿನಯ ಪ್ರಣಾಮಗಳು.

ತಮ್ಮ ಆಶ್ರಿತ"

ಈ ಕಲಂಕಿತ ಪತ್ರದ ಕಡೆಯ ಭಾಗವು ಹರಿದು ಹೋಗಿತ್ತು. ಆದರಿಂದ ಇದನ್ನು ಬರೆದವರಾರೆಂಬದನ್ನು ತಿಳಕೊಳ್ಳಲಿಕ್ಕೆ ಮಾರ್ಗವಿರಲಿಲ್ಲ.

"ಎಂಥ ಅನರ್ಥವಿದು! ಈ ಭಯಂಕರಪತ್ರವನ್ನು ಅದಾರು ಬರೆದಿರಬಹುದು? ಅವನಿಗೆ ನಾನೇನು ಕೇಡುಮಾಡಿರಬಹುದು? ಯಾವ ಮಾಧವನನ್ನು ನಾವು ಉಭಯತರೂ ತಮ್ಮನೆಂದು ಭಾವಿಸಿ ನಡೆಯುತ್ತಿರುವೆವ್ವೋ, ಅಂಥವನ ಕೂಡ ನನ್ನ ಬಗ್ಗೆ ಕಲಂಕವ್ವೋ? ಇದನ್ನು ಕೇಳಿ ಈಗಲೆ ನೇಣು ಹಾಕಿಕೊಂಡು ಸಾಯಬೇಕೆಂದು ನನಗನಿಸುತ್ತದೆ. ಜನರ ಮನಸ್ಸುಗಳು ಇಷ್ಟು ನೀಚ, ಇಂಥ ಕ್ಷುದ್ರ ಹಾಗು ಇಷ್ಟು ಸಂದಿಗ್ಧಗಳಿರಬಹುದೆಂಬದನ್ನು ನಾನು ಸ್ವಪ್ನದಲ್ಲಿಕೂಡಾ ತಿಳಿದಿರಲಿಲ್ಲವಲ್ಲ? ಈ ಈ ಕಲಂಕಿತ ಪತ್ರವನ್ನು ಬರೆದವರಾರು? ಹಾಗು ನನಗುಂಟಾದ ಈ ಕಲಂಕವನ್ನು ಯಾರು ಹೋಗಲಾಡಿಸಬಹುದು? ನನ್ನ ಸ್ವಾಮಿಯು-ನನ್ನ ಪರಮ ದೈವತವು ಈ ಪತ್ರದ ಸಂಗತಿಯನ್ನು ನಂಬಿದ್ದಾದರೂ ಹೇಗೆ? ಅವ್ವಾ ಯೋಗೇಶ್ವರೀ, ತಾಯೀ ಜಗದಂಬೇ, ನಾನೀ ಪ್ರಸಂಗದಲ್ಲೇನು ಮಾಡಬೇಕೆಂಬದನ್ನು ನೀವೇ ಹೇಳಿರಿ. ಈ ಕಲಂಕಿತ ಪತ್ರವನ್ನೋದುವ ಮೊದಲೇ-ಆಗಲೆ ಬವಳಿ ಬಂದು ಬಿದ್ದ ಕಾಲಕ್ಕೇ-ನನಗೇಕೆ ಮರಣವು ಒದಗಲಿಲ್ಲ? ತಾಯೀ ಭವಾನೀ, ಈ ಕಲಂಕಿತ ಪತ್ರವನ್ನೋದುವದರಿಂದ ನನಗುಂಟಾದ ಹೃದಯದಾಹಕ್ಕಿಂತಲೂ ನನ್ನ ಸ್ವಾಮಿಗೆ ಗುರುತರವಾದ ಹೃದಯದಾಹವಾಗಿರಬೇಕು. ಆದರೆ ಅದಕ್ಕೆ ನನ್ನ ಉಪಾಯವೇನಿದೆ?" ಎಂಬ ನಿದಾರುಣವಾದ ಅಸಮಾಧಾನದಿಂದ ಕಮಲೆಯ ಅಂತರಂಗವು ಸುಡುತ್ತಿತ್ತು. ಆದರೆ ಅವಳ ಕಣ್ಣೊಳಗಿಂದ ತಟ್ಟೆಂದು ಒಂದು ಅಶ್ರುಬಿಂದುವು ಕೂಡ ಹೊರಹೊಡಲಿಲ್ಲ. ಅಶ್ರುವರ್ಷಣದಿಂದ ಪ್ರತಿಯೊಂದು ದುಃಖವು ಅಂಶತಃ ಕಡಿಮೆಯಾಗ್ತುವದು ನಿಸರ್ಗಸಿದ್ಧವಾಗಿರುವದು. ಆದರೆ ಕಮಲೆಯು ಅದಕ್ಕೆ ಅಪವಾದಪ್ರಾಯಳಾದ್ದರಿಂದ ಅವಳ ದುಃಖಕ್ಕೆ ಓಹಟಿಯಾಗುವ ಬದಲು, ಭರತಿಯು ಮಾತ್ರ ಖಾತ್ರಿಯಿಂದ ಆಗಹತ್ತಿತು.

ಇಷ್ಟರಲ್ಲಿ ಅರ್ಧ ಘಂಟೆಯಾಗಲು, ಮಾಧವನು ಆ ಕೋಣೆಯ ಬಾಗಿಲು ತೆರೆದು ಒಳಕ್ಕೆ ಬಂದನು. ಆಗ ಸಮ್ಮುಖದಲ್ಲಿಯೇ ಪಲ್ಲಂಗದಮೇಲೆ ಕುಳಿತ್ತುಕೊಂಡಿದ್ದ ಕಮಲೆಯ ಮೂರ್ತಿಯು ಅವನ ಕಣ್ಣಿಗೆ ಕಾಣಿಸಿಕೊಂಡಿತು. ಆದಕ್ಕೆ ಇಷ್ಟು ಕಪ್ಪಾದ ಹಾಗು ಕಠೋರವಾದ ಕಮಲೆಯ ಮುಖವನ್ನು ಅವನು ಈ ಮೊದಲು ಎಂದೂ ನೋಡಿರಲಿಲ್ಲ. ಹಾಸ್ಯಮುಖ, ಪ್ರಫುಲ್ಲಮನಸ್ಸು, ದಯಾಮಯ ದೃಷ್ಟಿ ಇವುಗಳಿಂದ ಯಾವಳು ಜಗದ್ಧಾತ್ರಿಯಂತೆ ಪರಿಶೋಭಿಸುತ್ತಿದ್ದಳೋ

ಆದೇ ಕಮಲೆಯು ಇಂದು ಕ್ಷುಧಾಗ್ರಸ್ತಳಾಗಿ ಬಿಟ್ಟಿದ್ದ ಘೋರವ್ಯಾಘ್ರಿಣಿಯಂತೆ ಭಯಂಕರಳಾಗಿ ತೋರುತ್ತಿದ್ದಳು. ಮಾಧವನು ಅಲ್ಲಿಗೆ ಹೋದಕೂಡಲೆ ಕಮಲೆಯು ತನ್ನ ಕೈಯೊಳಗಿನ ಆ ಪತ್ರಗಳ ಜೋಡಿಯನ್ನು ಅವನೆದುರಿಗೆ ಬಿಸುಟಿ ಶೂನ್ಯ ಮನಸ್ಸಿನಿಂದ ಅವನನ್ನು ನೋಡಹತ್ತಿದಳು. ಮಾಧವನು ಮೊದಲು ಶಿವರಾಯನ ಪತ್ರವನ್ನೂ, ತದನಂತರ ಆ ಕಲಂಕಿತ ಪತ್ರವನ್ನೂ ಓದಿ ಮುಗಿಸಿ "ಅಕ್ಕಾ ಇದೇನು!" ಎಂದವನೇ ದೊಪ್ಪನೆ ನೆಲಕ್ಕೆ ಕುಸಿಕುಳಿತನು.

ಹೀಗೆ ಕೆಲಕಾಲದವರೆಗೆ ಅವರೀರ್ವರೂ ನೀರವರಾಗಿದ್ದರು. ನಂತರ ಕಮಲೆಯು "ತಮ್ಮಾ ಮಾಧವ, ಮುಂದೇನುಮಾಡಬೇಕೆಂಬುದು ನಮಗೆ ಬಗೆಹರಿಯಲಾರದು. ಕೂಡಲೆ ಹೊರಟು ಬರುವಂತೆ ಅಪ್ಪನಿಗೆ ತಂತಿ ಕೊಡು; ಅಪ್ಪನು ಬರುವವರೆಗೆ ಯಾರೂ ನನ್ನನ್ನೆಬ್ಬಿಸಬೇಡಿರಿ" ಎಂದು ಮಾಧವನಿಗೆ ಹೇಳಿ ತನ್ನ ಕೋಣೆಯ ಬಾಗಿಲಿಗೆ ಒಳಗಿನಿಂದ ಅಗಳಿ-ಚಿಲಕಗಳನ್ನುಹಾಕಿ, ಪಲ್ಲಂಗದಮೇಲೆ ಬಿದ್ದುಕೊಂಡು ಪುನಃ ಆ ಕಲಂಕಿತ ಪತ್ರವನ್ನು ನೋಡಹತ್ತಿದಳು.

---

## ಮೂರನೆಯ ಪರಿಚ್ಛೇದ.

### ಉದ್ಧಟ ಸ್ಟೇಶನ್ ಮಾಸ್ತರ.

ಬೆಳಗಾವ ಜಿಲ್ಹೆಯೊಳಗಿನ ಗೋಕಾಕ ಗ್ರಾಮವು ಸದಾಶಿವರಾಯನ ಜನ್ಮಭೂಮಿಯು. ಅವನು ಮಧ್ಯಮಸ್ಥಿತಿಯ ಗೃಹಸ್ಥನು. ಯಾವ ಉದ್ಯೋಗ-ಧಂದೆಗಳನ್ನೂ ಮಾಡುತ್ತಿರಲಿಲ್ಲ ಹಿರಿಯರು ಗಳಿಸಿಟ್ಟ ಹೊಲಗಳನ್ನು ಲಾವಣಿಗೆ ಕೊಟ್ಟು ಬಂದ ಹಣದಿಂದ ಕುಟುಂಬ ಪೋಷಣವನ್ನು ಮಾಡುತ್ತಿದ್ದನು. ಸದಾಶಿವರಾಯನಿಗೆ ಇಬ್ಬರು ಹೆಣ್ಣು ಮಕ್ಕಳೂ ಒಬ್ಬ ಗಂಡು ಮಗನೂ ಇದ್ದರು ಹಿರಿಯ ಮಗಳಾದ ಕಮಲೆಯನ್ನು ಶಿವರಾಯನು ವರಿಸಿದ್ದನೆಂಬುದು ನಮ್ಮ ವಾಚಕರು ಬಲ್ಲ ಸಂಗತಿಯಾಗಿದೆ. ಚಿಕ್ಕವಳಾದ ಮಾಲತಿಯ ವಿವಾಹವು ಮಾಧವರಾಯನ ಕೂಡ ಆಗಿತ್ತು. ಗಂಡು ಮಗನಾದ ಅಶ್ವತ್ಥನು ಇನ್ನೂ ಹನ್ನೆರಡು ವರ್ಷದವನು. ಸದಾಶಿವರಾಯನ ದೈವವು ಅನುಕೂಲವಾಗಿತ್ತೆಂತಲೇ ಈ ಮಿತಿ ಮೀರಿದ ವರದಕ್ಷಿಣೆಯ ಯುಗದಲ್ಲಿ ಬಹು ಸ್ವಲ್ಪ ಖರ್ಚಿನೊಳಗೆ ಅವನ ಇಬ್ಬರು ಕನ್ಯೆಯರಿಗೂ ಬಹು

ಶ್ರೇಷ್ಠ ವರ-ಮನೆತನಗಳು ಲಭಿಸಿದ್ದವು. ತಾಯಿ-ತಂದೆಗಳಿಗೆ ತಮ್ಮ ಕನ್ಯೆಯರ ವಿವಾಹವಾಗುವವರೆಗೆ ಅನೇಕತರದ ಚಿಂತೆಯಿರುತ್ತದೆ. ಆದರೆ ಅವು ಒಮ್ಮೆ ಆಗಿ ಹೋದವೆಂದರೆ, ಅದರಲ್ಲಿಯೂ ತಮ್ಮ ಮನಸ್ಸಿನ ಪ್ರಕಾರ ವರ-ಮನೆತನಗಳು ಸಿಕ್ಕು ತಮ್ಮ ಮಕ್ಕಳು ಅಖಂಡ ಸೌಖ್ಯವನ್ನು ಹೊಂದುವರೆಂದು ಅವರ ಮನಸ್ಸಿನ ಖಾತ್ರಿಯಾಯಿತೆಂದರೆ ತೀರಿತು, ಅವರು ಪರಿಬಿಚ್ಚಿದ ಹಾವಿನಂತೆ ಆಗುವರೆಂಬದು ಲೋಕವಾಡಿಕೆಯಿರುವದು. ಇದರಂತೆ ಸದಾಶಿವರಾಯನಾದರೂ ಸುಖವಾಗಿದ್ದನು.

ಸಾವಿತ್ರೀ ವ್ರತದ ದಿವಸ ಸಂಜೆಯಮುಂದೆ ಅಶ್ವತ್ಥನು ತಾಯಿಯಬಳಿಗೆ ಬಂದು—ಅವ್ವಾ, ಹೊರಗೆ ತಾರಿನ ಶಿಪಾಯಿಯು ಒಂದು ತಾರನ್ನು ತಂದಿದ್ದು, ಅವನು ಅಪ್ಪನನ್ನು ಕರೆಯುತ್ತಿದ್ದಾನೆ, ಎಂದು ಹೇಳಿದನು.

ತಾರು ಬಂದ ಸಂಗತಿಯನ್ನು ಕೇಳಿ ಆ ಹುಡುಗನ ತಾಯಿಯು ಬೆಚ್ಚಿಬಿದ್ದಳು. ಗಂಡನನ್ನು ಕರೆತರಲಿಕ್ಕೆ ಆ ಹುಡುಗನನ್ನೇ ಕಳಿಸಿಕೊಟ್ಟು ಅವಳು ಹಲವು ಬಗೆಯಾಗಿ ಆಲೋಚಿಸಹತ್ತಿದಳು. ಅದೆಂತೆಂದರೆ. ಈ ತಂತಿಯನ್ನು ಯಾರು ಮಾಡಿರಬಹುದು! ಯಾಕೆ ಮಾಡಿರಬಹುದು? ಇದು ನಮ್ಮ ಕಮಲೆಯ ಗಂಡನಿಂದ ಬಂದಿರಬಹುದೊ? ಕಮಲೆಯು ಕ್ಷೇಮವಾಗಿರುವಳಲ್ಲವೆ? ಶಿವರಾಯನೂ ಮಾಧವರಾಯನೂ ಸುಖರೂಪದಿಂದಿರಬಹುದಲ್ಲವೆ? ಅವರಲ್ಲಾರಿಗಾದರೂ ಬೇನೆ-ಬೇಸರಿಕೆಗಳುಂಟಾಗಿರಲಿಕ್ಕಿಲ್ಲವಷ್ಟೆ? ಇತ್ಯಾದಿ ಆಲೋಚನೆಯಲ್ಲಿ ಅವಳು ದಂಗಾಗಿರಲು, ಅಶ್ವತ್ಥನು ಓಡುತ್ತ ಹೋಗಿ ನೆರೆಮನೆಯಲ್ಲಿ ಸಾವಿತ್ರೀ ವ್ರತದ ಪೂಜಾ-ಪುನಸ್ಕಾರಗಳನ್ನು ನೋಡುತ್ತ ಕುಳಿತಿದ್ದ ತಂದೆಗೆ "ಮನೆಯಲ್ಲಿ ತಾರಿನ ಶಿಪಾಯಿಯು ಬಂದಿರುತ್ತಾನೆ; ಈಗಲೇ ಹೊರಟು ಬರಬೇಕೆ"ಂದು ಅವಸರ ಪಡಹತ್ತಿದನು. ತಾರಿನ ಸುದ್ದಿಯು ಕರ್ಣಪಾತವಾದಕೂಡಲೆ ಸದಾಶಿವರಾಯನು ಮುಗಿಯ ಬಂದಿದ್ದ ಸಾವಿತ್ರೀಪೂಜೆಯನ್ನು ಕೂಡ ಪೂರೈಸಿಕೊಳ್ಳದೆ ಆಗಲೆ ಹೊರಟು ಬಂದನು! ಅವನು ಮನೆಗೆ ಬಂದು ತಾರಿನವನ ಕಾಗದದಲ್ಲಿ ಸಹಿ ಮಾಡಿ ಆ ತಾರಿನ ಲಕ್ಕೋಟೆಯನ್ನು ತಕ್ಕೊಂಡು ಒಳಗೆ ಹೋದನು. ಆಗ ಮುಕಮುಕ ಮೂರುಸಂಜೆಯ ಸಮಯವು. ಸದಾಶಿವರಾಯನು ಐವತ್ತು ವರ್ಷದಮನೆಗೆ ಬಂದವನು. ಅವನ ಕಣ್ಣಿಗೆ ಚಾಳೀಸ ಬಂದಿತ್ತು. ಆದ್ದರಿಂದ ಅವನಿಗೆ ಸೀಸಕಡ್ಡಿಯಿಂದ ಅಸ್ಪಷ್ಟವಾಗಿ ಬರೆದ ಆ ತಾರಿನ ಕಾಗದದ ಸಂಗತಿಯನ್ನು ಓದಲಿಕ್ಕೆ ಕಾಣಲೊಲ್ಲದು. ಕೆಲಹೊತ್ತಿನಲ್ಲಿ ದೀಪವು ಹಚ್ಚಲ್ಪಟಿತು. ಅಷ್ಟರಲ್ಲಿ ನೆರೆಮನೆಯ ನಾರಾಯಣರಾಯರೂ ಅಲ್ಲಿಗೆ ಬಂದರು. ಅವರು ತಾರನ್ನು ಓದಿದರು. ಅದರಲ್ಲಿ ವಿಶೇಷ ಸಂಗತಿಯೇನೂ ಬರೆದಿರಲಿಲ್ಲ. ಪುಣೆ

ಯಿಂದ ಮಾಧವರಾಯನು ಗೋಕಾಕದ ಸದಾಶಿವರಾಯರಿಗೆ "ತೀವ್ರ ಹೊರಟು ಬರಬೇಕು, ಅತ್ಯವಶ್ಯದ ಕೆಲಸವಿದೆ." ಎಂದಿಷ್ಟೇ ಬರೆದಿದ್ದನು.

ಸದಾಶಿವರಾಯನು ಆಗಲೆ ಹೊರಡಬೇಕೆಂದನು. ಆದರೆ ಗೋಕಾಕಊರು ಸ್ಟೇಶನ್ನದಿಂದ ಒಂಬತ್ತು ಮೈಲು ದೂರವಿದ್ದದರಿಂದ ಮೂರೂ ಸಂಜೆಯಂಥ ಅವೇಳೆಯಲ್ಲಿ ಬಂಡಿ-ಗಾಡಿಗಳಾಗಲಿ ಮೋಟಾರಾಗಲಿ ಅನುಕೂಲಾಗುವಂತಿರಲಿಲ್ಲ. ಆದ್ದರಿಂದ ಅವನು ಕಾಲಿನಿಂದ ನಡಿಯುತ್ತಲೇ ಹೋಗಬೇಕೆಂದು ನಿರ್ಧರಿಸಿದನು. ಆಗ ನಾರಾಯಣರಾಯರು ಹೇಳಿದ್ದೇನಂದರೆ, ಸದಾಶಿವರಾಯರೇ, ಈ ಅವೇಳೆಯಲ್ಲಿ ನೀವೊಬ್ಬರೇ ಹೋಗುವದು ಸರಿಯಲ್ಲ. ಆದ್ದರಿಂದ ನಾನು ನಮ್ಮ ಭರಮನನ್ನು ನಿಮ್ಮ ಸಂಗಡ ಸ್ಟೇಶನ್ನಿಗೆ ಕಳಿಸುತ್ತೇನೆ. ಅವನು ಇಂದು ರಾತ್ರಿ ಅಲ್ಲಿಯೇ ಮಲಗಿ, ನಾಳೆ ಬೆಳಗ್ಗೆ ಬರಲೊಲ್ಲನೇಕೆ, ಎಂದು ಹೇಳಿ, ಭರಮನೆಂಬ ತಮ್ಮ ಆಳುಮಗನನ್ನು ಕಳಿಸಿಕೊಡಲಿಕ್ಕೆ ಹೋದರು.

ನಾರಾಯಣರಾಯರು ಹೊರಟು ಹೋದಕೂಡಲೆ ಸದಾಶಿವರಾಯರು ಚಟಿವಟಿಕೆಯಿಂದ ಸಾಯಂಸಂಧ್ಯಾಹ್ನಿಕಗಳನ್ನು ತೀರಿಸಿಕೊಂಡರು. ತುಸ ಉಪಾಹಾರವನ್ನು ತೀರಿಸಿಕೊಂಡು ಹೋಗುವದು ಅವರ ಮನಸ್ಸಿನಲ್ಲಿತ್ತು. ಆದರೆ, ಗಂಡನು ಊರಿಗೆ ಹೋಗುವ ಅವಸರದಲ್ಲಿದ್ದರೂ ಎಂದೂ ತಾರಿನ ಸಂಗತಿಯನ್ನು ಕೇಳದ ಅವನ ಹೆಂಡತಿಯು ವಿಸ್ಮಯ-ಆಶ್ಚರ್ಯ-ಚಿಂತೆಗಳಿಂದ ಬೆರಗಾಗಿದ್ದಳು. ಸ್ವಭಾವತಃ ಆಲಸ್ಯಮಟ್ಟಿಯಾಗಿದ್ದ ಆ ಗೋಕಾಕನಾಡಿನ ಹೆಣ್ಣುಮಗಳು ಈ ಪ್ರಸಂಗದಲ್ಲಿ ಏನುಮಾಡಬೇಕೆಂಬದನ್ನು ತಿಳಿಯದೆ ಹೌಹಾರಿ ಕುಳಿತಳು. ಅಷ್ಟರಲ್ಲಿ ನಾರಾಯಣರಾಯರಿಂದ ಕಳಿಸಲ್ಪಟ್ಟ ಭರಮನು ಸ್ಟೇಶನ್ನಿಗೆ ಹೋಗಲು ಸಜ್ಜಾಗಿ ಬಂದನು ಅವನ ಕೈಯೊಳಗಿನ ನಿಡಿದಾದ ಬಡಿಗೆಯ ಸಪ್ಪಳದಿಂದಲೇ ಅವನು ಬಂದದ್ದನ್ನು ತಿಳಿದು ಸದಾಶಿವರಾಯರು ಉಪಾಹಾರದ ಉಸಾಬರಿಯನ್ನು ಬಿಟ್ಟು ತಮ್ಮ ಸಾಮಾನುಗಳನ್ನು ಕಟ್ಟಿಕೊಳ್ಳಹತ್ತಿದರು. ಅವರು ತಮ್ಮ ಸಂಗಡ ವಿಶೇಷವೇನೂ ತಕ್ಕೊಳ್ಳಲಿಲ್ಲ. ಆದರೂ ಒಂದೆರಡು ಉಟ್ಟುಕೊಳ್ಳುವ ದೋತರ, ಒಂದು ಜೋಡಿ ಹೊರುವ ದೋತರ, ಒಂದೆರಡು ಸ್ನಾನದ ಪಂಜೆಗಳು, ಮೂರುನಾಲ್ಕು ಅಂಗಿಗಳು, ಒಂದು ಹಾಸುವ ಜಮಖಾನಿ, ಒಂದು ತಿಳುವಸ್ತ್ರ ಗಾದಿ, ಒಂದು ಶಾಲು, ಒಂದು ತಂಬಿಗೆ, ಎಲಿ-ಅಡಕಿಯ ಒಂದು ಚೀಲ ಮುಂತಾದಸಾಮಾನುಗಳೇ ಒಂದು ಕತ್ತೆಹೊರಲಾರದಷ್ಟು ಭಾರವಾದವು. ಅವುಗಳದೊಂದು ಗಂಟು ಮಾಡಿ ಅದನ್ನು ಭರಮನಕಡೆಗೆ ಕೊಟ್ಟು ಕಾಲಲ್ಲಿ ಮೊಚ್ಚೆಗಳನ್ನು ಹಾಕುವದಕ್ಕಾಗಿ ಅವರು ತಮ್ಮ ಪಡಸಾಳೆಗೆ ಬಂದರು.

ಅಲ್ಲಿ ವಿಶೇಷ ಕತ್ತಲಿದ್ದುದರಿಂದಲೂ, ಇಷ್ಟು ಅವಸರವಾಗಿ ಹೊರಡುವ ಪ್ರಸಂಗವು ಈ ವರೆಗೆ ಅವರಿಗೆಂದೂ ಬಾರದ್ದರಿಂದಲೂ, ಸದಾಶಿವರಾಯರು ಕಟ್ಟಿಯ ಮಾಡದೊಳಗಿನ ಜೋಡುಗಳನ್ನು ಕಾಲಲ್ಲಿ ತೊಡಿಸುವಷ್ಟರಲ್ಲಿ ಜಾರಿ ನೆಲಕ್ಕುರುಳಿದರು. ಆ ತುಸ ಜಾರುವಿಕೆಯಿಂದ ಅರಳೀ ಅಂಡಿಗೆಯಂಥ ಶರೀರದ ಸದಾಶಿವರಾಯರಿಗೆ ವಿಶೇಷಪೆಟ್ಟು ಹತ್ತದಿದ್ದರೂ, ಇಂಥೀ ಗಾಢಾಂಧಃಕಾರದಲ್ಲಿ ಒಂಬತ್ತು ಮೈಲು ದಾರಿಯನ್ನು ಇನ್ನು ಎರಡುಮೂರು ತಾಸುಗಳಲ್ಲಿ ಸವೆಯುವದು ಅಸಾಧ್ಯವೆಂದು ಅನಿಸಿದ್ದರಿಂದ ಅವರು ತಮ್ಮ ಲಾಟನನ್ನು ಕೊಡಲಿಕ್ಕೆ ಅಶ್ವತ್ಥನಿಗೆ ಒದರಿ ಹೇಳಿದರು. ಅಶ್ವತ್ಥನು ಭರಕ್ಕನೆ ಲಾಂದರವನ್ನು ತಂದಿರಿಸಿದನು. ಭರಮನು ಅದನ್ನು ಅಲ್ಲಾಡಿಸಿ ನೋಡಿ—ರಾಯರೇ, ಇದನ್ನು ಒಯ್ಯುವದರಿಂದ ಪ್ರಯೋಜನವೇನು? ಇದರಲ್ಲಂತೂ ಊರು ದಾಟಿ ಹೋಗುವಷ್ಟು ಸಹ ಎಣ್ಣೆ ಇರುವದಿಲ್ಲ. ಮೇಲಾಗಿ ಇದರ ಕನ್ನಡಿ ತುಸ ಒಡೆದದೆ, ಆದ್ದರಿಂದ ನಡುವೆ ಗಾಳಿಯಿಂದ ದೀಪ ಹೋದರೆ ಮಾಡುವದೇನು? ಎಂದನು. ಆಗ ಸದಾಶಿವರಾಯರು ಮನೆಯವರ ಮೇಲೆ ಹರಿಹಾಯ್ದು ಲಾಟನದಲ್ಲಿ ಎಣ್ಣೆ ತುಂಬಿಸಿ, ಒಂದು ದೀಪದ ಕಡ್ಡೀ ಪೆಟ್ಟಿಗೆಯನ್ನು ಭರಮನ ಕಡೆಗೆ ಕೊಡಿಸಿ ಮನೆಯಿಂದ ಒಮ್ಮೆ ಹೊರಬಿದ್ದರು.

ಆಗ ಅವರ ಹೆಂಡತಿಗೆ ಗಂಡನು ಏನೂ ತಿನ್ನದೆ ಹೋಗುತ್ತಾನೆಂಬದು ಧ್ಯಾಸಕ್ಕೆ ಬಂತು. "ಏನನ್ನಾದರೂ ತುಸ ತಕ್ಕೊಂಡು ನೀರು ಕುಡಿದು ಹೋಗುವದು ವಿಹಿತವಲ್ಲವೆ?" ಎಂದು ಕೇಳುವದಕ್ಕಾಗಿ ಅವಳು ಮಾಲತಿಯನ್ನು ಗಂಡನ ಬಳಿಗೆ ಕಳಿಸಿದಳು. ಆದರೆ ಅಷ್ಟರಲ್ಲಿ ಸದಾಶಿವರಾಯನು ತಮ್ಮ ಓಣಿಯನ್ನು ಸಹ ದಾಟಿ ಹೋಗಿದ್ದನು.

ಗಾಡಿ ಬರಲಿಕ್ಕೆ ಇನ್ನೂ ಅರ್ಧಗಂಟೆ ಉಳಿದಿರುವಾಗ ಸದಾಶಿವರಾಯನು ಭರಮನೊಡನೆ ಸ್ಟೇಶನ್ನಿಗೆ ಒಂದು ತಲುಪಿದನು. ಅಲ್ಲಿ ಅವನು ಭರಮನ ಗಂಟು-ಮೊಟ್ಟೆಯನ್ನು ಇಳಿಸಿಕೊಂಡು ಅವನಿಗೆ ಫಲಾಹಾರಕ್ಕಾಗಿ ಕೆಲವು ಆಣೆಗಳನ್ನು ಕೊಟ್ಟನು. ನಂತರ ಸ್ಟೇಶನ್ನದ ಆಫೀಸಿನೊಳಗೆ ಹೋಗಿ ಗಡಿಯಾರವನ್ನು ನೋಡಿದನು. ಆದರಲ್ಲಿ ೯|| ಗಂಟೆಯಾಗಿತ್ತು. ಗೋಕಾಕ ಸ್ಟೇಶನ್ನದ ಆಗಿನ ಮಾಸ್ತರನು ತುಸ ಸಿಡಕು ಸ್ವಭಾವದವನಿದ್ದನು. ಅದರಿಂದ ಅವನು ಸದಾಶಿವರಾಯನು ಆಫೀಸಿನೊಳಗೆ ಬಂದದ್ದನ್ನು ನೋಡಿ, "ಹೋಗಿ, ಹೊರಗೆ ಹೋಗಿ" ಎಂದು ತಿರಸ್ಕಾರ ಸೂಚಕ ದನಿಯಿಂದ ಹೇಳಿದನು. "ಪುಣೆಗೆ ಹೋಗುವ ಗಾಡಿಯು ಯಾವಾಗ ಬರುವದು?" ಎಂದು ಸದಾಶಿವರಾಯನು ಪ್ರಶ್ನೆ ಮಾಡಲು, ಅದಕ್ಕೆ ಆ ಉದ್ಧಟ

ಸ್ಟೇಶನ ಮಾಸ್ತರನು ಹೇಳಿದ್ದೇನಂದರೆ, ''ಬರತಕ್ಕ ವೇಳೆಯಾದ ಕೂಡಲೆ ಬಂದು ಬಿಡುವದು.'' ಇಂಥ ಸೌಜನ್ಯವಿರಹಿತ ಉದ್ಧಟ ನೌಕರಶಾಹಿಯೊಡನೆ ಹೆಚ್ಚು ಪೃಚ್ಛಾಪೃಚ್ಛ ಮಾಡುವದು ಸರಿಯಲ್ಲವೆಂದು ತಿಳಿದು ಸದಾಶಿವರಾಯನು ಅಲ್ಲಿಂದ ಹೊರಬಿದ್ದನು. ಈ ವರೆಗೆ ಒಂದೇಸವನೆ ಓಡುತ್ತ ಬಂದದರಿಂದ ಆ ಪೊಳ್ಳು ಮೈಯವನು ಅತಿಶಯವಾಗಿ ದಣಿದಿದ್ದನು. ಆದ್ದರಿಂದ ಗಾಡಿಬರುವದು ತಡವಿದ್ದರೆ, ಮಾಸ್ತರನನ್ನು ಕೇಳಿ, ಸ್ಟೇಶನ್ನಿನಲ್ಲಿ ತುಸವಿಶ್ರಮಿಸಬೇಕೆಂದು ಅವನ ಮನಸ್ಸಿನಲ್ಲಿತ್ತು. ಆದರೆ ಸ್ಟೇಶನ ಮಾಸ್ತರನ ಆ ಉದ್ಧಟತನದ ವ್ಯವಹಾರದಿಂದ ಅವನು ತನ್ನ ಆ ಬೇತನ್ನು ರಹಿತಮಾಡಿ, ಸ್ಟೇಶನ ಆಫೀಸದಿಂದ ಹೊರಗೆ ಬಂದು, ಮೂರನೇ ತರಗತಿಯ ಪ್ಯಾಸೆಂಜರರು ಕೂಡ್ರುವ ವೇಟಿಂಗರೂಮಿನಲ್ಲಿ ಒತ್ತಟ್ಟಿಗೆ ಹಾಯ ಎಂದು ಕುಳಿತುಕೊಂಡು ಗಾಡಿ ಬರುವ ದಾರೀ ಕಾಯುತ್ತಿದನು. ಕೆಲನಿಮಿಷಗಳ ತರುವಾಯ ಸ್ಟೇಶನ್ ಮಾಸ್ತರನು ಗಟ್ಟಿ ದನಿಯಿಂದ ''ಫಕರುದ್ದೀನ'' ''ಫಕರುದ್ದೀನ''ಎಂದು ಕೂಗಿಕೊಂಡನು. ''ಆಯಾ ರಾವಸಾಬ''ಎಂದೆನ್ನುತ್ತ ಸಮೀಪದಲ್ಲಿಯ ಕ್ಷುದ್ರ ಬಿಡಾರದೊಳಗಿಂದ ಪೋರ್ಟರ ವೇಷಧರಿಸಿದ್ದ ಒಬ್ಬ ಮನುಷ್ಯನು ಧಾವಿಸಿ ಬಂದನು. ಕೂಡಲೆ ಸ್ಟೇಶನ್ ಮಾಸ್ತರನು ಅವನನ್ನುದ್ದೇಶಿಸಿ, ನುಡಿದದ್ದೇನಂದರೆ—''ಗಾಡಿ ಬಿಟ್ಟಾಗಿ ಹೋಗಿದೆ. ಘಂಟೆಕೊಡು. ಸಿಗ್ನಲ್ಲ ದೀಪಗಳು ಸರಿಯಾಗಿವೆಯೊ? ಮೇನ್‌ಲಾಯಿನ್‌ಪಾಯಿಂಟು ಸರಿಯಾಗಿದೆಯೋ? ಪಾಯಿಂಟಿಗೆ ಯಾರು ಹೋಗಿರುವರು? ಹೂ ನಡೆ, ಇಗೋ ಈ ಎಲ್ಲ ಪಾರ್ಸಲ್ಲುಗಳು ಇದೇಗಾಡಿಯಿಂದ ರವಾನೆಯಾಗಬೇಕು.'' ಬಳಿಕ ಅವನು ಅವಸರದಿಂದ ತಿಕೇಟುಗಳ ಕಪಾಟಿನಬಾಗಿಲ ತೆಗೆದನು; ಹಾಗು ಒಂದು ಘಾಸಲೇಟದ ದೀಪವನ್ನು ಸಮೀಪದಲ್ಲಿಟ್ಟುಕೊಂಡು ತಿಕೇಟು ಕೊಡುವ ಕಿಟಕಿಯಬಾಗಿಲ ತೆರೆದು ''ತಿಕೇಟ'' ''ತಿಕೇಟ'' ಎಂದು ಕೂಗಿಕೊಂಡನು. ಕೂಡಲೆ ಮಳೆಯನ್ನು ಕಾದುಕೊಂಡಿರುವ ಚಾತಕಪಕ್ಷಿಯಂತೆ ತಿಕೇಟಿಗಾಗಿ ಕಾದುಕೊಂಡಿದ್ದ ಪ್ಯಾಸೆಂಜರರು ತಿಕೇಟು ಕೊಳ್ಳುವದಕ್ಕ ಒತ್ತರದಿಂದ ನಾಮುಂದೆ ನೀಮುಂದೆ ಎಂದು ಮುಗಿಬಿದ್ದರು. ತಿಕೇಟು ಕೊಡತಕ್ಕ ಸ್ಥಳವು ಯಾವಾಗಲೂ ಇಕ್ಕಟ್ಟಿನದಿರುತ್ತದೆ. ಅದರಲ್ಲಿಯೂ ಸದರ್ನಮರಾಠಾ ರೇಲ್ವೆಯ ಸ್ಟೇಶನ್ನುಗಳಲ್ಲಿ ಮೂರನೆ ತರಗತಿಯ ತಿಕೀಟುಕೊಡತಕ್ಕ ಸ್ಥಳಗಳು ಕೇವಲ ಇಕ್ಕಟ್ಟಿನವೂ ಸರಿಯಾದ ದೀಪಬೆಳಕುಗಳಿಲ್ಲದವೂ ಆಗಿರುತ್ತವೆ. ಆದ್ದರಿಂದ ಪ್ಯಾಸೆಂಜರರಿಗೆ ಎಷ್ಟು ಕಷ್ಟವಾಗುತ್ತದೆಂಬದು ಆ ಭಗವಂತನಿಗೊಬ್ಬನಿಗೇ ಗೊತ್ತು. ಲಂಚದಿಂದ ಮೈಯುಬ್ಬಿದ ರೇಲ್ವೆ ನೌಕರಗಣಗಳು,

ಕೇವಲ ಮೂರನೇ ತರಗತಿಯ ಪ್ಯಾಸೆಂಜರರ ಹಣದಿಂದಲೇ ಪುಷ್ಟವಾಗುತ್ತಿರುವ ರೇಲ್ವೆ ಕಂಪನಿಗಳಿಗಾಗಲಿ ಆ ಕಷ್ಟದ ಅನುಭವವು ಹ್ಯಾಗೆ ಆಗಬೇಕು? ಇರಲಿ.

ಗಂಟೆಯು ಸಪ್ಪಳವನ್ನು ಕೇಳಿದ ಕೂಡಲೆ ಸದಾಶಿವರಾಯನು ನೆಟ್ಟಗೆ ಸ್ಟೇಶನ್ನ ಆಫೀಸಿನೊಳಕ್ಕೆ ಸೇರಿ ಥರ್ಡಕ್ಲಾಸ ತಿಕೀಟಗಳನ್ನು ಕೊಡುತ್ತ ನಿಂತಿದ್ದ ಸ್ಟೇಶನ್ನ ಮಾಸ್ತರನೆದುರಿಗೆ ಐವತ್ತು ರೂಪಾಯಿಗಳ ಒಂದು ನೋಟನ್ನಿಟ್ಟು— ಪುಣೆಗೆ ಎರಡನೇ ತರಗತಿಯ ರಿಟರ್ನ ತಿಕೀಟೊಂದನ್ನು ದಯವಿಟ್ಟು ಕೊಡಬೇಕೆಂ ದು ಕೇಳಿಕೊಂಡನು. ಸದಾಶಿವರಾಯನು ಪುನಃ ಸ್ಟೇಶನ್ನಿನೊಳಕ್ಕೆ ಸೇರಿದ್ದನ್ನು ಕಂಡು ಆ ಉದ್ಧಟ ಸ್ಟೇಶನ್ನ ಮಾಸ್ತರನ ಸಿಟ್ಟು ನಡುನೆತ್ತಿಗೇರಿತು. ಆದರೆ ಅವನು ಸೆಕಂಡಕ್ಲಾಸ ಪ್ಯಾಸೆಂಜರನೆಂಬುದು ತಿಳಿದ ಕೂಡಲೆ ಅವನ ಆ ಮಿತಿಮೀರಿದ ಸಂ ತಾಪವು ತನ್ನಷ್ಟಕ್ಕೆ ತಾನೇ ಹೆಪ್ಪುಗಟ್ಟಿತು. ಆ ಮಾಸ್ತರನು ಎಲ್ಲಕ್ಕೂ ಮೊದಲು ಸದಾಶಿವರಾಯನಿಗೆ ಸೆಕಂಡಕ್ಲಾಸ ತಿಕೀಟನ್ನು ತೆಗೆದುಕೊಟ್ಟನು; ಮತ್ತು ಏನ್ನಾದೇ ನಾದರೂ ಲಗ್ಗೇಜಮಾಡತಕ್ಕದ್ದಿದೆಯೋ, ಅದನ್ನು ಗಾಡಿಯಲ್ಲೇರಿಸಲು ಹಮಾಲ ರು ಬೇಕೋ? ಮುಂತಾದ ಪ್ರಶ್ನೆಗಳನ್ನು ಮಾಡಿ, ಅವನನ್ನು ಪ್ರಸನ್ನೀಕರಿಸಲೆತ್ನಿಸಿ ದನು. ಇಷ್ಟರಲ್ಲಿ ಪೂನಾ ಮೇಲ್‌ಟ್ರೇನು ಬಂದು ಪ್ಲ್ಯಾಟಫಾರ್ಮಿನಲ್ಲಿ ನಿಂತಿತು. ಒಂದು ತೆರೆದಿದ್ದ ಸೆಕಂಡಕ್ಲಾಸ ಡಬ್ಬಿಯನ್ನು ಹೊಕ್ಕು ಸದಾಶಿವರಾಯನು ಕೈಕಾ ಲು ಚಾಚಿ ಬಿದ್ದುಕೊಂಡನು. ಕೂಡಲೆ ಅಗ್ನಿರಥವು ಫೂತ್ಕಾರಮಾಡುತ್ತಾ ವೇಗ ದಿಂದ ಸಾಗಲು ರಾತ್ರಿಕಾಲದ ತಂಗಾಳಿಯಿಂದ ಸದಾಶಿವರಾಯನ ಈ ವರೆಗಿನ ಶ್ರಮವು ಪರಿಹಾರವಾಗಿ ಅವನಿಗೆ ಗಾಢನಿದ್ದೆ ಹತ್ತಿತು.

ಸದಾಶಿವರಾಯನ ನಿದ್ರೆ ತಿಳಿದು, ಅವನಿಗೆ ಎಚ್ಚರವಾಗಲಿಕ್ಕೂ, ಆ ಮೇಲ್ ಗಾಡಿಯು ಪೂನಾಸ್ಟೇಶನ್ನಿನ ಪ್ಲ್ಯಾಟಫಾರ್ಮನ್ನು ಸೇರಲಿಕ್ಕೂ ಗಂಟೆ ಬಿದ್ದಿತು. ಆಗ ಬೆಳಗಿನ ನಾಲ್ಕೂವರೆ ಗಂಟೆಯಾಗಿತ್ತು. ಕೂಡಲೆ ಅವನು ಲಗುಬಗೆಯಿಂದೆ ದ್ದು, ತನ್ನ ಅಂಗಿ ರುಮಾಲಗಳನ್ನು ತೊಟ್ಟುಕೊಂಡು ಕಾಲಲ್ಲಿ ಜೋಡು ತೊಡ ಹೋದನು. ಆದರೆ ರಾತ್ರಿಯಲ್ಲಿ ನಾಲ್ಕು ಹರದಾರಿ ದಾರಿಯನ್ನು ಒಂದೇಸವನೆ ಓಡುತ್ತ ಬಂದದ್ದರಿಂದ ಅವನ ಕಾಲುಗಳು ಅತಿಶಯ ನೊಯ್ಯುತ್ತಿದ್ದವು. ಅದ ರಲ್ಲಿಯೂ ಹೊಸ ಜೋಡುಗಳು ನೆಟ್ಟು ಒಂದೆರಡೆಡೆಯಲ್ಲಿ ಗಾಯಗಳೂ ಆಗಿದ್ದವು. ಇಂಥ ಸ್ಥಿತಿಯಲ್ಲಿ ಜೋಡುಗಳನ್ನು ಕಾಲಲ್ಲಿ ಹಾಕಿಕೊಂಡು ಹೋಗುವದಕ್ಕಿಂತ ಕೈಯಲ್ಲಿ ಹಿಡಕೊಂಡು ಹೋಗುವದೇ ಲೇಸೆಂದು ಅವನಿಗನಿಸಿತು. ಆದರೆ ಹಾಗೆ ಮಾಡುವದು ಸಭ್ಯಗೃಹಸ್ಥರ ಲಕ್ಷಣಕ್ಕೆ ಕೊರತೆಯನ್ನುಂಟುಮಾಡತಕ್ಕದ್ದಾದ್ದರಿಂದ

ಅವನು ಹಾಗೂಹೀಗೂ ಮಾಡಿ ಆ ಜೋಡುಗಳನ್ನು ಕಾಲಲ್ಲಿ ಮೆಟ್ಟಿಕೊಂಡು ಗಾಡಿಯಿಂದಿಳಿದು, ಸ್ಟೇಶನ್ನಿನ ಗೇಟಿನ ಬಳಿಗೆ ಬಂದನು. ಅಲ್ಲಿ ತಿಕೀಟ ಕಲೇಕ್ಟರನ ಕೈಯಲ್ಲಿ ತನ್ನ ತಿಕೀಟನ್ನು ಕೊಟ್ಟು ಹೊರಗೆ ಬರುತ್ತಿರಲು, ಶಿವರಾಯನ ಗಾಡಿಯವನು ಸದಾಶಿವರಾಯರನ್ನು ಗುರ್ತಿಸಿ, ಅವರಿಗೆ ಸಲಾಮುಮಾಡಿ "ಸಾಬ, ಗಾಡಿ ಇಸ್ ತರಫ ಹೈ" ಎಂದೆಂದು, ಓಡುತ್ತ ಹೋಗಿ ದಮನೀಗಾಡಿಯನ್ನು ಸದಾಶಿವರಾಯನೆಡೆಗೆ ಅಟ್ಟಿಕೊಂಡು ಬಂದು, ಅವನನ್ನು ಅದರಲ್ಲಿ ಕೂರಿಸಿ, ಗಾಡಿಯನ್ನು ಮನೆಯಕಡೆಗೆ ವೇಗದಿಂದ ಬಿಟ್ಟನು.

## ನಾಲ್ಕನೆಯ ಪರಿಚ್ಛೇದ.

## ಕೃತಘ್ನನಾದ ರಾಮಚಂದ್ರ.

ತಮ್ಮಾ, ಮಾಧವಾ, ಎಲ್ಲವೂ ಕ್ಷೇಮವಷ್ಟೇ? ಕಮಲೆಯು ಸೌಖ್ಯವಾಗಿರುವಳೇ? ಶಿವರಾಯನು ಕುಶಲವಾಗಿದ್ದಾನೆಯೇ? ಎಂದು ಕೇಳುತ್ತ ಸದಾಶಿವರಾಯನು ದಮನೀಗಾಡಿಯಿಂದಿಳಿದು ಶಿವರಾಯನ ಒಳಂಗಳದಲ್ಲಿ ಲಾಂದರ ಬೆಳಕಿನಲ್ಲಿ ಸಚಿಂತನಾಗಿ ನಿಂತು ತನ್ನ ಮಾರ್ಗವನ್ನು ನಿರೀಕ್ಷಿಸುತ್ತಿದ್ದ ಮಾಧವನೆಡೆಗೆ ಹೋದನು. ಕೂಡಲೆ ಮಾಧವನು ಮಾವನ ಅಡಿದಾವರೆಗಳಿಗೆರಗಿ—"ಒಳಗೆ ಹೋಗುವಾ ನಡೆಯಿರಿ. ಅಲ್ಲಿ ಎಲ್ಲ ಸಮಾಚಾರವನ್ನೂ ವಿದಿತಪಡಿಸುವೆನು" ಎಂದು ಹೇಳಿ ಮುಂದೆ ಮುಂದೆ ನಡೆದನು. ಸದಾಶಿವರಾಯನು ಅವನನ್ನನುಸರಿಸಿ ಸಾಗಿದನು. ಮಾಧವನು ಅವನನ್ನು ತಾನು ಕೂಡ್ರುವ ಕೋಣೆಗೆ ಕರೆದೊಯ್ದು ಒಂದು ಕಾಷ್ಠಾಸನದಮೇಲೆ ಕುಳ್ಳಿರಿಸಿ, ಅವನೆದುರಿಗೆ ಅಂದು ಮಧ್ಯಾಹ್ನ ಕಮಲೆಯ ಹೆಸರಿಗೆ ಬಂದಿದ್ದ ಶಿವರಾಯನ ಪತ್ರವನ್ನೂ, ಅದರೊಂದಿಗಿದ್ದ ಆ ಕಲಂಕಿತ ಪತ್ರವನ್ನೂ ಇಟ್ಟು.—"ಈ ಪತ್ರವನ್ನೋದುತ್ತಿರುವಾಗ ಕಮಲಕ್ಕನಿಗೆ ಬವಳಿಬಂದು, ಹಾಸುಗಲ್ಲುಗಳಮೇಲೆ ಬಿದ್ದದರಿಂದ ಅವಳ ಹಣೆಗೆ ಪೆಟ್ಟುಬಿದ್ದದೆ. ಅವಳಿಗೆ ಸ್ಮೃತಿಯುಂಟಾದ ಬಳಿಕ ಅವಳ ಅನುಮೋದನದ ಪ್ರಕಾರ ತಮಗೆ ತಾರು ಮಾಡಿದ್ದಾಯಿತು. ಆಗಿನಿಂದ ಅವಳು ಕೋಣೆಯ ಬಾಗಿಲನ್ನಿಕ್ಕಿಕೊಂಡು ಅಲ್ಲಿಯೇ ಬಿದ್ದುಕೊಂಡಿರು

ತ್ತಾಳೆ; ತಾವು ಬರುವವರೆಗೆ ತನ್ನನ್ನು ಯಾರೂ ಎಬ್ಬಿಸಕೂಡದೆಂದು ಕಟ್ಟಪ್ಪಣೆ ಮಾಡಿರುತ್ತಾಳೆ'' ಎಂದು ನುಡಿದನು.

ಆ ಎರಡೂ ಪತ್ರಗಳನ್ನು ಎರಡೆರಡುಸಾರೆ ಓದಿ ಮುಗಿಸಿದಬಳಿಕ ಸದಾಶಿವ ರಾಯನು ಚಿಂತಾಕ್ರಾಂತನಾದನು. ಕೆಲ ಹೊತ್ತಿನವರೆಗೆ ಅವನು ಆ ಅನಿವಾರಕ ದುಶ್ಚಿಂತೆಯಿಂದ ಆವರಿಸಿಕೊಂಡನಂತರ ಆ ಕಲಕಿಂತ ಪತ್ರವನ್ನು ಮಾಧವನೆದುರಿಗೆ ಹಿಡಿದು—ತಮ್ಮಾ ಈ ದುಷ್ಟಪತ್ರವನ್ನು ಯಾರು ಬರೆದಿರಬಹುದು? ಎಂದು ವಿಚಾ ರಿಸಿದನು.

''ಯಾರು ಬರೆದಿರುವರೆಂಬದು ತಿಳಿಯಲಶಕ್ಯವು. ಇದು ಶಿವರಾಯರ ಪತ್ರದ ಜೊತೆಗಿತ್ತು.''

''ಇದಿರಲಿ, ಈಗ ನನ್ನನ್ನು ಕಮಲೆಯ ಬಳಿಗೆ ಕರಕೊಂಡು ನಡೆ'' ಎಂದು ನುಡಿದು ಸದಾಶಿವರಾಯನು ಆಸನದಿಂದ ಏಳಲು, ಮಾಧವನು ಅವನನ್ನು ಕಮ ಲೆಯ ಕೋಣೆಗೆ ಕರೆದೊಯ್ದನು. ಆ ಕೋಣೆಯ ಕದಕ್ಕೆ ಒಳಗಿನಿಂದ ಅಗಳಿ ಚಿಲಕಗಳು ಹಾಕಲ್ಪಟ್ಟಿದ್ದವು. ಸದಾಶಿವರಾಯನು ಬಾಗಿಲಬಡೆದು—''ತಂಗೀ, ಕಮಲಕ್ಕಾ, ಬಾಗಿಲ ತೆರೆ. ಇದೋ, ನಾನು ಬಂದಿರುವೆನು'' ಎಂದು ನುಡಿದನು.

ತಂದೆಯ ದನಿಯು ಗುರುತು ಹಿಡಿದ ಕಮಲೆಯು ಹಾಸಿಗೆಯಿಂದೆದ್ದು ಬಂದು ಬಾಗಿಲವನ್ನು ತೆರೆದಳು. ಒಳಗೆ ಕತ್ತಲು ಗವಿದದ್ದನ್ನು ಕಂಡು ಮಾಧವನು ವಿದ್ಯುದ್ದೀಪದ ಕೀಲವನ್ನು ಒತ್ತಿ ಬೆಳಕು ಮಾಡಿದನು. ಆ ದಿವ್ಯವಾದ ಪ್ರಕಾಶ ದಲ್ಲಿ ಕಮಲೆಯ ಚಿಂತಾಕ್ರಾಂತ ಮೊಗವನ್ನು ಕಂಡು ಸದಾಶಿವರಾಯನ ಕಂಠವು ಬಿಗಿದು ಬಂದಿತು. ನಯನಗಳಲ್ಲಿ ಅಶ್ರುಗಳು ಹರಿಯಹತ್ತಿದ್ದರಿಂದ ದೃಷ್ಟಿಯು ಮಂದವಾಯಿತು. ಕಮಲೆಯ ಸ್ವರ್ಣವರ್ಣದ ಮುಖಕಾಂತಿಯು ತಗ್ಗಿ ಒಂದೇ ದಿನದ ದುಶ್ಚಿಂತೆಯಿಂದ ಅದು ಕಾಡಿಗೆಯ ವರ್ಣವನ್ನು ಧರಿಸಿತ್ತು.

ತಂದೆಯ ಮೂರ್ತಿಯನ್ನು ನೋಡಿ ಕಮಲೆಯ ಸ್ಥಿತಿಯಾದರೂ ಸದಾಶಿವ ರಾಯನಂತೆಯೇ ಆಯಿತು. 'ಅಪ್ಪಾ' ಎಂಬ ಶಬ್ದವನ್ನು ಸ್ಪಷ್ಟವಾಗಿ ಉಚ್ಚರಿಸು ವಷ್ಟು ಶಕ್ತಿಯು ಕೂಡ ಅವಳ ಕಂಠದಲ್ಲಿ ಉಳಿದಿರಲಿಲ್ಲ. ಅವಳು ತಟ್ಟನೆ ಬಂದು ತಂದೆಯ ಪಾದಗಳ ಮೇಲೆ ಶಿರಸ್ಸನ್ನಿಟ್ಟು ಉಷ್ಣಗಳಾದ ಅಶ್ರುಬಿಂದುಗಳಿಂದ ದಾರಿ ನಡೆದು ನೋವಾಗಿದ್ದ, ಆತನ ಆ ಪಾದಕಮಲಗಳನ್ನು ಒಂದೇಸವನೆ ತೊಳೆಯಲಾ ರಂಭಿಸಿದಳು. ಮಗಳಿಗೆ ಯಾವ ಸಮಾಧಾನದ ಮಾತುಗಳನ್ನು ಹೇಳಿ ಅವಳನ್ನು ಶಾಂತಗೊಳಿಸಬೇಕೆಂಬದು ಸದಾಶಿವರಾಯನಿಗೆ ಬಹಳ ಹೊತ್ತಿನವರೆಗೆ ತಿಳಿಯದಾ

ಯಿತು; ನಿಟ್ಟುಸಿರುಗರೆಯುತ್ತ ಕಮಲೆಯ ಬಳಿಯಲ್ಲಿಯೇ ಕುಳಿತು ಅವನು ಎಷ್ಟೋ ವೇಳೆಯನ್ನು ಕಳೆದನು.

ನಂತರ ಕಮಲೆಯೇ ಎದ್ದು ಕುಳಿತು ತಂದೆಯನ್ನುದ್ದೇಶಿಸಿ—"ಅಪ್ಪಾ, ನಾನಂತೂ ಯಾವ ಅಪರಾಧವನ್ನೂ ಮಾಡಿದವಳಲ್ಲ; ಆದರೆ ಯಾವ ಪ್ರಾಯಶ್ಚಿತ್ತದಿಂದ ನನಗೆ ಸಮಾಧಾನವುಂಟಾಗಬಹುದು?" ಈಗ ಕಮಲೆಯ ಕಣ್ಣಲ್ಲಿ ಅಶ್ರುಬಿಂದು ಏರಲಿಲ್ಲ. ಕಂಠಧ್ವನಿಯಲ್ಲಿ ಮಾಧುರ್ಯವಿರಲಿಲ್ಲ; ಫೋನೋಗ್ರಾಫದಂತೆ ಅವಳು ಬಡಬಡ ಮಾತಾಡುತ್ತಿದ್ದಳು ಮಾತ್ರ. ಸದಾಶಿವರಾಯನು ಅವಳನ್ನು ಸಮಾಧಾನಗೊಳಿಸುವದಕ್ಕಾಗಿ—"ತಂಗೀ, ಇಷ್ಟು ಹೆದರಿ ಚಿಂತಿಸುವಕಾರಣವೇನಿರುವದು? ಬೆಳಗಾದಕೂಡಲೆ ನಾನು ನಾಗಪೂರಿಗೆ ಹೋಗಿ, ಸವರಾಯನನ್ನು ಕರೆತರುವ ಉದ್ಯೋಗಮಾಡುವೆನು. ಕಮಲಕ್ಕಾ, ಎದ್ದೇಳು, ಕೈಕಾಲು ಮೋರೆ ತೊಳೆಕೊಂಡು ತುಸ ಉಪಾಹಾರವನ್ನು ತಕೋ. ಇಡಿಯ ದಿವಸ ಉಪವಾಸವಿರುವದು ಸರಿಯಲ್ಲ.

"ಅಪ್ಪಾ, ನನಗೆ ಹಸಿವೆಯಾಗಿರುವದಿಲ್ಲ. ಆದ್ದರಿಂದ ನಾನು ಏನನ್ನೂ ತಿನ್ನುವದಿಲ್ಲ. ಮನೆಯಲ್ಲಿ ಅಪ್ಪನೂ, ಮಾಲತಿಯೂ, ಅಶ್ವತ್ಥನೂ ಕ್ಷೇಮವಾಗಿರುವರಷ್ಟೇ?

"ಅವರೆಲ್ಲರೂ ಸುಖರೂಪರಾಗಿರುತ್ತಾರೆ. ಅವರ ವಿಷಯವಾಗಿ ಆಲೋಚನೆ ಬೇಡ. ನಿನ್ನೆ ಸಾಯಂಕಾಲಕ್ಕೆ ನಿಮ್ಮ ತಾರು ಮುಟ್ಟಿತು; ಹಾಗು ಆ ಕೂಡಲೆ ಧಾವಿಸಿಬಂದು ನಾನು ಗಾಡಿಯನ್ನು ಹಿಡಿಯಬೇಕಾಯಿತು. ಅದರಿಂದ ನನಗೂ ನಿನ್ನೆ ರಾತ್ರಿ, ಉಪೋಷಣವೇ ಆಗಿರುತ್ತದೆ. ಆದರೆ ತಂಗೀ, ನೀನು ತುಸ ಉಪಾಹಾರವನ್ನಾದರೂ ಮಾಡಿದ ಹೊರತು ನಾನೂ ಉಣ್ಣಲಾರೆನು" ಎಂದು ನುಡಿದು, ಮಾಧವನನ್ನು ಕುರಿತು, "ತಮ್ಮಾ ನಮ್ಮಿಬ್ಬರ ಸಲುವಾಗಿ ತುಸ ಉಪಾಹಾರವನ್ನು ತರಿಸು. ನಾವಿಬ್ಬರೂ ಇಲ್ಲಿಯೇ ಕುಳಿತು ಫಲಾಹಾರ ಮಾಡುತ್ತೇವೆ" ಎಂದನು.

ಅಲ್ಪ ಕಾಲದಲ್ಲಿ ಉಪಹಾರದ ತಾಟುಗಳು ಬಂದವು. ಕೇವಲ ನಿರಿಚ್ಛಳಾಗಿದ್ದರೂ ಕಮಲೆಯು ತಂದೆಯ ಭಿಡೆಗಾಗಿ ಉಪಹಾರಕ್ಕೆ ಕುಳಿತಳು. ಆದರೂ ಅವಳು ಏನನ್ನೂ ಕೈಸಡಿಲುಬಿಟ್ಟು ತಕ್ಕೊಳ್ಳಲಿಲ್ಲ. ಅದನ್ನು ಕಂಡು ಸದಾಶಿವರಾಯನು ಅವಳಿಗೆ ಒಂದು ಲೋಟಾ ತುಂಬ ಹಾಲನ್ನು ಒತ್ತಾಯದಿಂದ ಕುಡಿಸಿದನು. ನಂತರ ಅವನು ಮಾಧವನೊಡನೆ ಅವನ ಕೋಣೆಗೆ ಹೋಗಿ, ಅಲ್ಲಿ ಪುನಃ ಆ ಕಲಂಕಿತ ಪತ್ರವನ್ನು ಒಂದೆರಡುಸಾರೆ ನೋಡಿದ ಬಳಿಕ ಅವನ ಮನಸ್ಸಿನಲ್ಲಿ ಯಾವ

ದೋ ಒಂದು ಹೊಸ ಯುಕ್ತಿಯು ಸೂಚಿಸಲು, ಅವನು ಮಾಧವನನ್ನು ಕುರಿತು—ಮಾಧವ, ಈ ಪತ್ರದ ಅಕ್ಷರಗಳ ಗುರುತು ನಿನಗೆ ಹತ್ತದಿದ್ದರೂ, ಇವುಗಳನ್ನು ಗುರುತಿಸಲು ಸಮರ್ಥರಾದ ಬೇರೆ ಯಾರಾದರೂ ಜನರಿದ್ದರೆ ಕರೆ ನೋಡುವಾ, ಎನ್ನಲು, ಮಾಧವನು ಶಿವರಾಯನ ಮನೆಯ ಕಾರಕೂನನನ್ನು ಕರೆದನು. ಅವನು ಬಂದೊಡನೆ ಸದಾಶಿವರಾಯನು ಅವನಿಗೆ ಆ ಕಲಂಕಿತ ಪತ್ರವನ್ನು ತೋರಿಸಿ,—"ಈ ಪತ್ರದ ಅಕ್ಷರಗಳು ಯಾರವೆಂಬುದನ್ನು ನೀವು ಹೇಳಬಲ್ಲಿರಾ?" ಎಂದು ಕೇಳಲು, ಆ ಮನುಷ್ಯನು ಒಮ್ಮೆ ಪ್ರಾರಂಭದಲ್ಲಿ ನಸ್ಯವನ್ನೇರಿಸಿ, ಕಣ್ಣಿಗೆ ಚಸ್ಮದ ಜೋಡನ್ನು ಹಚ್ಚಿ ಆ ಪತ್ರವನ್ನು ದೀಪದ ಬೆಳಕಿಗೆ ಹಿಡಿದನು ಮಾತ್ರ. ಕೂಡಲೆ ಅವನು ಆ ಪತ್ರಲೇಖಕನನ್ನು ಗುರುತಿಸಿ, ತನ್ನೊಳಗೆ—ರಾಮಚಂದ್ರಾ, ಎಂಥ ದುಷ್ಟ ರಾಮಚಂದ್ರಾ, ನನ್ನ ಸೀತಾಪತಿಯ ಮನೆಗೆ ಈ ಮಾತಿಗೆ ಹುಟ್ಟಿಸಿದನಲ್ಲ ನೀನು, ಉಂಡಮನೆಯ ಗಳ ಎಣಿಸುವವನೇ!!!" ಎಂದು ನಿಂದಿಸುತ್ತಿದ್ದುದನ್ನು ಕೇಳಿ, ಸದಾಶಿವರಾಯನು,—"ಏನರಿ, ಕಾರಕೂನರೇ, ನಿಮಗೆ ಲೇಖಕನ ಗುರುತು ಹತ್ತಿದಂತಾಯಿತೇನು?" ಎಂದು ಪ್ರಶ್ನೆಮಾಡಲು, "ಅಹುದೋ, ಹತ್ತದೇನು ದಾರಿಯೇ ಬೇಕು? ಇದನ್ನು ಬಹುಶಃ ನಮ್ಮ ಆ ರಾಮಚಂದ್ರರಾಯರೇ ಬರೆದಿರಬೇಕು. ಆದರೆ ಹಸ್ತಾಕ್ಷರಗಳನ್ನು ಸಾವಕಾಶವಾಗಿ ಬಲ್ಲೆನು" ಎಂದು ಹೇಳುತ್ತಿರಲು, ಸದಾಶಿವರಾಯನು ಅವನನ್ನು ಮತ್ತೆ ಮಾತಿನಲ್ಲಿ ಹಿಡಿದು—"ರಾಮಚಂದ್ರರಾಯರೆಂಬುವರಾರು ಮತ್ತೆ?" ಎಂದು ಕೇಳಿದನು.

"ರಾಮಚಂದ್ರರಾಯರೆಂಬ ಕಾರಕೂನರೊಬ್ಬರು ಇಲ್ಲಿಯೇ ಈ ಊರಿನ ಒಂದು ಚಿಕ್ಕಮನೆಯಲ್ಲಿ ವಾಸವಾಗಿರುತ್ತಾರೆ." ಎಂದು ಮಾಧವನು ಹೇಳಿದನು.

"ಕಾರಕೂನರೇ, ಇವು ಇಲ್ಲಿ ವಾಸಿಸಿರುವ ಆ ರಾಮಚಂದ್ರರಾಯರ ಹಸ್ತಾಕ್ಷರಗಳೇ ಹೌದೇನು?"

"ಅಹುದು ರಾಯರೇ, ಇವು ಆ ಮಹಾಶಯರವೇ ಎಂದು ನನ್ನ ಭರವಸವಿದೆ. ಅವರ ಕೈ ಬರಹದ ಕೆಲವು ಕಾಗದಪತ್ರಗಳು ನನ್ನ ಬಳಿಯಲ್ಲಿರುತ್ತವೆ. ಅವನ್ನು ತಂದು ತಾಳೆಹಚ್ಚಿ ತೋರಿಸಿ ತಮಗೆ ಆ ಬಗ್ಗೆ ಖಾತ್ರಿ ಮಾಡಿಕೊಡುತ್ತೇನೆ" ಎಂದು ಹೇಳಿ, ಆ ಕಾರಕೂನನು ತನ್ನ ಆಫೀಸಿನ ಕೋಣೆಗೆ ಹೋಗಿ ಅಲ್ಲಿಯ ಒಂದು ಪೆಟ್ಟಿಗೆಯೊಳಗಿನ ಕೆಲವು ಕಾಗದಪತ್ರಗಳನ್ನು ತಂದು ಸದಾಶಿವರಾಯರೆದುರಿಗೆ ಇಟ್ಟನು.

ಅವನ್ನು ನೋಡಲು ಸದಾಶಿವರಾಯರಿಗೆ ಆ ಪತ್ರಗಳ ಅಕ್ಷರವು ಆ

ಕಲಂಕಿತಪತ್ರದ ಅಕ್ಷರವು ಒಂದೇ ಎಂದು ಮನಗಂಡಿತು. ನಂತರ ಅವರು ಕಾರಕೂನನು ತಂದಿದ್ದ ಪತ್ರಗಳಲ್ಲಿಯ ಕೆಲವು ಸಹಿಗಳನ್ನೂ, ಪತ್ರಗಳನ್ನೂ ನೋಡಿಕೊಂಡು ಕಲಂಕಿತಪತ್ರದ ಲೇಖಕನು ವಿವರಾಯನ ಆಶ್ರಿತನಾದ ಆ ಕೃತಘ್ನ ರಾಮಚಂದ್ರನೇ ಎಂಬದನ್ನು ನಿರ್ಧರಿಸಿಕೊಂಡು, ಮುಂದೇನು ಮಾಡಬೇಕೆಂಬ ಬಗ್ಗೆ ತಲೆ ಕೆಳಗೆ ಹಾಕಿ ವಿಚಾರಮಾಡುತ್ತ ಕೂಡ್ರಲು, ಆ ಕಾರಕೂನನು ಅಲ್ಲಿಂದೆದ್ದು ಹೋದನು. ಬಳಿಕ ಅರಸು ಮಾಧವನನ್ನು ಕುರಿತು—ಮಾಧವಾ, ಈ ಪ್ರಸಂಗದಲ್ಲಿ ರಾಮಚಂದ್ರನನ್ನೇನು ಮಾಡಬೇಕೆನ್ನುತ್ತೀ? ಇಂಥ ಕಾಲಸರ್ಪವನ್ನು ಹಾಲು ಕುಡಿಸಿ ಸಾಕಬೇಡೆಂದು ತಿಮ್ಮರಾಯನಿಗೆ ನಾನು ಮೊದಲೇ ತಿಳಿಸಿದ್ದೆನು. ಅವನು ಮುಂದೆ ಹೋದ ಮಾತಿಗೆ ಚಿಂತಿಸುತ್ತ ಕುಳಿತರೆ ಆಗುವದೇನು? ಬೆಳಗಾಗುತ್ತಲೆ ಅವನನ್ನು ಇಲ್ಲಿಂದ ಹೊರಹೊಡಿಸುವ ಯತ್ನ ಮಾಡಬೇಕಾಗಿದೆ.

"ನಾವು ಹೀಗೆ ಪ್ರಯತ್ನಪಟ್ಟರೂ ಅವನು ಹೋಗುವದಿಲ್ಲೆಂದು ಅಂದರೆ ಏನು ಮಾಡಬೇಕು?"

"ಅವನು ಹ್ಯಾಗೆ ಹೋಗುವದಿಲ್ಲವೋ ನಾನು ನೋಡಿಕೊಳ್ಳುವೆನು, ಅದನ್ನು ಮುಂದೆ ನೋಡು" ಎಂದು ನುಡಿದು ನರಸಿಂಹರಾಯನು ಅರಮನೆಯ ಹೊರಗೆ ಬರಲು, ಆಗ್ಗೆ ಬೆಳಗಾಗಿತ್ತು. ಸೂರ್ಯನ ಕೋಮಲ ಕಿರಣ ಹಬ್ಬಿ, ಗುಲಾಬಿ ಮಲ್ಲಿಗೆ ಮುಂತಾದ ಹೂಗಳ ಪರಿಮಳವು ಸುತ್ತಲೂ ಹರಡಿತ್ತು. ಅಲ್ಲದೆ ಆ ಸುವಾಸನೆಯಿಂದ ಪುಷ್ಪಗಳ ಸೌಂದರ್ಯವು ನೋಡುವವರ ಮನಸ್ಸನ್ನು ಆಕರ್ಷಿಸುತ್ತಿತ್ತು.

'ಅಷ್ಟು ಮುಂಜಾನೆಯ ಸಮಯದಲ್ಲಿ ರಾಯನು ತನ್ನ ಮಗಳಾದ ಕಮಲೆಯನ್ನು ಆ ಸಿಂಹಾಸನದ ಹೊರಬಾಗಿಲಲ್ಲಿ ಕರೆದು ಹೇಳಿದ್ದು—"ಮಗೇ ಕಮಲಕ್ಕ, ಯಾವ ರಾಕ್ಷಸನು ಆ ಕಲಂಕಿತಪತ್ರವನ್ನು ನಿನಗೆ ಬರೆದಿರುವನೋ, ಅವನ ಗುರ್ತು ಹತ್ತುವಂತಾಗಿರುತ್ತದೆ. ಈಗ ನಮ್ಮ ಆಶ್ರಯದಲ್ಲಿ ಆಶ್ರಿತನಾಗಿರುವ ದುಷ್ಟ ಸರ್ಪಕ್ಕೆ ಅವನ ಅಪರಾಧದ ಶಿಕ್ಷೆಯನ್ನು ಮಾಡುವ ಉದ್ಯೋಗಕ್ಕೆ ಹತ್ತಿದೆ, ನಾಳೆ ಅವನನ್ನು ಹೊರಡಿಸಿ ಬಿಡಲಾಗುತ್ತದೆ. ಅಷ್ಟರಿಂದ ಅದರಲ್ಲಿ ನಿನ್ನ ಬಿಡುಗಡೆಯಾಗುತ್ತದೆ.' ಎಂದು ನುಡಿದನು.

ಆಗ್ಗೆ ಅತಿ ಭಯದಿಂದ ಕಮಲೆಯು—"ಅಪ್ಪಾ, ನಮ್ಮ ಆಶ್ರಯದಲ್ಲಿರುವ ಆ ದುಷ್ಟನು ಆ ಪತ್ರವನ್ನು ಬರೆದವನೇ?"

"ಆ ನಿಮ್ಮ ರಾಮಚಂದ್ರರಾಯನು"

"ನಮ್ಮ ರಾಮಚಂದ್ರರಾಯರೇ? ಯಾರು ನಮ್ಮ ವಾಡೆಯ ಚಿಕ್ಕ ಮನೆಯಲ್ಲಿ ವಾಸಿಸುತ್ತಿರುವರೋ, ಆ ರಾಮಚಂದ್ರರಾಯರೇ?"

"ಅಹುದು, ಅದೇ ಅವನು."

"ನಾನಂತೂ ಅವನಿಗೆ ಯಾವ ಅಪಕಾರವನ್ನೂ ಮಾಡಿರುವದಿಲ್ಲ. ಹೀಗಿದ್ದು ಅವನು ನನ್ನ ಬಗ್ಗೆ ಇಂಥ ಕಲಂಕಿತ ಪತ್ರವನ್ನೇಕೆ ಬರೆದಿರಬಹುದು?"

"ನಿಮ್ಮ ಉಪ್ಪು ಉಂಡದ್ದಕ್ಕೆ ಈ ತರದ ಪ್ರತ್ಯುಪಕಾರವನ್ನು ಮಾಡಿ ತೀರಿಸುವದಕ್ಕೆ. ಆದ್ದರಿಂದ ಅವನನ್ನು ಈಗಲೇ ಇಲ್ಲಿಂದ ಹೊರಹೊರಡಿಸಬೇಕಾಗಿರುತ್ತದೆ."

"ಅಂಥ ಸಭ್ಯಮನುಷ್ಯನನ್ನು ಪ್ರತ್ಯಕ್ಷ ಪುರಾವೆ ಆಗದ ಸಂಗತಿಯಿಂದ ಅವಮಾನಗೊಳಿಸುವದು ನಿಮಗೂ ಸಮಂಜಸವಾಗಿ ತೋರಲಿಕ್ಕಿಲ್ಲ ನೋಡಿರಿ. ನೀವು ನಿಮ್ಮ ಮನಸ್ಸಿಗೆ ಸರಿದೋರಿದಂತೆ ಮಾಡಬಹುದು.

"ತಂಗೀ, ಇದು ನಿನ್ನ ಮನೆ; ನಿನ್ನ ಒಪ್ಪಿಗೆಯು ಇರದಿದ್ದರೆ, ಅವನು ನನ್ನಮಾತು ಕೇಳುವ ಬಗೆಹೇಗೆ?"

"ಒಪ್ಪಿಗೆ ಕೊಡಲಿಕ್ಕೆ ಅಡ್ಡಿಯಿಲ್ಲ. ಆದರೆ ಆದರೆ......" ಎಂದು ಕಮಲೆಯು ಅನುಮಾನಿಸುತ್ತಿರಲು,

ಸದಾಶಿವರಾಯನು ಕಮಲೆಯ ಅನುಮಾನದ ಕಾರಣವನ್ನು ಕಂಡುಕೊಂಡು—"ತಂಗೀ ನಿನ್ನ ಪತಿಯು ಆ ಬಗ್ಗೆ ಸಿಟ್ಟಾಗಬಹುದೆಂದು ಭಾವಿಸುತ್ತೀಯೇನು? ನಿಜವಾದ ಸಂಗತಿಯು ತಿಳಿದಬಳಿಕ ತಿವಂರಾಯನೆಂದೂ ಸಿಟ್ಟಾಗಲಾರನು. ಒಂದುವೇಳೆ ಸಿಟ್ಟಾಗಬಹುದೆಂದು ಭಾವಿಸಿದರೂ ಅವನನ್ನು ಸಮಾಧಾನಗೊಳಿಸುವ ಭಾರವನ್ನು ನಾನು ಹೊರುವೆನು. ನೀನು ಅಂಜುವ ಕಾರಣವಿಲ್ಲ."

"ಹಾಗಾದರೆ ದಾಸಿಯ ಮುಖಾಂತರ ಅವನಿಗೆ ಹೇಳಿಕಳಿಸಲಿಯಾ?"

"ಆ ಮುಠ್ಠಾಳನು ದಾಸಿಯರ ಮಾತಿಗೆ ಸೊಪ್ಪು ಹಾಕುವನೇ? 'ಮಾದರ ದೇವರಿಗೆ ......ಯ ಪೆಟ್ಟು' ಎಂಬಂತೆ ಅವನನ್ನು ಬಾಗಿಲಕಾಯುವ ಭಯ್ಯಾನಿಂದ ಕತ್ತುಹಿಡಿದು ದಬ್ಬಿಸದ ಹೊರತು ಅವನು ಹೊರಹೊರಡುವನೇ?" ಎಂದಂದು ಸದಾಶಿವರಾಯನು ಬಾಗಿಲ ಕಾಯುವ ಭಯ್ಯಾನನ್ನು ಕರೆಯುವದಕ್ಕಾಗಿ ಮಾಧವನನ್ನು ಕಳಿಸಿದನು.

ಉತ್ತರಪ್ರಾಂತದಲ್ಲಿ ಪ್ರತಿಯೊಬ್ಬ ಸಾಧ್ಯವಂತ ಮನುಷ್ಯರ ವಾಡೆಯ ಮುಖ್ಯದ್ವಾರದಲ್ಲಿ ಒಂದು ದೇವಡಿ (ಗೇಟಿನಂಥ ಚಿಕ್ಕ ಮನೆ) ಯಿರುತ್ತದೆ; ಹಾಗು ಬಾಗಿಲು ಕಾಯಲಿಕ್ಕೆ ಕನೋಜಬ್ರಾಹ್ಮಣ ಜಾತಿಯವನಾಗಲಿ, ರಜಪೂತ ಇಲ್ಲವೆ ಕ್ಷತ್ರಜಾತಿಯವನಾಗಲಿ ಒಬ್ಬ ಮನುಷ್ಯನನ್ನು ನಿಯಮಿಸಿ, ಅವನ ವಾಸಸ್ಥಳಕ್ಕಾಗಿ ಆ ದೇವಡಿಯು ಕಾದಿಡಲ್ಪಟ್ಟಿರುತ್ತದೆ. ಆ ಬಾಗಿಲು ಕಾಯುವ ನೌಕರರಿಗೆ ಅಲ್ಲಿ "ಭಯ್ಯಾ" ಎಂದೆನ್ನುವ ವಾಡಿಕೆಯುಂಟು. ಆ ಭಯ್ಯಾಜನರು ಒಳ್ಳೇ ಪ್ರಾಮಾಣಿಕರೆಂದು ಹೆಸರಾದವರಾಗಿರುತ್ತಾರೆ. ಆ ಜನರು ಕುರುಬರ ನಾಯಿಯಂತೆ ಹುರಿಗೊಂಡವರಾಗಿ ಕಾಯುತ್ತಿದ್ದರೂ, ತಕ್ಕರನ್ನಾಗಲಿ, ಕಳ್ಳರನ್ನಾಗಲಿ ಕೂಡಲೆ ಗುರುತಿಸಿ ಹಾಸಿಸುವಷ್ಟು ಚತುರತೆಯು ಅವರಲ್ಲಿರುತ್ತದೆ. ಉಪ್ಪುಂಡವರ ಕಲ್ಯಾಣವನ್ನು ಚಿಂತಿಸುವ ಮನುಷ್ಯರಲ್ಲಿ ಈ ಭಯ್ಯಾಗಳೇ ಮೇಲ್ತರದವರೆಂಬುವದಕ್ಕೆ ಸಂದೇಹವಿಲ್ಲ.

ಮಾಧವನು ದೇವಡಿಗೆ ಬಂದಾಗ ಭಯ್ಯಾನು ಗುಡಗುಡಿಯನ್ನು ಹೊತ್ತಿಸುತ್ತಿದ್ದನು; ಹಾಗು ಬಾಯಿಂದ,

'ಇಸ ತನ ಧನಕೀ ಕೌನ ಬಡಾಈ ದೇಖತ ನಯನನ ಮಾಟೀಮೇ ಮಿಲಾಯಿ॥' ಎಂಬ ಕಬೀರದಾಸನ ತತ್ವದ ಪದವನ್ನನ್ನುತಿದ್ದನು. ಆ ಭಯ್ಯಾನು ಒಳ್ಳೇ ಪ್ರಾಮಾಣಿಕನು. ಸಣ್ಣಂದಿನಲ್ಲಿ ಇದ್ದಾಗ ಅವನಿಗೆ ಆರು ವರ್ಷಗಳಾಗಿದ್ದವು. ತಿವಾರಿಯನ ಸುದೈವದಿಂದಲೇ ಅವನಿಗಿಂಥ ಪ್ರಾಮಾಣಿಕ ಮನುಷ್ಯನು ಲಭಿಸಿದ್ದನು. ಭಯ್ಯಾನ ತಂದೆಯು ಪೊಲೀಸಖಾತೆಯಲ್ಲಿ ನೌಕರನಾಗಿದ್ದನು. ತಿವಾರಿಯು ಅವನನ್ನು ಪೊಲೀಸ ಖಾತೆಯಲ್ಲಿ ಸೇರಿಸುವದಕ್ಕಾಗಿ ಸಂಯುಕ್ತ ಪ್ರಾಂತದಿಂದ ಕರೆಸಿದನು. ಆದರೆ ಭಯ್ಯಾನ ಸುದೈವದಿಂದಲೋ-ದುರ್ದೈವದಿಂದಲೋ ಅವನ ಆ ಮಾವನು ಸ್ವದೇಶದಿಂದ ಬರುವದರೊಳಗೆ ಬಂದು ಕೆಲವು ವರ್ಷಗಳೊಳಗೆ ಸ್ವರ್ಗಸ್ಥನಾದನು; ಇಹಲೋಕದ ಪೊಲೀಸ ಖಾತೆಯಿಂದ ಪರಲೋಕದ ಪೊಲೀಸ ಖಾತೆಗೆ ವರ್ಗಮಾಡಲ್ಪಟ್ಟನು! ಆದರಿಂದ ಪರದೇಶಕ್ಕೆ ಬಂದಿದ್ದ ಭಯ್ಯಾನು ಕೇವಲ ನಿರಾಶ್ರಿತನಾದನು. ಅವನಿಗೆ ತನ್ನ ಮಾತೃಭಾಷೆಯು ಹೊರತು ಬೇರೆ ಭಾಷೆಗಳ ಪರಿಚಯವು ಅಲ್ಪವು. ಹೀಗೆ ಕೂಡ ಇದ್ದುದರಿಂದ ಅವನ ಗೋಳು ನೋಡಲಸಾಧ್ಯವಾಯಿತು! ಶ್ರೈಯಲ್ಲಿ ಒಬ್ಬನ ಕವಡಿ ಸಹ ಇದ್ದುದರಿಂದ ಅವನು ಹೊಟ್ಟೆಗಿಲ್ಲದೆ ಕೆಲವು ದಿವಸಗಳನ್ನು ಕಳೆಯಬೇಕಾಯಿತು. ಒಂದು ದಿವಸ ತಿವಾರಿಯವರ ದೃಷ್ಟಿಗೆ ಬಿದ್ದಾಗ ಅವನು

ಬೇಳಲು, ಕೇವಲ ಅಂತಃಕರಣದ ಸ್ವಭಾವದ ಶಿವರಾಯನು ಅವನಿಗೆ ಆಶ್ರಯ ಕೊಟ್ಟನು. ಅಂದಿನಿಂದ ಅವನು ಶಿವರಾಯನ ದೇವಡಿಯ ಜಮಾದಾರನಾಗಿ ಅವನಲ್ಲಿಯೇ ಇರಹತ್ತಿದ್ದನು.

ಮಾಧವರಾಯನು ತನ್ನ ಬಳಿಗೆ ಹೀಗೆ ಆಕಸ್ಮಾತ್ತಾಗಿ ಬಂದುದುದನ್ನು ಕಂಡು ಭೂಪಾಲ ಸಿಂಹನು ಮನಸ್ಸಿನಲ್ಲಿ ಬಲು ಅಂಜಿದನು. ಯಾಕಂದರೆ ಯಾವ ಮಾಧವರಾಯನ ಭೆಟ್ಟಿಯು ಸಹಜವಾಗಿ ಎಂದೂ ಆಗುವಂತಿರಲಿಲ್ಲವೋ ಅದೇ ಮಾಧವರಾಯನು ಇಂಥ ಈ ನಸಕಿನ ಜಾವದಲ್ಲಿ ಇಲ್ಲಿಯ ವರೆಗೆ ಏಕೆ ಬಂದಿರಬಹುದೆಂಬದು ಅವನ ವಿಚಾರಕ್ಕೆ ಆಸ್ಪದವಾಯಿತು. ನಂತರ ಅವನು ತನ್ನ ಗುಡಗುಡಿಯನ್ನು ಹಿಂದಕ್ಕೆ ಸರಿಸಿ ಒಂದು ಸ್ಟೂಲನ್ನು ಮುಂದೆ ಮಾಡಿದನು. ಮಾಧವನು ಅದರ ಮೇಲೆ ಕೂಡ್ರದೆ ಆತನನ್ನು ಕುರಿತು - ಭಯ್ಯಾಜಿ, ಒಳಗೆ ಬಾ. ಮಾಪನವರ ಬಳಿಯಲ್ಲಿ ತುಸ ಕೆಲಸವಿದೆ, ಎಂದು ನುಡಿದು ಬಂದದಾರಿಯಿಂದ ತಿರುಗಿದನು; ಭೂಪಾಲನಾದರೂ ವಿಲಂಬಮಾಡದೆ, ಹೊತ್ತಿದ್ದ ಗುಡಗುಡಿಯ ಚುಂಬನವನ್ನೊಮ್ಮೆ ತಕ್ಕೊಂಡು, ತನ್ನ ಪೋಷಾಕು ಧರಿಸಿ ಮಾಧವನನ್ನು ಹಿಂಬಾಲಿಸಿದನು; ಹಾಗು ಸದಾಶಿವರಾಯರ ಬಳಿಗೆ ಹೋಗಿ, ವಿನಯದಿಂದ ಅವರಿಗೆ ಸಲಾಮು ಮಾಡಿ, ಅಪ್ಪಣೆಯೇನೆಂದು ಕೇಳಿದನು.

"ಭೂಪಾಲ ಸಿಂಹ, ಈಗಿಂದೀಗಲೇ ನೀನು ಆ ರಾಮಚಂದ್ರನನ್ನು ಇಲ್ಲಿಂದ ಹೊರಗೆ ಹಾಕು. ಇಷ್ಟೇ ಅಲ್ಲ, ಅವನ ಸಾಮಾನುಗಳನ್ನೂ ಸಹ ಅವನೊಡನೆ ಕಳಿಸಿ, ಅವನು ಪುನಃ ಎಂದೂ ಈ ವಾಡೆಯ ಹೊಸ್ತಿಲ ಮೆಟ್ಟದಂತೆ ನೋಡಿಕೊಳ್ಳು" ಎಂಬ ಸದಾಶಿವರಾಯನ ಆಜ್ಞೆಯನ್ನು ಕೇಳಿಕೊಂಡವನೇ ಭೂಪಾಲನು ಅವರಿಗೆ ಪುನಃ ನೆಲಮುಟ್ಟಿ ಸಲಾಮುಮಾಡಿ ತನ್ನ ದೇವಡಿಗೆ ಬಂದನು.

ರಾಮಚಂದ್ರರಾಯರು ಶಿವರಾಯನ ವಾಡೆಯಲ್ಲಿರುತ್ತಿದ್ದುದೇನೋ ಹೆಸರಿಗೆ ಮಾತ್ರವಾಗಿತ್ತು. ಯಾಕಂದರೆ ಅವರು ಹಗಲು ಹೊತ್ತನ್ನು ತಮ್ಮ ಉದರ ನಿರ್ವಾಹಕ್ಕೆ ಬೇಕಾಗುವ ಹಣದ ಸಂಪಾದನೆಯಲ್ಲಿ ಕಳೆಯುವಂತೆ, ಇಡೀ ರಾತ್ರಿಯನ್ನೂ, ರಜೆಯ ಹಾಗು ಬೇರೆ ವಿಶ್ರಾಂತಿಯ ಕಾಲವನ್ನೂ ಸೆರೆ, ಅಫು, ಗಾಂಜಾ ಮುಂತಾದ ಮಾದಕ ಪದಾರ್ಥಗಳ ಸೇವನೆಯಲ್ಲಿಯೂ, ವೇಶ್ಯಾಂಗನೆಯರ ಸಹವಾಸದಲ್ಲಿಯೂ ಕಳೆಯುತ್ತಿದ್ದರು. ಶಿವರಾಯರಲ್ಲಿರಹತ್ತಿದಾಗ ಮೊದಮೊದಲು ಅವರು ಪೂರ್ವರಾತ್ರಿಯನ್ನಾದರೂ ಮನೆಯಲ್ಲಿದ್ದು ಕಳೆಯುತ್ತಿದ್ದರು. ಆದರೆ ಈಚೀಚೆಗೆ ಅವರು ಇಡೀ ರಾತ್ರಿಯನ್ನು ದುರ್ವ್ಯವಹಾರದಲ್ಲಿ ಕಳೆಯತೊಡಗಿ

ದ್ದರು. ಒಮ್ಮೆ ಶಿವರಾಯರು "ರಾತ್ರಿಹೊತ್ತಿನಲ್ಲಿ ನೀವು ಎಲ್ಲಿರುವಿರೆ"ಂದು ಅವರನ್ನು ಸಹಜವಾಗಿ ಕೇಳಲು, ಅವರು ಆ ಭೋಳೇ ಸ್ವಭಾವದ ಶಿವರಾಯರ ಮುಂದೆ "ನನ್ನ ನೌಕರಿಯು ಕೆಲ ದಿವಸ ಹಗಲು, ಕೆಲವು ದಿವಸ ರಾತ್ರಿಯು ಸರತಿಯಿಂದ ಮಾಡಬೇಕಾದುದರಿಂದ ಈಚೆಗೆ ನನಗೆ ರಾತ್ರಿ ಹೊತ್ತಿನಲ್ಲಿ ಮನೆಗೆ ಬರಲಿಕ್ಕಾಗುವದಿಲ್ಲೆ"ಂದು ಸುಳ್ಳು ಹೇಳಿ ಆ ಪ್ರಸಂಗವನ್ನು ದಾಟಿಸಿಬಿಟ್ಟಿದ್ದರು.

ಯಾವ ದಿವಸ ಭೂಪಾಲಸಿಂಹನು ರಾಮಚಂದ್ರನನ್ನು ಶಿವರಾಯನ ವಾಡೆಯಿಂದ ಹೊರಹೊರಡಿಸಲು ಸಜ್ಜಾಗಿ ನಿಂತಿದ್ದನೋ, ಆ ದಿವಸ ರಾಮಚಂದ್ರರಾಯನು ಬೆಳಗಿನ ಆರೂವರೆ ಗಂಟೆಗೆ ಹೊರಗಿನಿಂದ ಸೆರೆಯ ಗುಂಗಿನಲ್ಲಿ ನಲಿದಾಡುತ್ತ ವಾಡೆಯೊಳಗೆ ಸೇರುತ್ತಿದ್ದನು. ಅಷ್ಟರಲ್ಲಿ ದೇವಡಿಯಲ್ಲಿದ್ದ ಭೂಪಾಲನು ಅವನನ್ನು ತಡೆದು—"ಅಲ್ಲಿಯೇ ನಿಲ್ಲು; ಒಳಗೆ ಕಾಲಿಡಲಿಕ್ಕೆ ಅಪ್ಪಣೆಯಿಲ್ಲ" ಎಂದು ಗರ್ಜಿಸಿದನು.

ಭಯ್ಯಾನ ಈ ಆದೇಶವನ್ನು ಕೇಳಿ ರಾಮಚಂದ್ರನಿಗೆ ಹೇಗೋ, ಹಾಗನಿಸಿತು. ಯಾಕಂದರೆ ಅವನು ಆ ವಾಡೆಯಲ್ಲಿದಹಕ್ಕಿದ್ದು ಕೇವಲ ಶಿವರಾಯನ ಅನುಗ್ರಹದಿಂದ. ಶಿವರಾಯನ ಅನುಗ್ರಹಪಾತ್ರನಾದ ಇವನನ್ನು ವಾಡೆಯಲ್ಲಿಯ ಎಲ್ಲರೂ ಸನ್ಮಾನಿಸುತ್ತಿದ್ದದು ಸಹಜವಾಗಿತ್ತು. ಈ ಸನ್ಮಾನದಿಂದ ಅವನು ತಾನೊಬ್ಬ ದೊಡ್ಡ ಮನುಷ್ಯನೆಂದೇ ಭಾವಿಸಿಕೊಂಡು ಬಿಟ್ಟಿದ್ದನು. ಆದರೆ ಇಂದು ಈ ಕ್ಷುಲ್ಲಕ-ತಿಂಗಳಿಗೆ ಹನ್ನೆಂಟು ರೂಪಾಯಿಯ ಸಂಬಳದ-ನೌಕರನು ತನಗೆ ಈ ಬಗೆಯಾಗಿ ಹೇಳುವದು ಬಹು ಅಪಮಾನದ ಸಂಗತಿಯೆಂದು ಅವನು ತಿಳಿದನು. ಆದರಿಂದ ಅವನು ಭೂಪಾಲಸಿಂಹನ ಮಾತಿನ ಕಡೆಗೆ ಲಕ್ಷ್ಯಗೊಡದೆ ಹಾಗೇ ಮುಂದಕ್ಕೆ ಬಂದನು. ಆಗ ಭಯ್ಯಾನಿಂದ ಅವನ ಆ ಉದ್ಧಾಮತನವನ್ನು ಸಹಿಸುವದಾಗಲಿಲ್ಲ. ಅವನು ರಾಮಚಂದ್ರನ ಮುಂದೆ ಅಡ್ಡನಿಂತು ಅವನನ್ನು ಮುಂದೆ ಹೋಗಗೊಡಲಿಲ್ಲ. ಭಯ್ಯಾನನ್ನು ತನ್ನ ಬಾಹುಬಲದಿಂದ ದೂಡಿ ಹೋಗುವಷ್ಟು ಸಾಮರ್ಥ್ಯವು ಅವನಿಗಿರದ್ದರಿಂದ ಅವನು ನಿರುಪಾಯನಾಗಿ ಹಿಂದಕ್ಕೆ ಸರಿದು ನಿಂತು ಕಿಡಿಸುರಿಯುವ ಕಣ್ಣಿನಿಂದ ಅವನನ್ನು ನೋಡುತ್ತ—"ನೀನು ಯಾರ ಹುಕುಮಿನಿಂದ ನನ್ನನ್ನು ಹೀಗೆ ತಡೆಯುತ್ತಿರುವೆ? ಇದರ ಪರಿಣಾಮವು ಭಯಂಕರವಾಗಿ, ನಿನ್ನ ನೌಕರಿಗೆ ನೀರು ಬಂದೀತು. ಎಚ್ಚರದಿಂದ ನಡೆ." ಎಂದು ಬೆದರಿಸಿಕೊಂಡನು.

ಭೂಪಾಲನು ಇಂಥ ಬೆದರಿಕೆಗೆ ಬಿಕ್ಕ ಹಾಕುವವನಿದ್ದಿಲ್ಲ. ಅವನು ಹೇಳಿಕೇಳಿ ಪಂಜಾಬೀ ಲತ್ತನು. ಆ ಮಾತು ಕೇಳಿದ ಕೂಡಲೆ ಅವನ ಕ್ರೋಧವು ಅಪರಿಮಿತವಾಯಿತು. ಕೂಡಲೆ ಅವನು ರಾಮಚಂದ್ರನ ಶ್ರೀಮುಖದಲ್ಲಿ ಚೆನ್ನಾಗಿ ಕೊಟ್ಟು—"ನಿನ್ನಂಥ ಪಿಕನಾಶಿಯನ್ನು ಹೊರಗೆ ಹಾಕಲಿಕ್ಕೆ ಬೇರೆಯವರ ಅಪ್ಪಣೆಯೇತಕ್ಕೆ ಬೇಕು? ಬದ್‌ಮಾಷ, ನಡೆ ಹೊರಗೆ" ಎಂದವನೇ ಕತ್ತು ಹಿಡಿದು ದೂಡಿದನು.

ರಾಮಚಂದ್ರರಾಯನು ಭೂಪಾಲಸಿಂಹನಗಿಂತ ತರುಣನಾಗಿದ್ದರೂ ಮಾದಕದ್ರವ್ಯದ ಸೇವನೆಯಿಂದ ಅವನ ಆರೋಗ್ಯದ ಶಕ್ತಿಯು ಹೇಳಹೆಸರಿಲ್ಲದಾಗಿತ್ತು. ಅವನ ಕಣ್ಣು ಗುಡ್ಡ ಸೇರಿದ್ದವು ಎದೆಯು ಗೂಡುಗಟ್ಟಿತು. ಒಂಟೆಯ ಹಾಗೆ ಗೋಣು ಎದ್ದಿತ್ತು. ಕೈಕಾಲು ಸಣ್ಣಾಗಿ, ಹೊಟ್ಟೆಯು ಉಬ್ಬಿತ್ತು. ಶರೀರದ ವರ್ಣವು ಕ್ಷಯ ಹತ್ತಿದವರಂತೆ ಬಿಳುಪಾಗಿ ಹೋಗಿತ್ತು. ಇಂಥವನು ವೀರ-ಧೀರ ಭೂಪಾಲನ ಮುಂದೆ ನಿಲ್ಲುವ ಬಗೆ ಹೇಗೆ? ಭೂಪಾಲನ ಆಘಾತದಿಂದ ಅವನು ನೆಲಕ್ಕೆ ಬಿದ್ದನು. ಅವನ ಹಣೆಗೆ ಪೆಟ್ಟು ತಗಲಿ, ಬಳಬಳ ನೆತ್ತರ ಸುರಿಯುತೊಡಗಿತು. ಅಷ್ಟರಲ್ಲಿ ಓಣಿಯಲ್ಲಿ ಹಾದಾಡುವ ಜನರು ಕಲೆತರು. ಇನ್ನು ಇವನೊಡನೆ ವಾದಿಸುವದು ತರವಲ್ಲೆಂದು ಮನಗಂಡ ಅವನು ವಿನಯದಿಂದ ಭೂಪಾಲನಿಗೆ—ಭಯ್ಯಾಜಿ, ಒಡೆಯರ ಅಪ್ಪಣೆಯೇ ಹಾಗೆ ಇದ್ದರೆ ಹೋಗುತ್ತೇನೆ. ನನ್ನದೇನೂ ಹಟವಿಲ್ಲ; ಆದರೆ ನಾನು ನನ್ನ ಸಾಮಾನುಗಳನ್ನು ತಕ್ಕೊಂಡು ಹೋಗಲಿಕ್ಕೆ ಒಂದು ಗಾಡಿಯನ್ನಾಗಲಿ, ಒಬ್ಬ ಕೂಲಿಕಾರನನ್ನಾಗಲಿ ಕರೆತರುವೆನು; ಎಂದು ಹೇಳಿ ಹೋಗಲುದ್ಯುಕ್ತನಾಗಲು, ಭೂಪಾಲನು—ಕೃತಘ್ನಾ, ನೀಚಾ; ಉಪ್ಪು ಉಂಡವರ ಮನೆಯ ಗಳ ಎಣಿಸುವವನೇ, ಪುನಃ ಈ ವಾಡೆಯ ಒಳಗೆ ನಿನ್ನನ್ನು ಪ್ರವೇಶಿಸಗೊಡುವದಿಲ್ಲ. ಸಾಮಾನುಗಳನ್ನು ತಕ್ಕೊಂಡು ಹೋಗುತ್ತಿದ್ದರೆ ಬಾ, ಈಗಿಂದೀಗಲೆ ನಿನ್ನ ಎಲ್ಲ ಸಾಮಾನು ತಕ್ಕೊಂಡು ಇಲ್ಲಿಂದ ಹೊರಟು ಹೋಗು, ಎಂದು ಹೇಳಲು, ರಾಮಚಂದ್ರನು ತನ್ನ ಕೋಣೆಯ ಕಡೆಗೆ ನಡೆದನು. ಭೂಪಾಲನೂ ಅವನ ಬೆನ್ನಹಿಂದೆ ಹೋಗಿ ಅವನ ಎಲ್ಲ ಸಾಮಾನುಗಳನ್ನು ಕಟ್ಟಲಿಕ್ಕೆ ಅವನಿಗೆ ಸಹಾಯಮಾಡಿದನು.

ಆ ಹುಡುಗನ ಮನೆಯು ಎಂದಿಗೆಯೇನಿರಬೇಕು? ಅವನ ಸಂಪಾದನೆಯಲ್ಲ ದುರ್ವ್ಯಸನಗಳಿಗೆ ಹಂಚಿ ಹೋಗುತ್ತಿತ್ತು. ಸಾಲದೆಬಿದ್ದದ್ದಕ್ಕೆ ಅವನು ಕಂಡ ಕಂಡವರಲ್ಲಿ ಸಾಲ ತೆಗೆಯುವ ಸಂಪ್ರದಾಯವನ್ನಿಟ್ಟುಕೊಂಡಿದ್ದನು. ಆದರೆ ಆ ಮಹಾರಾಯನಿಗೆ ಸಾಲ ಕೊಡದ ಜನರೇ ದುರ್ಮಿಳರು. ಚೆನ್ನಾಗಿ ಹಿಡಿಕೊಂಡ ಸುಶಿಕ್ಷಿತ

ನಿಂದ ಮೊದಲು ಮಾಡಿಕೊಂಡು ಕುಗ್ಗಿ ಕುಂಬಾರರವರೆಗೂ ಅವನ ಧನಕೋ ಜನ ರಿದ್ದರು. ಇಷ್ಟೇ ಅಲ್ಲ, ಪರರ ಧನವನ್ನು ತಮ್ಮ ಕೌಟಿಲ್ಯದಿಂದ ಸೆಳೆಯುವ ವಾರಾಂಗನೆಯರಲ್ಲಿಯೂ ಎಷ್ಟೋ ಜನ ವಾರಾಂಗನೆಯರು ನಮ್ಮ ರಾಮಚಂದ್ರನಿಗೆ ಸಾವಿರಗಟ್ಟಲೆ ರೊಕ್ಕ ಹಣವನ್ನು ಕೊಟ್ಟರು; ತಮ್ಮ ಬೆಲೆಯುಳ್ಳ ವಸ್ತ್ರ-ಒಡವೆಗಳನ್ನು ಕೊಟ್ಟಿದ್ದರು, ಮಂದಿಯನ್ನು ಆ ಪರಿ ಮೋಹಿಸುವ ಮಾಯಾವಿ ಯುಕ್ತಿಯು ಅವನಿಗೆ ತಿಳಿಯಿತೋ ದೇವರೇ ಬಲ್ಲ! ಹೀಗೆ ಅವನು ಬೇಕಾದವರಲ್ಲಿ ಬೇಕಾದಷ್ಟು ಹಣ ತಂದು ತರುತ್ತಿದ್ದರೂ ಅದೆಲ್ಲ ಬ್ರಾಂಡಿ-ರಂಡಿ-ರಂಡಿಗಳ ಸಲುವಾಗಿ ವಿನಿಯೋಗವಾಗಿ, ಅವನ ಪಾಲಿಗೆ ಬ್ರಾಂಡಿಯ ಬರೇ ಬಾಟಲಿಗಳೂ, ಅಪೂರ್ದ ಟಿನ್ನಿನ ಡಬ್ಬಿಗಳೂ, ಗಾಂಜಾದ ಚಿಲಿಮೆಗಳೂ ಮಾತ್ರ ಉಳಿದಿದ್ದವು. ಇವರಾಯನಲ್ಲಿದ್ದ ಅವನ ಸಾಮಾನುಗಳಲ್ಲಿ ಇವೇ ವಿಶೇಷವಾಗಿದ್ದವು. ಅವನು ಅವನ್ನೆಲ್ಲ ಒಟ್ಟುಗೂಡಿಸಿ ಒಂದು ಟಿನ್ನಿನ ಸಂದೂಕದಲ್ಲಿ ತುಂಬಿದನು; ಹಾಗು ಭೂಪಾಲಸಿಂಹನ ಸಹಾಯದಿಂದ ತನ್ನ ತಲೆಯ ಮೇಲೆ ಹೊತ್ತುಕೊಂಡು ಒಬ್ಬ ಆ ವಾಡೆಯಿಂದ ಹೊರಬಿದ್ದನು.

ಆಗಿನ ಅವನ ಆ ವಿಕ್ಷಿಪ್ತ ಮೂರ್ತಿಯನ್ನು ನೋಡಿದರೆ, ಕೃತಘ್ನ ಜನರಿಗಾಗುವ ಪಾರಲೌಕಿಕ ಶಿಕ್ಷೆಗಳಲ್ಲಿ ಈ ಶಿಕ್ಷೆಯು ಮೊದಲಿನ ಮೆಟ್ಟಲೆಂದು ನೋಡುವವರಿಗೆ ಸಹಜವಾಗಿ ತೋರಬಹುದಾಗಿತ್ತು!

## ಐದನೆಯ ಪರಿಚ್ಛೇದ.

### ಭೀಷಣವಾದ ಹತಾಶೆ.

ಸಾವಿತ್ರೀ ವ್ರತದ ಮರುದಿವಸ ಸದಾಶಿವರಾಯನು ಶಿವರಾಯನನ್ನು ಕರೆ ತರುವದಕ್ಕಾಗಿ ಪುಣೆಯಿಂದ ನಾಗಪೂರಕ್ಕೆ ಹೊರಟು, ಯಥಾವಕಾಶದಲ್ಲಿ ಅವನು ನಾಗಪೂರದ ಬಳಿಯಲ್ಲಿರುವ ಶಿವರಾಯನ ರತ್ನದ ಖನಿಯ ಪ್ರದೇಶಕ್ಕೆ ತಲುಪಿದನು. ಆಗ ಅಲ್ಲಿದ್ದ ನೌಕರ-ಚಾಕರರು ತಮ್ಮ ಧನಿಯರ ಮಾವನವರು ಹೀಗೆ ಆಕಸ್ಮಿಕವಾಗಿ ಬಂದದ್ದರ ಕಾರಣವನ್ನು ತಿಳಿಯದೆ, ಅವರ ಕಡೆಗೆ ಟಕಮಕ ನೋಡುತ್ತ ನಿಂತರು. ಆಗ ಸದಾಶಿವರಾಯನು ಅವರನ್ನು ಕುರಿತು---ಏನಿರೋ, ಶಿವರಾಯನೆಲ್ಲಿರುವನು? ಎಂದು ಕೇಳಿದನು. ಈ ಪ್ರಶ್ನೆಯಿಂದಂತೂ ಅವರೆಲ್ಲರೂ ಮತ್ತಿಷ್ಟು ಬೆರಗಾದರು. ಆಗ ಅವರಲ್ಲಿಯ ಒಬ್ಬನಾದ ಶಿವರಾಯನ ಶಿಪಾಯಿಯು ವಿನಯದಿಂದ ಸದಾಶಿವರಾಯನಿಗೆ ಹೇಳಿದ್ದೇನಂದರೆ, ''ರಾಯರು ಮೊನ್ನೆ ರಾತ್ರಿಯ ಬೊಂಬ್ಯೆ ಮೇಲಿನಲ್ಲಿ ಕುಳಿತು ಹೋದದ್ದನ್ನು ನಾನು ನೋಡಿದ್ದೆನು. ತಮ್ಮ ಸಂಗಡ ಯಾರನ್ನೂ ಕರದೊಯ್ದಿರುವದಿಲ್ಲವಾದ್ದರಿಂದ ಅವರು ಬಹುಶಃ ಪುಣೆಗೇ ಹೋಗಿರಬೇಕೆಂದು ನನ್ನ ಅನುಮಾನವಿತ್ತು. ಆದರೆ ಈಗಲೇ ಪುಣೆಯಿಂದ ಬಂದ ತಾವು ಅವರ ವಿಷಯವಾಗಿ ಕೇಳುತ್ತಿರುವದರಿಂದ ಅವರು ಪುಣೆಗೆ ಹೋಗಿಲ್ಲವೆಂಬದು ನಿರ್ಧಾರವಾಗುತ್ತದೆ.

ಶಿಪಾಯಿಯು ಹೇಳಿದ್ದನ್ನು ಕೇಳಿ ಸದಾಶಿವರಾಯನ ಶಕ್ತಿಪಾತವಾದಂತಾಗಿ ಅವನು ಒಮ್ಮೆ ನಿಟ್ಟುಸಿರುಗರೆದನು; ಹಾಗು ಆ ಶಿಪಾಯಿಯೊಡನೆ ಬಂಗ್ಲೆಗೆ ನಡೆದನು. ಅಷ್ಟರಲ್ಲಿ ಸದಾಶಿವರಾಯರು ಬಂದ ಸುದ್ದಿಯು ಆ ಕಾರಖಾನೆಯ ಮ್ಯಾನೇಜರನಿಗೆ ತಿಳಿಯಲು, ರಾಮರಾಯನೆಂಬ ಹೆಸರಿನ ಆ ಮ್ಯಾನೇಜರನು ಕೂಡಲೆ ಆ ಬಂಗ್ಲೆಗೆ ಬಂದು ಅವರನ್ನು ಸನ್ಮಾನಪೂರ್ವಕವಾಗಿ ಸ್ವಾಗತ ಮಾಡಿದನು. ನಂತರ ಅವರ ಊಟ-ಉಪಚಾರಗಳ ವ್ಯವಸ್ಥೆಯನ್ನು ನೋಡಿಕೊಂಡು ಅವನು ತನ್ನ ಕೆಲಸಕ್ಕೆ ಹೊರಟನು. ಆಗ ಸದಾಶಿವರಾಯನು ಅವನನ್ನು ತಡೆದು—

ರಾಯರೇ. ನಾನು ಬಂದ ಕೆಲಸವಾಗದ ಹೊರತು ನನಗೆ ಈ ಊಟ-ಉಡಿಗೆಗಳ ಪ್ರಯೋಜನವೇನು? ಪುಣೆಯಲ್ಲಿ ಕಮಲಕ್ಕನು ಅತ್ಯವಸ್ಥಳಾಗಿರುತ್ತಾಳೆ. ಅದಕ್ಕೋಸ್ಕರ ನಾನು ಶಿವರಾಯನನ್ನು ಕರಕೊಂಡು ಹೋಗುವ ಸಲುವಾಗಿ ಬಂದಿರುವೆನು. ಆದರೆ ಅವನು ಮೊನ್ನೆಯೇ ಇಲ್ಲಿಂದ ಮುಂಬಯಿಯ ಕಡೆಗೆ ಹೋಗಿರುವನೆಂಬದು ತಿಳಿಯಿತು. ಅವನಂತೂ ಅಲ್ಲಿಗೆ ಬಂದಿರುವದಿಲ್ಲ. ಮತ್ತೆಲ್ಲಿಗೆ ಹೋಗಿರುವನೆಂಬದನ್ನು ನೀವೇನಾದರೂ ಬಲ್ಲಿರೋ? ಎನಲು,

"ಈಗೆರಡು ದಿನಗಳ ಹಿಂದೆ ಪುಣೆಗೆ ಹೋಗುತ್ತೇನೆಂದು ಹೇಳಿ ರಾಯರು ಹೊರಟುಹೋದರು; ಆದರೆ ಅವರು ಪುಣೆಯ ಗಾಡಿಯಲ್ಲಿ ಕೂಡ್ರದೆ, ಮುಂಬಯಿಯ ಗಾಡಿಯನ್ನೇರಿಹೋದರೆಂದು ಈ ಶಿಪಾಯಿಯ ಮುಖದಿಂದ ಕೇಳಿ ತಿಳಿದಿರುವೆನು. ಆದರೆ ಅವರೆಲ್ಲಿಗೆ ಹೋಗಿರುವರೆಂಬದು ನಿಶ್ಚಯವಾಗದ್ದರಿಂದ ನಾನು ನಿಮ್ಮಂತೆಯೇ ಗೊಂದಲದಲ್ಲಿ ಬಿದ್ದಿರುವೆನು" ಎಂಬ ರಾಮರಾಯರ ಉತ್ತರವನ್ನು ಕೇಳಿ, ಸದಾಶಿವರಾಯನು ತುಸಹೊತ್ತು ಆಲೋಚನೆಮಾಡಿ ನಂತರ--ಅವನು ಎಲ್ಲಿಗೆ ಹೋದನೆಂಬದನ್ನು ಕೇಳಿ ತಿಳಿಯುವ ಒಂದು ಉಪಾಯವಿರುವದು. ಅವನು ಯಾವ ಸ್ಟೇಶನ್ನಿನಿಂದ ಗಾಡಿಯೇರಿ ಹೋದನೋ ಅಲ್ಲಿಯ ಸ್ಟೇಶನ್ನಮಾಸ್ತರನನ್ನು ಕೇಳಿದರೆ, ಗೊತ್ತಾಗಬಹುದು, ಎಂದು ಸೂಚಿಸಿದನು. "ಆ ಸಂಗತಿಯನ್ನು ತಿಳಿದು ಬರಲಿಕ್ಕೆ ಈಗಲೆ ಒಬ್ಬನನ್ನು ಕಳಿಸುವೆನೆಂದು ರಾಮರಾಯನು ಹೇಳಿದನು. ಆದರೆ ಸದಾಶಿವರಾಯನು "ಹಾಗೆ ಮಾಡದೆ ನಾವೇ ಸ್ಟೇಶನ್ನಿಗೆ ಹೋಗೋಣ. ಅವನು ಎಲ್ಲಿಗೆ ಹೋದನೆಂಬದು ತಿಳಿದ ಕೂಡಲೆ, ನಾನೂ ನೀವೂ ಕೂಡಿಯೇ ಅಲ್ಲಿಗೆ ಹೋಗೋಣ. ನಾನು ಈ ವರೆಗೆ ಮುಂಬಯಿಯನ್ನೆಂದೂ ನೋಡಿರುವದಿಲ್ಲ. ಆದ್ದರಿಂದ ಅಲ್ಲಿ ಅವನು ಎಲ್ಲಿ ಇಳಕೊಂಡಿರುವನೆಂಬದನ್ನು ಶೋಧಿಸುವದು ನನಗೆ ಅಸಾಧ್ಯವಾಗಬಹುದು. ಅದಕ್ಕೋಸುಗ ಎರಡು-ಮೂರು ದಿನಗಳ ಸಲುವಾಗಿ ನೀವು ನಿಮ್ಮ ಕೆಲಸವನ್ನು ಬೇರೆಯವರಿಗೆ ವಹಿಸಿ ನನ್ನೊಡನೆ ಬರಬೇಕು." ಎಂದನು.

ಕೂಡಲೆ ರಾಮರಾಯನು ಠಾಣಖಾನೆಗೆ ಹೋಗಿ ತನ್ನ ಸಹಾಯಕರಿಗೆ ಎಲ್ಲ ಕೆಲಸವನ್ನು ವಹಿಸಿ ಬಂದನು. ನಂತರ ಅಂದೇ ಅವರೀರ್ವರೂ ಶಿವರಾಯನ ಶಿಪಾಯಿಯೊಡನೆ ನಾಗಪೂರ ಸ್ಟೇಶನ್ನಿಗೆ ಬಂದರು. ಸ್ಟೇಶನ್ನಮಾಸ್ತರನನ್ನು ಕೇಳಿ, ಶಿವರಾಯನು ಮುಂಬಯಿಗೆ ಹೋಗಿರುವದೇ ನಿಂಡಿತವೆಂದು ತಿಳಕೊಂಡರು; ಹಾಗು ಅವರೀರ್ವರೂ ಆಗಲೆ ಅಲ್ಲಿಂದ ಹೊರಡುವ, ಬೊಂಬೈ 'ಎಕ್ಸಪ್ರೆಸ್ಸ' ಬಂಡಿಯಿಂದ ಮುಂಬಯಿಗೆ ನಡೆದರು. ಅಂಥ ಆ ದೊಡ್ಡ ಪಟ್ಟಣದಲ್ಲಿ ಶಿವರಾಯನು ನಮಗೆ

ಹೇಗೆ ಭೇಟಿಯಾಗಬಹುದೆಂದು ದಾರಿಯಲ್ಲಿ ಸದಾಶಿವರಾಯನು ಆಲೋಚಿಸುತ್ತಿರಲು, ರಾಮರಾಯನು ಈ ಮೊದಲು ಎಷ್ಟೋ ಸಾರೆ ಮುಂಬಯಿಗೆ ಹೋಗಿಬಂದವನಾದುದರಿಂದ ಅವನಿಗೆ ಅಲ್ಲಿಯ ಎಲ್ಲ ಹೋಟೆಲ್-ವಿಶ್ರಾಂತಿಗೃಹಗಳೂ ಚೆನ್ನಾಗಿ ಪರಿಚಿತವಾಗಿದ್ದವು. ಆದರಿಂದ ಅವನು ಆ ಬಗ್ಗೆ ಯತ್ಕಿಂಚಿತ್ತೂ ಆಲೋಚಿಸಬೇಡಿರೆಂದು ಸದಾಶಿವರಾಯರಿಗೆ ಅಭಿವಚನ ಕೊಟ್ಟು ಅವರನ್ನು ಶಾಂತಗೊಳಿಸಿದನು.

ಗಾಡಿಯು ಕಲ್ಯಾಣ ಜಂಕ್ಶನ್ನಿಗೆ ಬಂದ ಕೂಡಲೆ ರಾಮರಾಯನು ಅಲ್ಲಿಂದ ಮುಂಬಯಿಯ ಮಾಧವಾಶ್ರಮದ ಮುಖ್ಯಸ್ಥನಿಗೆ ತಮ್ಮ ಬರುವಿಕೆಯನ್ನು ಕುರಿತು ತಾರಿನಿಂದ ತಿಳಿಸಿ, ಸ್ಟೇಶನ್ನಿಗೆ ಗಾಡಿ ಕಳಿಸಲು ಸೂಚಿಸಿದನು. ಆ ಪ್ರಕಾರ ಮಾಧವಾಶ್ರಮದ ವ್ಹಿಕ್ಟೋರಿಯಾ ಗಾಡಿಯು ಮುಂಬಯಿಯ ಬೋರಿಬಂದರದ ಸ್ಟೇಶನ್ನಿನಲ್ಲಿ ಬಂದು ತಲಪುವಷ್ಟರಲ್ಲಿ ಎಕ್ಸ್‌ಪ್ರೆಸ್ಸು ಅಲ್ಲಿಗೆ ಬಂತು. ರಾಮರಾಯರೂ ಸದಾಶಿವರಾಯರೂ ಗಾಡಿಯಿಂದಿಳಿದು ವ್ಹಿಕ್ಟೋರಿಯಾದಲ್ಲಿ ಕುಳಿತು ಮಾಧವಾಶ್ರಮಕ್ಕೆ ಬಂದರು. ಅವರು ಮೊದಲು ತಮ್ಮ ಸ್ನಾನ-ಪಾನಗಳನ್ನು ತೀರಿಸಿಕೊಂಡು ನಂತರ ಶಿವರಾಯನ ಶೋಧವನ್ನು ನಡಿಸಿದರು

ರಾಮರಾಯನು ಮಾಧವಾಶ್ರಮದ ಮುಖ್ಯಸ್ಥನಿಗೆ ಸದಾಶಿವರಾಯರ ಪರಿಚಯ ಮಾಡಿಕೊಟ್ಟು—ಇವರು ತಮ್ಮ ಜರೂರಿಯ ಕೆಲಸದ ಸಲುವಾಗಿ ಶಿವರಾಯರನ್ನು ಇಂದೇ ಕಾಣಬೇಕಾಗಿರುತ್ತದೆ. ಮುಂಬಯಿಗೆ ಬಂದಾಗೆಲ್ಲ ಶಿವರಾಯರು ನಿಮ್ಮಲ್ಲಿಯೇ ಇಳಿದುಕೊಳ್ಳುತ್ತಾರಷ್ಟೇ ಅಲ್ಲ, ನಾವೂ ಬಂದಾಗ ನಮಗೂ ಇಲ್ಲಿಯೇ ಇಳಿದುಕೊಳ್ಳುವ ಸಲುವಾಗಿ ಅವರು ಆಗ್ರಹಪಡಿಸುತ್ತಿರುತ್ತಾರೆ. ನಿಮ್ಮ ಆಶ್ರಮದ ವ್ಯವಸ್ಥೆಯು ಅವರ ಮನಸ್ಸಿಗೆ ಒಪ್ಪಿತವಾಗಿದೆ. ನಿನ್ನೆ ಅವರು ಇಲ್ಲಿಗೆ ಬಂದಿರುವರು. ಇಲ್ಲಿ ಯಾವ ಕೋಣೆಯಲ್ಲಿಳಕೊಂಡಿದ್ದಾರೆಂಬುದನ್ನು ತಿಳಿಸಿ. ನಾವು ಅವರಿಗೆ ಈಗಲೇ ಭೇಟಿಯಾಗಬೇಕಾಗಿದೆ, ಎಂದು ಹೇಳುತ್ತಿರಲು ಅವನು ಕೆಲ ವಿಚಾರಮಾಡಿ ಬಂದ—ಅವರು ಈ ದಿನ ಬೆಳಿಗ್ಗೆ ಎಂಟು ಗಂಟೆಗೆ ಇಲ್ಲಿಂದ ಹೋದರು, ಎಲ್ಲಿಗೆ ಹೋಗುತ್ತೇನೆಂಬುದನ್ನು ಮಾತ್ರ ತಿಳಿಸಿರುವದಿಲ್ಲ; ಆದರೆ ಅವರು ಎಲ್ಲಿಗೆ ಹೋದರೆಂಬುದನ್ನು ತಿಳಿಯುವದಕ್ಕೆ ಒಂದು ಮಾರ್ಗ ಉಳಿದದೆ. ಅದಾವದೆಂದರೆ, ಅವರನ್ನು ಕರೆದು ಒಯ್ದ ನಮ್ಮ ವ್ಹಿಕ್ಟೋರಿಯಾದವನನ್ನು ಕೇಳಬೇಕು. ಅವನಿಂದ ಅವರು ಎಲ್ಲಿಗೆ ಹೋದರೆಂಬುದು ನಿಶ್ಚಯವಾಗಿ ತಿಳಿಯಬಹುದು. ಬಳಿಕ ರಾಮರಾಯನು ಸದಾಶಿವರಾಯನೊಡನೆ ಆ ಗಾಡಿಹೊಡೆಯುವವನ ಕಡೆಗೆ ಹೋಗಿ ಅವನನ್ನು ವಿಚಾರಿಸಲು, ಅವನು—ಬೆಳಿಗ್ಗೆ ನಾನು ಅವರನ್ನು ಅವರ ಸಾಮಾನಿನೊಡನೆ

ಪ್ರಿನ್ಸೆಸ್ ಡಾಕದೊಳಗಿನ ಪಿ. ಓ. ಕಂಪನಿಯ ಹಡಗುಪಡೆಯ ಬುಕ್ಕಿಂಗ ಆಫೀಸಿನಲ್ಲಿ ಇಳಿಸಿಬಂದೆನು, ಎಂದು ಹೇಳಿದನು. ಕೂಡಲೆ ಅವರು ಆದೇ ವ್ಹಿಕ್ಟೋರಿಯಾದವನೊಡನೆ ಅಲ್ಲಿಗೆ ತೆರಳಿದರು. ''ಶಿವರಾಯನು ಹಡಗವನ್ನೇರಿ ಎಲ್ಲಿಗೆ ಹೋಗಿರಬಹುದು''ಎಂಬ ಆಲೋಚನೆಯಿಂದ ಕಪ್ಪಿಟ್ಟ ಸದಾಶಿವರಾಯನ ಮೊಗವನ್ನು ನೋಡಿ, ರಾಮರಾಯನಾದರೂ ಭೀಷಣವಾದ ಚಿಂತೆಯಿಂದ ಹತಾಶನಾದನು; ಆದರೆ ಚಿಂತಾಕ್ರಾಂತವಾಗಿ ಕುಳಿತುಕೊಳ್ಳುವ ಸಮಯವಿದಲ್ಲೆಂದು ತಿಳಿದ ಅವನು ಆ ಕಂಪನಿಯ ಬುಕ್ಕಿಂಗ ಆಫೀಸಿನಲ್ಲಿ ಹೋಗಿ ಶಿವರಾಯನ ವಿಷಯವಾಗಿ ವಿಚಾರಿಸಿದನು. ''ಪಿ. ಓ. ಕಂಪನಿಯ ಡಬ್ಲಿನ್ ಎಂಬ ಹೆಸರಿನ ಹಡಗವು ಬೆಳಗಿನ ೧೦ ಗಂಟೆಗೆ ಆಸ್ಟ್ರೇಲಿಯಾದ ಟಪಾಲನ್ನು ಹೇರಿಕೊಂಡು ಹೊರಟಿತು. ಆದರೆ ಆ ಮೇಲ್‍ಸ್ಟೀಮರವನ್ನೇರಿ ಹೋದವರಲ್ಲಿ ಶಿವರಾಯನೆಂಬ ಹೆಸರಿನ ಪಥಿಕನಾರೂ ಇದ್ದಿಲ್ಲ''ವೆಂದು ಆ ಕಂಪನಿಯ ಮ್ಯಾನೇಜರನು ರಾಮರಾಯನಿಗೆ ತಿಳಿಸಿದನು.

ರಾಮರಾಯನು ಸದಾಶಿವರಾಯನೊಡನೆ ಮತ್ತೆ ಎರಡು-ಮೂರು ದಿನಗಳವರೆಗೆ ಮುಂಬಯಿಯಲ್ಲಿದ್ದು, ಇಡೀ ಶಹರದ ತುಂಬ ಶಿವರಾಯನನ್ನು ಶೋಧಿಸಿದರು. ಎಲ್ಲಿಯೂ ಅವನ ಪತ್ತೆ ಹತ್ತಲಿಲ್ಲ. ಕಡೆಗೆ ಅವರು ಅಲ್ಲಿಂದ ತಿರುಗಿದರು. ರಾಮರಾಯನು ನಾಗಪೂರಕ್ಕೆ ಹೋಗಿ ತನ್ನ ಯಜಮಾನನ ಕಾರಖಾನೆಯ ಕೆಲಸವನ್ನು ನೋಡತೊಡಗಿದನು. ಶಿವರಾಯನನ್ನು ಸಂಗಡ ಕರಕೊಂಡೇ ಬರುವೆನೆಂದು ಹೇಳಿ ಹೊರಬಿದ್ದ ತಾನು ಮಗಳಿಗೆ ಏನೆಂದು ಹೇಳಬೇಕೆಂಬದನ್ನರಿಯದೆ ಸದಾಶಿವರಾಯನು ಮುಗ್ಧನಾದನು. ಕಮಲೆಯು ಸದಾಶಿವರಾಯನ ಕೇವಲ ಪ್ರೀತಿಯ ಮಗಳು. ಆಕೆಗೆ ಅಖಂಡವಾದ ಸೌಖ್ಯವು ಲಭಿಸಬೇಕೆಂಬ ಇಚ್ಛೆಯಿಂದಲೇ ಅವಳನ್ನು ಶಿವರಾಯನಂಥ ತರುಣ, ಸುಶೀಲ ಹಾಗು ಬುದ್ಧಿಶಾಲಿಗೆ ಅವನು ಧಾರೆ ಎರೆದು ಕೊಟ್ಟಿದ್ದನು. ಆದರೆ ಆಕಸ್ಮಿಕವಾಗಿ ಅವಳಿಗೆ ಈ ಬಗೆಯಾದ ದಾರುಣ ಕಷ್ಟವು ಪ್ರಾಪ್ತವಾದದ್ದನ್ನು ಕಂಡು ಆ ಹೆಣ್ಣುಕರುಳಿನ ಸದಾಶಿವರಾಯನಿಗೆ ಎಷ್ಟು ಕಷ್ಟವುಂಟಾಗಿರಬಹುದೆಂಬದನ್ನು ಯಾರು ಹೇಳಬೇಕು?

ಸದಾಶಿವರಾಯನು ನಾಗಪೂರಕ್ಕೆ ಹೊರಟು ಹೋದ ಮರುದಿವಸ ಅವನ ಹೆಸರಿಗೆ ನಾಗಪೂರದಿಂದ ಒಂದು ರೆಜಿಸ್ಟರ್ಡ ಲಕೋಟೆಯು ಬಂದಿತು. ಮಾಧವರಾಯನು ಅದನ್ನು ತಕ್ಕೊಂಡು ಕಮಲೆಯ ಕಡಗೆ ಕೊಟ್ಟಿದ್ದನು. ಕಮಲೆಯಾ

ದರೂ ಅದನ್ನು ಒಡೆದು ನೋಡುವ ಹವ್ಯಾಸಪಡದೆ ತನ್ನ ಕಪಾಟಿನ ಒಂದು ಖಾನೆಯಲ್ಲಿ ಇಟ್ಟುಬಿಟ್ಟಿದ್ದಳು. ಇಂದು ಸದಾಶಿವರಾಯನು ಮರಳಿ ಪುಣೆಗೆ ಬಂದನು. ಇಷ್ಟರಲ್ಲಿ ಇಲ್ಲಿಯ ಸುದ್ದಿಯೇನೂ ತಿಳಿಯದ್ದರಿಂದ ಗೋಕಾವಿಯಿಂದ ಸುಂದರಾಬಾಯಿಯು ಮಾಲತಿ ಹಾಗು ಅಶ್ವತ್ಥ ಇವರೊಡನೆ ಪುಣೆಗೆ ಬಂದಿದ್ದಳು. ಇವರನ್ನು ನೋಡಿದಬಳಿಕಂತೂ ತಟ್ಟನೆ ಮುಂದೆ ಬಂದು ತನ್ನ ಮಗಳನ್ನು ಕಾಣುವ ಧೈರ್ಯವು ಆವನಲ್ಲಿ ಉಳಿಯದ್ದರಿಂದ ಆವನು ಪಡಸಾಲೆಯ ಮೇಲಿನ ಕೋಣೆಯಲ್ಲಿಯೇ ಸುಮ್ಮನೆ ಕುಳಿತುಬಿಟ್ಟನು.

ತಂದೆಯು ಮನೆಗೆ ಬಂದರೂ ತನಗೆ ಭೇಟಿಯಾಗದ್ದರ ಕಾರಣವು ವಿದುಷಿಯಾದ ಕಮಲೆಗೆ ಆಗಲೆ ತಿಳಿದು ಬಂದಿತು. ಆದರಿಂದ ಅವಳ ಮನಸ್ಸಿಗೆ ಅತ್ಯಂತ ದುಃಖವೂ ಆಯಿತು. ಆದರೆ ಈಗಾದ ದುಃಖವು ಮೊನ್ನೆ ಆ ಕಲಂಕಿತಪತ್ರವು ತಲುಪಿದ ಕಾಲಕ್ಕೆ ಆದ ದುಃಖಕ್ಕಿಂತ ಎಷ್ಟೋ ಪಾಲು ಕಡಿಮೆಯಾಗಿತ್ತೆಂದೇ ಹೇಳಬಹುದು. ಅಂದಿನ ದುಃಖದಿಂದ ಅವಳ ಹೃದಯವೆಂಬ ಕೋಮಲ ಲತೆಯು ಸುಟ್ಟು ಸೊಪ್ಪರಾಗಿ ಹೋಗಿತ್ತಾದ್ದರಿಂದ, ಇಂದಿನ ದುಃಖದ ಪರಿಣಾಮವು ಅದರಮೇಲೆ ವಿಶೇಷವಾಗಿ ಆಗಲಿಲ್ಲ.

ನಂತರ ಅವಳು ತಾಯಿಯನ್ನು ಕರೆದು ತನ್ನ ಕಪಾಟಿನೊಳಗಿನ ಅಂದಿನ ಆ ರೆಜಿಸ್ಟರ್ಡ ಪತ್ರವನ್ನು ತಂದೆಗೆ ಕೊಡಹೇಳಿದಳು. ''ಅವರು ಈಗ ತಾನೇ ಬಂದಿರುವರು. ಇಷ್ಟು ಅವಸರವೇಕೆ?'' ಎಂದು ತಾಯಿಯು ನುಡಿಯಲು, ''ಅವ್ವಾ, ಆ ಪತ್ರವು ಸಾಮಾನ್ಯವಾಗಿರುವಂತೆ ತೋರುವದಿಲ್ಲ. ಅದನ್ನು ಓದುವದರಿಂದ ಚಿಂತೆಗೆ ಸೀಮೆಯೇ ಉಳಿಯಲಿಕ್ಕಿಲ್ಲ. ಅಥವಾ ಆ ಪತ್ರವಾಚನದಿಂದ ನಮ್ಮೆಲ್ಲರ ಆ ಚಿಂತಾವೃಕ್ಷವು ಬುಡಮುಟ ಕಿತ್ತುಹೋಗಿ ಆನಂದಸಾಮ್ರಾಜ್ಯವು ನೆಲೆಗೊಳ್ಳಬಹುದು!'' ಎಂದು ಕಮಲೆಯು ನುಡಿಯಲು, ಸುಂದರಾಬಾಯಿಯು ಆ ಲಕೋಟೆಯನ್ನು ಗಂಡನ ಕೈಯಲ್ಲಿ ಕೊಡಹೋದಳು.

ಅಷ್ಟರಲ್ಲಿ ನ್ಯಾಶನಲ್‌ಬ್ಯಾಂಕಿನ ಒಬ್ಬ ಅಧಿಕಾರಿಯು ಅಲ್ಲಿಗೆ ಬಂದನು. ಆವನ ಕೈಯಲ್ಲಿ ಒಂದು ಹೊಸ ಚೆಕ್ಕಿನ ಪುಸ್ತಕವೂ ಠೇವುದಾರರ ಹಸ್ತಾಕ್ಷರದ ನಮೂನೆಯನ್ನು ಬರೆಯಿಸಿಕೊಳ್ಳುವ ಒಂದು ಪುಸ್ತಕವೂ ಇದ್ದವು. ಆವನು ಸದಾಶಿವರಾಯನ ಹೆಸರು-ದೆಸೆಗಳನ್ನು ವಿಚಾರಿಸಿಕೊಂಡು ಅವರ ಕೈಯಲ್ಲಿ ಆ ಎರಡೂ ಪುಸ್ತಕಗಳನ್ನು ಕೊಟ್ಟು— ''ಈ ಸಹಿಯ ನಮೂನೆಯ ಪುಸ್ತಕದಲ್ಲಿ ಕಮಲಾಬಾಯಿಯವರ ಸಹಿಯನ್ನು ಮಾಡಿಸಬೇಕು; ಹಾಗು ಈ ಚೆಕ್ಕಿನ

ಪುಸ್ತಕವನ್ನು ಅವರ ಕಡೆಗೆ ಕೊಡಬೇಕು'' ಎಂದು ಕೇಳಿಕೊಳ್ಳಲು ಸದಾಶಿವರಾಯನು ಆಶ್ಚರ್ಯಾನ್ವಿತನಾಗಿ—''ರಾಯರೇ, ಈ ಎಲ್ಲ ಸಂದರ್ಭಗಳ ಮರ್ಮವು ನನಗೆ ತಿಳಿಯದಾಗಿದೆ. ದಯವಿಟ್ಟು ವಿಶದವಾಗಿ ತಿಳಿಸಿ, ನನ್ನನ್ನು ಕೃತಜ್ಞನನ್ನಾಗಿ ಮಾಡಿಕೊಳ್ಳಬೇಕು'' ಎಂದನು.

ನಂತರ ಆ ಅಧಿಕಾರಿಯು ತಮ್ಮ ಬ್ಯಾಂಕಿನ ಮಾಲಕನಿಗೆ ಶಿವರಾಯರಿಂದ ಬಂದ ಅಪ್ಪಣೆಯ ಪತ್ರದ ಸಂಗತಿಯನ್ನು ತಿಳಿಸಿದನು. ಅದೇನಂದರೆ,— ''ನನ್ನ ಖಾತೆಗೆ ಈ ವರೆಗೆ ನಿಮ್ಮಲ್ಲಿ ಜಮೆಯಿರುವ ಹಾಗು ಇನ್ನುಮುಂದೆ ಜಮೆಯಾಗ ಬಹುದಾದ ಎಲ್ಲ ಹಣವನ್ನೂ ನನ್ನ ಹೆಂಡತಿಯಾದ ಕಮಲಾಬಾಯಿಯ ಖಾತೆಗೆ ಜಮೆ ಬರಕೊಳ್ಳಬೇಕು; ಹಾಗು ಇನ್ನು ಮುಂದೆ ಆ ಹಣದ ವಿನಿಯೋಗವನ್ನು ಅವಳ ಅಭಿಪ್ರಾಯದಂತೆ ಮಾಡುತ್ತ ಹೋಗಬೇಕು'' ಎಂದು ಶಿವರಾಯರು ಬರೆದು ತಿಳಿಸಿರುವನಾದ್ದರಿಂದ ನಾವು ಅವರ ಖಾತೆಯ ಎಲ್ಲ ರಕಮನ್ನು ಕಮಲಾಬಾಯಿಯವರ ಖಾತೆಗೆ ಜಮೆ ಬರೆದುಕೊಂಡಿರುವೆವು. ಕಮಲಾಬಾಯಿಯವರಿಗೆ ಹಣ ಬೇಕಾದಾಗ್ಗೆ ಈ ಚೆಕ್ಕಬುಕ್ಕಿನ ಅಸಲು ಹಾಗು ನಕಲು ಪ್ರತಿಗಳಲ್ಲಿ ಆ ರಕಮನ್ನು ಕಾಣಿಸಿ, ತಮ್ಮ ಸಹಿಮಾಡಿ ನಮ್ಮ ಬ್ಯಾಂಕಿಗೆ ಕಳಿಸಿದರೆ ಕೂಡಲೆ ಹಣವು ದೊರೆಯುವದು. ಅವರು ಮಾಡುವ ಸಹಿಯು ಅವರದೇ ಅಮುಷಲ್ಲೆಂಬದನ್ನು ಪರೀಕ್ಷಿಸಿ ನೋಡಿಕೊಳ್ಳುವದಕ್ಕಾಗಿ ಈ ಸಹಿಯ ನಮೂನೆಯ ಪುಸ್ತಕದಲ್ಲಿ ಅವರದೊಂದು ಸಹಿಯನ್ನು ಈಗಲೇ ಮಾಡಿಸಿಟ್ಟುಕೊಳ್ಳಬೇಕಾಗುತ್ತದೆ, ಎಂದು ತಿಳಿಸಿದನು.

ಸದಾಶಿವರಾಯನು ಆ ಅಧಿಕಾರಿಯು ಹೇಳಿಕೆಯ ಪ್ರಕಾರ ಅವನ ಕೆಲಸವನ್ನು ಮಾಡಿಕೊಟ್ಟನಂತರ ಅವನು ಹೊರಟುಹೋದನು. ಇತ್ತ ಸುಂದರಾಬಾಯಿಯು ಆ ಲಕೋಟೆಯನ್ನು ಗಂಡನ ಕೈಯಲ್ಲಿ ಕೊಟ್ಟು ಇದು ಬಂದು ಈಗೆಂಟು ದಿನಗಳಾಗುತ್ತ ಬಂದವೆಂದು ತಿಳಿಸಿದಳು. ಸದಾಶಿವರಾಯನು ಅದನ್ನು ಒಡೆದು ನೋಡಿದನು. ಅದರಲ್ಲಿ ಎರಡು ದಸ್ತು [ಕಕಬಿ] ಗಳಿದ್ದವು. ಅವೆರಡೂ ಇಂಗ್ಲಿಷಭಾಷೆಯಲ್ಲಿ ಬರೆದವುಗಳಾಗಿದ್ದವು. ಸದಾಶಿವರಾಯನಿಗೆ A. B. C, D ಮುಟ್ಟಗೆ ಇಂಗ್ಲಿಷ ಬರುತಿತ್ತೇ ಹೊರತು ದಸ್ತುಗಳನ್ನು ಓದಿ ತಿಳಕೊಳ್ಳುವಷ್ಟು ಆ ಭಾಷೆಯ ಪರಿಚಯವಿರಲಿಲ್ಲ. ಆದರಿಂದ ಅವನು ಮಾಧವನನ್ನು ಕರೆದು ಅವನಿಗೆ ಅವುಗಳನ್ನು ತೋರಿಸಿ, ಅವುಗಳ ಸಂಗತಿಯನ್ನು ತಿಳಿಸಲು ಹೇಳಿದನು.

ಮಾಧವನು ಅವನ್ನು ಓದಿಕೊಂಡನು. ಅವುಗಳಲ್ಲಿ ಒಂದು ದಾನಪತ್ರವಾಗಿದ್ದು, ಎರಡನೇದು ಕರಾರಪತ್ರವಾಗಿತ್ತು. ಅವೆರಡೂ ನಾಗಪೂರ ರಜಿಸ್ಟ್ರರ ಆಫೀಸಿನಲ್ಲಿ ರೆಜಿಸ್ಟ್ರರ ಮಾಡಲ್ಪಟ್ಟಿದ್ದು ಆ ಆಫೀಸಿನಿಂದಲೇ ಸದಾಶಿವರಾಯನಿಗೆ ಅವು ಕಳಿಸಲ್ಪಟ್ಟಿದ್ದವು. ದಾನಪತ್ರದಲ್ಲಿ ಶಿವರಾಯನೆಂಬುವನು ತನ್ನ ಎಲ್ಲ ಸ್ಥಾವರ ಹಾಗು ಜಂಗಮ ಆಸ್ತಿಗಳನ್ನು ತನ್ನ ಹೆಂಡತಿಯಾದ ಕಮಲಾಬಾಯಿಯೆಂಬವಳಿಗೆ ದಾನರೂಪವಾಗಿ ಕೊಟ್ಟ ಸಂಗತಿಯಿತ್ತು; ಹಾಗು ಕರಾರಪತ್ರದಲ್ಲಿ ಶಿವರಾಯನು ತನ್ನ ನಾಗಪೂರ ಮುಂತಾದ ಎಲ್ಲ ಕಾರಖಾನೆಗಳ ಆದಾಯದೊಳಗಿಂದ ೧೦೦ಕ್ಕೆ ೧೨॥ ಯಂತೆ ತನ್ನ ಕಾರಖಾನೆಗಳ ಮುಖ್ಯ ಇಂಜನೀಯರನಾದ ರಾಮರಾಯನಿಗೆ ಕೊಡಲು ಈ ಕರಾರಪತ್ರದ ಮೂಲಕ ಒಪ್ಪಿಕೊಂಡಿರುವೆನೆಂದೂ, ತನ್ನ ಮಾವನಾದ ಸದಾಶಿವರಾಯನು ರಾಮರಾಯನಿಂದ ಉಳಿದ ಎಲ್ಲ ಆದಾಯವನ್ನು ಪಡೆಕೊಂಡು ಅದನ್ನು ತನ್ನ ಮಗಳಾದ ಕಮಲಾಬಾಯಿಯ ಇಚ್ಛಾನುಸಾರ ವ್ಯಯಮಾಡಬೇಕೆಂದೂ ಬರೆದಿತ್ತು. ಕಮಲಾಬಾಯಿಗೆ ಈ ನನ್ನ ಕರಾರಪತ್ರದಂತೆ ನಡೆಯುವದು ಮನಸ್ಸಿಗೆ ಬರದಿದ್ದರೆ ಈ ಕರಾರಪತ್ರವು ರದ್ದು ಎಂದು ತಿಳಿದು, ತನ್ನ ಇಚ್ಛೆಯಂತೆ ಅವಳು ನಡೆಯಬಹುದೆಂದೂ ಆ ಕರಾರಪತ್ರದ ಕೊನೆಗೆ ಒಂದು ಕಲಮು ಹಾಕಲ್ಪಟ್ಟಿತ್ತು.

ಆ ಪತ್ರದ್ವಯಗಳನ್ನೋದಿ ಆ ಕುಟುಂಬದ ಜನರ ಮನಸಿನಲ್ಲಿ ಯಾವ ಯಾವ ವಿಚಾರಗಳುಂಟಾಗಿರಬಹುದೆಂಬದನ್ನು ಯಾರು ಹೇಳಬೇಕು? ಬೇರೆಯವರ ವಿಚಾರದ ಗೊಡವೆಯನ್ನು ಬಿಟ್ಟುಗೊಟ್ಟು ಕಮಲೆಯೊಬ್ಬಳ ಹೃದಯಪರೀಕ್ಷೆಯನ್ನು ಮಾಡಿದರೆ, ಆ ಕಠಬಿಗಳ ಸಂಗತಿಯಿಂದ ಮೊದಲೇ ದಗ್ಧವಾಗಿ ಇದ್ದಲಿಯಂತೆ ಕಠಿಣವಾಗಿದ್ದ ಅವಳ ಹೃದಯವು, ಇದ್ದಲಿಯು ಕಮ್ಮಾರನ ಸುತ್ತಿಗೆಯ ಪೆಟ್ಟಿನಿಂದ ತುಂಡುತುಂಡಾಗುವಂತೆ ಅದು ಚೂರುಚೂರಾಗಿ ಹೋಯಿತು. ಆ ಅಪಾರದುಃಖದಿಂದ ಆ ಸುಶೀಲೆಗೇನಾಗದೇಕಾಗಿತ್ತು? ದುಃಖದಿಂದೆಂದಾದರೂ ಹೃದಯದಾಹವು ಕಡಿಮೆಯಾದೀತೇ? ಇಲ್ಲ, ಇಲ್ಲ; ಅದೆಂದೂ ಆಗಲಿಕ್ಕಿಲ್ಲ. ಇಷ್ಟೇ ಅಲ್ಲ, ಅದರಿಂದ ದೈವದುರ್ವಿಪಾಕದ ಉಪಹಾಸಮಾತ್ರವಾಗಿ, ಭೀಷಣವಾದ ಹತಾಶೆಯು ಖಂಡಿತವಾಗಿ ಉಂಟಾಗುತ್ತದೆ!

## ಆರನೆಯ ಪರಿಚ್ಛೇದ

## ಅಂತರಂಗದ ಕಾಲಕೂಟವು ಮೋರೆಯಲ್ಲಿ ಒಡೆದು ಕಾಣಿಸಿತು.

ಶಿವರಾಯನು ಮಧ್ಯಮಸ್ಥಿತಿಯ ಗೃಹಸ್ಥನ ಮಗನು. ಬಾಲ್ಯದಲ್ಲಿಯೇ ಅವನಿಗೆ ಮಾತೃವಿಯೋಗವಾಗಿತ್ತು. ತಾಯಿಯ ನಿಧನದ ನಂತರ ಕೆಲ ದಿವಸಗಳಲ್ಲಿಯೇ ಅವನ ತಂದೆಯು ಯಾವ ಕಾರಣದಿಂದಲೋ ಗೃಹತ್ಯಾಗ ಮಾಡಿದ್ದನು. ಆದರಿಂದ ಶಿವರಾಯನಿಗೆ ಮಾತಾ-ಪಿತೃಸ್ನೇಹವು ಹೇಗಿರುವದೆಂಬದರ ಪರಿಚಯವೇ ಆಗಿರಲಿಲ್ಲ. ಶಿವರಾಯನು ಚಿಕ್ಕಂದಿನಲ್ಲಿ ತನ್ನ ಚಿಕ್ಕಿಯಾದ ದುರ್ಗಾಂಬಿಕೆಯಿಂದಲೇ ಸಂರಕ್ಷಿಸಲ್ಪಟ್ಟನು; . ಆದರೆ ಅವಳು ತನ್ನ ಹೆಸರಿಗೆ ತಕ್ಕಂತೆ ಮಹಾನಿಷ್ಠುರಳಿದ್ದಳು. ಹಸಿವೆಯಾದಾಗಲೂ, ಬೇನೆ-ಬೇಸರಿಕೆಗಳುಂಟಾದಾಗಲೂ ಅವಳು ಶಿವರಾಯನಿಗೆ ಹಸುಣಾನುಡಿಯಿಂದ ನುಡಿಯುತ್ತಿದ್ದುದರಿಂದ ಬಾಲ್ಯದಿಂದಲೇ ಶಿವರಾಯನು ಒಳ್ಳೇ ಉದಾಸನಾಗಿ ತೋರುತ್ತಿದ್ದನು. ತನ್ನ ಚಿಕ್ಕಿಯು ತನ್ನನ್ನು ಬಿಟ್ಟು ತನ್ನ ಮಕ್ಕಳಿಗೆ ಮುಚ್ಚುಮರೆಯಿಂದ ತಿನಿಸು-ಉಣಿಸುವದನ್ನು ನೋಡಿ, ಶಿವರಾಯನಿಗೆ ಬಹಳ ದುಃಖವೆನಿಸುತ್ತಿತ್ತು. ಆದರೆ ತನ್ನನ್ನು ಪ್ರೀತಿಸುವವರಾರೂ ಇರದ ಸ್ಮಶಾನವತ್ತಾದ ಆ ಮನೆಯಲ್ಲಿ ತನ್ನ ದುಃಖವನ್ನು ತೋಡಿಕೊಳ್ಳುವಷ್ಟು ಅನುವು ಕೂಡ ಅವನಿಗಲ್ಲಿರಲಿಲ್ಲ ಆ ಬಾಲಕನ ಉದಾಸ ಹಾಗು ಅಂತರ್ದಗ್ಧ ವೃತ್ತಿಯಿಂದ ಆ ಕಠಿಣ ಹೃದಯದ ಕೌಟುಂಬಿಕರೆಲ್ಲರಿಗೂ ದಯೆಯುಂಟಾಗದಿದ್ದರೂ, ಕೆಲದಿನದ ಮೇಲೆ ಜಗನ್ನಿಯಾಮಕನಾದ ಪರಮೇಶ್ವರನಿಗೆ ಅವನ ಬಗ್ಗೆ ದಯೆಯುಂಟಾದಂತೆ ತೋರಿತು. ಒಮ್ಮೆ ಶಿವರಾಯನ ಸೋದರಮಾವನಾದ ಶಂಭುರಾಯನು ಅಳಿಯನನ್ನು ನೋಡುವದಕ್ಕಾಗಿ ಹೋಗಿರಲು, ನೆರೆಹೊರೆಯವರಿಂದ ಆ ಶಿಶುವಿನ ದುಃಖವನ್ನೂ, ದುರ್ಗಾಂಬೆಯ ನಿಷ್ಠುರಾಚರಣೆಯನ್ನೂ ಕೇಳಿ ತಿಳಿದು, ಅವನನ್ನು ತನ್ನಲ್ಲಿಗೆ ಕರೆದೊಯ್ದನು. ಶಂಭುರಾಯನ ಪತ್ನಿಯಾದ ಸಾಧ್ವಿ ಯೋಗಾಂಬೆಯು ಅವನನ್ನು ಒಳ್ಳೇ ಸ್ನೇಹದಿಂದ ಪರಿಪಾಲಿಸತೊಡಗಿದಳು. ಅವಳು ಅವನನ್ನು ತನ್ನ ಹೊಟ್ಟೆಯ ಮಕ್ಕಳು-ಮರಿಗಳಿಗಿಂತ ಹೆಚ್ಚಾದ ಪ್ರೀತಿಯಿಂದ ಪ್ರೀತಿಸುತ್ತಿದ್ದಳು. ತನ್ನ ಹಡೆದ ತಾಯಿಯು ಹೊರತು

ಮತ್ತಾರೂ ತನ್ನನ್ನು ಪ್ರೀತಿಸುವವರಿಲ್ಲೆಂದು ಶಿವರಾಯನು ಅನುಭವದಿಂದ ನಿರ್ಧರಿಸಿದ್ದನು. ಆದರೆ ಸೋದರಮಾವನಲ್ಲಿಗೆ ಬಂದಂದಿನಿಂದ ಅವನ ಆ ಮನೋನಿರ್ಧಾರವು ತೊಲಗಿ ಅವನು ವಿಸ್ಮಯಾನ್ವಿತನಾದನು. ಒಮ್ಮೆ ಅವನ ಸೋದರಮಾವನ ಮಕ್ಕಳು ತಮ್ಮ ತಾಯಿಯು ತಮಗಿಂತಲೂ ಇವನನ್ನು ಹೆಚ್ಚು ಪ್ರೀತಿಸುವಳೆಂಬದಕ್ಕಾಗಿ ಹಿಂಸೆಪಡಿಸಲಾರಂಭಿಸಲು, ಆಗ ಯೋಗಾಂಬೆಯು ತನ್ನ ಮಕ್ಕಳನ್ನು ಕುರಿತು "ಮಕ್ಕಳಿರಾ, ಇವನಿಗೆ ತಾಯಿಯಿಲ್ಲ. ಇವನನ್ನು ಪ್ರೇಮದಿಂದ ನೋಡುವವರಾರೂ ಉಳಿದಿರುವದಿಲ್ಲ. ಇಂಥ ಅನಾಥನನ್ನು ನೀವು ಹಿಂಸಿಸುವದುಂಟೆ? ಇವನ ಸ್ಥಿತಿಯು ನಿಮಗೆ ಪ್ರಾಪ್ತವಾಗಿದ್ದರೆ, ನಿಮಗೆಷ್ಟು ಕಷ್ಟವಾಗುತ್ತಿತ್ತೆಂಬದನ್ನು ಮನಸ್ಸಿನಲ್ಲಿ ತಂದುಕೊಂಡರೆ, ನಿಮ್ಮ ಕೃತಿಯು ಖಂಡಿತವಾಗಿ ನಿಮಗೇ ನಿಂದ್ಯವಾಗಿ ತೋರಬಹುದು'' ಎಂದು ಬೋಧಿಸಿದಳು. ಆಗ ಶಿವರಾಯನು ಮನಸ್ಸಿನಲ್ಲಿ ನಮ್ಮ ಚಿಕ್ಕಿಯಾದ ದುರ್ಗಾಂಬೆಯೂ ಮನುಷ್ಯಳು; ಸೋದರತ್ತೆಯಾದ ಈ ಯೋಗಾಂಬೆಯೂ ಮನುಷ್ಯಳು; ಆದರೆ ಈ ಸೋದರತ್ತೆಯಂಥ ಹೆಣ್ಣುಮಕ್ಕಳು ಈ ಜಗತ್ತಿನಲ್ಲಿ ಮತ್ತಾರಾದರೂ ಇರಬಹುದೆ? ಇರಬಹುದು ಶಿವರಾಯಾ, ಇದ್ದೇ ಇರಬಹುದು. ಇಂಥ ಮಹನೀಯರಿರದಿದ್ದರೆ, ಈ ಸಂಸಾರವೇ ಸಾಗಲಿಕ್ಕಿಲ್ಲ. ಆದರೆ ಈ ಜಗತ್ತಿನ ಅಥವಾ ಜಗದ್ವಾಸಿಗಳ ದುರ್ಭಾಗ್ಯದಿಂದ ದುರ್ಗಾಂಬೆಯರಂಥ ಜನರೇ ಹೆಚ್ಚಾಗಿರುವರು.

ಸೋದರಮಾವನ ಮನೆಗೆ ಒಂದ ಕೆಲ ವರ್ಷಗಳಲ್ಲಿ ಶಿವರಾಯನು ಪ್ರವೇಶ ಪರೀಕ್ಷೆಯನ್ನು ಉತ್ತೀರ್ಣನಾಗಿ ತಿಂಗಳಿಗೆ ಹದಿನೈದು ರೂಪಾಯಿಗಳ ಶಿಷ್ಯವೃತ್ತಿಯನ್ನು ಪಡೆದನು. ಆಗ ಶಂಭುರಾಯನು ಅವನನ್ನು ಫರ್ಗ್ಯೂಸನ್ ಕಾಲೇಜದಲ್ಲಿ ಸೇರಿಸಿದನು. ಕಾಲೇಜದ ಫೀ-ಪುಸ್ತಕಗಳಿಗಾಗಿ ಖರ್ಚಾಗುವ ಹಣಹೋಗಲಾಗಿ ಉಳಿಯುವ ರೂಪಾಯಿಗಳನ್ನು ಶಿವರಾಯನು ಪ್ರತಿಮಾಸವೂ ತನ್ನ ಸೋದರತ್ತೆಯ ಕೈಯಲ್ಲಿ ತಂದುಕೊಡುತ್ತಿದ್ದನು. ಶಿವರಾಯನು ಬಹು ಹುಷಾರ ಹುಡುಗನಾದ್ದರಿಂದ ಪ್ರತಿಯೊಂದು ಪರೀಕ್ಷೆಯಲ್ಲಿ ಸಹಜವಾಗಿ ಪಾಸಾಗುತ್ತಿದ್ದನು. ಇಷ್ಟೇ ಅಲ್ಲ, ಪ್ರತಿಯೊಂದು ಸಾರೆ ಅವನಿಗೆ ಎಷ್ಟೋ ಇನಾಮುಗಳೂ, ಶಿಷ್ಯವೃತ್ತಿಗಳೂ ದೊರೆಯುತ್ತಿದ್ದವು.

ಎಂ. ಎ. ಪರೀಕ್ಷೆ ಪಾಸಾಗುವ ಮೊದಲು ಅವನ ಸೋದರತ್ತೆಯು ಅವನನ್ನು ಸಂಗಡ ಕರಕೊಂಡು ದೀವಳಿಗೆಯ ಹಬ್ಬಕ್ಕಾಗಿ ತನ್ನ ತವರು ಮನೆಯಾದ ಗೋಕಾವಿಗೆ ಹೋಗಿದ್ದಳು. ಅಲ್ಲಿ ಅವಳು ತನ್ನ ದೂರ ಸಂಬಂಧಿಕ ಅಣ್ಣನಾದ

ಸದಾಶಿವರಾಯನ ಹಿರಿಯ ಮಗಳಾದ ಕಮಲೆಯು ಕೂಡ ಶಿವರಾಯನ ಮದುವೆ ಮಾಡಬೇಕೆಂದು ಮನಸ್ಸಿನಲ್ಲಿ ನಿರ್ಧರಿಸಿಕೊಂಡಳು; ಮತ್ತು ಆ ಕನ್ಯೆಯನ್ನು ನೋಡಿ ನಿಶ್ಚಯ ಹಾಕಿ ಬರುವದಕ್ಕಾಗಿಯೇ ಒಮ್ಮೆ ಅವಳು ಶಿವರಾಯನೊಡನೆ ಸದಾಶಿವರಾಯರ ಮನೆಗೆ ಹೋದಳು. ಆ ಕಾಲಕ್ಕೆ ಕಮಲೆಯು ಹನ್ನೊಂದು ವರ್ಷದವಳಿದ್ದಳು. ಆ ಚಿಕ್ಕ ವಯಸ್ಸಿನಲ್ಲಿಯೇ ಶಿವರಾಯನನ್ನು ನೋಡಿ ಕಮಲೆಯಲ್ಲಿ ಪ್ರೇಮವುದ್ಭವಿಸಿತು. ಹೆಣ್ಣಿನ ತಂದೆ-ತಾಯಿಗಳೊಡನೆ ಆ ವಿಷಯಕ್ಕೆ ಮಾತನಾಡಿಕೊಂಡು ಯೋಗಾಂಬೆಯು ಶಿವರಾಯನನ್ನು ಕುರಿತು—"ತಮ್ಮಾ ನೀನು ವಿದ್ಯೆಗಲಿತು ಬುದ್ಧಿವಂತನಾಗಿರುವೆ. ನಿನ್ನ ಹಿತಾಹಿತಗಳು ನಿನಗೆ ಗೊತ್ತಾಗಹತ್ತಿರುತ್ತವೆ. ಆದರೂ ನೀನು ನನ್ನದೊಂದು ಮಾತನ್ನು ನಡಿಸಿಕೊಡಲೇ ಬೇಕು, ಎಂದು ಕೇಳಿಕೊಳ್ಳಲು,

"ನಿಮ್ಮ ಆಜ್ಞೆಯನ್ನು ನಡಿಸುವದೇ ನನ್ನ ಇತಿ ಕರ್ತವ್ಯವಾಗಿರಲು, ಆ ಬಗ್ಗೆ ನೀವು ನನ್ನನ್ನು ಕೇಳಿಕೊಳ್ಳಬೇಕೇ? " ಎಂದು ಶಿವರಾಯನು ಹೇಳಿದನು.

ನಂತರ ಅವಳು ಅವನಿಗೆ ಆ ವಿವಾಹದ ಸಂಗತಿಯನ್ನು ತಿಳಿಸಿದಳು. ಆಗ ತನ್ನನ್ನು ಹೊಟ್ಟೆಯ ಮಕ್ಕಳಗಿಂತ ಹೆಚ್ಚಾಗಿ ಪ್ರೀತಿಸುವ ತನ್ನ ಸೋದರತ್ತೆಗೆ ಏನು ಉತ್ತರಕೊಡಬೇಕೆಂಬದು ಆ ವಿದುಷನಿಗೆ ತಿಳಿಯದಾಯಿತು. "ಮೌನಂ ಅರ್ಧಸಮ್ಮತಂ" ಎಂಬ ಭಾವದಿಂದಲೇ ಅವನು ತನ್ನ ಸಮ್ಮತಿಯನ್ನು ತೋರ್ಪಡಿಸಿದನು.

ಹ್ಯಾಗೇ ಆಗಲಿ ಶಿವರಾಯ-ಕಮಲೆಯರ ವಿವಾಹವು ಒಮ್ಮೆ ಗೊತ್ತಾಯಿತು. ಆ ಮಂಗಲ ಕಾರ್ಯವು ಮಾಘಮಾಸದಲ್ಲಿಯೇ ಗೊತ್ತಾದಂತೆ ನೆರವೇರಿತು. ವಿವಾಹವಾದ ತುಸ ದಿನಗಳಲ್ಲಿಯೇ ಶಿವರಾಯನು ಎಂ. ಎ. ಪರೀಕ್ಷೆಯಲ್ಲಿ ತೇರ್ಗಡೆಯಾದನು; ಹಾಗು ಅನಂತರ ಅವನು ಯಾವ ಉದ್ಯೋಗವನ್ನು ಕೈಕೊಂಡನೆಂಬದನ್ನು ನಮ್ಮ ವಾಚಕರು ಈ ಕಾದಂಬರಿಯೊಳಗಿನ ಮೊದಲನೇ ಪರಿಚ್ಛೇದದವಲೋಕನದಿಂದ ತಿಳಿದೇ ಇರುವರಾದ್ದರಿಂದ ಅದನ್ನು ಇಲ್ಲಿ ಪುನಃ ಹೇಳುವ ಗೋಜಿಗೆ ಹೋಗುವದಿಲ್ಲ.

ಸಾವಿತ್ರೀವ್ರತದ ಮುನ್ನಾದಿವಸ ಶಿವರಾಯನು ಪುಣೆಗೆ ಹೊರಡುವ ಮೊದಲು ಒಮ್ಮೆ ಕಾರಖಾನೆಗೆ ಹೋಗಿ ಬರಬೇಕೆಂದು ಯೋಚಿಸಿ ತನ್ನ ಬಂಗಲೆಯಿಂದ ಹೊರಬಿದ್ದನು. ಅವನು ಕಾರಖಾನೆಗೆ ಬಂದಾಗ ಕೆಲಸವು ಚನ್ನಾಗಿ ಸಾಗಿದ್ದನ್ನು ನೋಡಿ ಉಲ್ಲಸಿತನಾದನು. ಆಗ ರಾಮರಾಯನು ಅವನೆದುರಿಗೆ

ಬಂದು—ರಾಯರೇ, ಒಳ್ಳೇ ಸಮಯಕ್ಕೆ ಬಂದಿರಿ. ನಾಳಿನ ದಿನವು ಶುಭದಿವಸ ಇದೆ. ನಾಳೆಯೇ ಹರಳು-ಕಲ್ಲಿನ ಕಾರಖಾನೆಯ ಉದ್ಯೋಗಕ್ಕೆ ಆರಂಭಿಸೋಣ, ಎಂದು ಕೇಳಿದನು. "ನಾಳಿನವರೆಗೆ ನಾನು ಇಲ್ಲಿ ನಿಲ್ಲುವಹಾಗಿಲ್ಲ ಯಾಕಂದರೆ ನಾಳೆ ಬೆಳಗ್ಗೆ ಎಲ್ಲಿದ್ದರೂ ನಾನು ನನ್ನ ಹೆಂಡತಿ ಇದ್ದಲ್ಲಿಗೆ-ಪುಣೆಗೆ ಹೋಗಲೇ ಬೇಕಾಗಿರುತ್ತದೆ ಆದ್ದರಿಂದ ಇಂದೇ ಅದನ್ನು ಆರಂಭಿಸಬಹುದೆ"ಂದು ಶಿವರಾಯನು ಸೂಚಿಸಿದನು.

ಆಗ ರಾಮರಾಯನು ಆಗಲೆ ಆ ಖನಿಯ ಕೆಲಸಕ್ಕೆ ಪ್ರಾರಂಭಿಸಿ, ಅದರೊಳಗಿಂದಹೊರಟ ಖನಿಜಗಳನ್ನು ಪರೀಕ್ಷಿಸಲಾರಂಭಿಸಿದನು. ಕೆಲಹೊತ್ತಿನಲ್ಲಿಯೇ ಅವನು ಆ ಮಿಶ್ರಖನಿಜದ ವಿಶ್ಲೇಷಣಮಾಡಿ ತೋರಿಸಿದನು. ಅದರಲ್ಲಿ ಎರಡು ಬೇರೆಬೇರೆ ಖನಿಜಗಳ ಮಿಶ್ರಣವಿತ್ತು. ಅವುಗಳಲ್ಲೊಂದು ರತ್ನವು ಬಹುಮೂಲ್ಯವುಳ್ಳದ್ದಾಗಿದ್ದು, ಇನ್ನೊಂದು ಸಾಧಾರಣಪ್ರತಿಯ ಹರಳಾಗಿತ್ತು; ಆದರೆ ಆ ಅಮೂಲ್ಯ ರತ್ನದ ಅಂಶವೇ ಅದರಲ್ಲಿ ಹೆಚ್ಚಾಗಿದ್ದದರಿಂದ ರಾಮರಾಯನು ಶಿವರಾಯನನ್ನುದ್ದೇಶಿಸಿ,—"ತಾವು ಈ ಖನಿಯ ಕೆಲಸದಿಂದ ತುಸ ದಿನಗಳಲ್ಲಿಯೇ ಕೋಟ್ಯಾಧೀಶರಾಗುವಿರೆಂಬದಕ್ಕೆ ಸಂದೇಹವಿಲ್ಲ. ಈ ವರ್ಷ ಪೂರ್ತೈಸುವಷ್ಟರಲ್ಲಿ ತಮಗೆ ಇದರಿಂದ ಇಪ್ಪತ್ತೈದು ಲಕ್ಷರೂಪಾಯಿಗಳ ಉಳಿತಾಯವು ಖಂಡಿತವಾಗಿ ಆಗುವದು." ಎಂದು ಹೇಳಿದನು. ಇಂಜನೀಯರ ರಾಮರಾಯನ ಕೆಲಸದ ವಿಷಯವಾಗಿ ಶಿವರಾಯನು ಮೊದಲಿನಿಂದಲೂ ಒಳ್ಳೇ ನಂಬಿಕೆಯುಳ್ಳವನಾಗಿದ್ದನು. ಶಿವರಾಯನಾದರೂ ಭೂಗರ್ಭಶಾಸ್ತ್ರವನ್ನು ಕಲಿತು ಪಾರಂಗತನಾಗಿದ್ದನಾದ್ದರಿಂದ ಇಂದು ರಾಮರಾಯನು ಆ ಖನಿಯಲ್ಲಿ ಹೊರಟ ರತ್ನಗಳ ಬಗ್ಗೆ ಊಹಿಸಿದ ಸಂಗತಿಯು ಇವನಿಗೂ ನಿಜವಾಗಿಯೇ ತೋರಿತು. ಅದರಿಂದ ಅವನು ರಾಮರಾಯನಿಗೆ ಹೇಳಿದ್ದೇನಂದರೆ—"ರಾಮರಾಯಾ, ನನ್ನ ಈ ಸುದೈವಕ್ಕೆ ನೀನೇ ಮಾರ್ಗದರ್ಶಕನಾಗಿರುತ್ತೀಯಾದ್ದರಿಂದ ಇಂದಿನಿಂದ ನನ್ನ ಎಲ್ಲ ಖನಿಗಳ ಆದಾಯದ ಎಂಟನೇ ಭಾಗವನ್ನು ನಿನಗೆ ಕಾಣಿಕೆಯಾಗಿ ಕೊಡುವೆನು; ನಾನು ಇಂದು ಪುಣೆಗೆ ಹೊರಡುವೆನು. ಅಲ್ಲಿಯ ರೆಜಿಸ್ತ್ರರನಲ್ಲಿಯೇ ಈ ಬಗ್ಗೆ ಕಾಗದ ರೆಜಿಸ್ಟರ ಮಾಡಿಸಿ, ನಿನಗೆ ಕಳಿಸುವೆನು" ಎಂದು ಹೇಳಿದ ಶಿವರಾಯನ ಮಾತನ್ನು ಕೇಳಿ, ರಾಮರಾಯನು ಏನೂ ಉತ್ತರಕೊಡಲಾರದೆ, ಹುಚ್ಚನಂತೆ ಸುಮ್ಮನೆ ನಿಂತುಬಿಟ್ಟನು.

ಇಂದು ಶಿವರಾಯನು ಪುಣೆಗೆ ಹೊರಡುವ ತಯಾರಿಯಲ್ಲಿದ್ದನು. ಖನಿಗಳ ಪ್ರದೇಶದಿಂದ ನಾಗಪೂರ ರೇಲ್ವೇಸ್ಟೇಶನ್ನು ಹದಿನೆಂಟುಮೈಲು ದೂರವಿತ್ತು.

ಆದ್ದರಿಂದ ಸ್ಟೇಶನ್ನಿಗೆ ಕುದುರೆಯ ಬಂಡಿಯಲ್ಲಿ ಹೋಗಬೇಕಾಗುತ್ತಿತ್ತು. ಅವನು ಇಂದು ಮಧ್ಯಾಹ್ನ ಎರಡು ಗಂಟೆಗೆ ಹೊರಡಬೇಕೆಂದು ಮೊದಲೇ ಗೊತ್ತಾಗಿತ್ತು. ಆದರೆಬೆಳಿಗ್ಗೆ ಎಂಟು ಗಂಟೆಯ ಸಮಯಕ್ಕೆ ಪುಣೆಯಿಂದ ರಾಮಚಂದ್ರರಾಯನಿಂದ ಕಮಲೆಯ ವಿಷಯದ ಕಲಂಕಿತ ಪತ್ರವುಬಂದು ಅವನ ಹಸ್ತಗತವಾಯಿತು. ಆ ಪತ್ರವನ್ನು ಓದಿದಕೂಡಲೆ ಅವನ ಅಂತರಿಕ ಹುರುಪೆಲ್ಲ ಮಾಯವಾಗಿ ಅವನುಕೇವಲ ಮೂರ್ಖನಂತೆ ಸ್ತಂಭಿತನಾದನು. ಅವನಲ್ಲುಂಟಾದ ದಾರುಣ ಇಾತಿಯಿಂದ ಅವನ ಕೈಕಾಲುಗಳೊಳಗಿನ ಶಕ್ತಿಯು ಕೂಡ ಲೋಪವಾಗಲು, ಅವನು ಒಮ್ಮಿಲೆ ನೆಲಕ್ಕೆ ದೊಪ್ಪೆಂದು ಕುಳಿತನು. ತಾನು ಜಾಗೃತನಾಗಿರುವೆನೋ, ಸ್ವಪ್ನಾವಸ್ಥೆಯಲ್ಲಿರುವೆನೋ ಎಂಬದಾವದನ್ನೂ ಅರಿಯದೆ ಚಿತ್ರದೊಳಗಿನ ಗೊಂಬೆಯಂತೆ ಅವನು ಆ ಕಲಂಕಿತಪತ್ರದ ಕಡೆಗೆ ಒಂದೇಸವನೆ ನೋಡಹತ್ತಿದನು. ಎಷ್ಟೋ ಹೊತ್ತಿನ ಮೇಲೆ ನೂರಾರು ಚೇಳುಗಳು ಒಮ್ಮೆಲೆ ಕಚ್ಚಿದಾಗ ಮನುಷ್ಯನು ಹೌಹಾರಿ ನಿಟ್ಟುಸಿರುಗರೆಯುವಂತೆ ಅವನೊಂದು ನಿಟ್ಟುಸಿರುಗರೆದನು. ನಂತರ ಅವನು ಪಿಶಾಚಿ ಹಿಡಿದವನಂತೆ ತಟ್ಟನೆ ಎದ್ದು ನಿಂತು, ಆ ಪತ್ರವನ್ನು ಮತ್ತೊಮ್ಮೆ ಓದಿಮುಗಿಸಿದನು. ಆದರಿಂದ ಅವನ ವೃತ್ತಿಯು ಇನ್ನಷ್ಟು ಅಸ್ಥಿರವಾಯಿತು. ಆಗ ಅವನು ಆ ಪತ್ರವನ್ನು ಹಿಡಿದುಕೊಂಡು ಇತ್ತಿಂದ ಅತ್ತ ಅತ್ತಿಂದ ಇತ್ತ ಹೀಗೆ ತನ್ನ ಬೈಠಕ ಕೋಣೆಯಲ್ಲಿ ತಿರುಗಾಡಹತ್ತೊಡಗಿದನು. ಕೆಲಕಾಲ ಕಳೆದ ಬಳಿಕ ಅವನ ಮನಸ್ಸಿಗೆ ಅಲ್ಪ-ಸ್ವಲ್ಪ ಸ್ವಾಸ್ಥ್ಯವುಂಟಾಗಲು ಅವನು ಪುನಃ ಆ ಪತ್ರವನ್ನೋದಿ ಬಳಿಕ ಒಂದು ಆರಾಮ ಖುರ್ಚಿಯಮೇಲೆ ಬಿದ್ದನು. ನಂತರ ಅವನು ತನ್ನೊಳಗೆ ತಾನೇ ಹೀಗೆ ವಿಚಾರಿಸಹತ್ತಿದನು:—ಮನಸ್ಸು ಎಂದೂ ಸುಳ್ಳು ಸಂದೇಹವನ್ನು ಮಾಡುವದಿಲ್ಲ. ಕಮಲೆಯು, ನನ್ನ ಪ್ರೀತಿಯ— ಆದರದ ಕಮಲೆಯು, ನನ್ನ ಹೃದಯದ ಹಾರವು, ಅಂತರಂಗದ ಸುಖವು, ಸುಖದ ಶಾಂತಿಯು, ಸಂಸಾರದ ಬಂಧನವು, ಕಣ್ಣಿನ ಆನಂದವು, ಜೀವನದ ಆಧಾರವಾದ ಆ ನನ್ನ ಕಮಲೆಯು ಎಷ್ಟು ತುಚ್ಛಳಾಗಿರುವಳು? ಎಂಥ ಭಯಂಕರ ಜ್ವಾಲೆಯಾಗಿರುವಳಲ್ಲ! ಈ ಪತ್ರದ ಸಂಗತಿಯು ಸತ್ಯವಾಗಿರಬಹುದೇ? ಛೇ, ಛೇ, ಇದು ತೀರಸುಳ್ಳು. ಅಲ್ಲ-ಅಲ್ಲ ಸತ್ಯವು; ಇದು ಸುಳ್ಳಲ್ಲ. ಈ ವಿಷಯವಾಗಿ ನನ್ನ ಮನಸ್ಸಿನಲ್ಲಿ ಈ ಮೊದಲೇ ಸಂದೇಹವುಂಟಾಗಿತ್ತು. ಅವಳ ಆ ನಗೆಯನ್ನು ನೋಡಿ ನನ್ನ ಮನಸ್ಸಿಗೆ ಆಗಲೆ ಸಂಶಯವುಂಟಾಗಿತ್ತು. ಆ ಪ್ರೇಮದ ನಗೆಯನ್ನು ನಾನು ಅಂದೇ ತಿಳಕೊಳ್ಳಲಿಲ್ಲ. ಆಗ್ಗೆ ಉಂಟಾದ ಮನಸ್ಸಿನ ಸಂಶಯವನ್ನು ಹೋಗಲಾಡಿಸುವದ

ಕ್ಕಾಗಿ ಎಷ್ಟೋ ಪ್ರಯತ್ನಿಸಿದೆನು. ಆದರೂ ಅದು ನನ್ನಿಂದ ಸಾಧ್ಯವಾಗಲಿಲ್ಲ. ಮಾತು-ಕಥೆಗಳಲ್ಲಿ ನಾನು ಆ ನನ್ನ ಸಂಶಯುವನ್ನು ವ್ಯಕ್ತಗೊಳಿಸದಿದ್ದರೂ, ಅದು ನನ್ನ ಮನದಲ್ಲಿ ಏಕೋಪ್ರಕಾರವಾಗಿ ಮನೆಮಾಡಿಕೊಂಡಿರುತ್ತದೆ. ಮನಸ್ಸಿನ ಸಂದೇಹವು ಎಂದೂ ಅಕಾರಣವಾಗಿರುವದಿಲ್ಲವೆಂಬ ವಿಶ್ವಾಸವುಂಟಾದರೂ ನಾನು ಅವಳನ್ನು ನನ್ನ ಮನೋಚಕ್ಷುಗಳಿಗೆ ಮರೆಮಾಡಿಬಿಡುತ್ತಿದ್ದೆನು. ಥೂ, ಆ ಆ ನನ್ನ ಅಂಧಪ್ರೇಮವೇ ಈ ಅನರ್ಥಕ್ಕೆ ಕಾರಣವಾಯಿತು. ಸ್ತ್ರೀಯರು ಇಷ್ಟು ನಿಂದ್ಯರಿರುತ್ತಾರೆಂಬದು ಇಂದೇ ನನಗೆ ಗೊತ್ತಾಯಿತು. ಅವಳು ಇಷ್ಟು ನೀಚ ಳಾಗಿದ್ದರೂ ನಾನು ಅವಳನ್ನು ಎಂದೂ ಮರೆಯುವಂತಿಲ್ಲ. ಅವಳ ವಿಷಯವಾಗಿ ನನ್ನಲ್ಲಿ ಇನ್ನೂ ಕ್ರೋಧವುಂಟಾಗಲೊಲ್ಲದು. ಥೂ, ನನ್ನ ಬಾಳಿಗೆ ಬೆಂಕೀ ಬಡೆಯಲಿ!

ಶಿವರಾಯನು ಪುನಃ ಎದ್ದು ಮೊದಲಿನಂತೆ ಅಡ್ಡಾಡಹತ್ತಿದನು. ಇಷ್ಟ ರಲ್ಲಿ ಗಡಿಯಾರದಲ್ಲಿ ಠಣ್ ಠಣ್ ಎಂದು ಹನ್ನೆರಡು ಬಡಿಯಿತು. "ಈ ಗಡಿಯಾ ರವು ನಿನ್ನೆ ಹೇಗೆ ಹನ್ನೆರಡು ಬಡಿದಿತ್ತೋ ಇಂದೂ ಅದೇ ಪ್ರಕಾರ ಬಡಿಯುತ್ತದೆ. ನಿನ್ನೆ ಹೇಗೆ ಸೂರ್ಯೋದಯವಾಗಿತ್ತೋ ಹಾಗೆಯೇ ಈ ದಿನವೂ ಸೂರ್ಯನುದ ಯಿಸಿದ್ದಾನೆ. ಗಿಡ, ಬಳ್ಳಿ, ಮನೆ, ದಾರಿ ಮುಂತಾದವುಗಳೆಲ್ಲ ನಿನ್ನೆ ಹೇಗೆ ಇದ್ದವೋ ಹಾಗೆಯೇ ಈ ದಿನವೂ ಇರುತ್ತವೆ. ಅವುಗಳಲ್ಲೇನೂ ವ್ಯತ್ಯಸವಾಗಿಲ್ಲ. ನಿನ್ನಿನ ನಾನು ಈ ದಿನವೂ ಇದ್ದೇನೆ; ಆದರೆ ಇಂದಿನ ನಾನು ನಿನ್ನಿನ ನನಗಿಂತ ಎಷ್ಟು ಭಿನ್ನನಾಗಿರುವೆನು? ನಿನ್ನಿನ ಆ ಶಾಂತಸ್ವಭಾವದ ನಾನು ಇಂದು ಬೆಳಗಿನ ಎಂಟು ಗಂಟೆಗೆ ಲಯಿಸಿಹೋಗಿ, ಈಗಿದ್ದ ನಾನು ನಿನ್ನಿನ ನನ್ನ ಪ್ರೇತಮೂರ್ತಿಯಾ ಗಿರುವೆನು. ಯಾವದೊಂದು ವಸ್ತುವು ಅತ್ಯಂತಸುಂದರವಿದ್ದಂತೆ ಅದು ಕುತ್ಸಿತವೇಕಿ ರಬೇಕು? ಜಗತ್ತು ಸುಂದರವಾಗಿದೆ, ಪ್ರಕೃತಿಯು ಸುಂದರವು, ಪ್ರಕೃತಿಯ ಕಾರ್ಯವೂ ಸುಂದರವು, ರಮಣಿಯು ಸುಂದರಳು; ಆದರೆ ಸುಂದರದ ಅಂತರಂಗ ದಲ್ಲಿಇಷ್ಟು ಕುತ್ಸಿತವೆ? ಏನು ಮಾಡಲಿ? ಮಾಡತಕ್ಕಡ್ಡಾದರೂ ಏನಿದೆ? ಏನೂ ಇರು ವದಿಲ್ಲ. ಎಷ್ಟೋ ಜನರು ಕ್ರೋಧದಿಂದ ಉನ್ಮಾದರಾಗುತ್ತಾರೆಂದು ಕೇಳಿದ್ದೇನೆ; ಆದರೆ ನನಗಿದೆಂಥ ಸಿಟ್ಟುಪ್ರಾಪ್ತವಾಗಿದೆ? ಇದಕ್ಕೇ ಸಿಟ್ಟು ಎಂದೆನ್ನುತ್ತಾರೋ? ಅಲ್ಲ-ಅಲ್ಲ ಇದು ಸಿಟ್ಟಲ್ಲ. ಸಿಟ್ಟಿಗೊಳಗಾದ ಮನುಷ್ಯರು ನರಹತ್ಯಮಾಡಿದ್ದನ್ನು ಸಹ ನಾನು ನೋಡಿರುವೆನು. ನನಗೆ ಕ್ರೋಧವುಂಟಾಗಿಲ್ಲ; ಹಾಗಾದರೇನಾಗಿರು ತ್ತದೆ? ಇದಕ್ಕೆ ಹೆಸರು-ದೆಸೆಗಳೇ ಇರುವದಿಲ್ಲ. ಈ ನನ್ನ ಸ್ಥಿತಿಗೆ ಮೇರೆ ಇಲ್ಲ;

ನಿರ್ದೇಶವಿಲ್ಲ; ಆದ್ದರಿಂದ ಇದು ಭಯಂಕರ ಸ್ಥಿತಿಯು. ಇದು ಅತಿ ಕಠಿಣ..."
ಎಂದು ಶಿವರಾಯನು ತನ್ನಷ್ಟಕ್ಕೆ ತಾನೇ ಮಾತನಾಡುತ್ತಿರಲು, ಹೊರಗಿನಿಂದ ಅವನ ಭೃತ್ಯನು "ಹುಜೂರ, ಹುಜೂರ" ಎಂದು ಕೂಗುತ್ತ ಬರಲು, ಶಿವರಾಯನು ಪ್ರಕೃತಿಸ್ಥನಾಗಿ—"ಏಕೆ, ಏನು ಬೇಕಾಗಿದೆ?" ಎಂದು ಕೇಳಿದನು.

ಆಗ ಶಿಪಾಯಿಯು—ಹುಜೂರ, ಅಡಿಗೆಯವನು ಅಡಿಗೆ ಮಾಡಿಟ್ಟು ಎರಡು ತಾಸಿನಿಂದ ತಮ್ಮ ದಾರೀ ಕಾಯುತ್ತಿರುವನು. ತಾವು ಸ್ನಾನಕ್ಕೆ ಬಂದರೆ, ಒಳಿತಾಗುವದು.. ಗಾಡಿಗೆ ಹೋಗಲಿಕ್ಕೆ ತಡವಾಗುವದಿಲ್ಲವೆ? ಎಂದು ವಿನಯದಿಂದ ಕೇಳಿಕೊಳ್ಳಲು, "ಒಳ್ಳೇದು, ನೀರು ತರಹೇಳು" ಎಂದು ನುಡಿದು, ಶಿವರಾಯನು ಸ್ನಾನಕ್ಕಾಗಿ ಬಟ್ಟೆಗಳನ್ನು ಬಿಚ್ಚಿದನು. ಕೆಲಹೊತ್ತಿನಲ್ಲಿ ಸ್ನಾನ-ಊಟಗಳೂ ಮುಗಿದವು. ಆದರೆ ಅವನ ತಲೆಯೇ ಅಂದು ಸ್ವಾಧೀನವಿರದ್ದರಿಂದ ತಾನು ಏನು ಮಾಡುತ್ತಿರುವೆನೆಂಬುದರ ಅರಿವೇ ಅವನಿಗಿದ್ದಿಲ್ಲ. ಊಟವಾದ ಬಳಿಕ ಅವನು ಪುನಃ ಆ ತನ್ನ ಬೈಠಕಿಯ ಕೋಣೆಗೆ ಬಂದನು. ಪುನಃ ಅವನ ಮನೋವಿಕಾರಕ್ಕೆ ಚಾಲನೆಯುಂಟಾಗಿ ಅವನು ಮತ್ತೆ ತನ್ನೊಳು ಮಾತಾಡಹತ್ತಿದನು:—ಇನ್ನು ಮನೆಗೆ ಹೋಗುವದರಲ್ಲಿ ಅರ್ಥವಿಲ್ಲ. ಅವಳನ್ನು ಇನ್ನು ಭೇಟಿಯಾಗುವದೂ ಇಲ್ಲ. ಅವಳನ್ನು ತಿರಸ್ಕರಿಸುವದೂ ಇಲ್ಲ. ಅವಳು ಬಹು ಮೋಸಗಾತಿಯು. ಆ ಮೋಸಗಾರಳಿಗೆ ನನ್ನಿಂದ ಇನ್ನು ಸೌಖ್ಯವುಂಟಾಗಲಾರದು. ನಾನು ಅವಳ ಸುಖಕ್ಕೆ ಕಂಟಕಸ್ವರೂಪನಾಗಿರುತ್ತೇನೆ. ಈ ಮುಳ್ಳನ್ನು ದೂರ ಬಿಸುಟುವದೇ ಹಿತವು. ಅವಳು ಸುಖವಾಗಿರಲಿ. ಅವಳ ವಿಷಯಕವಾದ ನನ್ನಲ್ಲಿಯ ಪ್ರೇಮವು ಈ ದೇಹ ಬೀಳುವವರೆಗೂ ಕಡಿಮೆಯಾಗುವಂತಿಲ್ಲ; ಆದರೆ ನಾನು ಅವಳಿಗಿನ್ನೆಂದೂ ಭೇಟಿಯಾಗಲಿಕ್ಕಿಲ್ಲ. ನನ್ನ ಎಲ್ಲ ಸೌಖ್ಯಗಳ ಅಂತವಾಗಿರುತ್ತದೆ; ನನ್ನ ಎಲ್ಲ ಕಾರ್ಯಗಳೂ ಅದರಂತೆಯೇ ನಿಶ್ಶೇಷವಾಗಿರುತ್ತವೆ. ಹೋಗುವೆನು.—ಹೋಗುವೆನು—ಎಲ್ಲಿಗೆ ಹೊರಟಿರುವೆನು? ಎಲ್ಲಿಗೆ ಹೋದರೆ ಈ ದಾರುಣ ಚಿಂತೆಯಿಂದ ಮುಕ್ತನಾದೇನು? ನಾನು ಈ ಚಿಂತೆಯಿಂದ ಬಿಡುಗಡೆ ಹೊಂದಬಹುದೇ! ಯಾರು ಬಲ್ಲರು? ಆದರೆ ಈಗ ಹೊರಡುವದೆಲ್ಲಿಗೆ? ಅದನ್ನು ಪದಿನೆಂಟು ಮೈಲಿನ ಕುದುರೆಯ ಗಾಡಿಯ ಪ್ರವಾಸದಲ್ಲಿ ನಿಶ್ಚಯಿಸುವೆನು. ಇನ್ನು ನನ್ನ ಕಮಲೆಗೆ ಈ ಕಲಂಕಿತಪತ್ರವನ್ನು ಕಳಿಸಲಿಕ್ಕೇಬೇಕು. ಇದರೊಡನೆ ನಾನೂ ಒಂದು ಪತ್ರವನ್ನು ಬರೆಯಲೇನು? ಮತ್ತೆ ಆ ನೀಚಳಿಗೆ ಪತ್ರ ಬರೆಯಬೇಕೇ? ಇಲ್ಲ, ಇಲ್ಲ; ಬರೆಯುವದಿಲ್ಲ. ಇನ್ನು ಅವಳಿಗೆ ಏನೊಂದನ್ನೂ ಬರೆಯುವದಿಲ್ಲ; ಆದರೆ ಅವ

ಳಿಗೆ ನನ್ನ ಸಾಂಕಲ್ಪಿಕ ಸಂಗತಿಯು ತಿಳಿಯದಿದ್ದರೆ, ಅವಳು ನಿಶ್ಚಿಂತಳಾಗುವ ಬಗೆ ಹೇಗೆ? ಆದ್ದರಿಂದ ಅವಳಿಗೊಂದು ಪತ್ರವನ್ನು ಬರೆಯಲೇಬೇಕು; ಹಾಗು ನಾನು ಇನ್ನೆಂದೂ ನಿನಗೆ ಭೇಟಿಯಾಗಲಿಕ್ಕಿಲ್ಲೆಂಬ ಶುಭವಾರ್ತೆಯನ್ನು ಆಕೆಗೆ ತಿಳಿಸಲೇ ಬೇಕು'' ಎಂದು ಯೋಚಿಸಿ, ಅವನು ಒಂದು ಚೀಟಿಯನ್ನು ಬರೆದು ಆ ಕಲಂಕಿತ ಪತ್ರಕ್ಕೆ ಅದನ್ನು ಟಾಚಣಿಯಿಂದ ಜೋಡಿಸಿ, ಆ ಪತ್ರದ್ವಯಗಳನ್ನು ಆಗಲಿ ಕಮಲೆಯ ಕಡೆಗೆ ರವಾನಿಸಿದನು. ಆ ಎರಡೂ ಪತ್ರಗಳ ಸಂಗತಿಯನ್ನು ನಮ್ಮ ವಾಚಕರು ಈ ಮೊದಲೇ ತಿಳಕೊಂಡಿರುತ್ತಾರೆ.

ಎರಡು ಗಂಟೆ ಹೊಡಿಯುತ್ತಲೆ ಶಿವರಾಯನು ಆ ಖಣಿಯ ಪ್ರದೇಶದಿಂದ ಹೊರಹೊರಟನು. ಸ್ಟೇಶನ್ನಿನ ಕಡೆಗೆ ಹೋಗುತ್ತಿದ್ದ ತನ್ನ ಕುದುರೆಯ ಗಾಡಿಯನ್ನು ಅತ್ತ ಹೋಗಗೊಡದೆ ನಾಗಪೂರ ಊರೊಳಗೆ ಹೊಡೆಯಹೇಳಿದನು. ಆ ಊರಲ್ಲಿ ಅವನ ವಿಶ್ವಾಸಕ್ಕೆ ಪಾತ್ರನಾದ ರಘುನಾಥರಾಯನೆಂಬೊಬ್ಬ ಸಾಲಿಸಿಟರನಿದ್ದನು. ಗಾಡಿಯನ್ನು ನೆಟ್ಟಗೆ ಅವನ ಬಿದಾರಕ್ಕೆ ಹೊಡೆಸಿದನು. ತಲೆಬಾಗಿಲ ಬಳಿಯಲ್ಲಿಳಿದ ಕೂಡಲೆ ರಘುನಾಥಪಂತನು ಬಂದು ಶಿವರಾಯನನ್ನು ಚನ್ನಾಗಿ ಸ್ವಾಗತ ಮಾಡಿದನು. ನಂತರ ಶಿವರಾಯನು ತನಗೆ ಬೇಕಾದ ಎರಡು ಮೂರು ದಸ್ತಗಳು ರಾಗಿಂದೀಗಲೆ ತಯಾರಮಾಡಿಕೊಡಬೇಕೆಂದೂ, ಅವು ಇಂದೇ ರಜಿಸ್ಟರಾಗಿ ಅವುಗಳಲ್ಲಿರಡನ್ನು ಪುಣೆಯಲ್ಲಿರುವ ಸದಾಶಿವರಾಯರಿಗೆ ಕಳಿಸಿಕೊಡಬೇಕೆಂದೂ ಒಂದನ್ನು ತನ್ನ ಖಣಿಯ ಚೀಫ ಇಂಜನಿಯರನಾದ ರಾಮರಾಯನಿಗೆ ಕಳಿಸಬೇಕೆಂದೂ ಸೂಚಿಸಿದನು. ''ಒಡೆಯನ ಹೇಳಿಕೆ, ಬಡಿಗೆಯ ಮಾಟ'' ವೆಂಬಂತೆ ರಘುನಾಥಪಂತನು ಶಿವರಾಯನ ಮನೋದಯದ ಪ್ರಕಾರ ಆ ಕೂಡಲೆ ದಸ್ತಗಳನ್ನು ತಯಾರಿಸಿ, ಮುಂದಿನ ವ್ಯವಸ್ಥೆಗಾಗಿ ಅವುಗಳನ್ನು ತನ್ನ ಫರ್ಮಿನ ಮ್ಯಾನೇಜರನ ಕಡೆಗೆ ಕೊಟ್ಟನು. ಅವನಾದರೂ ಶಿವರಾಯನ ಉದಾರತ್ವಕ್ಕೆ ಕೇವಲ ಖಣಿಯಾದವನಿದ್ದದರಿಂದ ಅವನ ಕೆಲಸವನ್ನು ಆ ಕೂಡಲೆ ತೀರಿಸಿದನು.

ನಂತರ ಶಿವರಾಯನು ಅವರಿಗೆ ಕೊಡಬೇಕಾಗಿದ್ದ ದಕ್ಷಿಣಾರೂಪದ್ರವ್ಯವನ್ನು ಕೈಪಡಿಲುಬಿಟ್ಟು ಮುಟ್ಟಿಸಿ, ಸ್ಟೇಶನ್ನಿಗೆ ನಡೆದನು. ಇಷ್ಟಾಗುವದರೊಳಗೆ ಸಂಜೆಯ ಆರು ಒಡೆದಿತ್ತು. ಶಿವರಾಯನು ಸ್ಟೇಶನ್ನಿಗೆ ಬಂದ ಕೂಡಲೆ ಬೊಂಬೈ ಮೇಲ್‌ಗಾಡಿಯು ಬಂದಿತು. ರಾಯರು ಪುಣೆಗೆ ಹೋಗುವವರಿದ್ದು, ಆ ಗಾಡಿಯು ಇನ್ನೊಂದು ಗಂಟೆಗೆ ಒರುವದಿರುವದರಿಂದ ಅವರಿಗೆ ತುಸ ವಿಶ್ರಾಂತಿಯನ್ನು ತಕ್ಕೊಳ್ಳಬಹುದೆಂದು ತಿಳಿದು ಶಿವರಾಯನ ಶಿಪಾಯಿಯು ಅವನ ಸಾಮಾನು

ಗಳನ್ನು ಫಸ್ಟ್‌ಕ್ಲಾಸ ವೇಟಿಂಗರೂಮಿನಲ್ಲಿಡಹತ್ತಿದನು. ಆದರೆ ಶಿವರಾಯನು ಪುಣೆಗೆ ಹೋಗುವ ತನ್ನ ಬೇತನ್ನು ಬದಲಿಸಿ, ಮುಂಬಯಿಗೆ ಹೋಗಬೇಕೆಂದು ನಿಶ್ಚಯಿಸಿ ಸ್ಟೇಶನಮಾಸ್ತರನಿಂದ ಒಂದನೇ ತರಗತಿಯ ಗಾಡಿಯ ಕೋಣೆಯೊಂದನ್ನು ರಿಝರ್ವ ಮಾಡಿಸಿದನು; ಹಾಗು ಅವನು ಅವಸರದಿಂದ ತನ್ನ ಸಾಮಾನನ್ನು ಅದರಲ್ಲಿಡಿಸುವದೊಂದೇ ತಡ, ಆ ಲೋಹಯಾನವು ಫಕ್ ಫಕ್ ಮಾಡುತ್ತ ಧಾವಿಸಲಾರಂಭಿಸಿತು.

ಆ ಹೊಗೆಬಂಡಿಯು ಎಷ್ಟೋ ಗ್ರಾಮ, ಪಟ್ಟಣ, ಪರ್ವತ, ಹೊಳೆ, ಅರಣ್ಯಗಳನ್ನು ದಾಟುತ್ತ ಅತಿವೇಗದಿಂದ ಓಡುತ್ತಿತ್ತು; ಮತ್ತು ಆ ಹೊಗೆಬಂಡಿಯ ಒಂದು ಚಿಕ್ಕ ಕೋಣೆಯಲ್ಲಿ ಒಂಟಿಗನಾಗಿ ಕುಳಿತಿದ್ದ ಶಿವರಾಯನ ಚಿಂತಾಕ್ರಾಂತ ಮನಸ್ಸಾದರೂ ಅದೇ ರೀತಿಯಾಗಿ ಧಾವಿಸುತ್ತಿತ್ತು. ನಿಯಮಿತ ಪಥವನ್ನು ಕ್ರಮಿಸಿದ ಮೇಲೆ ಆ ಮೇಲ್‌ಟ್ರೇನು ಟಪಾಲನ್ನು ಕೊಡ-ತಕ್ಕೊಳ್ಳಲಿಕ್ಕೂ, ದಾರಿಕಾರರನ್ನು ಏರ-ಇಳಿಸಲಿಕ್ಕೂ, ತನ್ನ ಆಹಾರ-ನೀರುಗಳಿಗೂ ತುಸ ಗತಿನಿರೋಧವಾಗುತ್ತಿತ್ತು; ಆದರೆ ಶಿವರಾಯನ ಮನಸ್ಸಿಗೆ ಯಾವ ತರದ ವಿರಾಮಕ್ಕೂ ಆಸ್ಪದವಿರಲಿಲ್ಲ. "ಸಂಸಾರವು ಈ ಬಗೆಯೇಕೆ? ಮನುಷ್ಯನ ಸ್ಥಿತಿಯು ಹೀಗೆಯೇ ಏನು? ಈ ಲೋಕದಲ್ಲಿ ಯಾರೂ ನಿಜವಾದ ಸುಖಿಗಳಿರುವದಿಲ್ಲವೆ? ಛೀ, ಅದು ಹೇಗೆ? ಈವರೆಗೆ ನಾನು ಅಖಂಡಸುಖಿಯಾಗಿದ್ದೆನು. ದೇವರು ನನಗೆ ಎಲ್ಲ ಸೌಖ್ಯಗಳನ್ನೂ ಕೊಟ್ಟಿದ್ದನು ವಿದ್ಯೆ, ದ್ರವ್ಯ, ಪ್ರೇಮಲಪತ್ನಿ ಮೊದಲಾದ ಸಾಂಸಾರಿಕರ ಎಲ್ಲ ಸುಖಸಾಧನಗಳೂ ನನಗೆ ಕೊಂಚವೂ ಲೋಪವಿಲ್ಲದಂತೆ ಲಭಿಸಿದ್ದವು. ಆದರೆ ನನ್ನ ದೈವದಲ್ಲಿ ಆ ಸುಖವನ್ನನುಭವಿಸುವದಿರುವದಿಲ್ಲ. ದೈವಬಲದಿಂದ ಎಷ್ಟೋ ಜನರು ಅಖಂಡಸುಖವನ್ನು ಹೊಂದುತ್ತಾರೆ; ಹಾಗು ಬೇರೆ ಎಷ್ಟೋ ಜನರ ಸೌಖ್ಯವನ್ನು ಆ ದುಷ್ಟದೈವವೇ ಮಣ್ಣುಗೂಡಿಸಿ, ಅವರನ್ನು ಕೊಂದುಬಿಡುತ್ತದೆ. ನಾನಾದರೂ ಆ ದೈವದುರ್ವಿಪಾಕದಿಂದ ಈಗ ಸತ್ತುಹೋಗಿರುವೆನು; ಆದರೆ ಇದು ಇಹಲೋಕದೊಳಗಿನ ದುಃಖ-ಕಷ್ಟಗಳನ್ನೂ, ಚಿಂತೆಯನ್ನೂ ಪರಿಹರಿಸತಕ್ಕ ಸಾವಾಗಿರುವದಿಲ್ಲಾದ್ದರಿಂದ ಈಗ ಸತ್ತು ಉಳಿದಿರುವ ನಾನು ಜೀವಚ್ಛವವೆಂದೇ ಹೇಳಬಹುದು. ಯಾವನೊಬ್ಬನು ಸತ್ತಮೇಲೆ ಅವನಿಗೆ ಈ ಲೋಕದೊಳಗಿನ ಸಂಬಂಧವೆಲ್ಲ ಕಡಿದುಹೋಗುತ್ತದಷ್ಟೇ? ಆದರೆ ನಾನು ಸತ್ತಿರದಿದ್ದರೂ ನನಗೆ ಇಹಲೋಕದೊಳಗಿನ ಸಂಬಂಧಗಳೆಲ್ಲ ಕಡಿದಂತೆಯೇ ಆಗಿರುತ್ತವೆ. ಈಗ ನಾನು ಎಲ್ಲಿಗೆ ಹೋಗಲಿ? ಈ ಅನಿವಾರಚಿಂತೆಯು ಕೈಯೊಳಗಿಂದ ಪಾರಾಗಲಿಕ್ಕೆ

ಯಾವ ಉಪಾಯವನ್ನು ಕೈಕೊಳ್ಳಲಿ? ನಾನು ಈ ಚಿಂತೆಯಿಂದ ಮುಕ್ತನಾಗಬಹುದೊ? ಇಲ್ಲ, ಎಂದೂ ಇಲ್ಲ; ಈ ದುಶ್ಚಿಂತೆಯಿಂದ ನಾನೆಂದೂ ಮುಕ್ತನಾಗಲಿಕ್ಕಿಲ್ಲ. ಈ ಅಸಹ್ಯ ಜೀವನದಲ್ಲಿದ್ದು ಈ ಅನಿವಾರ ಚಿಂತೆಯಲ್ಲಿ ಎಷ್ಟು ದಿವಸಗಳ ವರೆಗೆ ಮುಳುಗಿರಬೇಕೋ ಯಾರು ಬಲ್ಲರು? ಪ್ರೇಮ-ಪ್ರೇಮ-ಪ್ರೇಮವೆಂದರೇನು? ಪ್ರೇಮವೆಂಬುವದು ಅನಿವಾರವಾದ ಚಿಂತೆಯೇ ಸರಿ; ಆದರೆ ಲೋಕದವರು ಪ್ರೇಮವೇ ಶ್ರೇಷ್ಠವೆಂದು ಯಾಕೆ ಅನ್ನುತ್ತಿರುವರು? ನಾನೂ ಈವರೆಗೆ ಅದಕ್ಕೇ ಶ್ರೇಷ್ಠವೆಂದೆನ್ನುತ್ತಿದ್ದೆನಲ್ಲ? ಆ ನನ್ನ ಪ್ರೇಮಲಾಲಸೆಯೇ ನನ್ನನ್ನೀಗ ಈ ದುರ್ನಿವಾರಕ ಚಿಂತೆಗೀಡು ಮಾಡಿತಲ್ಲ! ಪ್ರೇಮವು ಸುಖದ ಜಾಗ್ರತಸ್ವಪ್ನವು; ನಿದ್ರೆಯೊಳಗಿನ ಸ್ವಪ್ನವು, ನಿದ್ರಾಭಂಗವಾದ ಕೂಡಲೆ ಮಾಯವಾಗುವಂತೆ ಆ ಸ್ವಪ್ನಾವಸ್ಥೆಯೊಳಗಿನ ಸುಖ-ದುಃಖಗಳೆಲ್ಲವೂ ನಿರ್ನಾಶವಾಗಿ ಹೋಗುವವು; ಆದರೆ ಜಾಗ್ರತಸ್ವಪ್ನವು ಭಂಗವಾದರೆ, ಆ ಪ್ರೇಮವು ಲೋಪವಾಗದೆ ಇನ್ನಿಷ್ಟು ಪ್ರಬಲವಾಗುತ್ತದಂತೆ. ಅದರಂತೆ ಈಗ ನನ್ನೀಜಾಗ್ರತಸ್ವಪ್ನವು ಭಂಗವಾಗಿರುವದು. ಮತ್ತು ಅದರಿಂದಲೇ ನನ್ನ ಸ್ಥಿತಿಯು ಈ ಮನೆಗೆ ಬಂದಿರುತ್ತದೆ ............

ಹೀಗೆಂದು ನುಡಿದು ಶಿವರಾಯನು ಆ ಗಾಡಿಯೊಳಗಿನ ನಿಲುವುಗನ್ನಡಿಯಲ್ಲಿ ತನ್ನ ಮುಖವನ್ನು ನೋಡಿದನು. ಮೊದಮೊದಲು ಅವನ ಮೋರೆಯು ಗುರುತು ಅವನಿಗೇ ಹತ್ತದಾಯಿತು. ಯಾವ ಶಿವರಾಯನು ಸದಾ ಹಾಸ್ಯಮುಖವುಳ್ಳವನೂ ತೇಜಃಪುಂಜನೂ ಆಗಿ ಕಾಣುತ್ತಿದ್ದನೋ, ಅದೇ ಅವನು ಒಂದೇಒಂದು ದಿವಸದ ಭಯಂಕರ ಚಿಂತೆಯಿಂದ ವಿದ್ರೂಪನಾಗಿ, ಅವನ ಮುಖವು ಕಪ್ಪಿಟ್ಟಿತು. ಅವನ ಮೋರೆಯ ಮೇಲೆ ಅಂತರಂಗದ ಚಿಂತೆಯೆಂಬ ಕಾಲಕೂಟವು ಸ್ಪಷ್ಟವಾಗಿ ಕಾಣಿಸುತ್ತಿತ್ತು!

## ಏಳನೆಯ ಪರಿಚ್ಛೇದ

## ವಿಮಲೆಯ ಪೂರ್ವವೃತ್ತ.

ಅಮೃತರಾಯನು ಮೂರು ತಿಂಗಳ ಅಜಾರಿ ರಜೆಯನ್ನು ತಕ್ಕೊಂಡು, ಹವೆ ಬದಲಿಸುವದಕ್ಕಾಗಿ ವಾರಣಾಸಿಗೆ ಬಂದಿದ್ದನು. ಅವನು ಗಂಗಾ ತೀರದ ಒಂದು ಮನೆಯನ್ನು ಬಾಡಿಗೆ ಹಿಡಿದಿದ್ದನು. ಅವನ ಕೂಡ ಅವನ ಹೆಂಡತಿಯಾದ ಹೇಮಾವತಿ, ಅವಳ ಚಿಕ್ಕ ತಮ್ಮನಾದ ಮುರಾರಿ ಹಾಗು ದಾಸಿಯಾದ ನಾಗಮ್ಮ ಇಷ್ಟೇ ಜನರಿದ್ದರು. ನಾಗಮ್ಮನು ಹೇಮಾವತಿ ಹಾಗು ಮುರಾರಿಯನ್ನು ಚಿಕ್ಕಂದಿನಿಂದ ಸಲುಹಿದವಳಾದ್ದರಿಂದ, ಅವಳು ಆ ಮನೆಯ ದಾಸಿಯಾಗಿದ್ದರೂ ಅವಳೇ ನಿಜವಾದ ಯಜಮಾನತಿಯಂತೆ ಇದ್ದಳು.

ಅಮೃತರಾಯನು ಇಂಜನಿಯರನು; ಸರಕಾರದಲ್ಲಿ ತಿಂಗಳಿಗೆ ಏಳು ನೂರು ರೂಪಾಯಿ ತಲಬಿನ ಚಾಕರಿಯಿತ್ತು. ಆದರೆ ''ಅಸಾರಃ ಖಲು ಸಂಸಾರೇ | ಸಾರಂ ಶ್ವಶುರ ಮಂದಿರಂ'' ಎಂಬ ವಾಕ್ಯದ ಮರ್ಮವನ್ನು ಚೆನ್ನಾಗಿ ಪರಿಗ್ರಹಿಸಿ, ಅವನು ಶ್ವಶುರಾಲಯದಲ್ಲಿಯೇ ವಾಸವಾಗಿದ್ದನು. ಯಾಕೆಂದರೆ ಸೃಷ್ಟಿಕರ್ತನಾದ ನಾರಾಯಣನು ಬೇರೆ ಎಲ್ಲ ಸ್ಥಾನಗಳನ್ನು ಪರಿತ್ಯಜಿಸಿ ಹೆಂಡತಿಯ ತಂದೆಯ ಮನೆಯಾದ ಕ್ಷೀರಸಾಗರದಲ್ಲಿಯೇ ವಾಸಿಸಿದನು. ಸೃಷ್ಟಿಸಂಹಾರಕನೂ ಸ್ಮಶಾನವಾಸಿಯೂ ಸರ್ವತ್ಯಾಗಿಯೂ ಆದ ಮಹಾದೇವನು ಎಲ್ಲ ಸ್ಥಾನಗಳನ್ನು ಬಿಟ್ಟು ತನ್ನ ಮಾವನ ಮನೆಯಾದ ಹಿಮಾಲಯವನ್ನೇ ವಾಸಕ್ಕಾಗಿಗೊತ್ತುಮಾಡಿಕೊಂಡನು. ಅಂದಬಳಿಕ ಅಮೃತರಾಯನಂಥ ಆಧುನಿಕ ಸುಧಾರಕನು ಮಾವನ ಮನೆಯನ್ನು ವಾಸಕ್ಕೆ ನಿಶ್ಚಯಿಸಿದ್ದರಲ್ಲಿ ತಪ್ಪೇನು? ಅಮೃತರಾಯನು ಮಾವನ ಮನೆಯಲ್ಲಿಯೇ ಠಾಣೆಹಾಕಲಿಕ್ಕೆ ಒಂದು ವಿಶೇಷ ಕಾರಣವೂ ಇತ್ತು. ಅಮೃತರಾಯನ ಶೈಶವ ಕಾಲದಲ್ಲಿ —ಆಗ ಅವನು ತೀರ ಸಣ್ಣವನಿದ್ದದರಿಂದ, ಆಗಿನ ಸಂಗತಿಯು ಅವನಿಗೆ ಚೆನ್ನಾಗಿನೆನಪು ಕೂಡ ಇದ್ದಿಲ್ಲ—ಅವನಿಗೊಮ್ಮೆ ಲಗ್ನವಾಗಿತ್ತು. ಆ ಲಗ್ನದ ಪೂರ್ವದಲ್ಲಿ ಹಾಗು ನಂತರ ಅವನು ಆ ವಧುವಿನೊಡನೆ ಗೊಂಬೆಯ ಆಟವಾಡುತ್ತಿದ್ದದ್ದು ಮಾತ್ರ ಅವನ ಸ್ಮರಣದಲ್ಲಿತ್ತು. ಆ ವಧುವಿನ ಹೆಸರು ವಿಮಲೆ. ಆಕೆಯ ನಯನಮನೋ

ಹರವಾದ ಆ ಸುಂದರ ಮುಖಕಮಲವನ್ನೂ ಅವಳ ತೇಜಃಪುಂಜಗಳಾದ ನೀರಲ ಹಣ್ಣಿನಂಥ ವಿಶಾಲವಾದ ಕಣ್ಣುಗಳನ್ನೂ ಅವನು ಜನ್ಮಜನ್ಮಾಂತರದಲ್ಲಿಯೂ ಮರೆಯುವಂತಿದ್ದಿಲ್ಲ. ಅವಳ ಮುಖವನ್ನು ಇನ್ನೊಮ್ಮೆ ನೋಡಬೇಕೆಂದು ಅಮೃತರಾಯನು ತನ್ನ ಪ್ರೌಢವಯಸ್ಸಿನಲ್ಲಿ ಬಹು ಪ್ರಯಾಸಪಡುತ್ತಿದ್ದನು. ಆದರೆ ಈವರೆಗೂ ಅವನಿಗೆ ಆ ಕಾರ್ಯದಲ್ಲಿ ಯಶಃಪ್ರಾಪ್ತವಾಗಿದ್ದಿಲ್ಲ.

ಎರಡನೇ ಲಗ್ನದ ಕಾಲಕ್ಕೆ ಅಮೃತರಾಯನು ತಂದೆಯ ಬಳಿಗೆ ತನ್ನ ಮೊದಲನೇ ವಿವಾಹದ ಮಾತನ್ನೆತ್ತಲು, ಗಣಪತರಾಯನು ಸಿಟ್ಟುಬೆಂಕಿಯಾದನು. ತನ್ನ ಮಗನಿಗೆ ಅವನ ಆ ಮೊದಲನೇ ವಿವಾಹದ ಸಂಗತಿಯನ್ನು ಸಂಪೂರ್ಣವಾಗಿ ಮರೆತುಬಿಡೆಂದು ಕಟ್ಟಪ್ಪಣೆಮಾಡಿದನು. ಇಷ್ಟೇ ಅಲ್ಲ, ಆ ತಂದೆಯು ಅಮೃತರಾಯನಿಂದ ತನ್ನ ಪಾದಸ್ಪರ್ಶ ಮಾಡಿಸಿಕೊಂಡು, "ನನ್ನ ತಂದೆಯು ಜೀವಂತನಾಗಿರುವವರೆಗೆ, ನಾನು ನನ್ನ ಮೊದಲಿನ ಲಗ್ನದ ಸುದ್ದಿಯನ್ನು ಬೇರೆಯವರಾರ ಮುಂದೂ ಎತ್ತಲಿಕ್ಕಿಲ್ಲ"ಂದು ಆಣೆ ಸಹ ಮಾಡಿಸಿಕೊಂಡನು. ಇದರಿಂದ ಗಣಪತರಾಯನಿರುವವರೆಗೆ ಅಮೃತರಾಯನು ತನ್ನ ಪೂರ್ವವಿವಾಹದ ಸುದ್ದಿಯನ್ನು ಹೆರವರ ಮುಂದೆ ಉಸುರುವಂತಿದ್ದಿಲ್ಲ. ಆದರೆ ಬಾಲ್ಯದಲ್ಲಿ ಒಮ್ಮೆ ಅವನ ಮನೋಭೂಮಿಕೆಯಲ್ಲಿ ನೆಟ್ಟು ಹೋಗಿದ್ದ ಆ ವಿಷಯವು ಯಾವ ಬಹಿಃಕಾರಣಗಳಿಂದಲೂ ಅಳಿಸಿ ಹೋಗುವಂತಿದ್ದಿಲ್ಲವಾದ್ದರಿಂದ ಅದು ಅಮೃತರಾಯನಿಗೆ ಆಗಾಗ್ಗೆ ನೆನಪಿಗೆ ಬರುತ್ತಿತ್ತು. ಅವನು ಪ್ರೌಢನಾದ ಬಳಿಕಂತೂ ಪ್ರತಿದಿನವೂ ಅವನನ್ನು ಆ ವಿಚಾರವು ಸೋಂಕದೆ ಬಿಡುತ್ತಿದ್ದಿಲ್ಲ. ಮೂರು ವರ್ಷಗಳ ಹಿಂದೆ ಅಮೃತರಾಯನ ತಂದೆಯು ತೀರಿಕೊಂಡನು. ಅಂದಿನಿಂದ ಅಮೃತರಾಯನು ತನ್ನ ಮೊದಲಿನ ಹೆಂಡತಿಯಾದ ವಿಮಲೆಯ ಅನುಸಂಧಾನವನ್ನು ಗೌಪ್ಯವಾಗಿ ನಡಿಸಿಯೇ ಇದ್ದನು. ಆ ಕಾರ್ಯಕ್ಕಾಗಿ ಎಷ್ಟೋ ಅರ್ಥವ್ಯಯವನ್ನು ಕೂಡಾ ಮಾಡಿದ್ದನು. ಆದರೆ ಆ ಅನುಸಂಧಾನಗಳಿಂದಲೂ, ಅರ್ಥಹಾನಿಯಿಂದಲೂ ಅವನಿಗೆ ಯಾವ ಫಲವೂ ಪ್ರಾಪ್ತವಾಗಲಿಲ್ಲ.

ಅಮೃತರಾಯನ ತಂದೆಯಾದ ಗಣಪತರಾಯನೂ, ಅವನ ಜಾತಿಬಾಂಧವನಾದ ನರಸಿಂಗರಾಯನೂ ಜಜ್ಜ ಕೋರ್ಟಿನಲ್ಲಿ ಕಾರಕೂನರಿದ್ದರು. ಬಾಲ್ಯದಿಂದಲೂ ಅವರೀರ್ವರಲ್ಲಿ ಒಳ್ಳೇ ಸಖ್ಯವಿತ್ತು; ಮತ್ತು ಆ ಸೌಖ್ಯವನ್ನು ಸ್ಥಿರಗೊಳಿಸುವದಕ್ಕೆಂದೇ ಗಣಪತರಾಯನು ತನ್ನ ಏಳುವರ್ಷ ವಯಸ್ಸಿನ ಮಾತೃವಿಹೀನ ಅಮೃತರಾಯನಿಗೆ ನರಸಿಂಗರಾಯನ ಐದು ವರ್ಷದ ವಿಮಲೆಯೆಂಬ ಕನ್ಯೆಯನ್ನು

ತಕ್ಕೊಂಡು ವಿವಾಹ ಮಾಡಿದ್ದನು. "ಮನಸಾ ಚಿಂತಿತಂ ಕಾರ್ಯಂ ದೈವಮನ್ಯ
ತ್ರ ಚಿಂತಯೇತ್" ಎಂಬಂತೆ ಮನುಷ್ಯನು ತಾನೊಂದು ಬಗೆದರೆ, ದೈವವು ಬೇರೊಂ
ದು ಬಗೆಯುವದೆಂಬ ಗಾದಿಯ ಮಾತು ಅವರ ಅನುಭವಕ್ಕೆ ಚೆನ್ನಾಗಿ ಬಂದಿತು.
ಗಣಪತರಾಯ-ನರಸಿಂಗರಾಯರು ತಮ್ಮ ಬಾಲ್ಯಸಂಬಂಧವನ್ನು ಶಾಶ್ವತಗೊಳಿ
ಸುವದಕ್ಕಾಗಿ ಯಾವ ವಿವಾಹಸಂಬಂಧವನ್ನು ಜರುಗಿಸಿದರೋ, ಅದರಿಂದ ಅವರ
ಇಷ್ಟಾರ್ಥವು ಕೈಗೂಡುವದೊತ್ತಟ್ಟಿಗುಳಿದು, ಅವರಲ್ಲಿಯ ಪೂರ್ವದ ಋಣಾನು
ಬಂಧುತ್ವವು ಕೂಡ ಕಡಿದು ಹೋಗಿ ನಿಕರದ ಹಗೆತನಕ್ಕೆ ಅಸ್ಪದವಾಯಿತು.
ವಿವಾಹವಾದ ತುಸ ದಿನಗಳ ನಂತರ ವಿಶೇಷ ಕಾರಣವಿಲ್ಲದೆ ಗಣಪತರಾಯನು
ನರಸಿಂಗರಾಯನ ಮೇಲೆ ಸಿಟ್ಟಿಗೆದ್ದನು. ನರಸಿಂಗರಾಯನು ತನ್ನ ಬೀಗನ ಕ್ರೋಧ
ಶಾಂತತೆಗಾಗಿ ಮಾಡಬಹುದಾದ ಎಲ್ಲ ಉಪಾಯಗಳನ್ನು ಮಾಡಿದರೂ ಅವನ
ಸಿಟ್ಟು ಇಳಿಯಲಿಲ್ಲ. ಗಣಪತರಾಯನು ಇನ್ನೆರಡು ವರ್ಷ ನೌಕರಿ ಮಾಡಿ
ದ್ದರೆ, ಸಿಗಬಹುದಾಗಿದ್ದ ಪೆನ್‌ಶನ್ನಿನ ಆಶೆಯನ್ನು ಕೂಡ ತೊರೆದು, ತನ್ನ ಎಂಟು
ವರ್ಷದ ಮಗನಾದ ಅಮೃತರಾಯನೊಡನೆ ಬೆಳಗಾವಿಯನ್ನು ಬಿಟ್ಟು ಪುಣೆಗೆಹೊರ
ಡಲುದ್ಯುಕ್ತನಾದನು. ತಾಯಿಯು ತೀರಿಹೋದ ಬಳಿಕ ಬೆಳಗಾವಿಯಲ್ಲಿರುವವರೆಗೆ
ಅಮೃತರಾಯನು ನರಸಿಂಗರಾಯರಲ್ಲಿಯೇ ಹೆಚ್ಚಾಗಿರುತ್ತಿದ್ದನು. ಅದರಿಂದ ಅವ
ನಿಗೆ ಬಾಲ್ಯದಲ್ಲಿ ವಿಮಲೆಯ ಕೂಡ ಆಟ-ನೋಟಗಳಲ್ಲಿ ಆಸಕ್ತನಾಗಲಿಕ್ಕೆ ಹೆಚ್ಚು
ಅವಕಾಶವಿತ್ತು. ವಿವಾಹದ ನಂತರವಾದರೂ ಅವನು ಶ್ವಶುರಾಲಯದಲ್ಲಿಯೇ ಇರು
ತ್ತಿದ್ದದರಿಂದ ವಿಮಲಾಬಾಲಿಕೆಯೊಡನೆ ಚಿಕ್ಕವಯಸ್ಸಿನ ಆ ಅಮೃತನ ಸಖ್ಯವು
ಚೆನ್ನಾಗಿ ಕೂಡಿತ್ತು. ಹೀಗಿರಲು, ಒಂದಾನೊಂದು ದಿವಸ ಅವನ ತಂದೆಯು ಅವ
ನನ್ನು ಕರೆದುಕೊಂಡು ಪುಣೆಗೆ ಬಂದನು; ಮತ್ತು ಅಲ್ಲಿಯ ಒಂದು ಅಪ್ರಸಿದ್ಧಗಲ್ಲಿ
ಯಲ್ಲಿ ಒಂದು ಬಾಡಿಗೆಯ ಮನೆ ಹಿಡಿದು ಇರಹತ್ತಿದನು. ಬಳಿಕ ಅಮೃತರಾಯನು
ಅಲ್ಲಿಯ ಒಂದು ಹಾಯಸ್ಕೂಲಿನಲ್ಲಿ ಕಲಿಯಹತ್ತಿದನು. ಗಣಪತರಾಯನಾದರೂ
ಯಾವನೊಬ್ಬ ಪ್ರಸಿದ್ಧ ವ್ಯಾಪಾರಸ್ಥನ ಬಳಿಯಲ್ಲಿ ನೌಕರಿ ಮಾಡತೊಡಗಿದನು.
ತನ್ನ ಹಾಗು ತನ್ನಮಗನ ವಾಸ್ತವ್ಯದ ಸುಳುವು ಕೂಡ ಬೆಳಗಾವಿಯೊಳಗಿನ ನರ
ಸಿಂಗರಾಯನಿಗೆ ಹತ್ತದಂತೆ ಗಣಪತರಾಯನು ಮುತವರ್ಜಿ ವಹಿಸಿದ್ದನು.

ಮೇಲೆ ಹೇಳಿದಂತೆ ಗಣಪತರಾಯನು ಬೆಳಗಾವಿಯಿಂದ ಬಂದು ಪುಣೆಯಲ್ಲಿರ
ಹತ್ತಿ ಎಂಟುವರ್ಷಗಳಾದವು. ಇಷ್ಟರಲ್ಲಿ ಅಮೃತರಾಯನು 'ಪ್ರೀವ್ಹಿಯಸ್'
ಪರೀಕ್ಷೆಯನ್ನು ಉತ್ತೀರ್ಣನಾಗಿ ಕಾಲೇಜವನ್ನು ಪ್ರವೇಶಿಸಿದನು. ಆಗ ಎಷ್ಟೋ

ಜನ ಬೆಳೆದ ಕನ್ನೆಯರ ತಂದೆಗಳು ತಮ್ಮ ಮಗಳನ್ನು ಇವನಿಗೆ ಕೊಡಬೇಕೆಂದು ಗಣಪತರಾಯನಲ್ಲಿ ಪ್ರಸ್ತಾಪತೆಗೆಯುತ್ತಿದ್ದರು; ಆದರೆ "ನನ್ನ ಮಗನ ವಿವಾಹ ವನ್ನು ಈಗಲೆ ಮಾಡುವದಿಲ್ಲ"ವೆಂಬ ನಿಶ್ಚಿತ ಉತ್ತರವನ್ನು ಎಲ್ಲರಿಗೂ ಹೇಳಿ ಹೇಳಿ ಬೇಸತ್ತಿದ್ದ ಗಣಪತರಾಯನು, ಕಡೆಗೆ ಭೀಮರಾಯರೆಂಬ ಅಲ್ಲಿಯ ಧನಿಕರ ಸಲಕ್ಷಣಮಗಳಾದ ಹೇಮಾವತಿಯನ್ನು ತನ್ನ ಮಗನಿಗೆ ದ್ವಿತೀಯ ಪತ್ನಿಯನ್ನಾಗಿ ಮಾಡಿಕೊಳ್ಳಲಿಕ್ಕೆ ಸಮ್ಮತಿಸಿದನು. ತಂದೆಯ ಬಾಯಿಂದ ತನ್ನ ಈ ದ್ವಿತೀಯ ವಿವಾಹದ ಸಂಗತಿಯನ್ನು ತಿಳಿದ ಅಮೃತರಾಯನು ಅವನಲ್ಲಿ ತನ್ನ ಪ್ರಥಮ ಲಗ್ನದ ಸುದ್ದಿ ತೆಗೆದು ಹಿಂದೆ ಹೇಳಿದಂತೆ ಅವನಿಂದ ಶಪಥಬದ್ಧನಾದನು.

ಯೋಗ್ಯಕಾಲಕ್ಕೆ ಅಮೃತರಾಯನ ಎರಡನೇ ಮದುವೆಯಾಯಿತು.; ಹಾಗು ತದನಂತರ ಕುಸು ದಿವಸಗಳಲ್ಲಿಯೇ ಅವನು ತನ್ನ ಮಾವನ ಮನೆಯಲ್ಲಿ ವಾಸಮಾಡಲಾರಂಭಿಸಿದನು. ಅಮೃತರಾಯನು ಬಿ. ಎ., ಎಂ. ಎ., ಪರೀಕ್ಷೆ ಗಳಲ್ಲಿ ಪಾಸಾಗಿ ಇಂಜನೀಯರ ಕಾಲೇಜಕ್ಕೆ ಸೇರ್ಪಡೆಯಾದನು; ಮತ್ತು ಯಥಾ ವಕಾಶದಲ್ಲಿ ಅಲ್ಲಿಯ ಶ್ರೇಷ್ಠ ಪರೀಕ್ಷೆಯಲ್ಲಿ ಬಹುಮಾನಪುರಸ್ಸರವಾಗಿ ಪಾಸಾಗಿ, ಗವ್ಹ ರ್ನಮೆಂಟಿನಲ್ಲಿ ದೊಡ್ಡ ಪಗಾರಿನ ನೌಕರಿಗೆ ಹೋದನು. ನೌಕರಿಯ ಸ್ಥಳದಲ್ಲಿ ತನ್ನ ಪ್ರಿಯಪತ್ನಿಗೆ ಸಾಕಷ್ಟು ಸೌಲಭ್ಯವುಂಟಾಗಲಿಕ್ಕಿಲ್ಲೆಂದು ಬಗೆದು, ಅಮೃತರಾ ಯನು ಹೇಮಾವತಿಯನ್ನು ಬಹುಶಃ ಅಲ್ಲಿಗೆ ಕರೆದೊಯ್ಯುತ್ತಿರಲಿಲ್ಲ. ಇದರಿಂದ ಅವಳು ಸದಾ ತಂದೆಯ ಮನೆಯಲ್ಲಿಯೇ ಇರುತ್ತಿದ್ದಳು; ಆದರೆ ಗಂಡನ ಮೈಯಲ್ಲಿ ಗುಣವಿರದ್ದರಿಂದ ಬೇಡಬೇಡೆಂದರೂ, ಹೇಮಾವತಿಯು ಜುಲುಮೆಯಿಂದ ಅವ ನೊಡನೆ ಕಾಶಿಗೆ ಬಂದಿದ್ದಳು. ಅವಳ ತಮ್ಮನಾದ ಮುರಾರಿಯ ಮೈಯಲ್ಲಿಯೂ ಅಶಕ್ತತೆಯಿದ್ದದರಿಂದ ಅವನನ್ನೂ ಹವೆ ಬದಲಿಸುವದಕ್ಕಾಗಿ ಅವಳು ಅಲ್ಲಿಗೆ ಕರೆತಂದಿದ್ದಳು.

ಅಮೃತರಾಯನು ಕಾಶಿಗೆ ಬಂದು ಹದಿನೈದು ದಿನಗಳಾಗಿರಬಹುದು. ಅವನು ದಿನಾಲು ಗಂಗೆಯಲ್ಲಿ ಮಿಂಯುತ್ತಿದ್ದನು. ಒಮ್ಮೊಮ್ಮೆ ಹೇಮಾವತಿಯೂ ಅವನೊ ಡನೆ ಗಂಗಾಸ್ನಾನಕ್ಕೆ ಹೋಗುತ್ತಿದ್ದಳು. ಇಂದು ಅಮೃತರಾಯನೊಬ್ಬನೇ ಗಂಗಾಸ್ನಾನಕ್ಕೆ ಬಂದಿದ್ದನು. ತನ್ನ ಬಟ್ಟೆ-ಬರೆಗಳನ್ನೂ, ತಂಬಿಗೆ-ತಾಲಿಗಳನ್ನೂ ನಿಯಮಿತ ಸ್ಥಳದಲ್ಲಿಟ್ಟು ಇನ್ನು ಅವನು ನದಿಯಲ್ಲಿಳಿಯತಕ್ಕವನು; ಅಷ್ಟರಲ್ಲಿ— "ನಾನು ನೋಡುವದಾದರೂ ಏನಿದು? ಇಂಥ ಮುಖದ ಅನ್ಯಮನುಷ್ಯರಿರುವರೇ? ಅಲ್ಲ, ಇದು ಕಲ್ಪನೆಗೆ ಅಗೋಚರವಾದ ನನ್ನ ಧ್ಯಾನಸ್ಥಮೂರ್ತಿಯು. ಛೇ, ಈ

ಮುಖಕಮಲವು ನನಗೆ ಕೇವಲಪರಿಚಯದ್ದು. ಇದನ್ನು ನಾನು ಎಂದೋ ಎಲ್ಲಿಯೋ ನೋಡಿರುವೆನು. ಆದರೆ ಯಾವಾಗ ನೋಡಿರುವೆನು? ಎಲ್ಲಿ ನೋಡಿರುವೆನು? ಆ ಪ್ರಸಂಗದ ನೆನಪು ಕೂಡ ನನಗಾಗಲೊಲ್ಲದಲ್ಲ!'' ಎಂದು ಅಮೃತರಾಯನು ತನ್ನಷ್ಟಕ್ಕೆ ತಾನು ಅಂದುಕೊಂಡು, ಎದುರಿಗಿನ ಆ ಮೂರ್ತಿಯ ಕಡೆಗೆ ಮತ್ತೊಮ್ಮೆ ನೋಡಲು, ಕೂಡಲೆ ಅವನಿಗೆ ತನ್ನ ಬಾಲ್ಯಸಖಿಯಾದ ವಿಮಲೆಯ ಮುಖವು ಕಂಡಂತಾಗಲು, ಅವನು ಪುನಃ—''ಓಹೋ, ಅದಲ್ಲವೆ? ಆ ವಿಮಲಾಬಾಲಿಕೆಯ ಮುಖವನ್ನು ಈ ಪ್ರೌಢಾಂಗನೆಯ ಮುಖವು ಸಂಪೂರ್ಣವಾಗಿ ಹೋಲುತ್ತದಲ್ಲ! ಅಥವಾ ಆಗಿನ ಆ ಪುಟ್ಟ ಮುಖಕಮಲವೇ ಅರಳಿ ಈಗ ಬಹು ಮನೋಹರವಾಗಿ ಒಪ್ಪುತ್ತಲಿದೆ'' ಹೀಗನ್ನುತ್ತ ಆ ಮುಖಕಮಲವನ್ನು ಎವೆಯಿಕ್ಕದೆ ನೋಡುತ್ತ ನಿಂತನು.

ನೋಟದಲ್ಲಿ ಆಕರ್ಷಣ ಶಕ್ತಿಯಿರುತ್ತದೆಂಬದು ಸುಳ್ಳಲ್ಲ. ಹಾಗಿರದಿದ್ದರೆ, ಆ ವ್ಯಕ್ತಿಯಾದರೂ ಎವೆಯಿಕ್ಕದೆ ತನ್ನನ್ನು ನೋಡುತ್ತಿದ್ದ ಅಮೃತರಾಯನ ಕಡೆಗೆ ಆಗಾಗ್ಗೆ ನೋಡಹತ್ತಿತೇಕೆ?

ಹೀಗೆ ಪುನಃ ಪುನಃ ಅವನನ್ನು ನೋಡುವದರಿಂದ ಅವಳಲ್ಲಿ ಲಜ್ಜೆಯುಂಟಾಗಿ ಅವಳ ಶರೀರಕ್ಕೆ ಕಂಪವುಂಟಾಯಿತು; ದೃಷ್ಟಿಯು ಚಂಚಲವಾಯಿತು. ಅವಳ ಆ ಚಂಚಲದೃಷ್ಟಿಯು ಅಮೃತರಾಯನ ಮರ್ಮವನ್ನು ಭೇದಿಸಿತು. ತನ್ನನ್ನು ಒಬ್ಬ ಅಪರಿಚಿತನು ಒಂದೇಸವನೆ ನೋಡುತ್ತಿರುವನೆಂಬದರ ಅರಿವು ಇಷ್ಟರಲ್ಲಿ ಅವಳಿಗಾಗಲು, ಆ ಸುಂದರಿಯು ಬೇರೆ ಕಡೆಗೆ ಮೋರೆ ತಿರುವಿ, ಬುರುಕಿಯನ್ನು ಹಾಕಿಕೊಂಡು, ಅಲ್ಲಿಯೇ ಸ್ನಾನ ಮಾಡುತ್ತಿದ್ದ ತನ್ನ ಗೆಳತಿಯನ್ನು ಕರಕೊಂಡು ಗಂಗಾತೀರದಿಂದ ತಮ್ಮ ನಿರ್ದಿಷ್ಟ ಸ್ಥಳಕ್ಕೆ ನಡೆದಳು. ಆಗ ಅಮೃತರಾಯನು ಭಾವಿಸಿದ್ದೇನಂದರೆ,—''ಈ ಸುಂದರಿಯು ಯಾರು? ಇವಳೇ ವಿಮಲೆಯೇನು? ಅವಳೇ ಇವಳಾಗಿದ್ದರೆ, ಇವಳೊಡನೆ ಇದ್ದ ಆ ಹೆಣ್ಣುಮಗಳು ಯಾರು? ವಿಮಲೆಯ ತಂಗಿಯಾಗಿರಬಹುದೇನು? ಆದರೆ ನಾನು ನೋಡಿದಾಗ ಅವಳಿಗೆ ಅಕ್ಕ-ತಂಗಿಯರಾರೂ ಇರಲಿಲ್ಲವಲ್ಲ!. ತದನಂತರ ಏಕಾಗಿರಬಾರದು? ಯಾಕಂದರೆ, ನಾನು ವಿಮಲೆಯನ್ನು ಕಾಣಿಸಿ, ಈಗ ಇಪ್ಪತ್ತು ವರ್ಷಗಳಾದವು. ನಿಜವಾಗಿ ಇವಳು ವಿಮಲೆಯೋ ಏನು? ಛೀ ಅಲ್ಲ. ಇದು ನನ್ನ ಉನ್ಮಾದಗ್ರಸ್ತ ಮನಸ್ಸಿನ ಕಲ್ಪನೆಯು. ನಾನು ಇವಳ ರೂಪಕ್ಕೆ ಮರುಳಾಗಿ ಇವಳೊಡನೆ ನನ್ನ ಸ್ಮರ ಪರಿಚಿತ ಬಾಲ್ಯಸಖಿ ವಿಮಲೆಯ ಮುಖವನ್ನು ಹೋಲಿಸಿದೆನು. ಅವಳ ಆ

ಮುಖ-ಆ ಕಣ್ಣು-ಅವೆಲ್ಲ ನನ್ನ ಹೃತ್ಪಟಲದಲ್ಲಿ ಬಾಲ್ಯದಿಂದಲೂ ಕೊರೆದು ಮೂಡಿಸಿದಂತಾಗಿರುತ್ತವೆ. ಆದರೆ ಆ ಮುಖಕಮಲಕ್ಕೂ, ಇವಳ ಮುಖಕಮಲಕ್ಕೂ ಸ್ವಲ್ಪವೂ ವ್ಯತ್ಯಸವಿಲ್ಲವಲ್ಲ! ಇವಳೇ ಅವಳು-ವಿಮಲೆಯು. ಇದರಲ್ಲಿ ಸ್ವಲ್ಪವೂ ಸಂಶಯವಿಲ್ಲ.''

ಅಮೃತರಾಯನಿಂದ ಅಂದು ಗಂಗಾಸ್ನಾನ ಮಾಡುವದಾಗಲಿಲ್ಲ. ಅಷ್ಟರಲ್ಲಿ ಆ ರಮಣೀದ್ವಯರು ಎತ್ತರವಾದ ಗಂಗಾಜಿಯ ಘಾಟನ್ನು ಅರ್ಧದವರೆಗೆ ಏರಿಹೋಗಿದ್ದರು. ಆಗ ಅಮೃತರಾಯನಾದರೂ ತನ್ನ ಸಾಮಾನುಗಳನ್ನು ಅವಸರದಿಂದ ಬಗಲಲ್ಲಿ ಅವಚಿಕೊಂಡು ತ್ವರಿತಗತಿಯಿಂದ ಅವರನ್ನು ಹಿಂಬಾಲಿಸಿದನು. ಅವನು ಅವರಹತ್ತರಕ್ಕೆ ಹೋಗುವಷ್ಟರಲ್ಲಿ ಅವರು ಪೂರಾ ಘಾಟನ್ನೇರಿ ಅಲ್ಲಿಯೇ ತಮಗಾಗಿ ಕಾದಿದ್ದ ಮೇಣೆಯನ್ನು ಹತ್ತಿದರು. ಆ ಮೇಣೆಯು ಕಾಶಿಯೊಳಗಿನ ಸಾಮಾನ್ಯ ಮೇಣೆಗಳಂತಿರದೆ, ಅದಕ್ಕೆ ಬೆಳ್ಳಿಯ ತಗಡಿನ ಮುದಾಸವಿದ್ದು, ಅದು ನೋಡುವವರ ಚಿತ್ತಾಕರ್ಷಣ ಮಾಡುವಷ್ಟು ಸುಂದರವಾಗಿತ್ತು. ರಮಣಿಯರು ಮೇಣೆಯನ್ನೇರಿದ ಕೂಡಲೆ ಭದ್ರಕಾಯದ ಒಬ್ಬ ಪಂಜಾಬೀ ಭಯ್ಯಾನು ಮೇಣೆಯ ಬಾಗಿಲವನ್ನಿಕ್ಕಿ ಭೋಯಿಗಳಿಗೆ ಸಾಗಲು ಸಂಜ್ಞೆಮಾಡಿದನು. ಮೇಣೆ ಹೊರಡಲು ಇದನ್ನು ಅನುಸರಣಮಾಡುವದು ಇನ್ನು ಸರಿಯಲ್ಲವೆಂದು ತಿಳಿದು ಅಮೃತರಾಯನು ನಿಂತಲ್ಲಿಯೇ ನಿಂತು, ಆ ಮೇಣೆಯು ಕಾಣುವವರೆಗೆ ಅದರ ಕಡೆಗೆ ಟಕಮಕ ನೋಡಹತ್ತಿದನು. ಪಂಚಕ್ರೋಶ ಯಾತ್ರೆಯ ಸ್ಥಳವಾದ ಹಳೇ ವಾರಣಾಶೀಕ್ಷೇತ್ರವು ಬಹು ಪುಣ್ಯಭೂಮಿಯೆಂದು ನಮ್ಮ ಹಿಂದುಗಳ ಪರಂಪರಾಗತ ಭಾವನೆಯಾದ್ದರಿಂದ ಆ ಪ್ರದೇಶದಲ್ಲಿ ವಿಶಾಲವಾದ ಮಾರ್ಗಗಳೂ ಮನೆಗಳೂ ಸಿಗುವದು ದುರ್ಲಭವೇ ಸರಿ. ಹತ್ತೆಂಟು ಮೊಳ ಉದ್ದಗಲುಳ್ಳ ಸ್ಥಳ ಸಿಕ್ಕರೆ ಸಾಕು, ಅಷ್ಟೇ ಸ್ಥಳದಲ್ಲಿ ಐದಾರು ಅಂತಸ್ತಿನ ಮನೆ ಕಟ್ಟಿ ವಾಸಮಾಡುವ ಪದ್ಧತಿಯು ಆ ಕ್ಷೇತ್ರದಲ್ಲಿದೆ. ಆದರಿಂದ ಆ ಕ್ಷೇತ್ರ ಭೂಮಿಯಲ್ಲಿ ಒಂದೂ ದೊಡ್ಡ ಮಾರ್ಗವಿಲ್ಲ. ಇಷ್ಟೇ ಅಲ್ಲ, ಎಷ್ಟೋ ಗಲ್ಲಿಯ ರಸ್ತೆಗಳಲ್ಲಿ ಜೋಡಾಗಿ ಇಬ್ಬರು ಹೋಗುವಷ್ಟು ಸ್ಥಳವು ಕೂಡ ಇರುವದಿಲ್ಲ. ಅಲ್ಲಲ್ಲಿ ಅಡ್ಡತಿಡ್ಡಾದ ಎಷ್ಟೋ ಸಂದಿಗಳು ಹತ್ತುವವು. ಆದರಿಂದಲೇ ಕಾಲಿಲೆ ನಡೆದು, ಇಲ್ಲವೆ ಡೋಲಿಯೆಂಬ ವಾಹನದಲ್ಲಿ ಕುಳಿತು ಸರ್ವಸಾಮಾನ್ಯ ಜನರು ನದಿಗೆ ಬರಬೇಕಾಗುತ್ತದೆ. ಶ್ರೀಮಂತರು ಮಾತ್ರ ಪಲ್ಲಕ್ಕಿ-ಮೇಣೆ ಮುಂತಾದವುಗಳನ್ನುಪಯೋಗಿಸುವರು. ಆ ರಮಣಿಯರು ಕುಳಿತ ಮೇಣೆಯು ಇಪ್ಪತ್ತು-ಮೂವತ್ತು ಹೆಜ್ಜೆ ನೀಟಾಗಿ ಹೋಗುವಷ್ಟರಲ್ಲಿ ಬಲಕ್ಕೆ ಹೊರಳ

ಬೇಕಾದುದರಿಂದ ಅದು ಕ್ಷಿಪ್ರದಲ್ಲಿಯೇ ಕಾಣದಂತಾಯಿತು.

ಆಗ ನಿರಾಶನಾದ ಅಮೃತರಾಯನು ಅಲ್ಲಿಯೇ ಭೇಟಿಯಾದ ಒಬ್ಬ ಪರಿಚಿತ ಮನುಷ್ಯನನ್ನು ಆ ಮೋಟಾರಿಯು ಯಾರದೆಂದು ಕೇಳಿದನು. ಅದು ಪುಣೆಯಲ್ಲಿರುವ ನಾಗಪೂರ ಮುಂತಾದ ಪ್ರಾಂತಗಳ ಖನಿಗಳ ಮಾಲಕನಾದ ಶಿವರಾಯನದೆಂದು ಆ ಮನುಷ್ಯನು ತಿಳಿಸಿದನು. ಅಮೃತರಾಯನಾದರೂ ಸುಪ್ರಸಿದ್ಧ ಇಂಜನೀಯರನಿದ್ದುದರಿಂದ ಅವನಿಗೆ ಆ ಖನಿಗಳ ವಾರ್ತೆಯು ಚೆನ್ನಾಗಿ ಗೊತ್ತಿತ್ತು. ಅಲ್ಲದೆ ಅವನ ಸಹಪಾಠಿಯೂ, ಗೆಳೆಯನೂ ಆದ ರಾಮರಾಯನೆಂಬವನು ಆ ಖನಿಗಳಲ್ಲಿ ಚೀಫ ಇಂಜನೀಯರನಾಗಿರುವನೆಂಬ ಸಂಗತಿಯೂ ಆಗ ಅವನ ನೆನಪಿಗೆ ಬಂದಿತು. ಆ ಯೋಗದಿಂದ ಶಿವರಾಯನಂಥ ಸರ್ವಸಾಧಾರಣ ಮನುಷ್ಯನು ತನ್ನ ಅವಿಶ್ರಾಂತ ಶ್ರಮದಿಂದ ಕೋಟ್ಯಾಧೀಶನಾದದ್ದೂ, ಯಾವ ಕಾರಣದಿಂದಲೋ ಕೆಲವು ದಿನಗಳ ಹಿಂದೆ ಅವನು ಒಮ್ಮಿಂದೊಮ್ಮೆಲೆ ಇಲ್ಲದಂತಾದದ್ದೂ, ಮುಂತಾದ ಸಂಗತಿಗಳು ಅಮೃತರಾಯನ ಮನೋಭೂಮಿಕೆಯಲ್ಲಿ ಸ್ಪಷ್ಟವಾಗಿ ಕಾಣಹತ್ತಲು, ಅವನು ತನ್ನ ಆ ಸಂಗಡಿಗನನ್ನು ಕುರಿತು—ಈಗ ಹೋದ ಈ ರಮಣೀದ್ವಯರು ಯಾರು? ಇವರು ಶಿವರಾಯನಿಗೇನಾಗಬೇಕು? ಎಂದು ವಿಚಾರಿಸಲು, ಅವನು ಹೇಳಿದ್ದೇನಂದರೆ—ಆ ಮೋಟಾರಿಯನ್ನೇರಿದವರಲ್ಲಿ ಯಾವಳು ಕೇವಲ ಕೃಶಾಂಗಿಯೂ ವಯಸ್ಸು ನಿಲುವಿಕೆಗಳಲ್ಲಿ ಚಿಕ್ಕವಳೂ ಆಗಿದ್ದಳೋ ಅವಳೇ ಶ್ರೀಮಾನ್ ಶಿವರಾಯನ ಪತ್ನಿಯಾದ ಕಮಲಾಸುಂದರಿಯು. ಇನ್ನೊಬ್ಬಳು ಅವಳ ಭಗಿನಿಯು. ಶಿವರಾಯನು ಹೊರಟು ಹೋಗಿ ಐದು ವರ್ಷಗಳಾಗಿರಬಹುದು. ಕಮಲಾಸುಂದರಿಯು ಈಚೆಗೆ ಇಲ್ಲಿಯೇ ಈ ವಾರಣಾಸೀ ಕ್ಷೇತ್ರದಲ್ಲಿಯೇ ವಾಸಿಸುತ್ತಿರುವಳು. ಅವಳು ಇಲ್ಲಿಯೊಂದು (ಭವ್ಯ) ಮಂದಿರವನ್ನೂ, ಅನಾಥರಿಗಾಗಿ ಆಶ್ರಮದಂಥ ಒಂದು ಛತ್ರವನ್ನೂ ಕಟ್ಟಿಸುತ್ತಿರುವಳು; ಆದರೆ ಆ ಮಂದಿರದಲ್ಲಿ ಯಾವ ದೇವತೆಯನ್ನೂ ಪ್ರತಿಷ್ಠಾಪಿಸುವದಿಲ್ಲಂತೆ! ಅದು ತನ್ನ ಪ್ರಿಯ ಪತಿಯ ಸ್ಮಾರಕವೆಂದು ತಿಳಿದು, ತನ್ನಂತೆ ಅನಾಥರಾದ ಅಬಲೆಯರ ಸಂರಕ್ಷಣೆಗೋಸ್ಕರ ತನ್ನ ಮಾಲಕಿಯ ನಾಗಪೂರ ಮುಂತಾದ ಖನಿಗಳ ಆದಾಯವನ್ನು ವಿನಿಯೋಗಿಸಿ ಅದೇ ತನ್ನ ಪತಿ ಹಾಗು ಸ್ವಾಮಿಪೂಜೆಯೆಂದು ತಿಳಿಯುತ್ತಿರುವಳು. ಆ ಅತ್ಯಂತ ಭವ್ಯ ಹಾಗು ಮನೋಹರವಾದ ಮಂದಿರ ಮತ್ತು ಆಶ್ರಮಗಳ ಕಟ್ಟಡಗಳು ಇನ್ನೂ ಪೂರೈಸಿರುವದಿಲ್ಲ. ಆ ಮಂದಿರದಲ್ಲಿ ಸ್ಥಾಪಿಸುವದಕ್ಕಾಗಿ ಶಿವರಾಯನ ಬಿಳೀಕಲ್ಲಿನ ಮೂರ್ತಿಯೊಂದನ್ನು ಇಟಾಲಿಯ ಸುಪ್ರಸಿದ್ಧ ಕಾರಾಗೀರನಿಂದ ಮಾಡಿಸಿ ತರಿಸುವರಂತೆ. ಆ

ಮೂರ್ತಿಯಾಗಲಿಕ್ಕೆ ಇನ್ನೂ ಮೂರು ವರ್ಷಗಳ ಅವಧಿಯು ಬೇಕಂತೆ. ಈ ಮಂದಿರ-ಛತ್ರಗಳ ಕಟ್ಟಡಗಳು ಪೂರ್ತೈಸಲಿಕ್ಕೂ ಅಷ್ಟೇ ಕಾಲವು ಬೇಕಾಗಬಹುದು.

ಆ ಪರಿಚಿತನಿಂದ ಕೇಳಿ ತಿಳಿದ ಸಂಗತಿಯಿಂದ ಆ ರಮಣಿಯು ತನ್ನ ವಿಮಲೆಯಲ್ಲೆಂದು ಅಮೃತರಾಯನಿಗನಿಸಿತು. "ಈ ವರೆಗೆ ವಿಮಲೆಯು ಜೀವಂತಳಿದ್ದಾಳೋ, ಇಲ್ಲವೋ ಯಾರು ಹೇಳಬೇಕು? ಈ ಜನ್ಮದಲ್ಲಿ ನನಗೆ ಅವಳು ಭೇಟಿಯಾಗುವ ಸಂಭವವಿಲ್ಲ" ಎಂದು ಆಲೋಚಿಸಿ ಸುಮ್ಮನೆ ನಡೆದರೂ, ಅಮೃತರಾಯನಿಗೆ ಅದರಿಂದ ಸಮಾಧಾನವಾಗಲಿಲ್ಲ. ಎಷ್ಟು ಅಭಾವವೈರಾಗ್ಯವನ್ನು ಅವನು ತಂದುಕೊಳ್ಳಲೆತ್ನಿಸಿದರೂ ಅದು ಅವನಲ್ಲಿ ಸ್ಥಿರವಾಗಲಿಲ್ಲ. ಹೀಗೆ ಆಲೋಚಿಸುತ್ತ ಅವನು ಮನೆಗೆ ಬಂದನು. ಅವನು ಸ್ನಾನ ಮಾಡದೆ ಹಾಗೆಯೇ ಬಂದದ್ದನ್ನು ಕಂಡು ಹೇಮಾವತಿಯು ವಿಸ್ಮಿತಳಾಗಿ—"ಹೀಗೇಕೆ? ಇಂದು ಗಂಗಾಸ್ನಾನಮಾಡದಲೆ ತಿರುಗಿದಿರಲ್ಲ? ಮನೆಯಲ್ಲಿಯೇ ಸ್ನಾನಮಾಡುವಿರೇನು?" ಎಂದು ಪ್ರಶ್ನೆ ಮಾಡಿದಳು.

ಹೇಮಾವತಿಯು ಆ ಮಧುರವಚನಗಳನ್ನು ಕೇಳಿ ಅಮೃತರಾಯನ ಜಾಗೃತ ಸ್ವಪ್ನವು ಭಂಗವಾಯಿತು. ಅವನು ಗಾಬರಿಗೊಂಡು—"ಓಹೊ! ನಾನು ಸ್ನಾನಕ್ಕೆ ಹೋಗಿದ್ದೆನೆಂಬದು ಲಕ್ಷ್ಯಕ್ಕೆ ಬಾರದ್ದರಿಂದ ಹಾಗೆಯೇ ತಿರುಗಿದೆನಲ್ಲ!" ಎಂದು ನುಡಿಯಲು, ಅವನ ಆ ಹುಚ್ಚುದ್ಗಾರ ಮಾತನ್ನು ಕೇಳಿ, ಬಾಲಕನಾದ ಮುರಾರಿಗೆ ಹೊಟ್ಟೆ ಹಿಡಿಸಲಾರದಷ್ಟು ನಗೆಬಂದಿತು. ನಂತರ ಆ ಪೋರನು ಅಕ್ಕನನ್ನು ಕುರಿತು—ಅಕ್ಕಾ, ಇಂಜನೀಯರ ಸಾಹೇಬರು ಯಾವದೋ ಒಂದು ನಕ್ಷೆಯ ವಿಷಯವಾಗಿ ಆಲೋಚನೆ ಮಾಡುತ್ತ ಸ್ನಾನಕ್ಕೆ ಹೊರಟಿರಬಹುದಾಗಿಯೂ, ಆ ನಕ್ಷೆಯು ಗಂಗಾತೀರಕ್ಕೆ ಹೋದಾಗ ಬಗೆಹರಿಯದೆ ಇದ್ದದರಿಂದ ಅದನ್ನು ಸರಿಪಡಿಸುವ ಆಲೋಚನೆಯಲ್ಲಿಯೇ ಇವರು ತಾವು ಅಲ್ಲಿಗೆ ಯಾತಕ್ಕೆ ಹೋಗಿದ್ದೇವೆಂಬದನ್ನು ಕೂಡ ಮರೆತು ಹಾಗೆಯೇ ತಿರುಗಿ ಬಂದಿದ್ದಾರೆಂದೂ ಹೇಳಿ, ಹೋ-ಹೋ ಎಂದು ಪುನಃ ನಕ್ಕನು.

ಮುರಾರಿಯು ತರ್ಕವನ್ನು ಕೇಳಿ, ಅಮೃತರಾಯನಿಗೂ ನಗೆ ಬಂದಿತು. ನಂತರ ಅವನು ಪುನಃ ಗಂಗಾಸ್ನಾನಕ್ಕೆ ಹೊರಟನು. ಅಷ್ಟರಲ್ಲಿ ಬೆಳಗಿನ ಒಂಬತ್ತು ಗಂಟೆಯಾಗಿತ್ತು. ಆ ವೈಶಾಖಮಾಸದಲ್ಲಿ ಉತ್ತರ ಹಿಂದುಸ್ತಾನದಲ್ಲೆಲ್ಲ ಬಹಳ ಉಷ್ಣತೆಯಿರುತ್ತದೆ. ಅದರಲ್ಲಿಯೂ ಕಾಶಿಯಂಥ ಅತಿ ದಟ್ಟಾದ ವಸತಿಯಲ್ಲಿ ಆಗುವ ತಳಮಳವನ್ನು ಬಾಯಿಂದ ಹೇಳುವಂತಿರುವದಿಲ್ಲ. ಮುಖಾರ್ಧಸಿಳಗಿಂದ ಮೊದಲು

ಮಾಡಿಕೊಂಡು ತೀರ ಬಡವನವರೆಗೆ ಪ್ರತಿಯೊಬ್ಬನ ಕೈಯಲ್ಲಿಯೂ ಬೀಸಣಿಕೆಯು ಇರಲೇಬೇಕು. ಅದರ ಹೊರತು ಆ ಬೇಸಿಗೆಕಾಲವನ್ನು ಕಳೆಯುವದು ದುಸ್ತರವೇ ಇಲ್ಲ. ಅಲ್ಲಿ ಉಷ್ಣತೆಯು ಅಷ್ಟು ಪ್ರಖರವಿದ್ದದರಿಂದ ಆ ಕಾಲದಲ್ಲಿ ಬೆಳಿಗ್ಗೆ ಎಂಟು-ಒಂಬತ್ತು ಗಂಟೆಯೊಳಗೆ ಬಹುಶಃ ಎಲ್ಲರೂ ತಮ್ಮ ಸ್ನಾನ-ಊಟ-ಉಡಿಗೆಗಳನ್ನು ತೀರಿಸಿಕೊಂಡು, ಹೊರಸಿನ ಮೇಲೆ ಬಿದ್ದು, ಬೀಸಣಿಕೆಯಿಂದ ಗಾಳಿಬೀಸಿಕೊಳ್ಳುತ್ತ ಸಾಯಂಕಾಲದ ನಾಲ್ಕು ಗಂಟೆಯ ವರೆಗೆ ಕಾಲವನ್ನು ಕಳೆಯುವರು. ಹೀಗೆ ಎಲ್ಲರೂ ಅನಿವಾರ್ಯಕ್ಕಾಗಿ ವಿಶ್ರಾಂತಿ ಅನುಭವಿಸಬೇಕಾದುದರಿಂದ ಆ ವಿಶಾಲವಾದ ಕಾಶೀಪಟ್ಟಣದಲ್ಲಿ ನಡುವಗಲಲ್ಲಿ ದೊಡ್ಡ ದೊಡ್ಡ ಓಣಿಗಳಲ್ಲಿಕೂಡ ತಿರುಗಾಡುವವರು ವಿರಳವೆಂದೇ ಹೇಳಬಹುದು. ಎಲ್ಲ ಮನೆಯ ಬಾಗಿಲುಗಳೂ ಇಕ್ಕಿದವೇ. ಈ ಪ್ರಕಾರದ ಕಡು ಬೇಸಿಗೆಯ ಕಾಲದಲ್ಲಿ ಒಂಬತ್ತು ಗಂಟೆಯಾದ ಬಳಿಕ ತನ್ನ ಪತಿಯು ಗಂಗಾಸ್ನಾನಕ್ಕೆ ಹೋಗುವದನ್ನು ನೋಡಿ, ಹೇಮಾವತಿಯು ಅವನನ್ನು ತಡೆದು —"ಈಗ ಬಿಸಿಲಾಗಲಿಲ್ಲವೆ? ಇಂದು ಮನೆಯಲ್ಲಿಯೇ ಸ್ನಾನ ಮಾಡಿದರಾಯಿತು. ಎಲ್ಲ ಅಡಿಗೆಯೂ ಸಿದ್ಧವಾಗಿದೆ. ಉಷ್ಣತೆಯು ಹೆಚ್ಚಿತೆಂದರೆ, ಊಟವು ಕೂಡ ಹೋಗುವದಿಲ್ಲ. ಆದ್ದರಿಂದ ಈಗ ಮನೆಯಲ್ಲಿಯೇ ಸ್ನಾನಮಾಡುವವಾಗಬೇಕು"ಎಂದು ಪ್ರಾರ್ಥಿಸಿದಳು.

ಆದರೆ ಅಮೃತರಾಯನು ಹಾಗೆ ಮಾಡದೆ, "ಗಂಗಾಸ್ನಾನಮಾಡದ ಹೊರತು ನನಗೆ ಸಮಾಧಾನವಾಗುವದಿಲ್ಲ ಆದ್ದರಿಂದ ಬಹು ಬೇಗ ಗಂಗಾಸ್ನಾನ ಮಾಡಿ ಬರುವೆ"ಎಂದು ಹೇಳಿ, ಪುನಃ ವಿಮಲೆಯ ಪೂರ್ವವೃತ್ತವನ್ನು ಮನಸ್ಸಿನಲ್ಲಿ ತಂದುಕೊಳ್ಳುತ್ತ ಗಂಗಾತೀರಕ್ಕೆ ನಡೆದನು.

## ಎಂಟನೆಯ ಪರಿಚ್ಛೇದ

### ಕ್ಷೇತ್ರ ನಿವಾಸ.

ಗಣಪತರಾಯನು ಬೆಳಗಾವಿಯನ್ನು ಬಿಟ್ಟು ಹೋದನಂತರ ನರಸಿಂಗರಾಯನು ಅವನನ್ನು ಬಹಳ ಹುಡಿಕಿಸಿದನು; ಆದರೆ ಗಣಪತರಾಯನ ಮುಂಜಾಗರೂಕತೆಯ ಮೂಲಕ ಅವನ ಪತ್ತೆಯು ಇವನಿಗಾಗಲಿಲ್ಲ. ಈ ಮಾತಿಗೆ ವಾರ ಪಕ್ಷ ತಿಂಗಳು ವರ್ಷಗಳೆನ್ನುತ್ತಾ ಹನ್ನೊಂದು ವರ್ಷಗಳು ಸಂದಿಹೋದವು. ಇಷ್ಟು ದೀರ್ಘ ಅವಧಿಯಲ್ಲಿ ಕೂಡ ನರಸಿಂಗರಾಯನಿಗೆ ಗಣಪತರಾಯನದಾಗಲಿ, ಅಮೃತರಾಯನದಾಗಲಿ ಸ್ವಲ್ಪವೂ ಸುಳುವು ಹತ್ತಲಿಲ್ಲ. ಮಗಳ ಬಾಲವಿವಾಹವನ್ನು ಮಾಡಿ ಅವಳ ಆಜನ್ಮ ದುಃಖಕ್ಕೆ ತಾನೇ ಕಾರಣನಾದಂತಾಗಿರುತ್ತೇನೆಂಬ ಅಖಂಡ ಚಿಂತೆಯಿಂದ ನರಸಿಂಗರಾಯನು ಬೆಯ್ಯುತ್ತಿದ್ದನು. ವಿಮಲೆಯು ಈಗ ಹದಿನಾರು ವರ್ಷದವಳಾಗಿದ್ದಳು. ಅವಳು ಬಹು ಚಲುವೆಯು. ತನ್ನ ತಾಯಿ-ತಂದೆಗಳಿಂದ ತನ್ನ ಬಾಲವಿವಾಹದ ಸಂಗತಿಯು ಅವಳಿಗೆ ತಿಳಿಯದಿದ್ದರೂ, ಪ್ರಿಯ ಗೆಳತಿಯರ ಬಾಯಿಂದ ಆ ಸಂಗತಿಯನ್ನು ಅವಳು ವಿಶದವಾಗಿ ಅರಿತಿದ್ದಳು. ಒಮ್ಮೆ ಓಣಿಯೊಳಗಿನ ಒಬ್ಬ ನತದೃಷ್ಟ ತಿಷ್ಟವಿಧವೆಯು ವಿಮಲೆಯನ್ನು ಕಂಡು ನಕ್ರಾಶ್ರುಗಳನ್ನುದುರಿಸುತ್ತ—"ತಂಗೀ, ಆದದ್ದಾಯಿತು. ದೈವದ ಮುಂದೆ ಓಡುವರಾರು? ನಿನ್ನ ಗಂಡನ ಪತ್ತೆಯಿಲ್ಲದಂತಾಗಿ ಈಗ ಹ್ಯಾಗೂ ಹನ್ನೊಂದು ವರ್ಷಗಳು ಕಳೆದಿರುತ್ತವೆ. ಶಾಸ್ತ್ರದ ಪ್ರಕಾರ 'ಇನ್ನೊಂದು ವರ್ಷ ಅವನ ಹಾದೀ ನೋಡಬಹುದಾಗಿದೆ. ಆ ವರೆಗೆ ಸಧವೆಯಂತೆ ಮೆರೆಯುವಾ! ತದನಂತರ ನೀನು ವಿಧವೆಯ ಆಚಾರವನ್ನು ಪರಿಗ್ರಹಿಸಲೇ ಬೇಕಾಗುವದು" ಎಂದು ವೈಯ್ಯಾರದಿಂದ ಸೂಚಿಸಿದಳು. ವಿಮಲೆಯು ಅವಳ ಮಾತಿಗೆ ಉತ್ತರವನ್ನೇ ಕೊಡಲಿಲ್ಲ; ಆದರೆ ಅದನ್ನು ಕೇಳಿ, ಅವಳ ಮನಸ್ಸಿನಲ್ಲಿ ಅತ್ಯಂತ ಭೀತಿಯುಂಟಾಯಿತು. ವಿವಾಹವಾದಾಗ ವಿಮಲೆಯು ತೀರ ಚಿಕ್ಕವಳು—ಐದೇ ವರ್ಷದವಳಿದ್ದದರಿಂದ ಅವಳಿಗೆ ತನ್ನ ಲಗ್ನವಾದದ್ದರ ನೆನಪೇ ಇರಲಿಲ್ಲ. ಆದರೆ ಬಾಲ್ಯದಲ್ಲಿ ಅಮೃತರಾಯನೊಡನೆ ಕೆಲವರ್ಷಗಳನ್ನು ಕಳೆದದ್ದರಿಂದ ಅವಳಿಗೆ ಅವನ ಮುಖಭಾವದ ಅಲ್ಪ-

ಸ್ವಲ್ಪ ನೆನಪಿತ್ತು. ವಿಮಲೆಗೆ ತಿಳಿಯಹತ್ತಿದಾಗಿನಿಂದ -ತನ್ನ ಲಗ್ನವು ಅಚ್ಯುತ ರಾಯನೊಡನೆ ಆಗಿತ್ತೆಂಬದನ್ನು ಕೇಳಿದಾಗಿನಿಂದ- ಅವಳು ತನ್ನ ಮನೋಭೂಮಿಕೆಯಲ್ಲಿ ಅಸ್ಪಷ್ಟವಾಗಿ ಮೂಡಿದ್ದ ಅಚ್ಯುತರಾಯನ ಆ ಮೂರ್ತಿಯನ್ನು ಸ್ಥಿರಗೊಳಿಸಿಕೊಂಡು ಅದನ್ನೇ ಮನಸಾ ಪೂಜಿಸತೊಡಗಿದ್ದಳು. ಹೀಗಿರಲು, ಶಾಸ್ತ್ರಕಾರರು ಪತ್ತೆ ಇಲ್ಲದ ಗಂಡನ ಹಾದಿಯನ್ನು ಹನ್ನೆರಡು ವರ್ಷಗಳವರೆಗೆ ನೋಡಿ, ತದನಂತರ ಅವನು ಮೃತನಾಗಿರುವನೆಂದು ತಿಳಿದು ಅವನ ಶ್ರಾದ್ಧವಿಧಿಯನ್ನು ಮಾಡಬೇಕೆಂದೂ ಅವನ ಹೆಂಡತಿಯು ಕೇಶ ವಪನಾದಿಗಳನ್ನು ಮಾಡಿಕೊಂಡು ವಿಧವಾಚರಣೆಯಿಂದ ನಡೆಯಬೇಕೆಂದೂ, ಹೇಳಿದ್ದ ಆಜ್ಞೆಯನ್ನು ಅವಳು ಪಾಲಿಸುವ ಬಗೆ ಹೇಗೆ? ಅವಳ ಮನಸ್ಸು "ನಿನ್ನ ಗಂಡನು ಖಂಡಿತವಾಗಿ ಸತ್ತಿಲ್ಲ. ಬದುಕಿರುತ್ತಾನೆ" ಎಂದು ಅವಳಿಗೆ ಆಗಾಗ್ಗೆ ಸೂಚಿಸುತ್ತಿತ್ತು. ಆದರಿಂದ ಅವಳು ವಿಧವಾಚಾರ ಸ್ವೀಕರಿಸಲಿಕ್ಕೆ ಪ್ರವೃತ್ತಳಾಗಲಿಲ್ಲ.

ವಿಮಲೆಯು ದೊಡ್ಡವಳಾದ ಹಾಗೆ ನರಸಿಂಗರಾಯನು ಅವಳಿಗೆ ಓದು-ಬರಹಗಳನ್ನು ಕಲಿಸಿದನಲ್ಲದೆ, ಉತ್ತಮ ಗೃಹಶಿಕ್ಷಣವನ್ನೂ ಕೊಡಿಸಿದನು. ವಿಮಲೆಯು ಗಂಡನು ಇಲ್ಲದಂತಾಗಿ ಹನ್ನೆರಡು ವರ್ಷಗಳು ತುಂಬಲಿಕ್ಕೂ, ನರಸಿಂಗರಾಯನು ಪೆನ್‌ಶನ್ ತೆಗೆದುಕೊಳ್ಳಲಿಕ್ಕೂ ಗಂಟೇ ಬಿದ್ದಿತು. ಕೂಡಲೆ ಅವನು ಇನ್ನು ಹಳೇ ಶಿಷ್ಟಸಾಂಪ್ರದಾಯಗಳು ರೂಢವಾಗಿರುವ ಈ ಬೆಳಗಾವಿಯಲ್ಲಿದ್ದು, ತನ್ನ ಮಗಳ ವಿಷಯವಾಗಿ ಕಂಡ ಕಂಡ ಜನರಿಂದ ಕ್ಷುಲ್ಲಕ ಮಾತುಗಳನ್ನಾಡಿಸಿಕೊಳ್ಳುವದಕ್ಕಿಂತ ನವನಾಗರಿಕತೆಯಿಂದೊಪ್ಪುವ ಪುಣೆಗೆ ಹೋದರೆ, ತನ್ನ ಮಗಳ ಶಿಕ್ಷಣಕ್ಕೂ, ಮಗನ ನೌಕರಿಗೂ ಅನುಕೂಲವಾಗುವದೆಂದೆಣಿಸಿ, ಪರಿವಾರ ಸಹಿತ ಅಲ್ಲಿಗೆ ಹೊರಡಲುದ್ಯುಕ್ತನಾದನು.

ನರಸಿಂಗರಾಯನಿಗೆ ಅಚ್ಯುತರಾಯನೆಂಬೊಬ್ಬ ಮಗನಿದ್ದನು. ಅಚ್ಯುತರಾಯನು ವಿಮಲೆಗಿಂತ ಹತ್ತು ವರ್ಷಗಳಿಗೆ ಹಿರಿಯನು. ನರಸಿಂಗರಾಯನು ಪೆನ್‌ಶನ್ ತಕ್ಕೊಂಡಾಗ ಅಚ್ಯುತರಾಯನು ಪುಣೆಯ ಯಾವದೊಂದು ಕಾಲೇಜದಲ್ಲಿ ಪ್ರೊಫೇಸರನಾಗಿದ್ದನು. ಆದರಿಂದ ನರಸಿಂಗರಾಯನಿಗೆ ಪುಣೆಯಲ್ಲಿ ಬೇರೆ ಮನೆಮಾಡುವ ಅವಶ್ಯಕತೆಯೇ ಬೀಳಲಿಲ್ಲ. ಅವನು ಬೆಳಗಾವಿಯಲ್ಲಿಯ ತನ್ನ ಎಲ್ಲ ಸ್ಥಾವರ-ಜಂಗಮ ಆಸ್ತಿಗಳನ್ನು ಮಾರಿ-ತೀರಿ ಪುನಃ ಬೆಳಗಾವಿಗೆ ಬರುವ ಆಶೆ ಕೂಡ ಇಡದೆ, ಪುಣೆಯ ಹಾದೀ ಹಿಡಿದನು. ಹೀಗೆ ನರಸಿಂಗರಾಯನು ಗುಡಚಾಪಿ ಕಟ್ಟಿಕೊಂಡು ಹೋದದ್ದರಿಂದಲೇ, ತನ್ನ ತಂದೆಯ ನಿಧನದನಂತರ ಅಚ್ಯುತರಾಯನು ವಿಮಲೆಯ

ಹಾಗು ಅವಳ ತಂದೆ-ತಾಯಿಗಳ ವಿಷಯವಾಗಿ ಬೆಳಗಾವಿಯಲ್ಲಿ ಎಷ್ಟು ಹುಡುಕಿಸಿದರೂ ಅವನಿಗೆ ಅವರ ಪತ್ತೆ ಹತ್ತಲಿಲ್ಲ.

ಮುಂದೆ ಬಂದ ಮೂರು ವರ್ಷಗಳ ಮೇಲೆ ನರಸಿಂಗರಾಯನು ಪರಲೋಕವನ್ನೈದಿದನು. ತದನಂತರ ಆರೇ ತಿಂಗಳಲ್ಲಿ ವಿಮಲೆಯ ತಾಯಿಯೂ ತಂದೆಯನ್ನನುಸರಿಸಿ ನಡೆದಳು. ಈ ದಂಪತಿಗಳು ತೀರಿಹೋದ ಸಂಗತಿಯನ್ನು ಕೇಳಿ ಅಚ್ಯುತರಾಯನ ಮಿತ್ರನೂ, ಸಹಪಾಠಿಯೂ ಆದ ಶಿವರಾಯನು ಅವನನ್ನು ಮಾತಾಡಿಸುವದಕ್ಕಾಗಿ ತನ್ನ ಹೆಂಡತಿಯಾದ ಕಮಲೆಯೊಡನೆ ಅವನ ಮನೆಗೆ ಬಂದಿದ್ದನು.. ಅಂದಿನಿಂದಲೇ ವಿಮಲೆಯು ಕಮಲೆಯ ಗೆಳತಿಯಾದಳು. ಕಮಲೆಯಂತೆ ವಿಮಲೆಯಾದರೂ ಬಹು ಸೌಜನ್ಯಸ್ವಭಾವದವಳೂ, ಸದ್ಗುಣಿಯೂ ಆದ್ದರಿಂದ "ಸಮಾನಶೀಲೇಷು ಸಖ್ಯಂ" ಎಂಬಂತೆ ಅವರೀರ್ವರಲ್ಲಿ ಸಖ್ಯವುಂಟಾಯಿತು. ವಿಮಲೆಯು ದಿನಾಲು ಕಮಲೆಯ ಮನೆಗೆ ಬರಹತ್ತಿದ್ದಳು. ಹಾಗು ಸಂದರ್ಭಾನುಸಾರ ಕೆಲಕೆಲವು ದಿನಗಳವರೆಗೆ ಅವಳು ಅಲ್ಲಿಯೇ ಇರಹತ್ತಿದಳು. ಅದರಿಂದ ಅವರೀರ್ವರಲ್ಲಿಯ ಸಖ್ಯವು ಬೆಳೆದು ಅವರು ಒಬ್ಬರನ್ನೊಬ್ಬರು ಅಗಲಿ ಇರದಾದರು. ವಿಮಲೆಯು ಕಮಲೆಗಿಂತ ವಯಸ್ಸಿನಿಂದ ದೊಡ್ಡವಳಾದ್ದರಿಂದ ಕಮಲೆಯು ಅವಳಿಗೆ ಅಕ್ಕನೆಂದು ಸಂಬೋಧಿಸುತ್ತಿದ್ದಳು. ಶಿವರಾಯನೂ ಮಾಧವನೂ ಕೂಡ ವಿಮಲೆಯನ್ನು ಅಕ್ಕನೆಂದೇ ಕರೆಯುತ್ತಿದ್ದರು. ಅವರು ಅವಳನ್ನು ತಮ್ಮ ಸಹೋದರಿಗಿಂತ ಹೆಚ್ಚು ಪ್ರೀತಿಸುತ್ತಿದ್ದರು.

ಹೀಗಿರಲು, ಹಿಂದೆ ಹೇಳಿದಂತೆ ಶಿವರಾಯನು ಆಕಸ್ಮಿಕವಾಗಿ ಗುಪ್ತನಾಗಲು ಕಮಲೆಯು ಬಹು ವಿಪತ್ತಿಗೊಳಗಾದಳು. ಆಗ ಅವಳ ತಂದೆಯೂ, ತಾಯಿಯೂ ಬಂದು ಕೆಲದಿನಗಳ ವರೆಗೆ ಇದ್ದು ಅವಳನ್ನು ಸಮಾಧಾನಪಡಿಸಲು ಯತ್ನಿಸಿದರು. ಆದರೆ ಕಮಲೆಯ ಮನಸ್ಸು ಯಾವ ಬಹಿರ್ವ್ಯಾಪಾರದಿಂದಲೂ ಸ್ವಲ್ಪವೂ ಸಮಾಧಾನವಾಗಲಿಲ್ಲ. ಆ ವಿಪತ್ತಿನ ಪ್ರಸಂಗದಲ್ಲಿ ಅವಳಿಗೆ ತನ್ನಂತೆ ಪತಿಯಿಂದ ವಂಚಿತಳಾದ ವಿಮಲೆಯಿಂದಲೇ ಹುಸ ವಿರಾಮವೆನಿಸುತ್ತಿತ್ತು. ಯಾಕಂದರೆ, ವಿಮಲೆಗೆ ಬಾಲ್ಯದಲ್ಲಿಯೇ ಪತಿಯ ವಿಯೋಗವಾಗಿ ಅಖಂಡ ದುಃಖವುಂಟಾಗಿದ್ದು, ತನಗೆ ಮೊನ್ನೆ ಮೊನ್ನೆ ಪತಿವಿಯೋಗವಾದ್ದರಿಂದ ತನ್ನ ಪತಿವಿಯೋಗದ ದುಃಖವು ಅವಳಿಗಿಂತಲೂ ಹುಸ ಸೌಮ್ಯವಾದದ್ದೆಂದು ಅವಳಿಗೊಮ್ಮೆ ಅನಿಸಿದರೆ, ಮತ್ತೊಮ್ಮೆ ಪತಿಪ್ರೇಮದ ಸ್ವಾದವು ಕೊಂಚಕೂಡ ತಿಳಿಯದಿರುವಾಗ ವಿಮಲೆಗೆ ಪತಿವಿಯೋಗವಾಗಿದ್ದು, ತನಗೆ ಅದರ ಸಂಪೂರ್ಣ ಅನುಭವವು ಬಂದ

ನಂತರ ಪತಿವಿಯೋಗವಾದ್ದರಿಂದ ತನ್ನ ದುಃಖವು ಅವಳಿಗಿಂತ ಎಷ್ಟೋ ಪಾಲು ಮಿಗಿಲಾದದ್ದೆಂದು ಅವಳಿಗನಿಸುತ್ತಿತ್ತು.

ಕಮಲೆಯ ತಂದೆ-ತಾಯಿಗಳು ಶಿವರಾಯನು ಹೊರಟುಹೋದಬಳಿಕ ತಿಂಗಳೊಪ್ಪತ್ತು ಪುಣೆಯಲ್ಲಿದ್ದು, ಮಗಳ ಆಸ್ತಿ-ಪಾಸ್ತಿಗಳ ವ್ಯವಸ್ಥೆಯನ್ನು ಮಾಡಿ, ಅವಳನ್ನು ತಮ್ಮ ಊರಿಗೆ ಕರದೊಯ್ಯಬೇಕೆಂದು ಆಲೋಚಿಸಿದರು; ಆದರೆ ಕಮಲೆಯು ಅವರ ಮಾತಿಗೆ ಸಮ್ಮತಿಸಲಿಲ್ಲ. ಕೆಲದಿನಗಳವರೆಗೆ ತಾನು ಪುಣೆಯಲ್ಲಿಯೇ ಇದ್ದು, ನಂತರ ಯಾವದೊಂದು ಕ್ಷೇತ್ರದಲ್ಲಿ ಶೇಷಾಯುಷ್ಯವನ್ನು ಕಳೆಯುವ ತನ್ನ ನಿರ್ಧಾರವನ್ನು ಅವಳು ತಂದೆ-ತಾಯಿಗಳಿಗೆ ತಿಳಿಸಲು, ಅವರು ಮಗಳ ಮಾತಿಗೆ ಅನಿವಾರ್ಯವಾಗಿ ಒಪ್ಪಿ ತಮ್ಮ ಊರಿಗೆ ಹೊರಟುಹೋದರು.

ತಂದೆ-ತಾಯಿಗಳು ಹೊರಟುಹೋದ ಮೇಲೆ ಮನೆಯಲ್ಲಿ ಒಬ್ಬಳೇ ಕಾಲ ಕಳೆಯುವದು ಕಮಲೆಗೆ ಬಹು ದುಸ್ತರವೆನಿಸಿತು. ನಡುನಡುವೆ ಸುಮಲೆಯು ಬಂದು ಹೋಗುತ್ತಿದ್ದರೂ ಅಷ್ಟರಿಂದ ಅವಳಿಗೆ ಸಮಾಧಾನವಾಗುತ್ತಿರಲಿಲ್ಲ. ಆಗ ಅವಳು ತನ್ನ ನಾಗಪೂರ ಮುಂತಾದ ಕಾರಖಾನೆಗಳ ಚೀಫ ಇಂಜನೀಯರನಾದ ರಾಮರಾಯನನ್ನು ಒಮ್ಮೆ ಕರೆಸಿಕೊಂಡು, ಅವನಿಗೆ ತಾನು ಇನ್ನು ವಾರಣಾಸೀ ಕ್ಷೇತ್ರದಲ್ಲಿಯೇ ತನ್ನ ಶೇಷಾಯುಷ್ಯವನ್ನು ಕಳೆಯುವವಳೆಂತಲೂ, ಅಲ್ಲಿ ತನ್ನ ಪತಿಯ ಸ್ಮಾರಕಕ್ಕಾಗಿ ಒಂದು ಭವ್ಯವಾದ ಮಂದಿರ ಹಾಗು ತನ್ನಂತೆ ಪತಿಯಿಂದ ವಂಚಿತರಾದ ಅನಾಥ ಹೆಣ್ಣುಮಕ್ಕಳಿಗಾಗಿ ಛತ್ರದಂಥ ಒಂದು ಅನಾಥ ಶಾಲೆಯನ್ನು ಕಟ್ಟಿಸಿ, ಅವುಗಳ ವಿನಿಯೋಗಕ್ಕಾಗಿ ತನ್ನ ಕಾರಖಾನೆಗಳ ಆದಾಯವನ್ನು ಹಚ್ಚಿಕೊಡಬೇಕೆಂದೂ ಹೇಳಿದಳು. ಆಜ್ಞೆಯ ಮೇರೆಗೆ ರಾಮರಾಯನು ಆ ಕೆಲಸಕ್ಕೆ ತೊಡಗಿದನು.

ಕಮಲೆಯು ಬೇರೆ ಹೆಂಗಸರಂತೆ ಮುಂದಿಯ ಮನೆಗೆ ಲೇಪಮಾಗಿ ಹೋಗುತ್ತಿರಲಿಲ್ಲ. ಆಗರಲ್ಲಿಯೂ ಗಂಡನು ಹೊರಟುಹೋದ ಕೆಲವರ್ಷಗಳ ವರೆಗೆ ಅವಳು ತಮ್ಮ ವಾಡೆಯ ಹೊರಗೆ ಕೂಡ ದಾಟಿರಲಿಲ್ಲ. ಇನ್ನೆರಡು ದಿನಗಳಿಗೆ ಅವಳು ಪುಣೆಯನ್ನು ಬಿಟ್ಟು ವಾರಣಾಸೀ ಕ್ಷೇತ್ರನಿವಾಸಕ್ಕೆ ಹೋಗಬೇಕೆಂದು ನಿಶ್ಚಯಿಸಿದಳು; ಹಾಗು ಈ ಸಂಗತಿಯನ್ನು ಸುಮಲೆಗೆ ತಿಳಿಸಿ, ಅವಳ ಸಮ್ಮತಿಯನ್ನೂ ಪಡೆದಿದ್ದಳಷ್ಟೇ ಅಲ್ಲ, ಅವಳನ್ನೂ ತನ್ನ ಸಂಗಡ ಬರಲು ಕೇಳಿಕೊಂಡಿದ್ದಳು. ಆದರೆ ಆಗ ಆಕೆಯು ಕಮಲೆಗೆ ಹೇಳಿದ್ದೇನಂದರೆ—ತಂಗೀ ಕಮಲಕ್ಕಾ, ನಿನ್ನ ಯೋಜನೆಯು ಸರಿಯಾದದ್ದಲ್ಲೆಂದು ಯಾರು ಹೇಳುವರು? ನಮ್ಮಂಥ ಅನಾಥ

ಹೆಂಗಳೆಯರು ಸಂಸಾರದಲ್ಲಿದ್ದು ಮಾಡುವದಾದರೂ ಏನು? ಆದರೆ ನಾನು ನಿನ್ನಂತೆ ಸ್ವತಂತ್ರಳಲ್ಲ. ನಾನು ನಮ್ಮ ಅಣ್ಣನ ಮನೆಯಲ್ಲಿರುತ್ತಿರುವದರಿಂದ ಅಣ್ಣನ ಹಾಗು ಅತ್ತಿಗೆಯ ಒಪ್ಪಿಗೆಯನ್ನು ಪಡೆಯಬೇಕಾಗುತ್ತದೆ. ಆದರೆ ಆ ಒಪ್ಪಿಗೆ ಪಡೆಯುವ ಕೆಲಸವು ನನ್ನಿಂದ ಹೇಗೆ ಸಾಧ್ಯವಾಗಬೇಕು? 'ನಮ್ಮಣ್ಣನಿಗೆ ಬೇರೆ ಅಣ್ಣತಮ್ಮಂದಿರಾಗಲಿ, ಅಕ್ಕತಂಗಿಯರಾಗಲಿ ಯಾರೂ ಇರುವದಿಲ್ಲ. ಅಲ್ಲದೆ ನಮ್ಮ ಅತ್ತಿಗೆಯ ಬಳಗದವರಾದರೂ ವಿಶೇಷ ಜನರಿಲ್ಲ. ನಮ್ಮ ತಂದೆ-ತಾಯಿಗಳು ಸಾಯುವಕಾಲಕ್ಕೆ ನನ್ನನ್ನು ನಮ್ಮಣ್ಣನಿಗೊಪ್ಪಿಸಿ ಈಕೆಯನ್ನು ಎಂಥ ವಿಪತ್ತಿನಲ್ಲಿಯೂ ನೀನು ಸಂರಕ್ಷಿಸಬೇಕೆಂದು ಅವನಿಂದ ವಚನಪಡಕೊಂಡಿರುತ್ತಾರೆ. ಆದರಿಂದ ಅವನು ನನ್ನನ್ನು ನಿನ್ನೊಡನೆ ವಾರಣಾಸಿಗೆ ಕಳಿಸುವದು ಸುಲಭಸಾಧ್ಯವಲ್ಲ. ಆದರೆ ನೀನು ಸ್ವತಃ ಅವನನ್ನು ಕೇಳಿದರೆ, ಅವನು ನಿನ್ನಮಾತನ್ನು ಅಲ್ಲಗಳೆಯಲಿಕ್ಕಿಲ್ಲ.

ಇಂದು ಅಚ್ಯುತರಾಯನು ಕಾಲೇಜದ ಸೂಟಿಯ ವೇಳೆಯಲ್ಲಿ ಮನೆಗೆ ಬಂದು ಜಲಪಾನವನ್ನು ಮಾಡುತ್ತಿರಲು, ತಲೆವಾಗಿಲ ಬಳಿಯಲ್ಲಿ ಯಾವದೋ ಒಂದು ದಮನೀಗಾಡಿಯು ಬಂದು ನಿಂತಿತು. ಯಾರು ಬಂದರೆಂದು ಅವನು ಕುಳಿತ ಕೋಣೆಯ ಕಿಟಿಕಿಯೊಳಗಿಂದಲೇ ಹೊರಗೆ ಇಣಿಕಿ ನೋಡಲು, ಬುರುಕಿ ಹಾಕಿಕೊಂಡ ಒಬ್ಬಸ್ತ್ರೀಯು ತನ್ನ ಮನೆಯಲ್ಲಿ ಪ್ರವೇಶಿಸುವದನ್ನು ಅವನು ಕಂಡನು. ಆ ಸ್ತ್ರೀಯು ಒಳಗೆ ಹೋದ ಕೆಲನಿಮಿಷಗಳಮೇಲೆ ಅಚ್ಯುತರಾಯನ ಹೆಂಡತಿಯು ಗಂಡನ ಬಳಿಗೆ ಬಂದು—ಕಮಲಾ ಸುಂದರಿಯು ಬಂದಿದ್ದು, ನಿಮ್ಮನ್ನು ಕಾಣಬೇಕೆಂದಿರುವಳು, ಎಂದು ಹೇಳಿದಳು.

ಹೆಂಡತಿಯ ನುಡಿಯನ್ನು ಕೇಳಿ ಅಚ್ಯುತರಾಯನು ವಿಸ್ಮಯಚಕಿತನಾದನು. ತನ್ನನ್ನು ಹಿರಿಯ ಅಣ್ಣನಂತೆ ಭಾವಿಸುತ್ತಿದ್ದ ಕಮಲೆಯು ತಮ್ಮ ಮನೆಗೆ ಬಂದಿರುವಳೆಂಬದನ್ನು ಅವನು ಅರಿತಿದ್ದನು; ಆದರೆ ಅವಳು ಈ ವರೆಗೆ ತನ್ನೊಡನೆ ಒಮ್ಮೆ ಕೂಡ ಮಾತಾಡಿದ್ದೂ, ಇಲ್ಲವೆ ತನ್ನೆದುರಿಗೆ ಕೂಡ ಹಾಯ್ದು ಹೋದದ್ದು ಅವನಿಗೆ ಗೊತ್ತಿರಲಿಲ್ಲ. ಇಂಥ ಕಮಲೆಯು ಇಂದು ತನ್ನನ್ನೇಕೆ ಕರೆಯುತ್ತಿರಬಹುದು? ಇವಳು ಮತ್ತಾವ ಸಂಕಟಕ್ಕೊಳಗಾಗಿರಬಹುದು? ಎಂದು ಆಲೋಚಿಸುತ್ತ ಅವನು ತನ್ನ ಕೂಡ್ರುವ ಕೋಣೆಯಿಂದ ನಡುಮನೆಗೆ ಬಂದನು. ಕೂಡಲೆ ಕಮಲೆಯು ಅಲ್ಲಿಗೆ ಬಂದು ಅವನ ಎರಡೂ ಪಾದಗಳನ್ನು ಗಟ್ಟಿಯಾಗಿ ಹಿಡಿದುಕೊಂಡು—ಅಣ್ಣಾ, ನಾನು ನಿನ್ನ ಬಳಿಗೆ ಭಿಕ್ಷೆ ಬೇಡುವದಕ್ಕಾಗಿ ಬಂದಿರುತ್ತೇನೆ; ನೀನು ಅದನ್ನು ಕೊಡುತ್ತೇನೆನ್ನುವವರೆಗೆ ನಾನು ನಿನ್ನ ಕಾಲು

ಗಳನ್ನು ಬಿಡುವವಳಲ್ಲ, ಎಂದು ನುಡಿದದ್ದನ್ನು ಕೇಳಿ ಅಚ್ಯುತರಾಯನು ಹತಬುದ್ಧಿಯಾದನು. ಕಮಲೆಗೆ ಐಶ್ವರ್ಯಕ್ಕೆ ಕಡಿಮೆಯಿಲ್ಲ; ಹೀಗಿರಲು ತಿಂಗಳಿಗೆನೂರೈವತ್ತು ರೂಪಾಯಿ ಸಂಬಳಪಡೆಯುವ ನನ್ನಂಥಸಾಮಾನ್ಯನು ಇವಳಿಗೇನು ಬಿಕ್ಕೆನೀಡಬೇಕು? ಎಂಬದು ಅವನಿಗೆ ತಿಳಿಯದಾದ್ದರಿಂದ ಅವನು ಏನೂ ಹೇಳದೆ ಸುಮ್ಮನೆ ನಿಂತನು.

ಹೀಗೆ ನಿರುತ್ತರನಾದ ಅಚ್ಯುತರಾಯನನ್ನುನೋಡಿ ಕಮಲೆಯು—'ಅಣ್ಣಾ, ನೀನು ಖಂಡಿತವಾಗಿ ನೀಡಬಹುದೆಂದೆಣಿಸಿಯೇ ನಾನು ನಿನ್ನಲ್ಲಿಗೆ ಬಿಕ್ಕೆಬೇಡಬಂದಿರುವೆನು. ಕೊಡುತ್ತೇನೆಂದು ಒಡನುಡಿ. ಅಂದರೆ ಕಾಲು ಬಿಡುತ್ತೇನೆ' ಎನ್ನಲು,

ಕಿಂಕರ್ತವ್ಯವಿಮೂಢನಾದ ಅಚ್ಯುತರಾಯನು—''ನೀನು ಏನನ್ನು ಬಯಸುತ್ತೀಯೆಂಬದನ್ನು ತಿಳಿಸಿದರೆ ಕೊಡಲಿಕ್ಕೆ ಅಡ್ಡಿಯಿಲ್ಲ. ಕಮಲಕ್ಕಾ, ನಿನ್ನಂಥ ಶ್ರೀಮಾನಳಿಗೆ ಬಿಕ್ಕೆನೀಡುವ ಯೋಗ್ಯತೆಯು ನನ್ನಗೇ?'' ಎಂದು ಪ್ರಶ್ನೆಮಾಡಿದನು.

''ನಿನ್ನಲ್ಲಿದ್ದದ್ದನ್ನೇ ನಾನು ಬಯಸುತ್ತೇನೆ. ಕೊಡುತ್ತೇನೆಂದು ಹೇಳಿದರೆ, ತಿಳಿಸುತ್ತೇನೆ.''

''ನನ್ನಲ್ಲಿಯ ಯಾವ ವಸ್ತುವನ್ನು ಕೊಡುವದರಿಂದ ನಿನಗೆ ಸಂತುಷ್ಟಿಯಾಗುವದೋ ಆದನ್ನು ನಾನು ಖಂಡಿತವಾಗಿ ಕೊಡುತ್ತೇನೆ.''

ಹೀಗೆಂದು ಹೇಳಿದ ಅಚ್ಯುತರಾಯನ ವಚನವನ್ನು ಕೇಳಿ, ಕಮಲೆಯು ಬಳಿಯಲ್ಲಿಯೇ ನಿಂತಿದ್ದ ವಿಮಲೆಯ ಕೈಯನ್ನು ಹಿಡಿದು— ''ಈ ವಿಮಲಕ್ಕನನ್ನು ನನಗೆ ದಾನವಾಗಿ ಕೊಟ್ಟು ಬಿಡಣ್ಣಾ!'' ಎಂದು ಯಾಚಿಸಿದಳು.

ಕಮಲೆಯ ಆ ನುಡಿಯನ್ನು ಕೇಳಿ, ಆ ಮಾಸ್ತರನ ದೇಹದಲ್ಲಿ ಜೀವ ಬಂದಿತು. ಶಾಲೆಯ ಮಾಸ್ತರರು ಸರ್ವಸಾಧಾರಣವಾಗಿ ಸಂಸಾರಜ್ಞಾನವಿಹೀನರೆ ಆಗಿರುತ್ತಾರೆ. ಅವರಿಗೆ ಮೇಲು ಬುದ್ಧಿಯು ಕಡಿಮೆಯೆಂದು ಹೇಳುವರು. ಆದರಿಂದ ಕಮಲೆಯು ಭಿಕ್ಷೆ ಬೇಡ ಬರಲು, ಅಚ್ಯುತರಾಯ ಮಾಸ್ತರನಿಗೆ ಅತ್ಯಂತ ಭಯವುಂಟಾಗಿತ್ತು. ಈಗ ಆ ಭಯವಿರದಾದ್ದರಿಂದ ಅವನು—''ಕಮಲಕ್ಕಾ, ಈ ಪತಿವಂಚಿತಳಾದ ವಿಮಲೆಯನ್ನು ಕಟ್ಟಿಕೊಂಡು ನೀನು ಮಾಡುವದಾದರೂ ಏನು?

''ಅಣ್ಣಾ, ನಾನು ವಾರಣಾಸಿಗೆ ಹೋಗಬೇಕೆಂದಿದ್ದೇನೆ. ನನ್ನ ಬಳಿಯಲ್ಲಿ ನನ್ನವರೆಂಬುವರಾರೂ ಇಲ್ಲದ್ದರಿಂದ ವಿಮಲಕ್ಕನನ್ನು ಸಂಗಡ ಕರೆದೊಯ್ಯಬೇಕೆಂದಿರುವೆನು.''

ಈ ವರೆಗೆ ಬದಿಯಲ್ಲಿ ನಿಂತು ಇವರ ಸಂಭಾಷಣವನ್ನು ಕೇಳುತ್ತಿದ್ದ ಅಚ್ಯುತರಾಯನ ಹೆಂಡತಿಯು ಕಮಲೆಯನ್ನು ಕುರಿತು—"ಅತ್ತಿಗೆಯವರೇ, ನನ್ನನ್ನೂ ಕರಕೊಂಡು ನಡೆಯಿರಿ."

ಆಗ ಕಮಲೆಯು ಒಂದು ನಿಟ್ಟುಸಿರುಗರೆದು— ಅತ್ತಿಗೀ, ನಿನ್ನಂಥ ಭಾಗ್ಯವು ನಮಗೆಲ್ಲಿಂದ ಬರಬೇಕು? ನಿನ್ನ ಪತಿಯ ಸಾನ್ನಿಧ್ಯದಲ್ಲಿರುವದೇ ನಿನಗೆ ಕ್ಷೇತ್ರನಿವಾಸವು; ನಿನಗೆ ಬೇರೆ ತೀರ್ಥ-ಕ್ಷೇತ್ರಗಳ ಅವಶ್ಯಕತೆಯೇ ಇರುವದಿಲ್ಲ. ಆದರೂ ಅತ್ತಿಗೀ, ನಾವು ಅಲ್ಲಿ ಹೋದಬಳಿಕ ಅಣ್ಣನಿಗೆ ಪತ್ರ ಬರೆಯುವೆವು. ಮುಂದಿನ ದೀಪಾವಳಿಯ ರಜೆಯಲ್ಲಿ ನೀವೆಲ್ಲರೂ ಅಲ್ಲಿಗೆ ಬರುವಿರಂತೆ, ಎಂದು ಹೇಳಿ, ಆವಳನ್ನು ಸಮಾಧಾನಗೊಳಿಸಿ, ವಿಮಲೆಯನ್ನು ಸಂಗಡ ಕರಕೊಂಡು ತನ್ನ ಮನೆಗೆ ಬಂದಳು; ಹಾಗು ಮರುದಿನವೇ ವಾರಣಾಸೀಕ್ಷೇತ್ರನಿವಾಸಕ್ಕಾಗಿ ಪುಣೆಯಿಂದ ಹೊರಟಳು.

ವಾರಣಾಸಿ ಕ್ಷೇತ್ರದಲ್ಲಿರಹತ್ತಿದಬಳಿಕ ಕಮಲೆಯು ಅಲ್ಲಿಯೊಂದು ಭವ್ಯ ಮಂದಿರ ಹಾಗು ಛತ್ರವನ್ನು ಕಟ್ಟಿಸಹತ್ತಿದ್ದನ್ನೂ, ಆಗ ಒಂದು ದಿನ ವಿಮಲೆಯು ಅಮೃತರಾಯನಿಗೆ ಗಂಗಾತೀರದಲ್ಲಿ ಕಾಣಿಸಿಕೊಂಡದ್ದನ್ನೂ ವಾಚಕರು ಈ ಮೊದಲೇ ಓದಿ ತಿಳಿದಿರುತ್ತಾರೆ; ಆದರೆ ಕೃತಘ್ನನಾದ ರಾಮಚಂದ್ರನು ಶಿವರಾಯನ ಮನೆಯಿಂದ ಹೊರಹೊರಟ ತರುವಾಯ ಆವನ ಗತಿಯೇನಾಯಿತೆಂಬದನ್ನು ತಿಳಿಯುವ ಸಲುವಾಗಿ ನಮ್ಮ ವಾಚಕರು ಹಾತೊರೆಯುತ್ತಿರಬಹುದಾದ್ದರಿಂದ, ಇನ್ನು ನಾವು ಅವನ ಸಮಾಚಾರವನ್ನಷ್ಟು ತಕ್ಕೊಳ್ಳೋಣ ನಡೆಯಿರಿ.

# ಒಂಬತ್ತನೆಯ ಪರಿಚ್ಛೇದ

## ತನ್ನ ಪೇಟು ತನಗೇ ತಿರುಗಿತು.

ಟಿನ್ನಿನ ಸಂದುಕವನ್ನು ತಲೆಯ ಮೇಲಿಟ್ಟುಕೊಂಡು ಶಿವರಾಯನ ವಾಡೆಯಿಂದ ಹೊರಬಿದ್ದ ರಾಮಚಂದ್ರನು ಕೆಲದೂರ ಕ್ರಮಿಸಿ, ಒಂದು ಪೋಲೀಸ ಚೌಕಿಯ ಮುಂದಿನಿಂದ ನಡೆದಿರಲು, ಆಗ ಆ ಚೌಕಿಯಲ್ಲಿ ಕಾವಲುಗಾರನಾಗಿದ್ದ ಶಿಪಾಯಿಗೆ ಇವನ ಬಗ್ಗೆ ಸಂಶಯವುಂಟಾಯಿತು. ಯಾಕಂದರೆ ವೇಷದಿಂದ ಇವನು ಸನ್ಮಾನಿತ ಗೃಹಸ್ಥನಂತೆ ತೋರುತ್ತಿದ್ದರೂ, ತಲೆಯ ಮೇಲೆ ಜಂಗುಹತ್ತಿದ ಟಿನ್ನಿನ ಪೆಟ್ಟಿಗೆಯನ್ನು ಹೊತ್ತಿದ್ದನಾದ್ದರಿಂದ, ಇವನು ಖ್ಯಾತಬದ್‌ಮಾಷನೆಂದೂ, ಯಾರಲ್ಲಿಯೋ ಕಳವು ಮಾಡಿಕೊಂಡು ನಡೆದಿರುವನೆಂದೂ ತರ್ಕಿಸಿ, ಆ ಶಿಪಾಯಿಯು ರಾಮಚಂದ್ರನನ್ನು ತಡೆದು, ನೀನು ಯಾರು? ಎಲ್ಲಿಗೆ ನಡೆದಿರುವೆ? ಎಂದು ಕೇಳಿದನು.

ರಾಮಚಂದ್ರನಂಥ ವಿಕ್ಷಿಪ್ತ ಪ್ರಕೃತಿಯವನಿಗೆ ಆ ಸೊಟ್ಟ ಶಿಪಾಯಿಯ ಜರಬು ಸಹನವಾದೀತೇ? ಅವನು ಆ ಶಿಪಾಯಿಗೆ ಸರಳವಾದ ಉತ್ತರ ಕೊಡದೆ, ತಿರಸ್ಕಾರದಿಂದ ಒಮ್ಮೆ ಅವನ ಕಡೆಗೆ ನೋಡಿ, ಹಾಗೆಯೇ ಮುಂದಕ್ಕೆ ಸಾಗುತ್ತಿದನು. ಆಗ ಆ ಶಿಪಾಯಿಯ ಸಂದೇಹವು ದೃಢವಾಗಿ ಅವನು ತನ್ನ ಕೈಯೊಳಗಿನ ದಂಡುಕದಿಂದ ಅವನಿಗೊಮ್ಮೆ ಚನ್ನಾಗಿ ಏಟು ಹಾಕಲು, ರಾಮಚಂದ್ರನ ತಲೆಯಮೇಲಿನ ಸಂದುಕವು ಮುಂಗಾರಿಯ ಗುಡುಗು-ಸಿಡಿಲಿನಂತೆ, ಭಯಂಕರ ಸಪ್ಪಳಮಾಡುತ್ತ ನೆಲವನ್ನು ಆಶ್ರಯಿಸಿತು. ಆಗ ರಾಮಚಂದ್ರನು ತುಸ ಮೆತ್ತಗಾಗಿ ಶಿಪಾಯಿಯನ್ನು ಕುರಿತು—ಇಲ್ಲರೀ ಶಿಪಾಯರೇ, ನಾನೇನೂ ಕಳ್ಳನಲ್ಲ; ನನ್ನ ಸಾಮಾನು-ಸಂದುಕಗಳನ್ನು ಒಯ್ಯುವದಕ್ಕಾಗಿ ನನಗೆ ಹಮಾಲನು ಸಿಗದ್ದರಿಂದ, ನಾನು ಅವನನ್ನು ಶೋಧಿಸುತ್ತ ನಡೆದಿದ್ದೆನು. ನೀವು ಸುಮ್ಮನೆ ನನಗೆ ತೊಂದರೆ ಕೊಟ್ಟಿರೆಂದು ತಿಳಿಸಿದರೂ, ಶಿಪಾಯಿಯ ಸಂದೇಹವು ಕಡಿಮೆಯಾಗದೆ, ಅವನು ರಾಮಚಂದ್ರನನ್ನು ಚೌಕಿಯೊಳಗಿನ ಕಟಾಂಜನದ ಕೋಣೆಯಲ್ಲಿ ಕೂಡ್ರಿಸಿ, ಫೌಜದಾರರು ಬರುವವರೆಗೆ ನಿನ್ನನ್ನು ಬಿಡುವದಿಲ್ಲೆಂದು ಹೇಳಿದನು. ರಾಮಚಂದ್ರನು ತನ್ನ ಪ್ರಾಕ್ತನವನ್ನು ನೆನೆಯುತ್ತ ಆ ನಜರಕೈದಿನಲ್ಲಿ ಕುಳಿತನು.

ಆಗ ಬೆಳಗಿನ ಹತ್ತು ಗಂಟೆಯಾಗಿದ್ದದರಿಂದ ಚೌಕಿಯೊಳಗಿನ ಜಮಾದಾರ-ಫೌಜದಾರ ಮುಂತಾದ ಮೇಲಧಿಕಾರಿಗಳು ಊಟಉಡಿಗೆಗಳಾಗಿ ತಮ್ಮ ತಮ್ಮ ಮನೆಗಳಿಗೆ ಹೋಗಿದ್ದರು. ಮಧ್ಯಾಹ್ನದ ಮೂರು ಹೊಡೆದರೂ ಅವರಲ್ಲಿಯ ಒಬ್ಬನೂ ಚೌಕಿಯ ಕಡೆಗೆ ಇಣಿಕಿ ಹಾಕಲಿಲ್ಲ ಆ ವರೆಗೆ ರಾಮಚಂದ್ರನು ಹಸಿವೆ-ಬಾಯಾರಿಕೆಗಳಿಂದ ಬಳಲುತ್ತ ಆ ಬಾಡಿಗೆ ಇಲ್ಲದ ಮನೆಯಲ್ಲಿ ಸ್ತಬ್ಧನಾಗಿ ಕುಳಿತಿದ್ದನು. ಸುಮಾರು ಮೂರು-ಮೂರೂವರೆಗಂಟೆಗೆ ಜಮಾದಾರನು ಬಂದನು. ಆದರೆ ಅಷ್ಟರಲ್ಲಿ ಮೊದಲಿನ ಪಹರೆಯ ಸಿಪಾಯಿಯು ಹೋಗಿ ಅಲ್ಲಿಗೆ ಬೇರೆಯವನು ಬಂದಿದ್ದನು. ಆ ಹೊಸಬನಿಗೆ ರಾಮಚಂದ್ರನನ್ನೇಕೆ ಕೂಡ್ರಿಸಿರುವರೆಂಬದು ತಿಳಿಯದು. ಆದರಿಂದ ಜಮಾದಾರನು ಆತನನ್ನು ರಾಮಚಂದ್ರನ ವಿಷಯವಾಗಿ ಕೇಳಲು, ಆವನು ಕಿವಿಯ ಮೇಲೆ ಕೈಯಿಟ್ಟುಕೊಂಡು ತಾನು ಯಾವದನ್ನೂ ಅರಿಯೆನೆಂದೂ, ಮೊದಲಿನ ಪಹರೆಯವನು ಈತನನ್ನು ಫೌಜದಾರ ಸಾಹೇಬರು ಬರುವವರೆಗೆ ಬಿಡಬೇಡೆಂದು ತನಗೆ ಹೇಳಿರುವನೆಂದೂ ತಿಳಿಸಿ ಸುಮ್ಮನಾದನು. ರಾಮಚಂದ್ರನ ಬಗ್ಗೆ ತಮ್ಮವರಿಂದ ಯಾವ ಸಂಗತಿಯೂ ತಿಳಿಯದಬಳಿಕ ಪಾಪ! ಆ ಜಮಾದಾರನಾದರೂ ಅವನ ಮೇಲೆ ದಯ ತೋರಿಸುವ ಬಗೆ ಹೇಗೆ? ಆವಗೆ ಐದು ಹೊಡೆಯುವ ಸಮಯಕ್ಕೆ ಫೌಜದಾರಸಾಹೇಬರು ಬಂದರು. ಅವರೂ ರಾಮಚಂದ್ರನೂ ಪೋಕ್ತವ್ಯಸನಗಳ ಬಂಧುಗಳಾದ್ದರಿಂದ ಅವರು ಅವನನ್ನು ಗುರುತಿಸಿ, ಕೂಡಲೆ ಬಿಡುಗಡೆ ಮಾಡಿದರು. ಆಗ ರಾಮಚಂದ್ರನು ತನ್ನ ಪೆಟ್ಟಿಗೆಯನ್ನು ಆ ಚೌಕಿಯ ಹೊರಬದಿಗಿಟ್ಟುಕೊಂಡು ಹಮಾಲನ ಹಾದಿನೋಡುವಷ್ಟರಲ್ಲಿ ಆವನಿಗೆ ಅಲ್ಲಿಯೇ ಒಬ್ಬ ಹಮಾಲನು ಗಂಟುಬಿದ್ದನು. ಕೂಡಲೆ ಆ ಸಂದುಕವನ್ನು ಅವನ ತಲೆಯಮೇಲಿರಿಸಿ ರಾಮಚಂದ್ರನು ಅವನ ಹಿಂದಿನಿಂದ ಒಪ್ಪೂರದ ಮಾರ್ಗವ ಹಿಡಿದು ನಡೆದನು.

ಹತ್ತಿಪ್ಪತ್ತು ಹೆಜ್ಜೆ ನಡೆಯುವಷ್ಟರಲ್ಲಿ ರಾಮಚಂದ್ರನ ತಲೆತಿರುಗಿ ಬವಳಿ ಬಂದದರಿಂದ ಅವನು ಆ ಮಾರ್ಗದ ಬದಿಯ ಕಾಲುದಾರಿಯ ಮೇಲೆ ತಲೆತಗ್ಗಿಸಿ ಕುಳಿತನು. ಅವನಿಗೆ ಹಸಿವೆ-ಬಾಯಾರಿಕೆಗಳಿಗಿಂತ ಬೆಳಗಿನಿಂದ ಯಾವ ವ್ಯಸನಗಳಿಗೂ ಆಸ್ಪದವಾಗದ್ದರಿಂದ ಅವನ ಕೈಕಾಲ ನಾಡಿಗಳು ಸಡಲಿದಂತಾಗಿದ್ದವು; ಗಂಟಲು ಒಣಗಿಹೋಗಿತ್ತು. ಹಮಾಲನು ಹಿಂತಿರುಗಿ ನೋಡಿ ಅವನ ಬಳಿಗೆ ಬಂದು-ರಾಯರೇ, ಬಾಡಿಗೆಯ ಗಾಡಿಯನ್ನು ಕರೆಯಲೇನು? ಎಂದು ಕೇಳಲು, ಅವನು-ಬೇಡ, ಅದರ ಅವಶ್ಯಕತೆಯಿಲ್ಲ. ನಾನು ಬಾಡಿಗೆಯ ಮನೆಯನ್ನು ಇನ್ನೂ ಗೊತ್ತುಮಾಡಿರುವದಿಲ್ಲಾದ್ದರಿಂದ ಆ ಬಗ್ಗೆ ತುಸ ಆಲೋಚಿಸುವೆನು. ನೀನು ಆ ಸಂದುಕ

ವನ್ನಿಳಿಸಿ ಇಲ್ಲಿ ಇಡು; ಹಾಗು "ಇಗೋ ಈ ಮೂರು ಆಣೆಯ ದುಡ್ಡುಗಳನ್ನು ತಕ್ಕೊಂಡು ಓಡುತ್ತ ಹೋಗಿ ಸಮೀಪದಲ್ಲಿಯ ಗುತ್ತಿಗೆಯ ಅಂಗಡಿಯಿಂದ ಎಂಟು ದುಡ್ಡಿನ ಅಫುವನ್ನೂ, ನಾಲ್ಕು ದುಡ್ಡಿನ ಹಸರು ತಂಬಾಕವನ್ನೂ ಕೊಂಡು ಕೊಂಡು ಬಾ. ನೀನೂ ಶಿವಭಕ್ತನಾಗಿ ತೋರುತ್ತೀಯೇ. ಹಸರು ತಂಬಾಕವನ್ನು ಸೇದುತ್ತಿರುವಿಯಷ್ಟೆ?" ಎಂದು ಕೇಳಲು,

ಹಮಾಲ—"ನಾನಾಗಿ ಕೊಂಡುಕೊಂಡು ಸೇದುವ ಚಟವನ್ನಿಟ್ಟು ಕೊಂಡಿರುವದಿಲ್ಲ. ರಾಯರೇ, ತಮ್ಮಂಥವರ ಪ್ರಸಾದವು ಸಿಕ್ಕಾಗವಾತ್ರ ಯಥೇಚ್ಛವಾಗಿ ಸೇವಿಸುವ ಅಭ್ಯಾಸವನ್ನಿಟ್ಟುಕೊಂಡಿರುತ್ತೇನೆ" ಎಂದು ನುಡಿದು, ಆ ದುಡ್ಡುಗಳನ್ನು ತಕ್ಕೊಂಡು ಭರದಿಂದ ಅಂಗಡಿಗೆ ನಡೆದನು; ಮತ್ತು ಅಲ್ಪಾವಕಾಶದಲ್ಲಿ ರಾಮಚಂದ್ರನ ಅಮಲಿನ ಸರಂಜಾಮುಗಳನ್ನು ತಕ್ಕೊಂಡು ಬಂದನು. ಕೂಡಲೆ ತಾಯಿತಪ್ಪಿದ ಕರುವು ಹಸುವನ್ನು ನೋಡುವಂತೆಯೂ, ದರಿದ್ರನು ಧನದರಾಶಿಯನ್ನು ನೋಡುವಂತೆಯೂ ರಾಮಚಂದ್ರನು ಹಮಾಲನು ತಂದಿದ್ದ ಆ ಮದಪದಾರ್ಥಗಳ ಕಡೆಗೆ ಬಿರಿಬಿರಿ ನೋಡುತ್ತ, ಆ ಅಫುವಿನ ಮುದ್ದೆಯೊಳಗಿನ ಅರ್ಧದಷ್ಟು ಅಫುವನ್ನು ಗುಳಿಗೆ ಮಾಡಿ ಫಕ್ಕನೆ ಬಾಯೊಳಗೆ ಚೆಲ್ಲಿಕೊಂಡನು. ಮಿಕ್ಕದ್ದನ್ನು ಹಿಂದಿನಿಂದ ಹದಗೊಳಿಸಿ ತಿನಬಹುದೆಂದು ಕಿಸೆಯೊಳಗಿನ ಡಬ್ಬಿಯಲ್ಲಿರಿಸಿದನು. ಇಷ್ಟರಲ್ಲಿ ಆ ಹಮಾಲನು ಆ ಹಸರು ತಂಬಾಕವನ್ನು ಚೆನ್ನಾಗಿ ಮಿದ್ದಿ ಹದಗೊಳಿಸಿದನು; ಹಾಗು ಅದನ್ನು ರಾಮಚಂದ್ರನ ಸಂದುಕದೊಳಗಿನ ಒಂದು ಇಷ್ಟುದ್ದನ್ನ ಅಚ್ಚ ಕರಿಯ ಚಿಲಿಮೆಯಲ್ಲಿ ಸೇರಿಸಿ, ಮೇಲೆ ತುಸ ಒಣತಂಬಾಕವ ಹಾಕಿ, ಅದರ ಮೇಲೆ ಕಾತಿಯ ಹುರಿಯಿಂದ ಮಾಡಿದ ಅಗ್ನಿಯನ್ನು ಸ್ಥಾಪಿಸಿ, ಆ ಚಿಲಿಮೆಯನ್ನು ನಮ್ಮ ರಾಮಚಂದ್ರನ ಮುಂದೆ ಮಾಡಿ—ರಾಯರೇ, ಭೋಲಾನಾಥನ ಹೆಸರಿನಿಂದೊಮ್ಮೆ ಜುರುಕೆ ಹೊಡೆಯಿರಿ, ನೋಡೋಣ, ಎಂದನು.

ತತ್‌ಕ್ಷಣವೇ ರಾಮಚಂದ್ರನು ಅಂಗಿಯ ಎರಡೂ ತೋಳುಗಳನ್ನು ಮೇಲಕ್ಕೇರಿಸಿ, ಚಿಲಿಮೆಯನ್ನು ಕೈಯಲ್ಲಿ ತಕ್ಕೊಂಡು, ಅದಕ್ಕೊಂದು ಒದ್ದೆಯ ಅರಿವೆಯನ್ನು ಸುತ್ತಿ, ಎಷ್ಟೋ ದಿವಸಗಳ ವಿರಹದನಂತರ ಯಾವನೊಬ್ಬನು ತನ್ನ ಪ್ರಿಯ ಸತಿಯನ್ನು ಆಲಿಂಗಿಸಿ ಮುದ್ದಿಸುವುದಕ್ಕೆ ಹಾತೊರೆಯುವಂತೆ, ಅವನು ಅದನ್ನು ಬಾಯಿಗೆ ಹಚ್ಚಿ, ಘೋರವಾಗಿ ಜುರುಕೆ ಹೊಡೆಯ ಹತ್ತಿದನು. ಆದರೆ ಅವನು ಅಂಥ ಆ ದುರ್ವ್ಯಸನದ ಸಮಯದಲ್ಲಿ ಕೂಡ ಸಜ್ಜನರು ಪ್ರಾಣಿಗಳಿಗೆ "ರಾಮನಾಮ ಶ್ರಾಮಾ ಭಜ ರಾಮ ನಾಮಾ" ಎಂದು ಬೋಧಿಸಿದಂತೆ "ಭಮ್‌ಭೋಲಾ ನಾಥ"

ನ ನಾಮವನ್ನು ಉಚ್ಚರಿಸಲಿಕ್ಕೆ ಪುರೆಯಲಿಲ್ಲ! ಎಷ್ಟೋ ಜುರಿಕೆಗಳನ್ನು ಈ ಪ್ರಕಾರ ಹೊಡೆದಮೇಲೆ ಅವನಿಗೆ ಆ ದಯಾಘನ ಭಕ್ತವತ್ಸಲ ಭೋಲಾನಾಥನ ಕೃಪೆಯಿಂದ ತುಸ ಆರಾಮವೆನಿಸಿತು. ಬಳಿಕ ಅವನು ಆ ಚಿಲಿಮೆಯನ್ನು ಸಂಗಡ ಇದ್ದ ಹಮಾಲನ ಕೈಗೆಕೊಟ್ಟು, ಮುಖವನ್ನು ವಿಕ್ಷಿಪ್ತವಾಗಿ ಮಾಡಿ, ಕೈಲ ಬಂಡಿಯು ನೀರು ತಕ್ಕೊಳ್ಳುವಾಗಾಗಲಿ, ತಕ್ಕೊಂಡಬಳಿಕಾಗಲಿ ಹೆಚ್ಚಿನ ಉಗೆಯನ್ನು ಒಳ್ಳೇಭರದಿಂದ ಬಿಡುವಂತೆ, ಈವರೆಗೆ ಹೊಟ್ಟೆಯೊಳಗೆ ಸಂಗ್ರಹಿಸಿದ ತಮಾಲಪತ್ರದ ಹೊಗೆಯನ್ನು ಬಿಟ್ಟನು. ಹಾಗು ಚಟಕ್ಕನೆ ಎದ್ದುನಿಂತು ಹಮಾಲನನ್ನು ಕುರಿತು—ನಡೆ, ಇನ್ನು ಹೋಗೋಣ, ಎಂದನು.

ಹಮಾಲನು ನಾಲ್ಕಾರು ಜುರುಕೆ ಎಳೆಯುವಷ್ಟರಲ್ಲಿ ಆ ದೀರ್ಘವಾದ ಚಿಲಿಮೆಯೊಳಗಿನ ತಂಬಾಕವೆಲ್ಲ ತೀರಿಹೋಯಿತು. ನಂತರ ಅವನು ಆ ಚಿಲಿಮೆಯೊಳಗಿನ ಬೂದಿಯನ್ನು ಚೆಲ್ಲಿಕೊಟ್ಟು, ಅದನ್ನು ಆ ಸಂದುಕದೊಳಗಿರಿಸಿ, ಸಂದುಕವನ್ನು ಹೊತ್ತುಕೊಂಡು ರಾಮಚಂದ್ರನನ್ನು ಹಿಂಬಾಲಿಸಿ ನಡೆದನು. ಕೆಲದಾರೀ ನಡೆದ ಮೇಲೆ ಹಮಾಲನು ರಾಮಚಂದ್ರನನ್ನು ಕುರಿತು ಕೇಳಿದ್ದೇನಂದರೆ—ರಾಯರೇ, ನೀವು ಎಲ್ಲಿಗೆ ಹೋಗಬೇಕೆಂದು ಹೊರಟಿರುತ್ತೀರಿ?

ರಾಮ—ಒಂದು ಬಾಡಿಗೆಯ ಮನೆಯನ್ನು ಗೊತ್ತುಮಾಡಬೇಕೆಂದು ಹೊರಟಿದ್ದೇನೆ; ಆದರೆ ಮನೆಯು ಎಲ್ಲಿರುವದೋ ನನಗೆ ತಿಳಿಯದು. ನಿನ್ನ ಗೊತ್ತಿನ ಮನೆಗಳಾವವಾದರೂ ಉಂಟೇನು?

ಹಮಾಲ—ರಾಯರೇ, ನಾನು ಎಲ್ಲಿ ವಾಸಿಸುತ್ತಿರುವೆನೋ, ಅದರ ಬದಿಯ ವಾಡೆಯಲ್ಲಿ ಒಂದು ಕೋಣೆಯು ತೆರವಾಗಿರುತ್ತದೆ; ಆದರೆ ಆ ವಾಡೆಯು ನಿಮ್ಮಂಥ ಮಾನ್ಯವಂತ ಜನರು ವಾಸಿಸಲಿಕ್ಕೆ ತಕ್ಕದ್ದಾಗಿರುವದಿಲ್ಲ. ಯಾಕಂದರೆ, ಅಲ್ಲಿ ವಾಸಿಸುವರಲ್ಲಿ ಬೇಡರು, ತಳವಾರರು, ಕಟ್ಟೇರು ಮುಂತಾದ ಕೀಳು ಜಾತಿಯವರೇ ಹೆಚ್ಚು. ಅಲ್ಲಿ ಬ್ರಾಹ್ಮಣರೊಬ್ಬರೂ ಇರುವದಿಲ್ಲ.

ರಾಮ—ಏನೂ ಅಡ್ಡಿಯಿಲ್ಲ. ನಾವೇನು ಬ್ರಾಹ್ಮಣರು; ಎಲ್ಲಿ ವಾಸಿಸಿದರೂ, ಏನು ಮಾಡಿದರೂ ನಮ್ಮ ಶ್ರೇಷ್ಠಕುಲಕ್ಕೆಂದಾದರೂ ಕುಂದು ಬಂದೀತೇ? ನಡೆ, ಅಲ್ಲಿಗೇ ಹೋಗೋಣ, ಎಂದು ದುಂಬಾಲಬಿದ್ದು ಹೇಳಲು, ಹಮಾಲನು ಅವನನ್ನು ಸಮೀಪದಲ್ಲಿಯೇ ಇದ್ದ ಆ ವಾಡೆಗೆ ಕರೆದೊಯ್ದನು; ಹಾಗು ಆ ವಾಡೆಯ ಮಾಲಕಳನ್ನು ಕರೆದು, ರಾಮಚಂದ್ರನನ್ನು ಅವಳಿಗೆ ತೋರಿಸಿ, ಬಾಡಿಗೆಯ ಕೋಣೆಯ ವಿಷಯವಾಗಿ ತಿಳಿಸಿದನು.

ಈ ಕೋಣೆಯ ಬಾಡಿಗೆಯು ತಿಂಗಳಿಗೆ ಎರಡು ರೂಪಾಯಿ; ಪಲ್ಲಂಗ ಮುಂತಾದ ಬೇರೆ ಸಾಮಾನುಗಳನ್ನುಪಯೋಗಿಸಿಕೊಳ್ಳುವದಾದರೆ ತಿಂಗಳಿಗೆ ಎರಡೂವರೆ ರೂಪಾಯಿ ಎಂದು ಅವಳು ಹೇಳಲು, ರಾಮಚಂದ್ರನು ಎರಡೂವರೆ ರೂಪಾಯಿ ಕೊಡುವ ಕರಾರಿನಿಂದ ಆ ಕೀಳು ವಸತಿಯ ಪಾಡೆಯಲ್ಲಿರಹತ್ತಿದನು!

* * * * *

ರಾಮಚಂದ್ರನ ತಂದೆಯಾದ ವೇದವ್ಯಾಸಾಚಾರ್ಯರು ಪುಣೆಯೊಳಗಿನ ಯಾವನೊಬ್ಬ ಪ್ರತಿಷ್ಠಿತ ಸರದಾರನಲ್ಲಿ ಆಶ್ರಿತರಾಗಿದ್ದರು. ಆಚಾರ್ಯರು ಒಳ್ಳೇ ಶೀಲವಂತರೂ ಸದ್ಗುಣಿಗಳೂ ಚೆನ್ನಾಗಿ ಓದಿಕೊಂಡವರೂ ಆಗಿದ್ದದರಿಂದ ಸರದಾರರು ಅವರಿಗೆ ಊಟಹಾಕಿ ತಿಂಗಳಿಗೆ ಇಪ್ಪತ್ತುರೂಪಾಯಿ ಪಗಾರ ಕೊಡುತ್ತಿದ್ದರು. ಮುಂದೆ ಕೆಲದಿವಸಗಳ ತರುವಾಯ ರಾಮಚಂದ್ರನ ತಾಯಿಯು ಪರಂಧಾಮಕ್ಕೆ ತೆರಳಿದಳು. ಆಗ ಆಚಾರ್ಯರು ತಮ್ಮ ಯಜಮಾನನನ್ನು ಸಂಪ್ರಾರ್ಥಿಸಿ, ತಮ್ಮ ಅನಾಥನಾದ ಒಬ್ಬನೇ ಒಬ್ಬ ಮಗನನ್ನು ಪುಣೆಗೆ ಕರೆಯಿಸಿಕೊಂಡು ಸಾಲೆಗೆ ಹಾಕಿದರು. ಆಗ ರಾಮಚಂದ್ರನು ೧೧-೧೨ ವರ್ಷದವನಾಗಿರಬಹುದು. ಆ ಸರದಾರರ ಹಿರಿಯಮಗನು ರಾಮಚಂದ್ರನ ವಯಸ್ಸಿನವನೇ ಇದ್ದು, ಚಿಕ್ಕ ಮಗನಾದರೂ ಇವನಿಗಿಂತ ತುಸ ಚಿಕ್ಕವನಾದ್ದರಿಂದ ಆ ತ್ರಿವರ್ಗರಲ್ಲಿ ದಿನ-ದಿನಕ್ಕೆ ಒಳ್ಳೇ ಸಖ್ಯವುಂಟಾಗಹತ್ತಿತು. ರಾಮಚಂದ್ರನು ಹುಟ್ಟಾ ಹುಷಾರಹುಡುಗನು; ಆದರೆ ಹುಷಾರ, ಚಲಾಕ, ಲುಚ್ಚಾ, ಬದಮಾಷ್ ಮುಂತಾದ ಒಂದೇ ಜಾತಿಯ ಗುಣಗಳು ಒಂದಿದ್ದಲ್ಲಿ ಬೇರೆ ಎಲ್ಲ ಗುಣಗಳೂ ಇರುವದು ಸ್ವಾಭಾವಿಕವಾಗಿದೆಯಷ್ಟೆ? ಸರದಾರರ ಮಕ್ಕಳು ಬಹುಹುಂಬರು. ಹುಂಬ, ಭೋಳೆಸ್ವಭಾವದವ, ದಡ್ಡ, ಮೂರ್ಖ, ಕೈಲಾಗದವ ಮುಂತಾದ ಗುಣಗಳಾದರೂ ಒಂದೇ ವರ್ಗದವಾದ್ದರಿಂದ, ಇವುಗಳಲ್ಲಿಯ ಯಾವುದೊಂದು ಗುಣವು ಪ್ರಾಮುಖ್ಯವಾಗಿದ್ದವನಲ್ಲಿ ಬೇರೆ ಎಲ್ಲ ಗುಣಗಳಾದರೂ ಅಂತರ್ಭೂತಗಳಾಗಿರುವದು ಸ್ವಾಭಾವಿಕವೇ ಆಗಿರುತ್ತದೆ. ರಾಮಚಂದ್ರನು ಮುಖಸ್ತುತಿಮಾಡಿ ಆ ಪ್ಯಾಲಿ ಹುಡುಗರನ್ನು ಚೆನ್ನಾಗಿ ಒಲಿಸಿಕೊಂಡನು. ಆ ವಶೀಕರಣದಿಂದ ರಾಮಚಂದ್ರನಿಗೆ ಬೇಕಾದಷ್ಟು ಅರ್ಥಸಂಭಾವನೆಯು ದೊರೆಯಹತ್ತಿತಲ್ಲದೆ ಅವನ ಒಗರು ಬೆಳೆಯಿತು. ಸರದಾರರ ಮನೆಯ ದಾಸ-ದಾಸಿಯರೂ, ಕಾರಕೂನ-ಕಾರಭಾರಿಗಳೂ ರಾಮಚಂದ್ರನನ್ನು ಮನಸ್ಸಿಲ್ಲದಿದ್ದರೂ, ತಮ್ಮ ಭಾವೀ ಯಜಮಾನರ ಪ್ರೀತ್ಯರ್ಥವಾಗಿ ಮನ್ನಿಸಹತ್ತಿದರು. ಸರದಾರರ ಮಕ್ಕಳಿಗೆ ಓದು-ಬರಹಗಳಿಗಿಂತ ಕುಸ್ತಿ ಆಡುವದು, ಕುದುರೆ ಹತ್ತು

ವದು ಮುಂತಾದ್ದರ ಲಹರಿಯೇ ಹೆಚ್ಚಿತ್ತು. ಆದರಿಂದ ತುಸ ದಿವಸಗಳಲ್ಲಿ ರಾಮಚಂದ್ರನಾದರೂ ತನ್ನ ಸಾಲೆಗೆ ಕಾಯಮವಾಗಿ ಶರಣುಹೊಡೆದು, ಆ ಕಲೆಗಳಲ್ಲಿ ಪ್ರವೀಣನಾಗಹತ್ತಿದನು. ಹುಟ್ಟಾ ಗಟ್ಟಿಎಲುವಿನ ರಾಮಚಂದ್ರನು ತುಸ ದಿನಗಳಲ್ಲಿಯೇ ಪೈಲವಾನನಾಗಿ ತೋರಹತ್ತಿದನು. ಸರದಾರರ ಮಕ್ಕಳಿಗೆ ಇವನಂಥ ಜಟ್ಟಿಯ ಅವಶ್ಯಕತೆಯು ಇತ್ತೇ ಇತ್ತು. ಯಾಕಂದರೆ, ತಮ್ಮ ಕುಳಗಳನ್ನು ಹೊಡೆದು-ಬಡಿದು-ಬೆದರಿಸಲಿಕ್ಕೂ, ತಮಗಾಗದವರನ್ನು ಚೆನ್ನಾಗಿ ತಳಿಸಲಿಕ್ಕೂ ಅವರಿಗೆ ಇಂಥ ಒಬ್ಬ ಟೊಣಪ ಮನುಷ್ಯನು ಬೇಕಾಗಿದ್ದನು. ಹೀಗಾಗಿ ರಾಮಚಂದ್ರನ ವಿದ್ಯಾಭ್ಯಾಸ ವಿಷಯಕವಾದ ಆಚಾರ್ಯರ ಬೇತು ಒತ್ತಟ್ಟಿಗೇ ಉಳಿದು, ಈ ಖೋಡಿ ಹುಡುಗನನ್ನು ಎಲ್ಲಿಂದ ಕರೆತಂದು ತಮಗೆ ಮುಳುವುಮಾಡಿದರೆಂದು ಅವನ ಉಪಟಳದಿಂದ ಸಂತ್ರಸ್ತರಾದ ಬಡಜನರು ಆಚಾರ್ಯರನ್ನು ನೀರಲ್ಲಿ ನೋಡಹತ್ತಿದರು!

ರಾಮಚಂದ್ರನ ದೈವವು ಚೆನ್ನಾಗಿದ್ದರೆ ಅವನು ಆ ಸ್ಥಿತಿಯಲ್ಲಿಯೂ ಒಳ್ಳೇ ಒಗರಿನಿಂದ ಕಾಲಕ್ರಮಣ ಮಾಡಲಿಕ್ಕೆ ಅಡ್ಡಿಯಿದ್ದಿಲ್ಲ; ಆದರೆ ಅವನ ದುರ್ದೈವದ ಮೂಲಕ ಮುಂದೆ ಆರೇ ತಿಂಗಳುಗಳಲ್ಲಿ ಬಂದ ಪ್ಲೇಗಿನ ಮಹಾರೋಗಕ್ಕೆ ಆ ಸರದಾರನ ಕುಟುಂಬದವರೆಲ್ಲರೂ ಒಬ್ಬರಹಿಂದೊಬ್ಬರಂತೆ ಪರಲೋಕಕ್ಕೆ ತೆರಳಿದರು. ಇಷ್ಟೇ ಅಲ್ಲ, ರಾಮಚಂದ್ರನ ತಂದೆಯಾದ ವೇದವ್ಯಾಸಾಚಾರ್ಯನೂ ತೀರಿಕೊಂಡನು. ಆ ಮೇಲೆ ಆ ವಾಡೆಯಲ್ಲಿ ರಾಮಚಂದ್ರನ ಬೇಳೆಯು ಬೆಯ್ಯುವ ಬಗೆ ಹೇಗೆ? ಅಶನಕ್ಕೇ ಅಭಾವವಾದ ಬಳಿಕ ಅವನ ಒಗರನ್ನು ಅಲ್ಲಿ ಕೇಳುವರಾರು? ತದನಂತರ ಅವನು ಯಾವದೊಂದು ಅಂಗಡಿಯಲ್ಲಿ ತಿಂಗಳಿಗೆ ಹದಿನೈದು ರೂಪಾಯಿ ತಲಬಿನ ಒಂದು ನೌಕರಿಯನ್ನು ಹಿಡಿದು ಕಾಲಕ್ಷೇಪ ಮಾಡಲಾರಂಭಿಸಿದನು. ಆದರೆ ಆ ಎಡಸೊಕ್ಕಿನವನಿಂದ ಆ ಸಾಮಾನ್ಯ ನೌಕರಿಯನ್ನು ಸಂಬಾಳಿಸಿಕೊಳ್ಳುವದಾಗಲಿಲ್ಲ. ಬಳಿಕ ಅವನು ಅನೇಕ ತರದ ಸ್ವತಂತ್ರ ಉದ್ಯೋಗಗಳನ್ನು ಮಾಡಹವಣಿಸಿ, ಎಲ್ಲ ಪ್ರಯತ್ನಗಳಲ್ಲಿಯೂ ಅಪಜಯವನ್ನೇ ಹೊಂದಿದನು. ಆದರೆ ಕಡೆಗೆ ಅವನೊಂದು ಬಹು ಸೊಗಸಾದ ಸ್ವತಂತ್ರ ಉದ್ಯೋಗವನ್ನು ವಹಿಸಿದನು. ಆ ಉದ್ಯೋಗದಿಂದೆ ಅವನು ಬಹುಜನ ಮನೆತಪ್ಪಿದ ತರುಣ-ತರುಣಿಯರ ಕೊರಳೊಳಗಿನ ತಾಯಿತವಾದನು. ಈ ನೂತನ ಉದ್ಯೋಗದಿಂದ ಅವನಿಗೆ ಹೇರಳವಾಗಿ ದ್ರವ್ಯಾರ್ಜನೆಯಾಗತೊಡಗಿತು. ಅವನು ಹಗಲೆಲ್ಲ ಸುಖದಿಂದ ಮಲಗಿಕೊಂಡರೂ ಅಡ್ಡಿಯಿದ್ದಿಲ್ಲ; ಆದರೆ ಸಾಯಂಕಾಲದ ಐದು ಗಂಟೆಗೆ ಎದ್ದು ಒಮ್ಮೆ

ತನ್ನ ಉದ್ಯೋಗಕ್ಕೆ ತೊಡಗಿದನೆಂದರೆ, ರಾತ್ರಿ-ಅಪರಾತ್ರಿಯಾದರೂ ಅವನಿಗೆ ಆ ಉದ್ಯೋಗದಿಂದ ನಿವೃತ್ತವಾಗಲಿಕ್ಕೆ ಆಸ್ಪದವುಳಿಯುತ್ತಿರಲಿಲ್ಲ. ಅವನು ತನ್ನ ಆ ಕುಂಟಣತನದ ವ್ಯವಹಾರಕ್ಕಾಗಿ ಆ ಉದ್ಯೋಗದಲ್ಲಿ ನಿಷ್ಣಾತರಾದ ಒಬ್ಬಿಬ್ಬ ಅಜ್ಜಿಗಳನ್ನು ಕೈಸಡಿಲುಬಿಟ್ಟು ಪ್ರತಿಫಲಕೊಟ್ಟು ಇಟ್ಟಿದ್ದನು.

ಹೀಗೆ ಆ ನೀಚ ವ್ಯವಹಾರದಲ್ಲಿ ಅವನು ತಲ್ಲೀನನಾಗಿ ವ್ಯವಹರಿಸುತ್ತಿರಲು। ಒಂದು ದಿವಸ ಸಾಯಂಕಾಲ ಶಿವರಾಯನು ಮಾರ್ಕೇಟಿನೊಳಗಿಂದ ಮನೆಯ ಕಡೆಗೆ ಅವಸರದಿಂದ ನಡೆದಿದ್ದನು. ಆಗ ಅವನ ಕಿಸೆಯೊಳಗೆ ತೂಗಾಡುತ್ತಿದ್ದ ಬಂಗಾರದ ಸರಪಳಿಯನ್ನೂ ಅದಕ್ಕೆ ಕಟ್ಟಿದ್ದ ಒಂದು ಬಹು ಮೂಲ್ಯ ಗಡಿಯಾರವನ್ನೂ ಒಬ್ಬ ಕಳ್ಳನು ಅವನಿಗೆ ತಿಳಿಯದ ಹಾಗೆ ಕತ್ತರಿಸಿಕೊಂಡನು. ಈ ಸಂಗತಿಯು ಶಿವರಾಯನಿಗೆ ಲೇಶಮಾತ್ರವೂ ತಿಳಿಯದಿದ್ದರೂ, ಎದುರಿನಿಂದ ಬರುತ್ತಿದ್ದ ರಾಮಚಂದ್ರನ ನಜರಿಗೆ ಅದು ಬೀಳಲು, ಅವನು ಆ ಚೋರನನ್ನು ಚೆನ್ನಾಗಿ ತಳಿಸಿ ಶಿವರಾಯನ ಸರಪಣಿ-ಗಡಿಯಾರಗಳನ್ನು ಅವನಿಗೆ ಕೊಡಿಸಿದನು. ತನ್ನ ಅಮೂಲ್ಯ ಒಡವೆಗಳು ಕಳವಾಗಿ ಹೋಗಿರಲು, ಯಾವ ಅಪರಿಚಿತ ಗೃಹಸ್ಥನು ಅವುಗಳನ್ನು ನಿರ್ವಂಚನೆಯಿಂದ ದೊರಕಿಸಿಕೊಟ್ಟನೋ, ಅವನ ವಿಷಯವಾಗಿ ಶಿವರಾಯನಂಥ ಕೇವಲ ಸರಳ ಹಾಗು ಉದಾರ ಸ್ವಭಾವದವನಲ್ಲಿ ಕೃತಜ್ಞತೆಯು ಉಂಟಾಗದಿದ್ದರೆ ಅದು ಬೇರೆಯವರಲ್ಲಿ ಉದ್ಭವಿಸುವ ಸಂಭವವಾದರೂ ಉಂಟೇ? ಕೂಡಲೆ ಶಿವರಾಯನು ತನ್ನ ಕಿಸೆಯೊಳಗಿಂದ ತನ್ನ ಹೆಸರನ್ನು ಛಾಪಿಸಿದ ಒಂದು ವ್ಹಿಜಿಟಿಂಗ ಕಾರ್ಡನ್ನು ರಾಮಚಂದ್ರನ ಕೈಯಲ್ಲಿ ಕೊಟ್ಟು—ಇಂದು ನಿಮ್ಮಿಂದ ನನಗೆ ಅತ್ಯಂತ ಸಹಾಯವಾದಂತಾಗಿರುತ್ತದೆ. ಈ ಉಪಕಾರದ ಹೊರೆಯನ್ನು ಸ್ವಲ್ಪಾದರೂ ಪ್ರತ್ಯುಪಕಾರಮಾಡಿ ಇಳಿಸಿಕೊಳ್ಳಬೇಕೆಂದಿರುತ್ತೇನೆ. ಪ್ರಸಂಗಬಿದ್ದಾಗ ನೀವು ಈ ನನ್ನ ಕಾರ್ಡನ್ನು ಸಂಗಡ ತಕ್ಕೊಂಡು ಬಂದರೆ, ನಾನು ಕೈಲಾದಮಟ್ಟಿಗೆ ನಿಮಗೆ ಸಹಾಯಮಾಡಲಿಕ್ಕೆ ತಪ್ಪಲಿಕ್ಕಿಲ್ಲ, ಎಂದು ಹೇಳಿ ಮನೆಗೆ ನಡೆದನು. ರಾಮಚಂದ್ರನಾದರೂ ಆ ಕಾರ್ಡನ್ನು ತನ್ನ ಕಿಸೆಯೊಳಗಿಟ್ಟುಕೊಂಡು ತನ್ನ ಮನೆಗೆ ತೆರಳಿದನು.

ಹೇಳಿಕೇಳಿ ರಾಮಚಂದ್ರನು ದುಷ್ಟವ್ಯವಹಾರಕ್ಕೇ ತೊಡಗಿದ್ದನಾದ್ದರಿಂದ ಅವನು ಒಮ್ಮೆ ಒಂದು ದೊಡ್ಡ ಪೇಚಿನಲ್ಲಿ ಸಿಕ್ಕನು. ಒಬ್ಬ ಮನೆತನಸ್ತ ಹೆಣ್ಣುಮಗಳನ್ನು ದುಷ್ಟಬುದ್ಧಿಯಿಂದ ಎತ್ತಿತಂದಿರುವನೆಂಬ ಆರೋಪವು ಅವನ ಮೇಲೆ ಹೊರಿಸಲ್ಪಟ್ಟಿತು. ಅವನ ಆ ಅಪರಾಧಕ್ಕೆ ಊರೊಳಗಿನ ಎಷ್ಟೋ ಸನ್ಮಾನ್ಯ

ಜನರು ಸಾಕ್ಷಿದಾರರುಗಳಾಗಿರುವಂತೆ, ಅವನ ಸಂಬಳದಿಂದ ಮತ್ತರಾದ ಆ ಇಬ್ಬರು ಕುಂಟಣಗಿತ್ತಿಯರೂ ಅವನ ವಿರುದ್ಧವಾಗಿ ಸಾಕ್ಷಿಹೇಳಲು ಸಿದ್ಧರಾದರು! ಆ ಕೇಸಿನಲ್ಲಿ ರಾಮಚಂದ್ರನಿಗೆ ಕೆಲವರ್ಷಗಳ ಕಠಿಣಶಿಕ್ಷೆಯೂ ಎಷ್ಟೋ ಅರ್ಥದಂಡವೂ ಆಗುವದೆಂದು ಬಹು ಜನರು ಆಡಿಕೊಳ್ಳಹತ್ತಿದ್ದರು. ಆಗ ರಾಮಚಂದ್ರನು ಒಂದುದಿನ ಬೆಳಗಿನಲ್ಲಿದ್ದು ಅಂದು ಸಾಯಂಕಾಲ ಆ ಕಾರ್ಡನ್ನು ಕೊಟ್ಟುಹೋಗಿದ್ದ ಶಿವರಾಯನ ವಾಡೆಗೆ ಹೋದನು. ಶಿವರಾಯನಿಗೆ ರಾಮಚಂದ್ರನ ಬಗ್ಗೆ ವಿಶೇಷವೇನೂ ಗೊತ್ತಿರದಿದ್ದರೂ, ರಾಮಚಂದ್ರನು ಶಿವರಾಯನ ನಾಮಲೌಕಿಕಗಳನ್ನು ಚೆನ್ನಾಗಿ ಅರಿತಿದ್ದನು. ಆದರಿಂದ ಈ ಪ್ರಸಂಗದಲ್ಲಿ ತಾನು ಅವನಿಂದ ಯೋಗ್ಯ ಸಹಾಯವನ್ನು ಪಡೆಯಬಹುದೆಂದೆಣಿಸಿ ಅವನು ಅಲ್ಲಿಗೆ ಬಂದಿದ್ದನು. ಕರ್ಮ-ಧರ್ಮ ಸಂಯೋಗದಿಂದ ರಾಮಚಂದ್ರನು ಬಂದ ದಿನ ಶಿವರಾಯನು ಮನೆಯಲ್ಲಿಯೇ ಇದ್ದನು. ರಾಮಚಂದ್ರನು ಆ ವ್ಹಿಜಿಟಿಂಗ ಕಾರ್ಡಿನೊಡನೆ ಹೋಗಿ ಅವನಿಗೆ ಭೇಟಿಯಾಗಿ ತನಗೆ ಬಂದ ಆಪತ್ತನ್ನು ನಿವೇದಿಸಿದನು; ಮತ್ತು ತಾನು ಅಂಥ ನಿಂದ್ಯಕೃತ್ಯವನ್ನೆಂದೂ ಮಾಡತಕ್ಕವನಲ್ಲೆಂದೂ, ನೆರೆ-ಹೊರೆಯ ದುಷ್ಟ ಜನರು ನಿಷ್ಕಾರಣವಾಗಿ ತನ್ನಮೇಲೆ ಈ ಪೇಚನ್ನು ತಂದಿರುವರೆಂದೂ ತೋಡಿಕೊಂಡನು. ಸರಳ ಹೃದಯದ ಶಿವರಾಯನಿಗೆ ಅವನ ಆ ಅಂಬೋಣವು ದಿಟವಾಗಿ ತೋರಿತು. ಆದರಿಂದ ಅವನು ತನ್ನ ಛಿಡೆ-ಮುರುವತ್ತುಗಳನ್ನುಪಯೋಗಿಸಿ ರಾಮಚಂದ್ರನನ್ನು ಆ ಆಪತ್ತಿನಿಂದ ಬಿಡಿಸಿದನು. ಸಂಕಟದಿಂದ ಬಿಡುಗಡೆಯಾದ ಬಳಿಕ ರಾಮಚಂದ್ರನು ಪುನಃ ಶಿವರಾಯನೆಡೆಗೆ ಬಂದು ಬಳ್ಳೇ ವಿನಯದಿಂದ—ರಾಯರೇ, ತಮ್ಮಂಥ ಸತ್ಪುರುಷರ ಅನುಗ್ರಹದಿಂದಲೇ ನಾನು ಆ ಸಂಕಟದಿಂದ ಪಾರಾಗಿರುವೆನು. ಇನ್ನು ಆ ದುರ್ಜನರ ನೆರವಿನಲ್ಲಿರಲಿಕ್ಕೆ ನನ್ನ ಮನಸ್ಸು ಒಪ್ಪುವದಿಲ್ಲ. ಆದ್ದರಿಂದ ಕೃಪಾಳುಗಳಾದ ತಾವು ನನ್ನನ್ನು ತಮ್ಮ ವಾಡೆಯ ಒಂದು ಕೋಣೆಯಲ್ಲಿರಹೇಳಿ, ತಮ್ಮ ದಾಸನನ್ನಾಗಿ ಮಾಡಿಕೊಳ್ಳಿರಿ, ಎಂದು ಸೆರಗೊಡ್ಡಿ ಕೇಳಿಕೊಳ್ಳಲು, ಶಿವರಾಯನು ಅವನಿಗೆ ತನ್ನ ವಾಡೆಯೊಳಗಿನ ಒಂದು ಚಿಕ್ಕ ಮನೆಯಲ್ಲಿರಲು ಹೇಳಿದನಲ್ಲದೆ, ತನ್ನ ಪರಿಚಯದವರಲ್ಲಿ ಅವನಿಗೊಂದು ಚಾಕರಿಯನ್ನೂ ಕೊಡಿಸಿದನು.

ರಾಮಚಂದ್ರನು ಶಿವರಾಯನಲ್ಲಿರಹತ್ತಿದ ಬಳಿಕ ಕೆಲದಿನಗಳವರೆಗೆ ಅವನು ಕೇವಲ ಸಭ್ಯಮನುಷ್ಯನಂತೆ ನಡೆದು, ಶಿವರಾಯನ ಮೇಲೂ, ಅರ್ಥಾತ್ ಆ ವಾಡೆಯ ಎಲ್ಲ ಜನರ ಮೇಲೂ ತನ್ನ ವರ್ಚಸ್ಸನ್ನು ಕೂಡಿಸಿದನು. ಆದರಿಂದ ಶಿವ

ರಾಯನು ಮನೆಗೆ ಬಂದಾಗ ಅವನನ್ನು ತನ್ನ ದಿವಾಣಖಾನೆಗೆ ಕರೆಸಿಕೊಂಡು ಅವನೊಡನೆ ಆಗಾಗ್ಗೆ ಹರಟೆಹೊಡೆಯುತ್ತಿದ್ದನು. ಹೀಗೆಯೇ ಒಮ್ಮೆ ಶಿವರಾಯನು ಅವನನ್ನು ತನ್ನ ಕೋಣೆಗೆ ಕರೆಸಿಕೊಂಡಾಗ, ಅಲ್ಲಿ ಒಂದು ಹೆಣ್ಣುಮಗಳ ಭಾವಚಿತ್ರವಿಟ್ಟದ್ದು ರಾಮಚಂದ್ರನಿಗೆ ಕಾಣಿಸಿತು. ಆಗ ಅವನು ಅದನ್ನು ಬಹಳ ಆಸ್ಥೆಯಿಂದ ನೋಡಲು, ಅದು ಶಿವರಾಯನ ಹೆಂಡತಿಯಾದ ಕಮಲಾಸುಂದರಿಯದೆಂಬುದು ಅವನಿಗೆ ತಿಳಿಯಿತು. ಆ ಫೋಟೋದ ದರ್ಶನವಾದಂದಿನಿಂದ ಆ ದುರಾತ್ಮನಲ್ಲಿ ಆ ಪತಿವ್ರತೆಯ ವಿಷಯವಾಗಿ ಪಾಪಬುದ್ಧಿಯು ಅಂಕುರಿಸಿ, ಅದು ಸಸಿಯಾಗಿ, ಗಿಡವಾಗಿ, ಮರವಾಗಿ ಬೆಳೆದಿತ್ತು; ಹಾಗು ಆ ಸ್ತ್ರೀರತ್ನವು ತನ್ನ ವಶವಾಗುವ ಸಂಭವವು ಕಾಣದಾಗಲು, ಆ ನೀಚನು ಈ ಕಥಾನಕದೊಳಗಿನ ಎರಡನೆಯ ಪರಿಚ್ಛೇದದಲ್ಲಿ ವಿವರಿಸಿದಂತೆ ಒಂದು ಕಲಂಕಿತ ಪತ್ರವನ್ನು ಶಿವರಾಯನಿಗೆ ಬರೆದು, ಕೃತಘ್ನತೆಯ ಕಡೆಯ ಮೆಟ್ಟಲನ್ನು ಏರಿದ್ದನು!

❊ ❊ ❊ ❊ ❊

ರಾಮಚಂದ್ರನು ಆ ಕೇಳು ವಸತಿಯ ವಾಡೆಯಲ್ಲಿರಹತ್ತಿದ್ದನಷ್ಟೇ! ಆದರೆ ಇವನ ನಿರ್ವಾಹಕ್ಕೆ ದುಡ್ಡು ಎಲ್ಲಿಂದ ಒದಗಬೇಕು? ಶಿವರಾಯನಲ್ಲಿ ಹೀಗೆ ಕೈತೋರಿಸಿ ಅವಲಕ್ಷಣ ಮಾಡಿಕೊಂಡದ್ದರಿಂದ ಅವನ ಭಿಡೆಯಿಂದ ಇವನನ್ನು ನೌಕರಿಗಿಟ್ಟುಕೊಂಡವರು ಮರುದಿನವೇ ಇವನನ್ನು ನೌಕರಿಯಿಂದ ದೂರಮಾಡಿದರಲ್ಲದೆ, ಇವನಿಗೆ ಕೊಡಬೇಕಾಗಿದ್ದ ಸಂಬಳದ ಬಾಕಿಯನ್ನು ಕೂಡಾ ಇವನಿಗೆ ತಲುಪಿಸದೆ, ಆ ಹಣವನ್ನು ಬಡಬಗ್ಗರಿಗೆ ಹಂಚಿಬಿಟ್ಟರು! ತನ್ನನ್ನು ಸಂಕಟದಿಂದ ಪಾರುಮಾಡಿ ಸಂರಕ್ಷಿಸಿದಂಥ ಯಜಮಾನನಿಗೆ ಬೇಕೆಂತ ಅಹಿತಬಯಸಿದ ಇವನನ್ನು ಬೇರೆ ಈತನ ಪರಿಚಿತಸ್ಥರಾರೂ ತಮ್ಮ ಸನಿಯಕ್ಕೆ ಹಾಯಗೊಡದಾದರು. ಅನೇಕ ತರದ ದುರ್ವ್ಯಸನಗಳಿಂದ ಇವನಲ್ಲಿ ಮೊದಲಿನಂತೆ ಶಕ್ತಿಯೂ ಉಳಿದಿರಲಿಲ್ಲ. ಅದರಿಂದ ತನ್ನ ನಿರ್ವಾಹವನ್ನು ಹ್ಯಾಗೆ ಸಾಗಿಸಬೇಕೆಂಬದು ಇವನಿಗೆ ತಿಳಿಯದಾಯಿತು. ಆಗ ಇವನಿಗೆ ದಿನಬಿಟ್ಟುದಿನ ಶಿವರಾತ್ರಿ-ಏಕಾದಶಿಗಳು ಪ್ರಾಪ್ತವಾಗಹತ್ತಿದವು. ಈತನು ತನ್ನ ಪಂಚಾಯಿತಿಲ್ಲದವರಲ್ಲಿಯೂ, ದೇವ-ದೇವಸ್ಥಾನಗಳಲ್ಲಿಯೂ ಭಿಕ್ಷೆಬೇಡಿ ಕೆಲದಿವಸಗಳ ವರೆಗೆ ನಿರ್ವಾಹಸಾಗಿಸಿದನು. ಆದರೆ ಈ ಬಗೆಯಾಗಿ ಇವನ ವ್ಯವಹಾರವು ಶಾಶ್ವತವಾಗಿ ಸಾಗುವ ಸಂಭವವಿದ್ದಿಲ್ಲ. ಯಾಕಂದರೆ, ಆ ಶಹರ ವಸತಿಯಲ್ಲಿ ಇವನಂಥ ಉಡಾಳನಿಗೆ ಬಿಕ್ಕೆನೀಡುವವರಾರು? ಅಲ್ಪ-ಸ್ವಲ್ಪ ಬಿಕ್ಕೆ ಸಿಕ್ಕರೂ ಅದು ಇವನ ಅಮಲಿನ ಪದಾರ್ಥಗಳ ಸಂಗ್ರಹಕ್ಕೆ ಸಾಕು, ಉಳಿದರೆ

ತಾನೇ ಹೊಟ್ಟೆ, ಬಟ್ಟೆ, ಬಾಡಿಗೆ ಮುಂತಾದ ಖರ್ಚುಗಳಿಗಾಗಬೇಕು. ಹೀಗಾಗಿ ಈಗೆರಡು ಮೂರು ತಿಂಗಳುಗಳಿಂದ ಅವನು ತಾನಿದ್ದ ಕೋಣೆಯ ಬಾಡಿಗೆಯನ್ನೇ ಮುಟ್ಟಿಸಿರಲಿಲ್ಲ.

ಈ ಪ್ರಕಾರವಾಗಿ ರಾಮಚಂದ್ರನಿಗುಂಟಾದ ಎಲ್ಲಬಗೆಯ ಕ್ಲೇಶಗಳಿಗೆ ಯಾವ ದೈವಿಕ ಬಲಾಬಲಗಳೂ ಕಾರಣವಾಗಿರಲಿಲ್ಲ. ಅವನ ಇಹಜನ್ಮದ ದುಷ್ಕರ್ಮಗಳ ಪ್ರತಿಫಲವೇ ಅದಾಗಿತ್ತು. ಅವನು ಉಂಡಮನೆಯ ಗಳ ಎಣಿಸಿ ಹತ್ತಿದ ಅಂದರೆ, ಅನಿವಾರಕಸಂಕಟದಿಂದ ತನ್ನನ್ನು ಮುಕ್ತನನ್ನಾಗಿಮಾಡಿ ತನ್ನ ಬಿಡಾರದಲ್ಲಿಯೇ ಆಶ್ರಯ ಕೊಟ್ಟಿದ್ದಂಥ ಕರುಣಾಳುವಾದ ಶಿವರಾಯನಿಗೂ, ಆತನ ಪರಮ ಸಾಧ್ವಿ ಪತ್ನಿಯಾದ ಕಮಲಾಸುಂದರಿಗೂ ನಿಷ್ಕಾರಣವಾಗಿ ಅಂತರವನ್ನುಂಟು ಮಾಡಿದ ಅಪರಾಧಕ್ಕಾಗಿಯೇ ಅವನಿಗೆ ಈ ದುರ್ದೆಸೆಯು ಪ್ರಾಪ್ತವಾಗಿತ್ತು. ಆ ನೀಚನು ಆ ಸತೀಮಣಿಯನ್ನು ಪೇಚಿನಲ್ಲಿ ಕೆಡವಿ ಮೋಜು ನೋಡಬಯಸಿದ್ದನು; ಆದರೆ ಆ ತನ್ನ ಪೇಚು ತನಗೇ ತಿರುಗಿ, ಕಡೆಗೆ ಭಿಕ್ಷಾಪಾತ್ರಕ್ಕೆ ಅಧಿಕಾರಿಯಾಗಿ ಕುಳಿತನು!

# ಹತ್ತನೆಯ ಪರಿಚ್ಛೇದ

## ದ್ವೀಪಾಂತರ ಗಮನ.

ರಾಮಚಂದ್ರನು ವಾಸಿಸಹತ್ತಿದ ಆ ಕೀಳು ವಸತಿಯ ಮಾಡೆಯು ಸಗುಣೆ ಎಂಬ ಹೆಸರಿನ ಹೆಣ್ಣು ಮಗಳದು. ತಾರುಣ್ಯದಲ್ಲಿ ಸಗುಣೆಯು ಈಗಿನಷ್ಟು ಕುತ್ಸಿತಳಾಗಿರಲಿಕ್ಕಿಲ್ಲವೆಂಬದು ನಾಲ್ವತ್ತೈದು ವರ್ಷದ ಅವಳನ್ನು ಈಗ ನೋಡುವ ಯಾರೊಬ್ಬರೂ ತರ್ಕಿಸಬಹುದಾಗಿತ್ತು. ಅವಳು ಸದ್ವಂಶಜಳಾಗಿದ್ದರೂ, ತಾರುಣ್ಯಭರದಲ್ಲಿ ದಾರಿತಪ್ಪಿ ನಡೆದು, ಗೃಹತ್ಯಾಗಮಾಡಿದ್ದಳು. ಆ ಮೇಲೆ ಭಾಗ್ಯಚಕ್ರದ ಪರಿಘದಲ್ಲಿ ಸಿಲುಕಿ, ಎಷ್ಟೋ ಸಾರೆ ಗುಟುಕುನೀರನ್ನು ಕುಡಿದಿದ್ದಳು. ಅದರಿಂದ ಅವಳು ಇನ್ನು ಯಾವ ಹೇಸಿ ಕೆಲಸಗಳಿಗೂ ಅಂಜುವಂತಿರಲಿಲ್ಲ. ಈಗ ಸಗುಣೆಯು ಜಾತಿ ಭ್ರಷ್ಟಳಾಗಿದ್ದಳು. ಆ ಕೀಳು ವಸತಿಯ ಮಾಡೆಯೇ ಅವಳ ನಿಜಸ್ವ ಸಂಪತ್ತಿಯಾಗಿತ್ತು. ಆ ಮಾಡೆಯ ಬಾಡಿಗೆಯಿಂದಲೇ ಅವಳು ತನ್ನ ನಿರ್ವಾಹವನ್ನು ಸಾಗಿಸಿಕೊಳ್ಳುತ್ತಿದ್ದಳು. ಈಗಿನ ಅವಳ ಈ ಇಳಿವಯಸ್ಸಿನಲ್ಲಿಯೂ ಅವಳಿಗೊಬ್ಬ ಇಷ್ಟದೈವತವಿದ್ದನು. ಆ ಅಭಿಭಾವಕನು ಫಿಜಿ, ನಾತಾಲ, ದಕ್ಷಿಣ ಆಫ್ರಿಕಾ ಮುಂತಾದ ದ್ವೀಪಾಂತರಗಳಿಗೆ ಕೂಲೀಜನರನ್ನು ಪೂರಯಿಸುವ ಏಜಂಟನಾಗಿದ್ದನು. ಹಿಂದುಸ್ಥಾನದೊಳಗಿನ ಯಾವುದೊಂದು ಪ್ರದೇಶದಲ್ಲಿ ದುರ್ಭಿಕ್ಷವು ತಲೆದೋರಿದರೆ ಸಾಕು, ತಳವಾರ ಭೀಮಪ್ಪನಿಗೆ ಒಳ್ಳೇ ಹರ್ಷವಾಗುವುದು. ಯಾಕಂದರೆ ಅವನ ಕೂಲೀ ಜನರ ಸಂಪಾದನೆಗೆ ಅದೊಳ್ಳೇ ಸಮಯ ಪ್ರಾಪ್ತವಾದಂತಾಗುವದು. ಅವನು ಆ ದುಷ್ಕಾಲಗ್ರಸ್ತ ದೇಶಕ್ಕೆ ಹೋಗಿ, ಅಲ್ಲಿಯ ಜನರಿಗೆ ನಾನಾಬಗೆಯ ಸಹಾಯ್ಯಮಾಡುವವನಂತೆ ನಟಿಸುವನು. ಅವರಿಗೆ ತನ್ನಲ್ಲಿಯ ಹಣದ ಥೈಲಿಗಳನ್ನು ತೋರಿಸಿ, ನನ್ನಂತೆ ನೀವೂ ಹಣವಂತರಾಗಬೇಕಾದರೆ, ನಾನು ಸೂಚಿಸುವ ಕೆಲವು ಹಿತೋಕ್ತಿಗಳನ್ನು ಮನಮುಟ್ಟಿ ಆಲಿಸಿರಿ, ಎಂದು ತನ್ನ ಧಂದೆಯ ಪ್ರಸ್ತಾವನೆಯ ಮಾತನ್ನು ಆಡುವನು. ಇವನು ಹೇಳುವದಾದರೂ ಏನೆಂಬುದನ್ನು ತಿಳಿಯುವುದಕ್ಕಾಗಿ ಆಗ ಇವನೆಡೆಗೆ ಎಷ್ಟೋ ಜನರು ಸೇರುವರು. ಆ

ಆಶಾಗ್ರಸ್ತ ಜನರನ್ನು ತನ್ನ ಹಿಡತದಲ್ಲಿ ತಂದುಕೊಳ್ಳುವದಕ್ಕಾಗಿ ಆ ಧೂರ್ತ ಭೀಮಪ್ಪನು ನಾನಾ ಬೂಟಾಟಿಕೆಗಳನ್ನು ಉಸುರುವನು. ಯಾವ ಭಯಂಕರ ದುಷ್ಕಾಲದಿಂದ ಅಲ್ಲಿಯವರು ತುತ್ತುಕೂಳನ್ನೂ, ಮರ್ಯಾದೆಯ ಮಟ್ಟಿಗೆ ಅರಿವೆಯನ್ನೂ ಕಾಣದೆ ಮಕ್ಕಳು-ಮರಿಗಳೊಡನೆ ಸತತ ಪೇಚಾಡುತ್ತಿರುತ್ತಾರೋ, ಅಂಥವರು ಭೀಮಪ್ಪನ ಸವಿಮಾತಿಗೆ ಮರುಳಾಗಿ ಅವನ ಒಲೆಯಲ್ಲಿ ಸಿಕ್ಕರೆ ಆಶ್ಚರ್ಯವೇನು? ಆಗ ಅವರಲ್ಲಿಯ ಒಬ್ಬಿಬ್ಬ ಭೋಳೇ ಭಾವಿಕರು "ತಮ್ಮನ್ನು ಈ ದುರ್ಭಿಕ್ಷದಿಂದ ರಕ್ಷಿಸುವುದಕ್ಕಾಗಿ ಸಾಕ್ಷಾತ್ ಪರಮೇಶ್ವರನೇ ಈ ಭೀಮಪ್ಪನನ್ನು ತಮ್ಮೆಡೆಗೆ ಕಳಿಸಿಕೊಟ್ಟಿರುತ್ತಾನೆ"ಂದು ಭಾವಿಸಿ, ಅವನ ಮಾತಿಗೆ ಕಿವಿಜೋತು ಕೂರಲು, ಭೀಮಪ್ಪನು ಅಂಥವರನ್ನೇ ಪ್ರಾಮುಖ್ಯವಾಗಿಟ್ಟುಕೊಂಡು ಅವರೆದುರಿಗೆ ತನ್ನ ಪಂಚಾಂಗವನ್ನು ಬಿಚ್ಚಿ ಹೀಗೆ ಹೇಳಹತ್ತುವನು:—"ಈ ಹಾಳು ಹಾಗು ಆಗಾಗ್ಗೆ ದುರ್ಭಿಕ್ಷಬೀಳುವ ನಾಡನ್ನು ಬಿಟ್ಟು ಒಂದು ಅತ್ಯಂತ ಸುಭಿಕ್ಷ ಹಾಗು ಸುರಾಜ್ಯಕ್ಕೆ ಹೋಗಿರೆಂದು ಹೇಳುವುದಕ್ಕಾಗಿಯೇ ನಾನು ಇಲ್ಲಿಗೆ ಬಂದಿರುತ್ತೇನೆ. ನೀವು ಅಲ್ಲಿ ಐದು ವರ್ಷಗಳಿದ್ದರೆ ಸಾಕು, ಈ ಅಖಂಡ ದಾರಿದ್ರ್ಯವೂ, ದುರ್ಭಿಕ್ಷವೂ ನಿಮ್ಮನ್ನೆಂದೂ ಮುಟ್ಟಲಾರವು. ಅಲ್ಲಿಗೆ ಹೋದರೆ ನೀವೆಲ್ಲರೂ ಸಧನರಾಗಿಯೇ ಹಿಂತಿರುಗಿ ಬರುತ್ತೀರಿ" ಆ ಬುಭುಕ್ಷುಗಣಗಳು ಅವನ ಆ ಪಂಚಾಂಗವನ್ನು "ಆಹಾ" ಎಂದು ಬಾಯಿತೆಕ್ಕೊಂಡು ಕೇಳುತ್ತ ಕುಳಿತರೆ ಅರಿದೇನು? ಅವರಲ್ಲಿಯ ಬಹುಜನರಿಗೆ ಆ ಅತ್ಯಂತ ಸುಲಭವಾಗಿ ಶ್ರೀಮಂತರಾಗುವ ಹಂಚಿಕೆಯನ್ನು ಕೇಳಿ ಬಾಯಿಗೆ ನೀರೊಡೆಯುವುದು. ಮಧ್ಯಾಹ್ನಕ್ಕೇ ಅಭಾವವಾದ ಆ ಕಂಗಾಲರು ಭೀಮಪ್ಪನಿಂದ ಆ ಸುವಾರ್ತೆಯನ್ನು ಕೇಳಿ, ಮನದಲ್ಲಿ ಮಂಡಿಗೆಯನ್ನೇ ತಿನ್ನಲಾರಂಭಿಸುವರು. ಆದರೆ ಆ ಕಾಲ್ಪನಿಕಭೋಜನದಿಂದ ತೃಪ್ತಿಯಾಗುವ ಬಗೆ ಹೇಗೆ? ಅವರಲ್ಲಿಯ ಬಹುಜನರಿಗೆ ಎರಡೆರಡು-ಮೂರುಮೂರು ದಿನಗಳಿಂದ ಅನ್ನವು ಸಿಕ್ಕಿರದಿದ್ದರೆ, ಬೇರೆ ಕೆಲವರಿಗೆ ಒಂದು ವಾರದಿಂದಲೂ ಅನ್ನದ ದರುಶನವೇ ಆಗಿರಲಿಕ್ಕಿಲ್ಲ. ಆದ್ದರಿಂದ ಭೀಮಪ್ಪನ ಆ ವಾರ್ತೆಯನ್ನು ಕೇಳಿ, ಘೃತಾಹುತಿಯನ್ನು ಹೊಂದಿದ ಅಗ್ನಿಯಂತೆ ಅವರ ಜಠರಾಗ್ನಿಯು ಪ್ರಜ್ವಲಿಸುವದು. ಆಗ ಅವರಲ್ಲಿಯ ಬಹುಜನರು "ಮಹಾರಾಯಾ, ನನ್ನನ್ನು ಅಲ್ಲಿಗೆ ಕಳಿಸು-ನನ್ನನ್ನು ಅಲ್ಲಿಗೆ ಕಳಿಸು" ಎಂದು ಭೀಮಪ್ಪನನ್ನು ದುಂಬಾಲಬೀಳುವರು. ಆಗ ಅವನು ಏನೋ ಯೋಚಿಸುವಂತೆ ಮುಖಭಾವವನ್ನು ತೋರ್ಪಡಿಸುತ್ತ—"ಅಪ್ಪಗಳಿರಾ, ನಿಮ್ಮ ಕಷ್ಟವನ್ನು ನೋಡಿ ನನ್ನ ಅಂತಃಕರಣಕ್ಕೆ ಬೆಂಕಿಹತ್ತಿದಂತಾಗಿರುತ್ತದೆ. ಆದರಿಂದಲೇ

ನಾನು ನಿಮಗೆ ಆ ಸುಖಸಾಮ್ರಾಜ್ಯದ ಸುದ್ದಿಯನ್ನು ಹೇಳಿದೆನು. ಆದರೆ-ಆದರೆ, ಅಲ್ಲಿಗೆ ಹೋಗಲಿಕ್ಕೆ ಐನೂರು ರೂಪಾಯಿಗಳಾದರೂ ಮಾರ್ಗವ್ಯಯಕ್ಕಾಗಿ ಬೇಕಾಗುವವು. ಬರ್ರಿ, ಅಷ್ಟು ಹಣವಿದ್ದವರು ಈಗಲೇನನ್ನೊಡನೆ ಬರ್ರಿ; ನಾನು ನಿಮ್ಮನ್ನು ಕೂಡಲೆ ಆ ಭೂಲೋಕದೊಳಗಿನ ನಂದನವನಕ್ಕೆ ಕಳಿಸಿಕೊಡುತ್ತೇನೆ, ನಡೆಯಿರಿ'', ಎಂದು ನುಡಿಯಲು, ದುಷ್ಕಾಲದಿಂದ ಗ್ರಸ್ತರಾಗಿ ತಮ್ಮ ವಸ್ತ್ರ-ಒಡವೆ, ದನ-ಕರು, ಮನೆ-ಮಾರುಗಳನ್ನು ಉದರಂಭರಣಕ್ಕಾಗಿ ಆಹುತಿಯಾಗಿ ಕೊಟ್ಟು, ಈವರೆಗೆ ಕಣ್ಣಲ್ಲಿ ಪ್ರಾಣಹಿಡಿದ ಅವರಲ್ಲಿ ಅಷ್ಟು ಹಣವೆಲ್ಲಿಂದ ಬರಬೇಕು? 'ಹಣವೇ ಇಲ್ಲದ ಬಳಿಕ ತಾವು ಆ ಸುಖಸಾಮ್ರಾಜ್ಯಕ್ಕೆ ತಲುಪುವದು ಹೇಗೆ! ಅಲ್ಲಿಗೆ ಹೋಗದೆಯಿದ್ದ ಬಳಿಕ ಅಲ್ಲಿಯ ಆ ಅಖಂಡ ಸುಖವು ತಮಗೆ ಲಭಿಸುವ ಸಂಭವವಾದರೂ ಉಂಟೇ?' ಮುಂತಾದ ಕಲ್ಪನೆಗಳಿಂದ ಹತಬುದ್ಧರಾಗಿ ಆ ಜನರು ಮುಂದುಗಾಣದೆ ಸುಮ್ಮನೆ ಕೂಡ್ರಲು, ಅವರ ಆ ಕಡುದೈನ್ಯಾವಸ್ಥೆಯನ್ನು ಕಂಡು ಅಂತರಂಗದಲ್ಲಿ ಒಳ್ಳೇ ಸಮಾಧಾನಹೊಂದಿದ ಆ ಭೀಮಪ್ಪನು ತನ್ನ ಕೆಲಸಕ್ಕೆ ಇದೊಳ್ಳೇ ಸುಸಂಧಿಯೆಂದು ತಿಳಿದು, ಆ ಬಡಪ್ರಾಣಿಗಳನ್ನು ನೋಡಿ ಒಳ್ಳೇ ಸದ್ಗದಿತನಾದವನಂತೆ—"ತಮ್ಮಗಳಿರಾ, ನಿಮ್ಮಲ್ಲಿಯ ಎಷ್ಟು ಜನರು ಮಾರ್ಗವ್ಯಯವನ್ನು ಸಹಿಸಲು ಅಶಕ್ತರಾಗಿರುವಿರೋ, ಆ ಎಲ್ಲ ಜನರಿಗೂ ಬೇಕಾಗುವ ಮಾರ್ಗವ್ಯಯದ ಹಣವನ್ನು ನಾನು ಒದಗಿಸಿಕೊಡುತ್ತೇನೆ. ಆದರೆ ನೀವು ಮಾತ್ರ ಅಲ್ಲಿ ಐದು ವರ್ಷಗಳವರೆಗೆ ಕೆಲಸ ಮಾಡುವೆವೆಂದು ಕರಾರುಪತ್ರಗಳನ್ನು ಬರಕೊಡಲಿಕ್ಕೆ ಬೇಕು. ಐದುವರ್ಷಗಳವರೆಗೆ ನೀವು ಅಲ್ಲಿ ನಿಮ್ಮಿಚ್ಛೆಯಂತೆ ಕೆಲಸಮಾಡಲಾರಿರಿ. ನಿಮ್ಮಗಳ ಮಾರ್ಗವ್ಯಯವನ್ನು ಯಾರು ಸಹಿಸುವರೋ ಅವರ ಕೆಲಸವನ್ನೇ ನೀವು ಆ ಅವಧಿಯವರೆಗೆ ಮಾಡಬೇಕಾಗುತ್ತದೆ. ನಿಮ್ಮನ್ನು ಯಾವ ದೇಶಕ್ಕೆ ನಾನು ಹೋಗಹೇಳುತ್ತಿರುವೆನೋ, ಆ ದೇಶವು ಇಂದ್ರನ ನಂದನವನದಂತಿರುತ್ತದೆ. ಕ್ಷೀರ ಸಮುದ್ರದಲ್ಲಿಯ ಆ ರಾಜ್ಯದಲ್ಲಿ ಕಬ್ಬಿನ ಪೈರೇ ಪ್ರಾಮುಖ್ಯವಾದದ್ದು. ಕಬ್ಬಿನ ರಸವು ಅಮೃತಕ್ಕೆ ಸಮಾನವಾದದ್ದೆಂಬದನ್ನು ನೀವು ಬಲ್ಲಿರಿ. ಯಾವ ಪ್ರದೇಶದಲ್ಲಿ ಕಬ್ಬೇ ಮುಖ್ಯವಾಗಿ ಬೆಳೆಯುತ್ತದೆಯೋ, ಆ ದೇಶವನ್ನು ಅಮೃತಮಯವಾದ ದೇವನಗರಿಯ ಹೆಸರಿನಿಂದಲೇ ಕರೆಯಬಹುದು! ಅಲ್ಲಿ ಕೊಂಡು ಉಪಜೀವಿಸುವವರಿಗೆ ಆಹಾರ್ಯಪದಾರ್ಥಗಳೂ ಬಟ್ಟೆಬರಿಗಳೂ ಬಹು ಅಗ್ಗ. ಮೀನುಗಳನ್ನಂತೂ ಅಲ್ಲಿ ಕ್ರಯ-ವಿಕ್ರಯ ಮಾಡುವವರೇ ಇಲ್ಲ. ಓಹಟಿಯ ಸಮಯದಲ್ಲಿ ಸಮುದ್ರದ ದಡಕ್ಕೆ ಹೋದರೆ ಸಾಕು, ಆಗ ಅಲ್ಲಿ ಹೇರಳವಾಗಿ ಬಿದ್ದಿರುವ

ತರತರದ ಮೀನುಗಳಲ್ಲಿ ಬೇಕಾದಷ್ಟನ್ನು ಕಟ್ಟಿಕೊಂಡು ಬಂದರೂ ಕೇಳುವವರೇ ಇಲ್ಲ. ನಿಮ್ಮಂತೆ ಕರಾರು ಬರಕೊಟ್ಟು ಹೋದವರಿಗೆ ಅಕ್ಕಿ, ಬೇಳೆ, ಬೆಲ್ಲ, ಗೋದಿ, ಎಣ್ಣೆ, ತುಪ್ಪ, ಸಕ್ಕರಿ ಮುಂತಾದ ಆಹಾರ್ಯ ಪದಾರ್ಥಗಳೂ, ನಿತ್ಯೋಪಯುಕ್ತ ಭಾಂಡಿಗಳೂ, ಹಾಸಿಗೆ, ಅಂಗಿ, ದೋತರ, ರುಮಾಲ ಮುಂತಾದ ಬಟ್ಟೆಗಳೂ ಪುಕ್ಕಟೆಯಾಗಿ ಲಭಿಸುವವಲ್ಲದೆ, ಪ್ರತಿಯೊಬ್ಬನಿಗೆ ವಾರಕ್ಕೆ ಏಳು ರೂಪಾಯಿಗಳಂತೆ ರೋಖು ಸಂಬಳವೂ ಕೊಡಲ್ಪಡುವದು. ಅಲ್ಲಿಗೆ ಹೊರಡಲು ಒಪ್ಪಿದರೆ, ಕರಾರುಪತ್ರವಾದೊಡನೆಯೇ ಪ್ರತಿಯೊಬ್ಬರು ಐವತ್ತು-ಐವತ್ತು ರೋಖು ರೂಪಾಯಿಗಳನ್ನೂ, ಅರಿವೆ, ಹಾಗು ಆಹಾರ ಪದಾರ್ಥಗಳನ್ನೂ ಹೊಂದುವಿರಿ!'' ಎಂದು ಹೇಳಿ ಅವರಲ್ಲಿಯ ಕೆಲವರಿಗೆ ಎರಡೆರಡು ರೂಪಾಯಿಗಳನ್ನು ಅಗಲೆ ಕೊಟ್ಟು ಬಿಡುವನು.

ಆ ಎರಡು ರೂಪಾಯಿಗಳನ್ನು ಪಡೆದವರು ಕೂಡಲೆ ಪೇಟೆಯೊಳಗಿನ ಸಿಧಾ-ಸಾಮುಗ್ರಿಗಳನ್ನು ತಂದು ಯಥೇಚ್ಛವಾಗಿ ಉಣ್ಣುವರು. ತಮ್ಮ ವಂಶಪರಂಪರೆಯ ಮಾತೃಭೂಮಿಯನ್ನು ಬಿಟ್ಟು ಹೋಗಲಿಕ್ಕೆ ಮನಸ್ಸು ಹಿಂದಕ್ಕೆ ಜಗ್ಗುತ್ತಿದ್ದರೂ ''ಕುಕ್ಷೌ ತಿಷ್ಠತಿ ಯಸ್ಯಾನ್ನಂ ತಸ್ಯಬುದ್ಧಿಃ ಪ್ರವರ್ತತೇ'' ಎಂಬಂತೆ ಅಂದು ಆ ನೀಚವೃತ್ತಿಯ ಭೀಮಪ್ಪನ ಹಣದಿಂದ ಪೋಷಿತರಾದ ಆ ದುಷ್ಕಾಲಗ್ರಸ್ತ ಕಂಗಾಲರು ಸದಸದ್ವಿವೇಕವನ್ನು ತೊರೆದು, ದೇಶಾಂತರ ಗಮನಕ್ಕೆ ಸಜ್ಜಾಗಿ ಅವನೆಡೆಗೆ ಕರಾರು ಬರಕೊಡಲಿಕ್ಕೆ ಬರುವರು. ಇವರನ್ನು ಕಂಡು ಯಾರಿಗೆ ಎರಡು ರೂಪಾಯಿಗಳು ಕೂಡ ಸಿಕ್ಕಿರಲಿಲ್ಲವೋ ಅವರೂ ತಮ್ಮ ಹೊಟ್ಟೆಯ ಉರಿಗಾಗಿ ಅವನೆಡೆಗೆ ಬರುವರು. ಅವನು ಅವರೆಲ್ಲರನ್ನು ತನ್ನ ಬಲಿಯಲ್ಲಿ ಸಿಗಿಸಿ, ಅವರಿಂದ ಕಾಯಿದೇ ಪ್ರಕಾರ ಕರಾರುಪತ್ರಗಳನ್ನು ಬರೆಯಿಸಿಕೊಂಡು, ಆ ಪರದ್ವೀಪಸ್ಥ ಬಿಳಿಮೈಯ ಸಕ್ಕರೆಯ ವ್ಯಾಪಾರಸ್ಥರ ವಶಕ್ಕೆ ಅವರನ್ನೊಪ್ಪಿಸಿ, ಆ ಕೆಲಸದ ಬಗ್ಗೆ ತನಗೆ ಸಿಗಬೇಕಾದ ವಿಪುಲ ದಲ್ಲಾಳಿಯನ್ನು ತಕ್ಕೊಂಡು ಮನೆಯ ಮಾರ್ಗವ ಹಿಡಿಯುವನು; ಹಾಗು ಆ ದುರ್ವ್ಯವಹಾರದ ಆದಾಯದ ಕೆಲಭಾಗವನ್ನು ತನ್ನ ಉಪಪತ್ನಿಯಾದ ಸಗುಣೆಗೆ ಕೊಟ್ಟು, ಅವಳಿಂದಲೂ ತನ್ನ ಉದ್ಯೋಗಕ್ಕೆ ಸಹಾಯವಾಗುವ ಹಾಗೆ ಏರ್ಪಾಟು ಮಾಡಿಕೊಳ್ಳುವನು.

ಸಗುಣೆಯು ತನ್ನ ವಾಡೆಯಲ್ಲಿ ಸಧನರಿಗಾಗಲಿ ಸಚ್ಛೀಲರಿಗಾಗಲಿ ಬೇಕಂತ ವಾಸಿಸಗೊಡುತ್ತಿರಲಿಲ್ಲ. ತನ್ನ ಬಾಡಿಗೆಯಲ್ಲಿ ಕೆಲವು ತಿಂಗಳುಗಳ ಬಾಡಿಗೆಯು ಮುಣುಗಿದರೂ ಚಿಂತೆಯಿಲ್ಲ; ಆದರೆ ಬರಬರುತ್ತ ಅನ್ನಕ್ಕೆ ಗತಿಗಾಣದಂಥವರಿಗೂ

ಭಯಂಕರ ದುರ್ವ್ಯಸನಿಗಳಿಗೂ, ದುಷ್ಕಾಲಗ್ರಸ್ತದೇಶದ ಜನರಿಗೂ ಅವಳು ಇರ ಗೊಡುತ್ತಿದ್ದಳು. ತನ್ನ ಬಾಡಿಗೆಯು ನಿಯಮಿತವಾಗಿ ಬರದಾಗಲು ಅವಳು ಅವರಿಗೆ ಉಪದ್ರವಕೊಡುವಳು. ಆಗ ಅವರು ಸಾಲಕೊಡುವ ಸಾವುಕಾರರನ್ನು ಹುಡುಕಹ ತ್ತುವರು. ತಳವಾರ ಭೀಮಪ್ಪನಾದರೂ ಅದೇವಾಡೆಯು ಒಂದು ಪ್ರಶಸ್ತವಾದ ಜಾಗೆ ಯಲ್ಲಿ ಸಾವುಕಾರನೆಂದು ವಾಸಿಸುತ್ತಿದ್ದನು. ಅವನಲ್ಲಿಗೆ ಋಣಕೋಜನರು ಬರಲು, ಅವನು ಪಾತ್ರಾಪಾತ್ರತೆಗಳನ್ನು ವಿಚಾರಿಸಿ ಕೈಸಡಿಲುಬಿಟ್ಟು ಹಣ ಕೊಟ್ಟು ಅವರನ್ನು ಶೀಘ್ರವಾಗಿ ತನ್ನ ಧಂದೆಯ ಸೊತ್ತುಗಳನ್ನಾಗಿ ಮಾಡಿಕೊಳ್ಳುವನು. ನಮ್ಮ ಕೃತ ಘ್ನರಾಮಚಂದ್ರನಾದರೂ ಈಚೆಗೆ ಕೆಲವು ತಿಂಗಳುಗಳಿಂದ ಸಗುಣಗೆ ಬಾಡಿಗೆಯ ಮುಟ್ಟಿಸದ್ದರಿಂದ, ಅವನೂ ಅವಳ ಉಪದ್ರವಕ್ಕೆ ಬೇಸತ್ತು, ಮೊನ್ನೆ ಮೊನ್ನೆ ಭೀಮ ನಲ್ಲಿ ಸಾಲವನ್ನು ಕೊಯ್ದಿದ್ದನು.

ಇಂದು ಭೀಮಪ್ಪನು ತನ್ನ ಮನೆಯ ಪಡಸಾಲೆಯ ಭವ್ಯವಾದ ಜಗುಲಿಯ ಮೇಲೆ ಕುಳಿತು ಯಾರೊಡನೆಯೋ ಬಹಳ ಹೊತ್ತು ಮಾತಾಡುತ್ತ ಕುಳಿತಿದ್ದನು. ರಾಮಚಂದ್ರನಿಗೂ ಇಂದು ತರ-ಬರುವ, ಅಡಿಗೆ-ಊಟಗಳ ಉದ್ಯೋಗವಿರದ್ದರಿಂದ ಒಣಗಿದ ಸೊಂಡಿಯನ್ನು ಜೊಗ್ಗಿಸಿಕೊಂಡು ಅವನು ತನ್ನ ಕೋಣೆಯಲ್ಲಿಯೇ ಕುಳಿ ತಿದ್ದನು. ಭೀಮಪ್ಪನ ಬಿಡಾರವು ರಾಮಚಂದ್ರನ ಕೋಣೆಯ ಸಮ್ಮುಖದಲ್ಲಿಯೇ ಇದ್ದದ್ದರಿಂದ ಅಲ್ಲಿ ನಡೆದಿದ್ದ ಮಾತುಗಳು ಇವನಿಗೆ ಚೆನ್ನಾಗಿ ಕೇಳಬರುತ್ತಿ ದ್ದವು. ಆಗ ಭೀಮಪ್ಪನಲ್ಲಿ ಬಂದವರು ಅಹಮ್ಮದನಗರ ಜಿಲ್ಲೆಯ ದುಷ್ಕಾಲ ಗ್ರಸ್ತಜನರು ಅವರು ತಮ್ಮಂಥ ಕಂಗಾಲರನ್ನು ಭೀಮಪ್ಪನು ಸಮೃದ್ಧ ದೇಶಕ್ಕೆ ಕಳಿಸಿ ಕೊಡುತ್ತಾನೆಂಬ ಸುದ್ದಿಕೇಳಿ, ತಾವೂ ಅವನ ಸಹಾಯ್ಯವನ್ನು ಪಡೆದು ದ್ವೀಪಾಂತರಕ್ಕೆ ಹೋಗಿ ಉಪಜೀವಿಸಬೇಕೆಂದು ಬಂದಿದ್ದರು. ಭೀಮಪ್ಪನು ಮೇಲೆ ಹೇಳಿದಂತೆ ಆ ದುಷ್ಕಾಲಗ್ರಸ್ತಜನರನ್ನು ಒಳ್ಳೇ ಸವಿಮಾತಿನಿಂದ ಆಕರ್ಷಿಸಿ ಕೊಂಡು, ಅವರಲ್ಲಿಯ ಪ್ರತಿಯೊಬ್ಬನಿಗೆ ಎರಡೆರಡು ರೂಪಾಯಿಗಳಂತೆ ಕೊಟ್ಟು ಕಳಿಸಿ ದನು. ತಾಸೆರಡುತಾಸುಗಳ ತರುವಾಯ ಆ ಎಲ್ಲ ಜನರು ಪುನಃ ಅವನಲ್ಲಿಗೆ ಬಂ ದರು. ಇದನ್ನೆಲ್ಲ ನೋಡುತ್ತಿದ್ದ ನಾಲ್ಕಾರುದಿವಸಗಳಿಂದ ಹೊಟ್ಟೆಗೇನೂ ಸಿಗದ ರಾಮಚಂದ್ರನ ಮೇಲೆ ಭೀಮಪ್ಪನ ಕೃತಿಯ ಪರಿಣಾಮವು ಚೆನ್ನಾಗಿ ಆಯಿತು. ಆಗ ಅವನೂ ಅಲ್ಲಿಗೆ ಹೋಗಿ ತಾನೂ ದ್ವೀಪಾಂತರಕ್ಕೆ ಹೋಗಲು ಒಪ್ಪುತ್ತೇನೆಂದು ಹೇಳಿದನು; ಆದರೆ ತನ್ನ ಮೈಯಲ್ಲಿ ವಿಶೇಷ ಶಕ್ತಿಯಿರದ್ದರಿಂದ ತನ್ನಿಂದ ಅಲ್ಲಿ ಕಷ್ಟದ ಕೆಲಸಗಳಾಗಲಿಕ್ಕಿಲ್ಲೆಂದು ಅನ್ನಲು, ಚಾಣಾಕ್ಷನಾದ ಭೀಮಪ್ಪನು ಅವ

ನನ್ನುದ್ದೇಶಿಸಿ—ರಾಯರೇ, ನಿಮ್ಮಂಥ ಮಾನ್ಯವಂತ ಬ್ರಾಹ್ಮಣರನ್ನು ಅಲ್ಲಿಯ ಕೂಲಿಯ ಕೆಲಸಕ್ಕೆ ಕಳಿಸಿದರೆ ದೇವರು ನನಗೆ ಯಾವ ಶಿಕ್ಷೆಯನ್ನು ವಿಧಿಸಿಯಾನೆಂಬದರ ಅರಿವು ನನಗಿಲ್ಲೇನು? ನೀವೇನೂ ಚಿಂತಿಸಬೇಡಿರಿ. ನಿಮ್ಮಂಥ ಕಲಿತಜನರು ಅಲ್ಲಿ ವಿಶೇಷವಾಗಿ ಬೇಕಾಗಿರುತ್ತಾರೆ. ನಿನಗೆ ಅಲ್ಲಿ ನಿಮ್ಮಿಂದ ನೀಗಬಹುದಾದ ಲೆಕ್ಕಪತ್ರಗಳ ಕೆಲಸವನ್ನೇ ಕೊಡುವರು. ಅಲ್ಲದೆ ಅಂಥ ಕೆಲಸವನ್ನೇ ನಿಮಗೆ ಕೊಡಬೇಕೆಂದು ನಾನೂ ನಮ್ಮ ಸಾಹೇಬರಿಗೆ ಖಂಡಿತವಾಗಿ ತಿಳಿಸುತ್ತೇನೆ, ಎಂದು ಹೇಳಿ; ರಾಮಚಂದ್ರನೇ ಮೊದಲಾದ ಆ ಎಲ್ಲ ಜನರೊಡನೆ ಭೀಮಪ್ಪನು ಆಗಲೆ ಕೂಲಿಗಳನ್ನು ರೆಜಿಸ್ಟರ ಮಾಡುವ ಅಡ್ಡೆಗೆ ನಡೆದನು. ದಾರಿಯಲ್ಲಿ ಅವನು ರಾಮಚಂದ್ರನಿಗೆ ಹೇಳಿದ್ದೇನಂದರೆ:—ರಾಯರೇ, ನೀವು ಸತ್ಕುಲಪ್ರಸೂತರು. ವಿಧಿವಶದಿಂದ ನಿಮಗೆ ಈಗ ಕಷ್ಟಕಾಲವು ಬಂದಿದ್ದರೂ ತುಸುದಿವಸಗಳಲ್ಲಿಯೇ ನೀವು ಕೋಟ್ಯಾಧೀಶರಾಗುವದರಲ್ಲಿ ಸಂದೇಹವಿಲ್ಲ; ಆದರೆ ರಾಯರೇ, ನಿಮ್ಮಂಥ ಸುಶಿಕ್ಷಿತರು, ಅದರಲ್ಲಿಯೂ ಬ್ರಾಹ್ಮಣರಾದ ನೀವು ಮ್ಯಾಜಿಸ್ಟ್ರೇಟ ಸಾಹೇಬರ ಮುಂದೆ ಕರಾರು ಪತ್ರಕ್ಕೆ ಸಮ್ಮತಿಕೊಟ್ಟು ಸ್ವದಸ್ತೂರ ಮಾಡಬೇಕಾದರೆ ನಿಮಗೆ ಅತ್ಯಂತ ಜಡವೆನಿಸಬಹುದು; ಅಲ್ಲದೆ ಮ್ಯಾಜಿಸ್ಟ್ರೇಟ ಸಾಹೇಬರಿಗೂ ಸಂಶಯವುಂಟಾಗಬಹುದು. ಆದ್ದರಿಂದ ಆ ಕ್ಷಣಿಕ ವಿಪತ್ತಿನಿಂದ ಪಾರಾಗುವುದಕ್ಕಾಗಿ ನಾನು ನಿಮಗೊಂದು ಯುಕ್ತಿಯನ್ನು ಸೂಚಿಸುವೆನು. ಅದರಂತೆ ನಡೆದರೆ, ನೀವು ನಿರಾತಂಕವಾಗಿ ನಿಮ್ಮ ದೈವವನ್ನು ತೆರೆದುಕೊಳ್ಳುವ ಮಾರ್ಗವನ್ನು ಕಂಡುಕೊಳ್ಳುವಿರಿ. ಭೀಮಪ್ಪನ ಈ ಮಾತನ್ನು ಕೇಳಿ ಅಧೀರವಾದ ರಾಮಚಂದ್ರನು ಅದೇನೆಂದು ಕೇಳಲು,—"ಕರಾರಪತ್ರದ ಮೇಲೆ ಸಹಿಯಾಗುವವರೆಗೆ ನೀವು ನಿಮ್ಮ ಹೆಸರನ್ನು ರಾಮಾಜಿ ಎಂತಲೂ, ನಿಮ್ಮ ತಂದೆಯ ಹೆಸರನ್ನು ವಾಲಾಜಿ ಎಂತಲೂ ಹೇಳಬೇಕು; ಹಾಗು ಜಾತಿ ಎಂದು ಕೇಳಿದಾಗ, ಮಾವಳಿ ಎಂದು ಹೇಳಿದರೆ ತೀರಿತು." ಎಂದು ಹೇಳಿದ ಆ ನೀಚ ಭೀಮಪ್ಪನ ಮಾತಿಗೆ ಒಪ್ಪಿ ದ್ವೀಪಾಂತರ ಗಮನದ ಪೂರ್ವತಯಾರಿಗಾಗಿ ರಾಮಚಂದ್ರನು ಅವನೊಡನೆ ಅಡ್ಡೆಗೆ ನಡೆದನು.

* * * * *

ಪ್ರಶಾಂತವಾದ ಮಹಾಸಾಗರದಲ್ಲಿ ಎಷ್ಟೋ ಚಿಕ್ಕ-ದೊಡ್ಡ ನಡುಗಡ್ಡೆಗಳ ಗುಂಪಿನಲ್ಲಿ ಎಲ್ಲಕ್ಕೂ ದೊಡ್ಡದಾದದ್ದೊಂದು ದ್ವೀಪವಿರುತ್ತದೆ. ಆ ದ್ವೀಪದಲ್ಲಿ ಕಬ್ಬಿನ ಹೊರತು ಬೇರೆ ಬೆಳೆಗಳೇ ಆಗುವದಿಲ್ಲ. ಎತ್ತ ನೋಡಿದರೂ ಕಬ್ಬಿನ ಗದ್ದೆಗಳೇ ಕಾಣುವವು. ಎಲ್ಲಿಯಾದರೊಂದರಂತೆ ಕೂಲೀ ಜನರು ವಾಸಿಸುವ ಹಳ್ಳಿ

ಗಳು ಆಕಾಶದೊಳಗಿನ ಧೂಮ್ರಕೇತುವಿನಂತೆ ಕಾಣಿಸಿಕೊಂಡು ಆ ಇಕ್ಷು ಕ್ಷೇತ್ರದ ಅಖಂಡತ್ವಕ್ಕೆ ಭಂಗವನ್ನುಂಟು ಮಾಡುತ್ತಿರುತ್ತವೆ. ಆ ದ್ವೀಪದ ಪಶ್ಚಿಮದಿಕ್ಕಿನಲ್ಲಿ ಸ್ವಾಭಾವಿಕವಾಗಿದ್ದ ಉಸುಕಿನ ಬೈಲಲ್ಲಿ ಬಂದರವೂ ಶಹರವೂ ನಿರ್ಮಿಸಲ್ಪಟ್ಟಿರುತ್ತವೆ. ಬಂದರದಲ್ಲಿ ಯಾವಾಗಲೂ ಎಷ್ಟೋ ಹಡಗಗಳು ಲಂಗರಹಾಕಿ ನಿಂತುಕೊಂಡಿರುತ್ತವೆ. ಅವುಗಳ ಸುತ್ತಮುತ್ತು ಅಸಂಖ್ಯ ಸಣ್ಣದೊಡ್ಡ ಸ್ಟೀಮ್ಲಾಂಚಗಳೂ, ಮಚವೆಗಳೂ ಆಡ್ಡಾಡುತ್ತಿರುತ್ತವೆ. ಬಂದರದ ಮೇಲೆ ಎಷ್ಟೋ ದೊಡ್ಡ ದೊಡ್ಡ ವಖಾರುಗಳಿರುತ್ತವೆ. ಅವುಗಳು ಉತ್ತಮವಾದ ಚಿನ್ನಿಸಕ್ಕರೆಯ ಮೂಟೆಗಳಿಂದ ಯಾವಾಗಲೂ ತುಂಬಿತುಳುಕುತ್ತಿರುತ್ತವೆ. ಅಸಂಖ್ಯ ಕೂಲೀ ಜನರು ಬೆಳಗಿನ ಜಾವದಿಂದ ಸಾಯಂಕಾಲದ ವರೆಗೆ ಆ ವಖಾರಿನೊಳಗಿನ ಸಕ್ಕರೆಯ ಚೀಲಗಳನ್ನು ಲಾಂಚಗಳಲ್ಲಿಯೂ ಮಚವೆಗಳಲ್ಲಿಯೂ ಏರಿಸುವದರಲ್ಲಿ ಮಗ್ನರಾಗಿರುತ್ತಾರೆ. ಈ ಲಾಂಚ-ಮಚವೆಗಳು ಹಡಗದ ಒಳಿಗೆ ಹೋಗಲು ಹಡಗದೊಳಗಿನ ಕಪ್ಪಲಿಯಂಥ ಸಾಧನದಿಂದ ಇವುಗಳೊಳಗಿನ ಸಕ್ಕರೆಯ ಚೀಲಗಳನ್ನು ಅರಗಳಿಗೆಯಲ್ಲಿ ಹಡಗದಮೇಲೆ ಏರಿಸಿಕೊಳ್ಳುತ್ತಾರೆ. ವಖಾರಗಳನ್ನು ದಾಟಿ ತುಸ ಮುಂದಕ್ಕೆ ಹೋದರೆ, ಅಲ್ಲಿ ದೊಡ್ಡ ದೊಡ್ಡ ಇಂಜನದ ಮನೆಗಳಿರುತ್ತವೆ. ಅಲ್ಲಿ ಅವು ಹಗಲೂರಾತ್ರಿ ಒಂದೇಸವನೆ ಕೆಲಸ ಮಾಡುತ್ತಿರುತ್ತವೆ. ಇಂಜಿನದ ಮನೆಗಳ ಹಿಮ್ಮಗ್ಗಲಲ್ಲಿ ಕಬ್ಬಿನ ರಸವನ್ನು ಕಾಸುವ ಕೊಳಗಳಂಥ ದೊಡ್ಡ ದೊಡ್ಡ ಕಥಾಯಿಗಳೂ, ಅವುಗಳ ಬದಿಯಲ್ಲಿ ಕಬ್ಬನ್ನು ಗಾಣವಾಡುವ ವಿಶಾಲವಾದ ಸ್ಥಲವೂ ಇರುತ್ತವೆ. ಕಬ್ಬಿನ ರಸವಾಗುವ ಸ್ಥಳದಿಂದ ಕಥಾಯಿಗಳಿರುವ ವರೆಗೆ ಗಚ್ಚು ಮಾಡಿದ ನೆಲವಿದ್ದು, ಅಲ್ಲಿ ಬಿದ್ದ ರಸವೆಲ್ಲ ಕಥಾಯಿಗಳೊಳಗೆ ಸಹಜವಾಗಿ ಹರಿದು ಬರುವಂತೆ ಅದು ಇಳುಕಲಾಗಿ ಮಾಡಲ್ಪಟ್ಟಿರುತ್ತದೆ. ಅಲ್ಲಿ ಕಬ್ಬಿನ ರಸದಿಂದಲೇ ಶುಭ್ರವಾದ (ಚಿನ್ನಿ) ಸಕ್ಕರೆಯು ತಯಾರಾಗುತ್ತದೆ. ನಮ್ಮ ದೇಶದಲ್ಲಿ ಕಬ್ಬಿನ ರಸದಿಂದ ಒಮ್ಮೆಲೆ ಸಕ್ಕರೆಯನ್ನು ಮಾಡುವದಿಲ್ಲ. ಇಲ್ಲಿ ಮೊದಲು ಬೆಲ್ಲವನ್ನು ಮಾಡಿ, ಅದರಿಂದ ಸಕ್ಕರೆಮಾಡುವ ಪರಿಪಾಠವದೆ. ಆದರೆ ಕಬ್ಬಿನ ರಸದಿಂದಲೇ ಸಕ್ಕರೆಯನ್ನು ಮಾಡಹತ್ತಿದರೆ, ಖರ್ಚು ಕಡಮೆ ಹತ್ತುವದಲ್ಲದೆ, ಸಕ್ಕರೆಯ ಪ್ರಮಾಣವು ಹೆಚ್ಚು ಪ್ರಾಪ್ತವಾಗುತ್ತದೆ. ಕಬ್ಬಿನ ರಸದ ಆ ಪ್ರಾಙ್ಗಣದ ಹಿಂಬದಿಯಲ್ಲಿಯೇ ಕೂಲೀ ಜನರು ವಾಸಿಸುವ ಹಳ್ಳಿಯಿರುತ್ತದೆ. ಈ ಹಳ್ಳಿಯಿಂದ ಒಂದು ಮೈಲು ದೂರದಲ್ಲಿ ಆ ದ್ವೀಪದ ಮುಖ್ಯ ಪಟ್ಟಣವಿರುತ್ತದೆ. ಆ ಶಹರದಲ್ಲಿ ಸಂತೆಪೇಟೆಗಳೊಂದೂ ಇರುವದಿಲ್ಲ. ಅದು ಆ ದ್ವೀಪದಲ್ಲಿ ವ್ಯಾಪಾರಮಾಡುವ ಬಿಳೀ

ಜನರ ವಸತಿಸ್ಥಾನವು. ಆ ನಗರವು ನಾಲ್ಕೂ ಕಡೆಗೆ ವಿಸ್ತಾರವಾಗಿ ಹಬ್ಬಿರದೆ,
ಒಂದು ವಿಶಾಲವಾದ ರಾಜಮಾರ್ಗದ ಎರಡೂ ಬದಿಗಳಲ್ಲಿ ಬಹುದೂರದ ವರೆಗೆ
ಪಸರಿಸಿರುತ್ತದೆ. ಆ ಪಟ್ಟಣದಲ್ಲಿ ಅಲ್ಲಲ್ಲಿ ಉದ್ಯಾನಗಳೂ, ಪುಷ್ಪವಾಟಿಕೆಗಳೂ
ಇದ್ದು, ಅವುಗಳ ಮಧ್ಯದಲ್ಲಿ ಅನೇಕ ತರದ ಸೃಷ್ಟಿಸೌಂದರ್ಯದಿಂದೊಡಗೂಡಿದ
ಬಂಗ್ಲೆಗಳು ಇರುತ್ತವೆ. ಆ ಬಂಗ್ಲೆಗಳೇ ಆ ಶಹರದ ಮುಖ್ಯ ವಸತಿಯ ಸ್ಥಾನಗ
ಳಾಗಿರುವವು. ಆ ಬಂಗ್ಲೆಗಳಲ್ಲಿ ಸಕ್ಕರೆಯನ್ನು ಬೆಳೆಯುವ ಯುರೋಪಿಯನ್
ಪ್ಲ್ಯಾಂಟರರು ವಾಸಿಸುತ್ತಿರುವರು. ಇಂಥದೊಂದೇ ಒಂದು ಬಂಗ್ಲೆಯು ಬಂದ
ರದ ತೀರ ಸಮೀಪದಲ್ಲಿರುತ್ತದೆ. ಪಟ್ಟಣದಿಂದ ತುಸ ಮುಂದೆ ಹೋದರೆ ಆ ದ್ವೀಪದ
ಮುಖ್ಯ ಪೇಟೆಯಿರುತ್ತದೆ. ಅಲ್ಲಿ ಆ ದ್ವೀಪದೊಳಗಿನ ಉದ್ಯಮಗಾರರು ವಾಸಿಸು
ತ್ತಿರುತ್ತಾರೆ. ಆ ಪೇಟೆಯ ಬದಿಯಲ್ಲಿಯೇ ರೇಲ್ವೆ ಸ್ಟೇಶನ್ನು, ಪೋಲೀಸ ಚೌಕಿ,
ಆಸ್ಪತ್ರೆ ಹಾಗು ಜೇಲಖಾನೆಗಳು ಇರುತ್ತವೆ.

ಆ ಪಟ್ಟಣದ ದಕ್ಷಿಣೋತ್ತರ ದಿಕ್ಕುಗಳಕಡೆಗೆ ರೈಲಿನ ಒಂದೊಂದು ಶಾಖೆ
ಗಳು ಆ ದ್ವೀಪದೊಳಗಿನ ಕಬ್ಬು ಬೆಳೆಯುವ ಪ್ರದೇಶದ ವರೆಗೆ ಪಸರಿಸಿರುವವು;
ಹಾಗು ಪೂರ್ವದಿಕ್ಕಿನ ಶಾಖೆಯು ಆ ದ್ವೀಪದೊಳಗಿನ ರೈಲು ಶಾಖೆಗಳಲ್ಲೆಲ್ಲ
ವಿಸ್ತಾರವಾಗಿದ್ದು, ಅದು ಆ ದ್ವೀಪದ ಪೂರ್ವದ ತುದಿಯುವರೆಗೆ ನೀಟಾಗಿ ಹೋಗಿ
ರುತ್ತದೆ. ಮೂರೂ ಶಾಖೆಗಳ ರೈಲುಗಳು ಆ ಪಟ್ಟಣದ ಬದಿಯಲ್ಲಿಯೇ ಒಂದ
ಕ್ಕೊಂದು ಸೇರುತ್ತಿದ್ದುದರಿಂದ, ಅಲ್ಲಿಯ ರೈಲುಹಳಿಗಳ ಸಾಲುಗಳು, ಗಂಗಾನದಿಯು
ಸಮುದ್ರಕ್ಕೆ ಕೂಡುವಾಗ ಸಹಸ್ರಾರು ಮುಖಗಳನ್ನು ಧರಿಸಿರುವಂತೆ ಆಗಿರುವವು.
ಅಲ್ಲಿಯ ಉಗಿಬಂಡಿಗಳು ಹಗಲು-ರಾತ್ರಿಗಳೆನ್ನದೆ ಏಕೋಪ್ರಕಾರವಾಗಿ ಹರಿಯು
ತ್ತಿರುತ್ತವೆ. ಆದರೆ ಅಲ್ಲಿ ಅವುಗಳಲ್ಲಿ ಆರೋಹಿಸುವವರು ಮನುಷ್ಯಮೊದಲಾದ
ಪ್ರಾಣಿಗಳಾಗಿರದೆ, ಇಕ್ಷುದಂಡಗಳೇ ಮುಖ್ಯವಾಗಿರುತ್ತವೆ. ಯಾವಾಗಾದರೊ
ಮ್ಮೆ ಕೂಲೀ ಜನರಿಗೆ ಬೇಕಾಗುವ ಆಹಾರ್ಯಪದಾರ್ಥಗಳೂ ರೈಲಿನಿಂದ ರವಾನಿಸ
ಲ್ಪಡುತ್ತಿರುತ್ತವೆ. ಆ ಮೂರು ಮುಖ್ಯ ರೈಲುಗಳಲ್ಲದೆ, ಅಲ್ಲಲ್ಲಿ ಕೈಯಿಂದ ದೂ
ಡುವ ಟ್ರ್ರಾಲಿಗಳ ಲೋಹಮಾರ್ಗಗಳು ಅಸಂಖ್ಯವಾಗಿರುವವು. ಅವೆಲ್ಲ ಲೋಹಮಾ
ರ್ಗಗಳಿಂದ ಜಾಡಸ ಜಾಳಿಗೆಯಂತೆ ಆ ದ್ವೀಪವು ಪರಿಶೋಭಿಸುತ್ತಿರುವದು.
ಅಸಂಖ್ಯ ಕೂಲೀ ಜನರು ಕಬ್ಬಿನ ಗದ್ದೆಗಳಿಂದ ಟ್ರಾಲೀ ಬಂಡಿಗಳ ಮೇಲೆ ಹೇರಿ
ತಂದ ಕಬ್ಬಿನ ಗಳಗಳನ್ನು ರೈಲುಬಂಡಿಗಳಲ್ಲಿ ಭರ್ತಿಮಾಡುತ್ತಾರೆ; ಮತ್ತು
ರೈಲುಬಂಡಿಯಿಂದ ಬಂದ ಆಹಾರ್ಯಪದಾರ್ಥಗಳನ್ನು ಒಯ್ದು ಹಳ್ಳಿಪಳ್ಳಿಗಳಲ್ಲಿಯ

ವಖಾರುಗಳಲ್ಲಿ ತುಂಬುತ್ತಾರೆ. ಆ ವಖಾರುಗಳಿಂದಲೇ ಅಲ್ಲಲ್ಲಿ ವಾಸಿಸುವ ಕೂಲೀ ಜನರಿಗೆ ಸಿಧಾ-ಸಾಮುಗ್ರಿಗಳು ಒದಗಿಸಲ್ಪಡುತ್ತವೆ. ಒಂದೊಂದು ಕಡೆಗೆ ಸಾವಿರಗಟ್ಟಲೆ ಎಕರೆಯು ಅಖಂಡ ನಂಬರುಗಳಲ್ಲಿ ಕಬ್ಬು ಬೆಳೆಸಲ್ಪಡುತ್ತದೆ. ಇಂಥ ಪ್ರತಿಯೊಂದು ಕಬ್ಬಿನ ಹೊಲದಲ್ಲಿ ಸಹಸ್ರಾರು ಜನ ಕೂಲಿಕಾರರು ಹಗಲು-ರಾತ್ರಿಗಳೆನ್ನದೆ ದುಡಿಯುತ್ತಿರುತ್ತಾರೆ; ಆದರೆ ವಿಶೇಷ ಆಶ್ಚರ್ಯದ ಸಂಗತಿಯೇನಂದರೆ, ಅಲ್ಲಿ ದುಡಿಯುವ ಎಲ್ಲ ಕೂಲಿಕಾರರೂ ನಮ್ಮ ಆರ್ಯಾವರ್ತದವರೇ! ಅವರಲ್ಲಿ ನಾಗಪೂರ, ಛೋಟಾನಾಗಪೂರ, ಮಧ್ಯ ಹಿಂದುಸ್ಥಾನಗಳೊಳಗಿನ ಘಟೀಗಾರರೇ ಹೆಚ್ಚು. ಇನ್ನುಳಿದ ಪ್ರಾಂತಗಳ ಕೀಳು ಜಾತಿಯ ಜನರಾದರೂ ಇರುತ್ತಾರೆ. ಆದರೆ ಆ ಇಕ್ಷುದ್ವೀಪಗಳಲ್ಲಿ ಕೂಲಿಗಾಗಿ ಹೋದವರಲ್ಲಿ ಮುಸಲ್ಮಾನಜನರು ವಿರಳವೆಂದೇ ಹೇಳಬಹುದು. ಆ ಕೂಲಿಕಾರರೆಲ್ಲ ಐದು ವರ್ಷಗಳ ಕರಾರಬದ್ಧತೆಯಿಂದಲೇ ಅಲ್ಲಿಗೆ ಹೋದವರು. ಆದ್ದರಿಂದ ಅವರು ಅಲ್ಲಿಯ ವಿದೇಶೀ ವ್ಯಾಪಾರಸ್ಥರಿಗೆ ಕೇವಲ ಅಧೀನರಾಗಿಯೇ ನಡೆಯಬೇಕಾಗುವದು. ಅಲ್ಲಿಯ ಆ ವ್ಯಾಪಾರಸ್ಥರು ಹಿಂದುಸ್ಥಾನ ಸರಕಾರದ ಕಣ್ಣಲ್ಲಿ ಕರಾರಬದ್ಧತೆಯೆಂಬ ಕಾಯಿದೆಯ ಮಣ್ಣನ್ನು ತೂರಿ ಆ ಕೂಲೀ ಜನರನ್ನು ಇಲ್ಲಿಂದಲೇ ಒಯ್ದಿರುವರು. ಅವರು ನಮ್ಮ ಕಳವಾರ ಭೀಮಪ್ಪನಂಥ ಧೂರ್ತ ಏಜಂಟರಿಗೆ ಕೈಸಡಿಲುಬಿಟ್ಟು ದಲ್ಲಾಳಿಯನ್ನು ಕೊಟ್ಟು ತಮ್ಮ ಕೆಲಸಕ್ಕೆ ಬೇಕಾದಷ್ಟು ಜನರನ್ನು ಸೆಳೆದೊಯ್ಯುವರು! ಆ ವಿದೇಶೀ ವಣಿಕರು ಇಲ್ಲಿಂದ ಒಯ್ದ ಕೂಲೀ ಜನರಿಂದ ಅವರ ಶರೀರಸಾಮರ್ಥ್ಯಕ್ಕಿಂತ ಹೆಚ್ಚು ಕಠಿಣ ಕೆಲಸವನ್ನು ಮಾಡಿಸಿಕೊಂಡು, ಕೂಲಿಯನ್ನು ಮಾತ್ರ ಅತ್ಯಲ್ಪ ಕೊಡುತ್ತಾರೆ. ಆ ಕೂಲಿಯ ದ್ರವ್ಯವು ಕೀಳು ತರದ ಅನ್ನವಸ್ತ್ರಗಳಿಗೂ ಸಾಲುವದಿಲ್ಲ! ನಮಗೆ ಈ ಕೂಲಿಯು ಸಾಲದೆಂದು ಅವರಲ್ಲಿಯ ಯಾವನೊಬ್ಬ ದಿಟ್ಟನು ಗುಣುಗುಟ್ಟಿದರೆ ಸಾಕು, ಅವನಿಗೆ ಅವನ ಆ ದಿಟ್ಟತನದ ಅಭಿನಂದನಕ್ಕಾಗಿ ಸಾಕಷ್ಟು ಪೋಲೀಸರ ಚಬಕದ ಪೆಟ್ಟುಗಳೂ, ಓವ್ಹರಸೀರರ ಪದಾಘಾತಗಳೂ ಬಹುಮಾನಪುರಸ್ಸರವಾಗಿ ಅರ್ಪಿಸಲ್ಪಡುತ್ತವೆ; ಅಲ್ಲದೆ ಅವನು ಕೆಲ ದಿನಗಳವರೆಗೆ ಕೂಲಿಯಿಲ್ಲದೆ ಬೇರೆ ಕೂಲಿಗಾರರಿಗಿಂತ ಹೆಚ್ಚು ವೇಳೆ ಕೆಲಸವನ್ನು ಮಾಡಬೇಕಾಗುತ್ತದೆ. ಅಲ್ಲಿಯ ವಣಿಕರು ಸ್ವಾಭಾವಿಕ ಬೆಲೆಯ ಇಮ್ಮಡಿ ಬೆಲೆಗೆ ಆ ಕೂಲೀ ಜನರಿಗೆ ಆಹಾರ್ಯ ಸಾಮಾನುಗಳನ್ನು ಕೊಡುತ್ತಾರೆ. ಆ ದ್ವೀಪದಲ್ಲಿ ಬೇರೆ ಅಂಗಡಿ-ಪೇಟೆಗಳು ಇರದ್ದರಿಂದ ಆ ಚಲುವರು ಹೇಳಿದ ಬೆಲೆಗೇ ಆ ಬಡಜನರು ಕೊಂಡುಕೊಂಡು ನಿರ್ವಹಿಸಬೇಕಾಗಿರುತ್ತದೆ. ಪಾಪ! ಆ ಬಡಪ್ರಾಣಿಗಳು ತಮ್ಮ ರಕ್ತ-ಮಾಂಸಗಳನ್ನು ಶೋಷಿಸಿ ಸಂಪಾದಿಸುವ

ಆ ಅಲ್ಪ ಧನವನ್ನು ಅಲ್ಲಿಯ ಆ ಅಂತಃಕರಣರಹಿತರಾದ ವರ್ತಕರು ಹೀಗೆ ಅನಾಯಾಸವಾಗಿ ನುಂಗಿ ನೀರು ಕುಡಿಯುತ್ತಾರೆ! ಆ ಕೂಲಿಗಳು ಕೇವಲ ಕರಾರುಬದ್ಧರಾದವರು; ಅಂದರೆ ಗುಲಾಮರಂತೆ ಸಂಪೂರ್ಣವಾಗಿ ತಮ್ಮನ್ನು ತಾವೇ ಮಾರಿಕೊಂಡವರಲ್ಲ.—ಐದು ವರ್ಷಗಳಮಟ್ಟಿಗೆಮಾತ್ರ ಮಾರಿಕೊಂಡವರು. ಐದು ವರ್ಷಗಳ ಅವಧಿಯಲ್ಲಿ ಮೇಲೆ ವಿವರಿಸಿದಂತೆ ಅಲ್ಲಿಯ ಸುಖ-ಸಮೃದ್ಧಿಯನ್ನು ಅನುಭವಿಸಿ, ನಂತರ ಯಾವ ಸುದೈವಿಯು ಜೀವದಿಂದುಳಿಯುವನೋ, ಅವನು ಆ ಕರಾರುಬದ್ಧತೆಕಾಯಿದೆಯ ಪ್ರಕಾರ ಮುಕ್ತನಾಗುವನು; ಆದರೆ ಆ ಕಾಲಕ್ಕೆ ಅವನು ಕೇವಲ ಅಶನಾಭಾವಿಯೂ, ಬಟ್ಟೆ-ಬರೆಗಳಿರದ್ದರಿಂದ ತೀರ ನಗ್ನನೂ ಇರಬೇಕಾಗುವದು. ಅಂಥ ಆ ಹೀನಸ್ಥಿತಿಯಲ್ಲಿ ಅವನು ಅಲ್ಲಿಂದ ಬಿಡುಗಡೆ ಹೊಂದಿಯಾದರೂ ಮಾಡುವದೇನು? ಅವನ ಹೊಟ್ಟೆಯ ಉರಿಯು ಏತರಿಂದ ಶಾಂತವಾಗಬೇಕು ? ಅವನು ಐನೂರಗಟ್ಲೆ ಮಾರ್ಗವ್ಯಯವನ್ನು ಸಹಿಸಿ ಸ್ವದೇಶಕ್ಕೆ ತಿರುಗಿ ಬರುವದಾದರೂ ಹೇಗೆ? ಎಲ್ಲ ಕಡೆಯಿಂದಲೂ ನಿರಾಶೆಯಾಗಿ ತೋರುವದರಿಂದ. ಐದೇ ವರ್ಷಗಳ ಮಟ್ಟಿಗೆಂದು ಬಂದ ಕೂಲಿಜನರು ತಮ್ಮ ಶೇಷಾಯುಷ್ಯವನ್ನು ಅನಿರ್ವಾಹಕವಾಗಿ ಅಲ್ಲಿಯೇ ಕಳೆಯಬೇಕಾಗುತ್ತದೆ! ಕರಾರುಬದ್ಧತೆಯಿಂದ ಕಾಯಿದೆ ಪ್ರಕಾರ ಮುಕ್ತರಾದರೂ ತಮ್ಮ ಉದರನಿರ್ವಾಹಕ್ಕಾಗಿ ಮರಳಿ ಅವರು ಅದೇ ಕಷ್ಟದ ಉದ್ಯೋಗಕ್ಕೆ ತತ್ಪರರಾಗಬೇಕಾಗುತ್ತದೆ. ಆ ದ್ವೀಪಾಂತರದಲ್ಲಿ ವಾಸಿಸಹೋದ ಭಾರತೀಯರಿಗೆ ಬೇರೆ ಉಪಾಯವೇ ಉಳಿಯುವದಿಲ್ಲ. ಅವರು ಆಜೀವನಪರ್ಯಂತ ಅಲ್ಲಿ ಆ ಕಷ್ಟಮಯ ಸ್ಥಿತಿಯಲ್ಲಿಯೇ ಇರಬೇಕಾಗುತ್ತದೆ.

ಲಾರ್ಡಹಾರ್ಡಿಂಜರಂಥ ಎಷ್ಟೋ ಸಹೃದಯ ಇಂಗ್ಲಿಷ ಮಹಾನುಭಾವರ ಅಂತಸ್ಥ ಪ್ರೇರಣೆಯ ಮೂಲಕ ದ್ವೀಪಾಂತರಗಳಲ್ಲಿಯ ಗುಲಾಮರ ವ್ಯಾಪಾರವು ಕಾಯಿದೆಯಿಂದ ಕಟ್ಟು ಮಾಡಲ್ಪಟ್ಟಿತ್ತು; ಆದರೆ ಅಲ್ಲಿಯ ಆ ಧೂರ್ತವಣಿಕರು ಕರಾರುಬದ್ಧತೆಯ ಕಾಯಿದೆಯನ್ನು ಪಾಸು ಮಾಡಿಸಿಕೊಂಡು, ಆದರ ನೆರವಿನಿಂದ ನಮ್ಮ ಹಿಂದುಸ್ತಾನದಿಂದ ಬೇಕಾದಷ್ಟು ಮಂದಿ ಕೂಲಿಗಳನ್ನು ಒಯ್ಯುವ ಹೊಸ ಯುಕ್ತಿಯನ್ನು ಕೈಕೊಂಡು, ತಮ್ಮ ವ್ಯವಸಾಯವನ್ನು ಮೊದಲಿನಂತೆಯೇ ನಡಿಸಿದರು. ಆ ದ್ವೀಪಾಂತರದಲ್ಲಿ ಭಾರತೀಯರ ಮೇಲೆ ಆಗುವ ಅತ್ಯಾಚಾರಗಳ ದೂರು ಎಲ್ಲೆಲ್ಲಿಯೂ ಹರಡಿದ್ದರಿಂದ ಅವುಗಳ ವಿಚಾರಣೆಗಾಗಿ ಇಂಡಿಯಾಸರಕಾರದವರಿಂದ ಕೆಲವು ಯುರೋಪಿಯನ್ನ ಜನರ ಕಮಿಶನ್ನುಗಳು ಅಲ್ಲಿಗೆ ಕಳಿಸಲ್ಪಟ್ಟ

ದ್ದವು. ಆದರೆ ಯಾವ ಪ್ರಯುಕ್ತವೆಂಬಲೂ ಒಟ್ಟಿನಲ್ಲಿ ಅಲ್ಲಿಯ ಅತ್ಯಾಚಾರಕ್ಕೆ ವಿಶೇಷ ಒಹಟಿಯುಂಟಾಗಿರುವದಿಲ್ಲ!

ಮೇಲೆ ವಿವರಿಸಿದ ಇಕ್ಷುದ್ವೀಪದ ಬಂದರದ ಬಳಿಯಲ್ಲಿಯೇ ಒಂದು ಬಂಗ್ಲೆಯಿತ್ತೆಂದು ಹೇಳಿದೆಯಷ್ಟೇ? ನಮ್ಮ ಕಥಾನಕವು ನಡೆದ ಕಾಲಕ್ಕೆ ಆ ಬಂಗ್ಲೆಯಲ್ಲಿ ಮೆಸರ್ಸ ಷ್ಟೂಯಾರ್ಟ-ಚಂದ್ರ ಕಂಪನಿಯ ಮಾಲಕನಾದ ಎಸ್. ಚಂದ್ರನೆಂಬುವನು ವಾಸಿಸುತ್ತಿದ್ದನು. ಇವನಿಗಿಂತ ಮೊದಲು ಆ ಬಂಗ್ಲೆಯಲ್ಲಿ ಷ್ಟೂಯಾರ್ಟಸಾಹೇಬನೇ ಇರುತ್ತಿದ್ದನು. ಆ ದ್ವೀಪದ ವಣಿಕರಲ್ಲಿ ಈ ಷ್ಟೂಯಾರ್ಟಚಂದ್ರಕಂಪನಿಯೇ ಪ್ರಮುಖವಾದದ್ದು. ಈ ಕಂಪನಿಯಿಂದ ಪ್ರತಿತಿಂಗಳಲ್ಲಿ ಹತ್ತೆಂಟುಲಕ್ಷಮಣ ಚಿನ್ನೀಸಕ್ಕರೆಯು ಪರದೇಶಗಳಿಗೆ ರವಾನಿಸಲ್ಪಡುತ್ತಿರುತ್ತದೆ. ಆ ದ್ವೀಪದ ಅರ್ಧಕ್ಕಿಂತ ಹೆಚ್ಚು ಪ್ರದೇಶವು ಈ ಕಂಪನಿಯವರಿಂದಲೇ ವ್ಯಾಪಿಸಲ್ಪಟ್ಟಿರುತ್ತದೆ ಕಿಮಾನಪಕ್ಷ ಇಪ್ಪತ್ತೈದುಸಾವಿರ ಮಂದಿ ಕೂಲಿಗಳಾದರೂ ಈ ಕಂಪನಿಯಲ್ಲಿ ಕೆಲಸಮಾಡುತ್ತಿರುತ್ತಾರೆ. ಈ ಷ್ಟೂಯಾರ್ಟಚಂದ್ರಕಂಪನಿಯೊಳಗಿನ ಕೂಲಿಗಾರರಿಗೆ ಮೇಲೆ ಹೇಳಿದಂತೆ ಅಲ್ಲಿಯ ಬೇರೆ ವ್ಯಾಪಾರಸ್ಥರಿಂದಾಗುತ್ತಿದ್ದ ಯಾವ ಅತ್ಯಾಚಾರಗಳೂ ಉಂಟಾಗುತ್ತಿರಲಿಲ್ಲ; ಮತ್ತು ವಿಶೇಷಮಹತ್ವದ ಹಾಗು ಸಂತೋಷದ ಸಂಗತಿಯೇನಂದರೆ, ಈ ಷ್ಟೂಯಾರ್ಟ-ಚಂದ್ರ ಕಂಪನಿಯಲ್ಲಿ ಈಚೆಗೆ ಕೆಲವು ವರ್ಷಗಳಿಂದ ಕರಾರುಬದ್ಧತೆಯ ಕೂಲಿಗಳೇ ಇರುವದಿಲ್ಲ. ಎಲ್ಲರೂಆತ್ಮಸಂತೋಷದಿಂದ ತಮ್ಮ ಇಷ್ಟವಿದ್ದಷ್ಟೇ ಕಾಲದವರೆಗೆ ಕೆಲಸ ಮಾಡುವ ಜನರಿರುತ್ತಾರೆ!

ಏಳುವರ್ಷಗಳ ಪೂರ್ವದಲ್ಲಿ ಒಂದು ದಿನ ಪ್ರಾತಃಕಾಲದಲ್ಲಿ ಮೇಲ್‌ಸ್ಟೀಮರದಿಂದ ಒಬ್ಬ ಆಂಗ್ಲಸಾಹೇಬನೂ, ಒಬ್ಬ ಹಿಂದೀ ಗೃಹಸ್ಥನೂ ಆ ದ್ವೀಪದಲ್ಲಿಳಿದರು. ಅವರೀರ್ವರೇ, ಆ ಷ್ಟೂಯಾರ್ಟಚಂದ್ರಕಂಪನಿಯ ಪಾಲುಗಾರರು. ಆಗ್ಗೆ ಆ ಇಕ್ಷುದ್ವೀಪದಲ್ಲಿ ರೇಲ್ವೆಯ ಅನುಕೂಲತೆಯಿರಲಿಲ್ಲ. ಆಗ ಅಲ್ಲಿ ಏಳೆಂಟು ಜನ ಗೌರಕಾಯದ ವ್ಯಾಪಾರಸ್ಥರು ಕಬ್ಬಿನ ವ್ಯವಸಾಯವನ್ನು ಮಾಡುತ್ತಿದ್ದರು. ಆದರೆ ಬಂದರದಿಂದ ಬಹಳ ದೂರದಲ್ಲಿ ಅವರು ಕಬ್ಬಿನ ಸಾಗುವಳಿಯನ್ನು ಮಾಡುತ್ತಿರಲಿಲ್ಲ. ಆದರಿಂದ ಆ ದ್ವೀಪದ ಬಹು ಭಾಗವು ಸಾಗುವಳಿಯಾಗದೆ ಹಾಗೆಯೇ ಬಿದ್ದಿತ್ತು. ಷ್ಟೂಯಾರ್ಟಚಂದ್ರಕಂಪನಿಯವರು ಅಲ್ಲಿಗೆ ಹೋದ ತುಸ ದಿನಗಳಲ್ಲಿಯೇ ಆ ದ್ವೀಪದಲ್ಲಿ ಸಾಗುವಳಿಯಾಗದಿದ್ದ ಪ್ರದೇಶವನ್ನೆಲ್ಲ ಆಕ್ರಮಿಸಿಕೊಂಡು ವ್ಯವಸಾಯವನ್ನು ಮಾಡಲಾರಂಭಿಸಿದರು. ಈ ಕಂಪನಿಯವರು ಕಬ್ಬಿನ ಸಾಗುವ

ಳಿಯನ್ನು ಪ್ರಾರಂಭಿಸಿದಾಗಲೇ ತಮ್ಮ ಇಸ್ಟೇಟಿನಿಂದ ಬಂದರದ ವರೆಗೆ ಲಾಯಿಟ ರೇಲ್ವೆಯನ್ನು ಕಟ್ಟಲುಜ್ಜುಗಿಸಿದರು. ಕಬ್ಬಿನಸ್ಪೈರು ಸಕ್ಕರೆಯ ಹದಕ್ಕೆ ಬರುವಷ್ಟರಲ್ಲಿ ಇವರ ರೇಲ್ವೆಯ ಮಾರ್ಗವೂ ಸಿದ್ಧವಾಯಿತು. ಕೂಡಲೆ ಇವರು ತಮ್ಮ ಕಾರಖಾನೆಯೊಳಗೆ ತಯಾರಾಗುವ ಸಕ್ಕರೆಯನ್ನು ರೈಲಿನಿಂದ ಶೀಘ್ರವಾಗಿ ಬಂದರಕ್ಕೆ ಸಾಗಿಸಹತ್ತಿದರು. ಈ ಷ್ಟೂಯಾರ್ಟಚಂದ್ರಕಂಪನಿಯ ಸಾಹಸಕ್ಕೆ ಅಲ್ಲಿಯ ಇತರ ವಣಿಕರು ಮೊದಮೊದಲು ಮೂಗು ಮುರಿಯುತ್ತಿದ್ದರು. ಆದರೆ ಒಂದೆರಡು ವರ್ಷಗಳಲ್ಲಿಯೇ ತಾವು ಈವರೆಗೆ ಇವರಂತೆ ಸಾಹಸಮಾಡದಿದ್ದದ್ದು ಪರಮ ಮೂರ್ಖತನವೇ ಸರಿ, ಎಂಬದನ್ನು ಅವರು ಚನ್ನಾಗಿ ಮನಗಂಡರು. ಈ ರೇಲ್ವೆಯಿಂದ ಅಲ್ಲಿಯ ಮೊದಲಿನ ವ್ಯಾಪಾರಸ್ಥರಿಗೂ ತುಂಬಾ ಅನುಕೂಲವಾಯಿತು. ಮೂರೇ ವರ್ಷಗಳಲ್ಲಿ ಷ್ಟೂಯಾರ್ಟಚಂದ್ರ ಕಂಪನಿಗೆ ಕಬ್ಬಿನ ಸಾಗುವಳಿಯಿಂದ ಯಥೇಷ್ಟ ಪ್ರಾಪ್ತಿಯಾಗಹತ್ತಿತಲ್ಲದೆ, ಅಲ್ಲಿಯ ಅವರ ರೇಲ್ವೆ ಖಾತೆಯಿಂದಲೂ ಚನ್ನಾಗಿ ಉಳಿತಾಯವಾಗತೊಡಗಿತು.

ಮುಂದೆ ಎರಡು ವರ್ಷಗಳ ಮೇಲೆ ಅಂದರೆ, ಷ್ಟೂಯಾರ್ಟಚಂದ್ರ ಕಂಪನಿಯು ಆ ಇಕ್ಷುದ್ವೀಪದಲ್ಲಿ ನೆಲಸಿದ ಐದು ವರ್ಷಗಳ ತರುವಾಯ, ಅಲ್ಲಿಯ ಮೊದಲಿನ ವ್ಯಾಪಾರಸ್ಥರೊಳಗಿನ ಜಾನ್‌ಸನ್ ಎಂಬ ಗೌರಾಂಗಿಯು ಗೃಹಕೃತ್ಯದ ಅಡಚಣೆಯ ಸಲುವಾಗಿ ಸ್ವದೇಶಕ್ಕೆ ಹೊರಡಲುಜ್ಜುಗಿಸಿ, ತನ್ನ ಇಸ್ಟೇಟನ್ನು ಮಾರಲಿಕ್ಕೆ ಸಿದ್ಧನಾದನು. ಜಾನ್‌ಸನ್ ಸಾಹೇಬನ ಇಸ್ಟೇಟು ಬಂದರಕ್ಕೆ ಹೊಂದಿದ್ದ ಪ್ರದೇಶದಲ್ಲಿಯೇ ನೆಲೆಸಿತ್ತಾದ್ದರಿಂದ ಅದನ್ನು ಕೊಳ್ಳಲಿಕ್ಕೆ ಬೇಕಾದಷ್ಟು ಜನ ಗಿರಾಕಿಗಳಿದ್ದರು, ಆದರೆ ಷ್ಟೂಯಾರ್ಟಚಂದ್ರ ಕಂಪನಿಯವರ ಛಿಡೆ-ಮುರುವತ್ತುಗಳಿಗಾಗಿಯೂ, ಇವರಿಂದ ಉಳಿದವರಿಗಿಂತ ಹೆಚ್ಚು ಬೆಲೆಪ್ರಾಪ್ತವಾದದ್ದಕ್ಕಾಗಿಯೂ ಜಾನ್‌ಸನ್ ಸಾಹೇಬನು ತನ್ನ ಇಸ್ಟೇಟನ್ನು ಇವರಿಗೇ ಮಾರಿಹೋದನು. ಜಾನ್‌ಸನ್‌ನ ಇಸ್ಟೇಟು ಹೊಂದಿದ ಬಳಿಕ ಬಂದರಕ್ಕೆ ಸಮೀಪದಲ್ಲಿದ್ದ ಅವನ ಬಂಗ್ಲೆಯು ಷ್ಟೂಯಾರ್ಟಚಂದ್ರ ಕಂಪನಿಯ ಸ್ವಾಧೀನಕ್ಕೊಳಪಟ್ಟದ್ದರಿಂದ, ಈಚೆಗೆ ಅದರಲ್ಲಿ ಷ್ಟೂಯಾರ್ಟಸಾಹೇಬನು ವಾಸಮಾಡಲಾರಂಭಿಸಿದನು. ಜಾನ್‌ಸನ್‌ನ ಇಸ್ಟೇಟು ಬಂದರಕ್ಕೆ ಸಮೀಪವಾಗಿ ಅನುಕೂಲವಾಗಿದ್ದಂತೆ, ಅವನ ಸಕ್ಕರೆಯ ಕಾರಖಾನೆಯೂ ಬಲು ಸೊಗಸಾಗಿದ್ದಿತು. ಆದರಿಂದ ಷ್ಟೂಯಾರ್ಟಚಂದ್ರ ಕಂಪನಿಯವರು ಈಚೆಗೆ ತಮ್ಮ ಮೊದಲಿನ ಕಾರಖಾನೆಯಲ್ಲಿ ಸಕ್ಕರೆಯನ್ನು ಮಾಡದೆ, ಎಷ್ಟೋ ಮೈಲು ದೂರದಲ್ಲಿರುವ ಕಬ್ಬನ್ನು ರೈಲಿನಿಂದ ಶೀಘ್ರವಾಗಿ ಬಂದರದ ಸಮೀಪದ

ಕಾರಖಾನೆಗೆ ತಂದು ಇಲ್ಲಿಯೇ ಸಕ್ಕರೆ ಮಾಡುತ್ತಿದ್ದರು.

ನಂತರ ಎರಡು ವರ್ಷಗಳಲ್ಲಿ ಷ್ಟ್ಯುಯಾರ್ಟಸಾಹೇಬನ ಒಬ್ಬನೇ ಒಬ್ಬ ಮಗನಾದ 'ಆರ್ಥರ ರಾಬರ್ಟ'ನೆಂಬ ಶೂರನು ಬೋಅರ ಯುದ್ಧದಲ್ಲಿ ಮಡಿದನೆಂಬ ದುರ್ವಾರ್ತೆಯು ಸಾಹೇಬ ಬಹದ್ದೂರನಿಗೆ ತಲುಪಲು, ಅವನು ಆ ಇಕ್ಷುದ್ವೀಪದಲ್ಲಿ ಕ್ಷಣಸಹ ನಿಲ್ಲದೆ ಸ್ವದೇಶಕ್ಕೆ ಹೊರಟನು. ಏಕಪುತ್ರವಿಷಯದ ಭಯಂಕರ ದುಃಖದಿಂದ ಷ್ಟ್ಯುಯಾರ್ಟಸಾಹೇಬನಿಗೆ ಸಂಸಾರವೇ ಸಾಕೆನಿಸಿರಲು, ಅವನಿಗೆ ಆ ತಮ್ಮ ಕಂಪನಿಯ ಪಾಲಿನಿಂದೇನಾಗಬೇಕಾಗಿದ್ದಿತು? ಆದರಿಂದ ಅವನು ಅಲ್ಲಿಗೆ ಪುನಃ ಬರುವ ಮೋಹವನ್ನು ಕೂಡ ತ್ಯಜಿಸಿ, ತನ್ನ ಪಾಲನ್ನು ಸಿಕ್ಕಷ್ಟು ಬೆಲೆಗೆ ಮಾರಿಬಿಡಬೇಕೆಂದನು. ಅವನು ತನ್ನ ಪಾಲನ್ನು ತನ್ನ ಸ್ವದೇಶಬಂಧುಗಳಾದ ಅಲ್ಲಿಯ ಬೇರೆ ಗೌರಾಂಗರಿಗೆ ಸಹಜವಾಗಿ ಮಾರಬಹುದಾಗಿತ್ತು; ಆದರೆ ಆ ಮಹಾನುಭಾವನು ಹಾಗೆ ಮಾಡದೆ, ತನ್ನ ವ್ಯವಸಾಯ ಬಂಧುವಾದ ಎಂ. ಎಸ್. ಚಂದ್ರನೆಂಬ ಹಿಂದೀ ಗೃಹಸ್ಥನಿಗೇ ಅದನ್ನು ಮಾರಿದನು. ಮಿಸ್ಟರ ಎಸ್. ಚಂದ್ರನಾದರೂ ಆ ಪಾಲಿನ ಯೋಗ್ಯ ಬೆಲೆಗಿಂತ ಹೆಚ್ಚು ಮೂರುಲಕ್ಷ ರೂಪಾಯಿಗಳನ್ನು ಷ್ಟ್ಯುಯಾರ್ಟಸಾಹೇಬನಿಗೆ ತಾನಾಗಿಯೇ ತಿಳಿದು ಮುಟ್ಟಿಸಿದನು!

ಷ್ಟ್ಯುಯಾರ್ಟಸಾಹೇಬನು ಇಂಗ್ಲಂಡಕ್ಕೆ ಹೊರಟು ಹೋದ ಬಳಿಕ ಎಂ. ಎಸ್. ಚಂದ್ರನೇ ಆ ಬಂದರದ ಸಮೀಪದಲ್ಲಿಯ ಆ ಮನೋಹರವಾದ ಬಂಗ್ಲೆಯಲ್ಲಿ ವಾಸಿಸುತ್ತಿದ್ದನು. ಆ ಬಂಗ್ಲೆಯು ಅತ್ಯಂತ ಸುಂದರವಾಗಿದ್ದಂತೆ ಒಳ್ಳೇ ಅಚ್ಚುಕಟ್ಟಾಗಿತ್ತು. ಆ ಮೇಲಂತಸ್ತಿನ ಬಂಗ್ಲೆಯ ಸುತ್ತು ಮುತ್ತು ಹತ್ತು ಎಕರೆಯ ಸಮಪಾತಳಿಯ ಭೂಮಿಯಿದ್ದು, ಅದರಾಚೆಯ ಭವ್ಯವಾದ ಗೋಡೆಯಿಂದ ಅದು ಆವರಿಸಲ್ಪಟ್ಟಿತ್ತು. ಸುತ್ತಲಿನ ಮರಳು ನೆಲದಲ್ಲಿ ಎಷ್ಟೋ ರಮಣೀಯವಾದ ಮರಗಳು ತಮ್ಮ ಸೊಬಗನ್ನು ಆಕಾಶಕ್ಕೆ ತೋರಿಸಲು ಹೊರಟಿರುವವೋ ಎಂಬಂತೆ ಗಗನಚುಂಬಿತಗಳಾಗಿ ಬೆಳೆದದ್ದರಿಂದ, ಆ ಬಂಗ್ಲೆಯು ಸಮುದ್ರದ ದಂಡೆಗಿದ್ದರೂ ಅಲ್ಲಿ ಬಿರುಗಾಳಿಯು ಕೂಡ ಸುಳಿಯುತ್ತಿರಲಿಲ್ಲ. ಬಂದರದಿಂದ ನೋಡುವವರಿಗೆ ಆ ವೃಕ್ಷರಾಶಿಯೊಳಗಿಂದ ಆ ಬಂಗ್ಲೆಯ ಮೇಲಂತಸ್ತಿನ ಕೆಲ ಭಾಗವು ಮಾತ್ರ ಕಾಣಬರುತ್ತಿತ್ತು. ಆ ಬಂಗ್ಲೆಯ ಸುತ್ತು ಮುತ್ತು ನಾನಾ ಜಾತಿಯ ಪುಷ್ಪಲತಿಕೆಗಳೂ ತರತರದ ಹಣ್ಣು ಹಂಪಲದ ಗಿಡಗಳೂ ಪ್ರಯತ್ನಪೂರ್ವಕವಾಗಿ ಬೆಳೆಸಿ ಅಲ್ಲಿರುವವರಿಗೆ ಒಳ್ಳೇ ಆನಂದವುಂಟಾಗುವಂತೆ ಮಾಡಲ್ಪಟ್ಟಿತ್ತು. ಆದರೆ ಆ ಬಹಿರಾಡಂಬರದ ಸೊಬಗಿನಿಂದ ಆ ಷ್ಟ್ಯುಯಾರ್ಟಚಂದ್ರ ಕಂಪನಿಯ ಪ್ರಸ್ತುತದ ಒಡೆ

ಯನಾದ ಮಿ. ಎಸ್. ಚಂದ್ರನಿಗೆ ಸ್ವಲ್ಪವೂ ವಿರಾಮವೆನಿಸುತ್ತಿರಲಿಲ್ಲ!

ಎಸ್. ಚಂದ್ರನು ಒಂದು ದಿನ ಆ ಬಂಗ್ಲೆಯ ಮೇಲಂತಸ್ತಿನ ಛಾವಣಿಯಲ್ಲಿ ಒಂದು ಆರಾಮ ಖುರ್ಚಿಯಮೇಲೆ ಅರ್ಧಶಾಯಿತ ಅವಸ್ಥೆಯಲ್ಲಿ ಬಿದ್ದುಕೊಂಡು ಸಮುದ್ರದ ಕಡೆಗೆ ನೋಡುತ್ತಿದ್ದನು. ಆ ಕಾಲಕ್ಕೆ ಇಡಿ ಹಗಲಲ್ಲಿ ಅವಿಶ್ರಾಂತ ಶ್ರಮ ವಹಿಸಿ ಭೂಮಂಡಲವನ್ನು ಸುತ್ತಿಬಂದಿದ್ದ ಸೂರ್ಯದೇವನು ಸಂಪೂರ್ಣ ವಿಶ್ರಾಂತಿಯನ್ನು ಅನುಭವಿಸಿ ದಣುವಾರಿಸಿಕೊಳ್ಳುವದಕ್ಕೆಂದು ಸಮುದ್ರನಾಥನ ಗರ್ಭದಲ್ಲಿ ಹಾರಿಕೊಳ್ಳುವದಕ್ಕಾಗಿ ಟೊಂಕ ಕಟ್ಟಿ ಸಮುದ್ರದ ದಡಕ್ಕೆ ಬಂದಿದ್ದನು. ಸಮುದ್ರದ ಕಡೆಯಿಂದ ನಾನಾಜಾತಿಯ ಪಕ್ಷಿಗಳು ಖಗೋಲಸಂಚಾರಿಯಾದ ತಮ್ಮ ಒಡೆಯನಾದ ರವಿದೇವನೇ ವಿಶ್ರಾಂತಿಗೆ ನಡೆದಿರಲು, ತಾವೇಕೆ ಇನ್ನು ತಮ್ಮ ಕೆಲಸವನ್ನು ಬಿಟ್ಟು ವಿಶ್ರಾಂತಿಯನ್ನನುಭವಿಸಬಾರದೆಂದು ತಿಳಿದು, ಮಂಜುಳ ಗಾನವನ್ನು ಮಾಡುತ್ತ ತಮ್ಮ ಸುಂದರ ಮಕ್ಕಳೊಡನೆ ಆ ಇಕ್ಷುದ್ವೀಪದೊಳಗಿನ ತಮ್ಮ ತಮ್ಮ ಗೂಡುಗಳನ್ನು ಸೇರುವದಕ್ಕಾಗಿ ಭರದಿಂದ ನಡೆದಿದ್ದವು. ಇದೇ ಕಾಲಕ್ಕೆ ಸಂಧ್ಯಾಸುಂದರಿಯು ತನ್ನ ಪ್ರಿಯಕರ-ಪತಿಯಾದ ಚಂದ್ರನು ತನ್ನೆಡೆಗೆ ಬರುವ ಸಮಯವಾಯಿತೆಂದು ತಿಳಿದು ಕ್ಷಣಕ್ಷಣಕ್ಕೆ ಹಸರು, ಕೆಂಪು, ಹಳದಿ, ನೀಲಿ, ಕರೀ ಮುಂತಾದ ಬಣ್ಣಗಳ ಸೀರೆಯನ್ನುಟ್ಟುಕೊಂಡು ಕಡೆಗೆ ಅವು ಯಾವವೂ ಅವಳ ಮನಸ್ಸಿನತಕ್ಕಂತೆ ಆಗದ್ದರಿಂದ, ಆ ಲಲನಾಮಣಿಯು ಸ್ವರ್ಣವರ್ಣದ ಅತ್ಯಂತ ಪ್ರಕಾಶಮಾನವಾದ ಉಡುಪನ್ನು ಧರಿಸಿ ನಿಶಾಕಾಂತನ ದೃಷ್ಟಿಯನ್ನು ತನ್ನ ಕಡೆಗೇ ಎಳಕೊಳ್ಳುವ ಹವಣಿಕೆಯಲ್ಲಿದ್ದಳು. ಮಿ. ಚಂದ್ರನು ಇದೆಲ್ಲವನ್ನು ಟಕಮಕ ಒಂದೇಸವನೆ ನೋಡುತ್ತಿದ್ದರೂ, ಅವನಿಗೆ ಅದರಿಂದ ಸುಖವಾಗಲಿ-ದುಃಖವಾಗಲಿ, ವಿಸ್ಮಯವಾಗಲಿ-ಆಶ್ಚರ್ಯವಾಗಲಿ ಕೊಂಚವೂ ಉಂಟಾಗಲಿಲ್ಲ. ಅವನ ಗಂಭೀರ ದೃಷ್ಟಿಯು ಆ ಎಲ್ಲ ಪದಾರ್ಥಗಳನ್ನು ಭೇದಿಸಿ, ಬಹುದೂರದಲ್ಲಿಯ ಯಾವುದೋ ಒಂದು ವಸ್ತುವನ್ನು ನೋಡುವದರಲ್ಲಿ ತಲ್ಲೀನವಾಗಿತ್ತು. ಅವನ ಮನಸ್ಸೂ ಆ ವಸ್ತುವಿನ ವಿಷಯಕವಾದ ಆಲೋಚನೆಯಲ್ಲಿ ಸಂಪೂರ್ಣವಾಗಿ ಮಗ್ನವಾಗಿತ್ತು. ಆ ವಸ್ತುವನ್ನು ಅವನು ಇಂದೇ ನೋಡಿ, ಈಗಲೆ ಆ ಬಗ್ಗೆ ಆಲೋಚಿಸಹತ್ತಿದ್ದನೆಂತಲ್ಲ; ಅವನು ಅದನ್ನು ಈಗೇಳು ವರ್ಷಗಳಿಂದ ನೋಡುತ್ತ, ನಿರಂತರವಾಗಿ ಯೋಜಿಸುತ್ತಿದ್ದನು. ಯಾವ ವಸ್ತುವು ಅವನ ತನು-ಮನಗಳನ್ನು ಈ ಬಗೆಯಾಗಿ ಆಕರ್ಷಿಸಿಕೊಂಡಿತ್ತೋ, ಆ ವಸ್ತುವನ್ನು-ಆ ಮುಖಮಂಡಲವನ್ನು ಮರೆಯುವದಕ್ಕಾಗಿ ಅವನು ತನ್ನ ಮಾತೃಭೂಮಿಯನ್ನು ತ್ಯಜಿಸಿ,

ತನ್ನ ಹೆಸರನ್ನು ಸಂಕ್ಷಿಪ್ತಗೊಳಿಸಿಕೊಂಡು ಎಷ್ಟೋ ಸಾಗರ-ಮಹಾಸಾಗರಗಳನ್ನು ದಾಟಿ, ಬಹು ದೂರದಲ್ಲಿಯ ಈ ಇಕ್ಷುದ್ವೀಪಕ್ಕೆ ಬಂದಿದ್ದನು. ಆದರೂ ಅವನ ಹೇತುವು ಸಿದ್ಧಿಸದೆ, ಆ ದಿವ್ಯ ಮುಖವನ್ನು ಈ ವರೆಗೂ ಮರೆಯದಾಗಿದ್ದನು. ಮುಂದಾದರೂ ಅವನು ಅದನ್ನು ಮರೆಯುವ ಸಂಭವವಿದ್ದಿಲ್ಲ. ಯಾಕಂದರೆ ಯಾವ ಮುಖದಬಗ್ಗೆ ಅವನು ಇಂದು ಆಲೋಚಿಸುತ್ತಿದ್ದನೋ, ಒಂದಾನೊಂದುಕಾಲದಲ್ಲಿ ಅದು ಲೋಕದೊಳಗಿನ ಎಲ್ಲ ವಸ್ತುಗಳಿಗಿಂತಲೂ ಅವನಿಗೆ ಅತ್ಯಂತ ಪ್ರಿಯಕರವಾಗಿದ್ದಿತು. ಪ್ರಿಯಕರವಾಗಿದ್ದಿತ್ತೇಕೆ? ಈಗಲೂ ಅದು ಪ್ರಿಯಕರವಾಗಿತ್ತು. ಆದರೆ ಆ ಸುಂದರ ಮುಖಮಂಡಲದ ಅಂತರಂಗದ ಭಯಾನಕ ಕುತ್ಸಿತತನವನ್ನೇನು ವರ್ಣಿಸುವದದೆ? ಆ ಕುತ್ಸಿತತನಕ್ಕಾಗಿಯೇ ಅವನ ಜೀವನದ ಸುಖಸ್ವಪ್ನವು ಮಾಯವಾಗಿ ಹೋಗಿತ್ತು. ಇಷ್ಟಾಗಿದ್ದರೂ ಅವನು ಆ ಕುತ್ಸಿತ ಮುಖಮಂಡಲದ ವಿಷಯವನ್ನು ವಿಸ್ಮರಿಸುವಂತಿರಲಿಲ್ಲ. ಯಾವುದೊಂದು ವಸ್ತುವನ್ನು ಒಮ್ಮೆ ಮನಃಪೂರ್ವಕವಾಗಿ ಪ್ರೀತಿಸಿದರೆ, ಮುಂದೆ ಅದನ್ನು ಸಂಪೂರ್ಣವಾಗಿ ಮರೆತುಬಿಡುವದು ಲೋಕ ರೂಢಿಯಂತೆ ಅಶಕ್ಯವಾಗಿರಲು, ಆ ಪ್ಲ್ಯಾಟರ್ ಚಂದ್ರಕಂಪನಿಯ ಒಡೆಯನಾದ ಮಿ. ಎಚ್. ಚಂದ್ರನಾದರೂ ತನ್ನ ಪ್ರಿಯಕರ ವಸ್ತುವನ್ನು ಮರೆತು ಬಿಡುವ ಬಗೆ ಹೇಗೆ? ಈ ಬಗೆಯಾಗಿ ಇಕ್ಷುದ್ವೀಪದ ಆ ಬಂಗಲೆಯಲ್ಲಿ ಆಲೋಚಿಸುತ್ತಾ ಕುಳಿತಿರುವ ಆ ಗೃಹಸ್ಥನು ಬೇರೆ ಯಾವ ಅಪರಿಚಿತನೂ ಆಗಿರದೆ, ನಮ್ಮ ಕಥಾನಕದ ನಾಯಕನಾದ ಶಿವರಾಯನೇ ಆಗಿದ್ದನೆಂಬದನ್ನು ವಾಚಕರು ಇಷ್ಟರಲ್ಲಿ ಊಹಿಸಿಕೊಂಡಿರಬಹುದು.

ಅವನು ಈ ಬಗೆಯಾಗಿ ಆಲೋಚಿಸುತ್ತಿರುವುದು ಹೊಸದಾಗಿರಲಿಲ್ಲ. ಈಗ ಏಳುವರ್ಷಗಳಲ್ಲಿ ಈ ವಿಧವಾಗಿ ಎಷ್ಟುಸಾರೆ ಚಿಂತಿಸಿದನೆಂಬದರ ನಿಷ್ಕರ್ಷವನ್ನು ಯಾರು ಹೇಳುವ ಸಾಹಸಪಡಬೇಕು? ಚಿಂತೆಯಿಂದ ಫಲವಿಲ್ಲ; ವೃಥಾ ಚಿಂತೆಯಿಂದ ಆಗ-ಹೋಗುವದನ್ನು ನಿಲ್ಲಿಸುವದು ಶಕ್ಯವಿಲ್ಲ; ಅಥವಾ ಆದರಿಂದ ಮುಂದಾದರೂ ತಮ್ಮ ಮನಸ್ಸಿನಂತೆ ಘಟನಾಕ್ರಮವನ್ನು ಮಾಡಲಿಕ್ಕೆ ಬರುವಂತಿರುವದಿಲ್ಲ ಎಂಬದನ್ನು ತಿಳಿದಿದ್ದರೂ ಚಿಂತೆಯನ್ನು ಬಿಟ್ಟು ಬಿಡುವದಾಗುವದಿಲ್ಲ! ದುಃಖದ ಪ್ರಸಂಗದಲ್ಲಿ ದುಃಖವನ್ನು ಮಾಡುವದರಿಂದ ದುಃಖವು ಅಲ್ಪವೂ ಕಡಿಮೆಯಾಗುವದಿಲ್ಲೆಂಬದು ಎಲ್ಲರಿಗೂ ಗೊತ್ತಿದ್ದರೂ ದುಃಖಮಾಡುವವನ್ನು ಬಿಡುವದು ಮಾತ್ರ ಸರ್ವರಿಗೂ ಸಾಧ್ಯವಿಲ್ಲ. ಶಿವರಾಯನು ಇದೆಲ್ಲವನ್ನು ಚೆನ್ನಾಗಿ ಬಲ್ಲವನಾಗಿದ್ದರೂ, ಆ ಅನಿವಾರಕ ಚಿಂತೆಯನ್ನು ತ್ಯಜಿಸದಿರಲು ಕಾರಣವೇನು? ಅವನಿಗೆ

ಆ ಕಾರಣವೇ ತಿಳಿಯದಾಗಲು ಪಾಪ! ಅವನಾದರೂ ಮಾಡುವುದೇನು?

ಏಳು ವರ್ಷಗಳ ಹಿಂದೆ ಸಾವಿತ್ರೀವ್ರತದ ಮೊದಲನೇ ದಿವಸ ಶಿವರಾಯನು ತನ್ನ ನಾಗಪೂರ ಪ್ರಾಂತದ ಹರಳುಕಲ್ಲಿನ ಕಾರಖಾನೆಯಿಂದ ಪುಣೆಗೆ ಹೊರಡಲನುವಾದನು. ಆ ಕಾಲದಲ್ಲಿ ಅವನಿಗೆ ನನ್ನ ಕೃತಘ್ನರಾಮಚಂದ್ರನ ಪತ್ರವು ಆಕಸ್ಮಿಕವಾಗಿ ತಲುಪಲು, ಆ ಕಲಂಕಿತಪತ್ರದಿಂದ ಶಿವರಾಯನಲ್ಲಿ ಏನೇನು ವ್ಯತ್ಯಸವಾಯಿತೆಂಬದನ್ನೂ ಅವನು ಅಂದೇ ಮೃತ್ಯುಪತ್ರ-ಇನಾಮುಪತ್ರಗಳನ್ನು ಮಾಡಿಸಿ, ಪುಣೆಗೆ ಹೊರಡದೆ, ಮುಂಬಯಿಗೆ ಹೊರಟದ್ದನ್ನು ನಮ್ಮ ವಾಚಕರು ಓದಿ ತಿಳಿದವರಾಗಿದ್ದಾರಷ್ಟೇ? ಅವನು ಮುಂಬಯಿಯಲ್ಲಿ ಒಂದೆರಡು ದಿನಗಳ ಮಟ್ಟಿಗೆ ಇದ್ದು, ತನ್ನ ಹಣವನ್ನು ಮುಂಬಯಿಯ ನಾಶನಲ್ ಬ್ಯಾಂಕಿನಲ್ಲಿಟ್ಟು, ತನ್ನ ಮಾವನಾದ ಸದಾಶಿವರಾಯನೂ, ತನ್ನ ಕಾರಖಾನೆಯ ಇಂಜಿನಿಯರನಾದ ರಾಮರಾಯನೂ ತನ್ನನ್ನು ಶೋಧಿಸುತ್ತ ಮುಂಬಯಿಯ ಪಾಥವಾಶ್ರಮಕ್ಕೆ ಬಂದ ದಿವಸವೇ ಬೆಳಿಗ್ಗೆ ಒಂಬತ್ತುಗಂಟೆಗೆ ಅಲ್ಲಿಂದ ಆಸ್ಟ್ರೇಲಿಯಾಕ್ಕೆ ಹೊರಟ ಡಬ್ಲಿನ್ ಎಂಬ ಹಡಗದಲ್ಲಿ ಕುಳಿತು ಇವನು ದ್ವೀಪಾಂತರಕ್ಕೆ ಪ್ರಯಾಣಮಾಡಿದ್ದನು. ಇವನು ತನ್ನ ಶಿವರಾಯ ಚಂದ್ರಸೇನ ಎಂಬ ಹೆಸರನ್ನು ಬದಲಿಸಿ, ಎಸ್. ಚಂದ್ರನೆಂಬ ಹೆಸರನ್ನು ಧರಿಸಿ, ಈ ನೂತನ ಹೆಸರಿನಿಂದಲೇ ಆ ಹಡಗದಲ್ಲಿ ಒಂದು ಕೆಬಿನ್ನನ್ನು ರಿಝರ್ವ್ ಮಾಡಿಸಿಕೊಂಡಿದ್ದನು. ಸದಾಶಿವ-ರಾಮರಾಯರು ಆ ಹಡಗುಪಡೆಯ ಬುಕ್ಕಿಂಗ ಆಫೀಸಿನಲ್ಲಿ ಬಂದು ಅಂದೇ ಶಿವರಾಯನ ಬಗ್ಗೆ ಶೋಧಮಾಡಿದರೂ ಇವನು ತನ್ನ ಹೆಸರನ್ನೇ ಬದಲಿಸಿಕೊಂಡಿದ್ದರಿಂದ ಅಲ್ಲಿ ಆಗ ಅವರಿಗೆ ಇವನ ಪತ್ತೆಯಾಗದೆ, ನಿರಾಶರಾಗಿ ಹಿಂದಿರುಗಬೇಕಾಯಿತು. ಶಿವರಾಯನು ಆ ಡಬ್ಲಿನ್ ಹಡಗದಿಂದ ಮೊದಲು ಆಸ್ಟ್ರೇಲಿಯಕ್ಕೆ ಹೋಗಿ, ಅಲ್ಲಿಂದ ಕಾಲಿಫೋರ್ನಿಯಾ ಕಾನದಾಗಳನ್ನು ಸುತ್ತಿದನು. ಕಾನಡಾದಲ್ಲಿ ಅವನಿಗೆ ಪ್ಯೂಯಾರ್ಟಸಾಹೇಬನ ಭೇಟಿಯಾಯಿತು. ಇವರಿಬ್ಬರ ಆಲೋಚನೆಯಿಂದಲೇ ಇವರು ಸರಿಯಾಗಿ ಬಂಡವಲು ಹಾಕಿ, ಆ ನೂತನ ಇಕ್ಷುದ್ವೀಪದಲ್ಲಿ ಕಬ್ಬಿನ ವ್ಯವಸಾಯಕ್ಕೆ ಪ್ರಸ್ತುತರಾಗಿದ್ದರು. ಇವರು ಸರಿಯಾಗಿ ಬಂಡವಲವನ್ನು ಹಾಕಿದಂತೆ ಆ ಇಕ್ಷುದ್ವೀಪದಲ್ಲಿ ಇಬ್ಬರೂ ಒಂದೊಂದು ಪ್ರತ್ಯೇಕ ಕೆಲಸವನ್ನು ಕೈಕೊಂಡು ತಂತಮ್ಮ ಕೆಲಸವನ್ನು ಪೂರಯಿಸಿದರು. ಪ್ಯೂಯಾರ್ಟಸಾಹೇಬನು ಕಬ್ಬಿನ ಲಾಗುವಡಿಯನ್ನು ಮಾಡಿಸಹತ್ತಿದನು. ಶಿವರಾಯನು ರೇಲ್ವೆಯ ಕಾಮಗಾರಿಯನ್ನು ಮಾಡಿಸಿದನು. ಅವರಿಬ್ಬರ ಯೋಗ್ಯಪರಿಶ್ರಮದಿಂದಲೇ ಆ ಪ್ಯೂಯಾರ್ಟಚಂದ್ರಕಂಪನಿಯು ಅಲ್ಪಾವಧಿಯಲ್ಲಿ ಆ ದ್ವೀಪದೊಳಗಿನ ಇತರ ಎಲ್ಲ

ಪಣಿಕರಿಗಿಂತ ಹೆಚ್ಚು ಆದಾಯುವನ್ನು ಕೊಡುತ್ತಿದ್ದರು.

ಷ್ಟ್ಯೂಯಾರ್ಟ್‌ಚಂದ್ರಕಂಪನಿಯವರು ಹೊಗನೋವಲು ಇತರ ವಣಿಕರಂತೆ ಕರಾರುಬದ್ಧ ಕೂಲಿಗಳನ್ನು ತರಬೇಕಾಯಿತು. ಆದರೆ ಈ ಕಂಪನಿಯವರು ಬೇರೆಯವರಂತೆ ಕುಟಿಲಾಚರಣೆಯಿಂದ ಆ ಕೂಲಿಗಳಿಗೆ ಅನೇಕತರದ ಕಷ್ಟ-ನಷ್ಟಗಳನ್ನುಂಟುಮಾಡುತ್ತಿರಲಿಲ್ಲ. ಇವರು ತಮ್ಮ ಕೂಲಿಗಳಿಗೆ ಸಾಕಷ್ಟು ಸಂಬಳ ಕೊಡುವರು; ಹಾಗು ಅವರೊಂದಿಗೆ ಅತ್ಯಂತ ಪ್ರೀತಿಯಿಂದ ನಡೆಕೊಳ್ಳುವರು. ಇದರಿಂದ ಈ ಷ್ಟ್ಯೂಯಾರ್ಟ್‌ಚಂದ್ರಕಂಪನಿಯು ಅಲ್ಪಕಾಲದಲ್ಲಿಯೇ ಆ ಇಕ್ಷುದ್ವೀಪದಲ್ಲೆಲ್ಲ ಅನ್ವರ್ಥಕ ನಾಮವುಳ್ಳ ಸತ್ಕೀರ್ತಿಯನ್ನು ಪಡೆದು ಪ್ರಸಿದ್ಧಿಪಡೆಯಿತು. ಇವರು ತಮ್ಮ ಬಜಾರುಗಳಲ್ಲಿ ಸೆರೆ-ಗಾಂಜಾ ಮುಂತಾದ ಮಾದಕಪದಾರ್ಥಗಳಿಗೆ ಸಕ್ತಮನಾಯಿ ಮಾಡಿದ್ದರು. ಅದರಿಂದ ಕೂಲಿಗಾರರು ಇಚ್ಛಿಸಿದರೂ ಕೂಡ ಅವರಿಗೆ ತಮ್ಮ ದುಡ್ಡನ್ನು ಅಂಥ ಹಾಳು ವ್ಯಸನಗಳಿಗಾಗಿ ವ್ಯಯಮಾಡಲಿಕ್ಕೆ ಆಸ್ಪದವಿರಲಿಲ್ಲ. ಇದಕ್ಕಾಗಿ ಈ ಎಲ್ಲ ಸತ್ಕಾರ್ಯಗಳ ಪ್ರೇರಕನಾದ ಆ ಷ್ಟ್ಯೂಯಾರ್ಟ್‌ಚಂದ್ರಕಂಪನಿಯು ಈಗಿನ ಮಾನ್ಯ ಮಹಾತ್ಮನಾದ ಶಿವಗಾಯನನ್ನು ಅಲ್ಲಿಯ ಕೂಲಿಗಳು ಹಾಡಿ-ಹರಸುತ್ತಿದ್ದರು.

+ + + + + +

ರಾಮಚಂದ್ರನು ಆ ನೀಚ ಧೀಮಪ್ಪನ ಮಾತಿಗೆ ಒಪ್ಪಿ, ಸಂಗಡಿಗರೊಡನೆ ದ್ವೀಪಾಂತರ ಗಮನಕ್ಕಾಗಿ ಕೂಲಿಗಳ ಅಡ್ಡೆಗೆ ಹೋದನಷ್ಟೆ? ನಂತರ ಧೀಮಪ್ಪನು ಅವರೆಲ್ಲರನ್ನು ತನ್ನ ಮುಖ್ಯ ನಿಬಂಧಿಸ ದ್ವೀಪಾಂತರ ಮ್ಯಾಜಿಸ್ಟ್ರೇಟರದುರುಗ ನಿಲ್ಲಿಸಿ, ಕರಾರಬದ್ಧತೆಯ ಪತ್ರಕ್ಕೆ ಅವರಿಂದ ಸಹಿ ಮಾಡಿಸಿದನು. ಹಾಗು ತನಗೆ ಸಿಗಬೇಕಾಗಿದ್ದ ವಿಪುಲ ದಲಾಲಿಯನ್ನು ತಕ್ಕೊಂಡು, ಅವರನ್ನು ಆ ಅಡ್ಡೆಯಲ್ಲಿಯೇ ಬಿಟ್ಟು ತನ್ನ ಮನೆಯ ದಾರಿಯ ಹಿಡಿದನು.

ನಂತರ ಆ ಡಿಪೋದ ಸಿಪಾಯಿಗಳು ರಾಮಚಂದ್ರ ಹಾಗು ಅವರ ಸಂಗಡಿಗರನ್ನು ಮುಂಬಯಿಯ ಹಡಗಿಗೆ ಸಾಗಿಸುವದಕ್ಕಾಗಿ ಸ್ಟೇಶನ್ನಿಗೆ ಕರೆದೊಯ್ಯಹತ್ತಿದರು. ಆಗ ರಾಮಚಂದ್ರನು ಆ ಸಿಪಾಯಿಗಳನ್ನು ಕುರಿತು—ಸ್ಟೇಶನ್ನಿಗೆ ಹೋಗಲಿಕ್ಕೆ ಕುದುರೆಯ ಗಾಡಿಗಳಿಲ್ಲವೆ? ಎಂದು ಕೇಳಿದನು. ಅದನ್ನು ಕೇಳಿ, ಆ ಸಿಪಾಯಿಗಳು "ಖೋ-ಖೋ" ಎಂದು ನಕ್ಕು—'ಓಹೋ, ನಮ್ಮ ರಾಯರಿಗೆ ಝಟಕಾ ಬಂಡಿಬೇಕಲ್ಲವೆ? ರಾಯರೇ, ನಿಮ್ಮನ್ನೇ ಕುದುರೆಗಳಂತೆ ಕಬ್ಬಿನ ಬೇಸಾಯಕ್ಕೆ ಹೂಡಲು ಆ ಇಕ್ಷುದ್ವೀಪಗಳಿಗೆ ಒಯ್ಯುತ್ತಿರುವು—ನೀವು ಅಲ್ಲಿಯ ಆ ಕೆಲಸಕ್ಕೆ

ಹೋಗಲು ಸಿದ್ಧರಾಗಿರುತ್ತಿರಲು, ನಿಮಗೆ ಕೂಡ್ರಲಿಕ್ಕೆ ಗಾಡಿ ಬೇರೆ ಬೇಕೆ?' ಎಂದು ಹಾಸ್ಯಮಾಡಿ,''ನಿಮ್ಮ ನಿಮ್ಮ ಗಂಟು-ಮೂಟೆಯನ್ನು ಹೊತ್ತುಕೊಂಡು ಬೇಗನೆ ನಡೆಯಿರಿ. ಈ ಮಧ್ಯಾನ್ಹದ ಗಾಡಿ ತಪ್ಪಿದರೆ ಸಾಯಂಕಾಲಕ್ಕೆ ಮುಂಬಯಿಯಿಂದ ಇಕ್ಷುದ್ವೀಪದ ಕಡೆಗೆ ಹೊರಡುವ ಹಡಗವು ಸಿಗಲಾರದು. ಹೂ! ನಡೆಯಿರಿ ಬೇಗ'' ಎಂದು ಗರ್ಜಿಸಿ ನುಡಿಯಲು, ಎಲ್ಲರೂ ಸರಸರನೆ ಸಾಗಹತ್ತಿದರು. ರಾಮಚಂದ್ರನೂ ನಿರುಪಾಯನಾಗಿ ಅವರನ್ನು ಹಿಂಬಾಲಿಸಿ ನಡೆದನು. ಆದರೆ ನಡುದಾರಿಯಲ್ಲಿ ಮನಸ್ಸು ತಿರುಗಲು, ಅವನು ತನ್ನ ಗಂಟನ್ನು ಇಳಿವಿ, ನಾನು ಬರುವದಿಲ್ಲೆಂದು ಹೇಳಿ ಅಲ್ಲಿಯೇ ಕುಳಿತುಬಿಟ್ಟನು. ಆಗ ಒಬ್ಬ ಶಿಪಾಯಿಯು ಹುಡುಗಾಟಿಕೆಗಾಗಿ ಅವನನ್ನು ಎಬ್ಬಿಸಹೋಗಲು, ಕ್ರೋಧಸಂತಪ್ತನಾಗಿದ್ದ ರಾಮಚಂದ್ರನು ಟೊಂಕ ಮುರಿಯುವ ಹಾಗೆ ಆ ಶಿಪಾಯಿಗೆ ಝಾಡಿಸಿ ಒದ್ದು ನೆಲಕ್ಕೆ ಕೆಡವಿದನು. ಆ ಕೂಲಿಯ ಆ ಉದ್ಧಟತನವನ್ನು ನೋಡಿ ಸಂಗಡಿದ್ದ ಎಲ್ಲ ಶಿಪಾಯಿಗಳು ತ್ವೇಷಗೊಂಡು ರಾಮಚಂದ್ರನನ್ನು ಚನ್ನಾಗಿ ತದಕಿದರು. ಆ ಸಶಸ್ತ್ರಜನರ ಗುಂಪಿನ ಮುಂದೆ ನಿಶ್ಶಸ್ತ್ರನೂ, ಹೊಟ್ಟೆಗಿಲ್ಲದೆ ಕಂಗಾಲಗೆಟ್ಟವನೂ ಆದ ರಾಮಚಂದ್ರನ ಗತಿಯೇನಾಗಬೇಕು? ಕೆಲ ಹೊತ್ತಿನ ಮೇಲೆ ಅವನ ತಪ್ಪು ಅವನಿಗೇ ತಿಳಿಯಲು, ನೀರವನಾಗಿ ಅವನು ಪುನಃ ತನ್ನ ಗಂಟು-ಗದಡಿಗಳನ್ನು ಹೊತ್ತುಕೊಂಡು ಸ್ಟೇಶನ್ನಿಗೆ ನಡೆದನು.

ಯಥಾಸಮಯದಲ್ಲಿ ಅವರೆಲ್ಲರೂ ಗಾಡಿಯನ್ನು ಏರಿ, ಮುಂಬಯಿಯ ಮಾಜಗಾಂವ ಸ್ಟೇಶನ್ನಿಗೆ ಇಳಿದರು. ಆಗ ಸರಾಸರಿ ಸಂಜೆಯ ಆರು ಗಂಟೆಯಾಗಿತ್ತು. ಮಾಜಗಾಂವದಿಂದ ಬಂದರವು ಸಮೀಪದಲ್ಲಿಯೇ ಇರುತ್ತದೆ. ಅಂಥ ಭರತಖಂಡದೊಳಗಿನ ಬೇರೆಬೇರೆ ಪ್ರಾಂತಗಳ ಐನೂರು ಜನ ಕೂಲಿಗಳನ್ನು ಇಕ್ಷುದ್ವೀಪಕ್ಕೆ ಕರೆದೊಯ್ಯುವದಕ್ಕಾಗಿ ಅಲ್ಲಿಯೊಂದು ಹಡಗವು ಸಿದ್ಧವಾಗಿತ್ತು. ಆ ಹಡಗವು ರಾತ್ರಿ ೮ ಕ್ಕೆ ಬಂದರದಿಂದ ಹೊರಡುವದಿತ್ತು. ರಾಮಚಂದ್ರನೇ ಮೊದಲಾದವರು ಅಲ್ಲಿಗೆ ತಲಪುತ್ತಲೇ ಕೂಲಿಗಳ ಊಟದ ಗಂಟೆಯಾಯಿತು. ಕೂಡಲೆ ಒಂದುಕೈಯಲ್ಲಿ ಚಿಮಣೀತಗಡಿನದೊಂದು ತಾಟನ್ನೂ, ಎರಡನೇ ಕೈಯಲ್ಲಿ ಮಣ್ಣಿನದೊಂದು ಮಗಿಯನ್ನೂ ಹಿಡಕೊಂಡು ಎಲ್ಲ ಕೂಲೀಜನರು ಊಟಕ್ಕೆ ಸಿದ್ಧರಾಗಿ ಭೋಜನ ಶಾಲೆಗೆ ಹೊರಟರು. ಅಲ್ಲಿ ಅಡಿಗೆ ಮಾಡುವವನು ಅಂತ್ಯಜ ಜಾತಿಯವನಾದ ಬೀರನೆಂಬುವನು! ಬಡಿಸುವವರು ಅವನಿಗಿಂತಲೂ ನೀಚಕುಲೋತ್ಪನ್ನರು!! ಅವರೆಲ್ಲರೂ ಕ್ರಿಸ್ತೀಧರ್ಮವನ್ನು ಸ್ವೀಕರಿಸಿದವರು. ಆ ಕೂಲಿಗಳು ಕಠಿಣ ಶಿಕ್ಷೆಯಾದ ಕೈದಿಗಳಂತೆ ಅಲ್ಪವೂ ಜಾತಿಭೇದವಿಲ್ಲದಂತೆ—ಬ್ರಾಹ್ಮಣ, ಬ್ರಾಹ್ಮಣೇ

ತರ, ಅಂತ್ಯಜ, ಮುಸಲ್ಮಾನ, ಕ್ರೈಸ್ತ ಮುಂತಾದ ಭೇದಭಾವಗಳಿಲ್ಲದೆ---ತೊಡೆಗೆ ತೊಡೆಯಾನಿಸಿ ಕುಳಿತುಕೊಂಡರು. ಆ ಪ್ರಕಾರವನ್ನು ನೋಡಿ ಅತ್ಯಂತ ಧರ್ಮಲಂಡನೂ, ದುಶ್ಚಟಗಳಿಗೆ ಆಗರನೂ ಆದ ನಮ್ಮ ರಾಮಚಂದ್ರನಿಗೆ ಕೂಡ ಬಲು ಖೇದವೆನಿಸಿತು. ಎಲ್ಲರೊಡನೆ ಅವನೂ, ಅವನ ಸಂಗಡಿಗರೂ ಊಟಕ್ಕೆ ಬರದಿರುವದನ್ನು ಕಂಡು ವಲ್ಲಭಾಚಾರ್ಯನಾದ ಬೀರನು ರಾಮಚಂದ್ರನನ್ನು ಕುರಿತು—ಯಾಕೆ ಸ್ವಾಮಿ, ತಾವು ಬರಲಿಲ್ಲ? ತಾವೂ ನಮ್ಮ ಜಾತಿಯವರಷ್ಟೆ? ಎಂದು ಪ್ರಶ್ನೆ ಮಾಡಿದ್ದನ್ನು ಕೇಳಿ, ಮರಣಪ್ರಾಯನಾದ ರಾಮಚಂದ್ರನು ದವಡೆಯನ್ನು ಕಚ್ಚುತ್ತ—ಛೀ, ನಾನು ಅಂತ್ಯಜನಲ್ಲ;-ಬ್ರಾಹ್ಮಣನು. ನಾನು ಇಂಥ ವರ್ಣಸಂಕರದ ಊಟಕ್ಕೆ ಬರಲಾರೆನು, ಎಂದು ನುಡಿದನು. ಆಗ ಆ ಬೀರನು ವ್ಯಂಗ್ಯದನಿಯಿಂದ—ತಾವು ಬಮ್ಮನರಷ್ಟೆ? ನಮ್ಮ ಬೀರದೇವರು ಬಮ್ಮಣರ ಕುಲಪತಿಯು; ಆದ್ದರಿಂದ ನೀವು ಇಲ್ಲಿ ಪ್ರಸಾದಕ್ಕೆ ಬರಲಿಕ್ಕೆ ಏನೂ ಅಡ್ಡಿಯಿಲ್ಲ, ಎಂದು ನುಡಿದು, ರಾಮಚಂದ್ರಾದಿಗಳಿಗೆ ಎಷ್ಟು ಒತ್ತಾಯ ಮಾಡಿದರೂ, ಇವರು ಅಂದು ಅಲ್ಲಿ ಆ ಸಹಭೋಜನಕ್ಕೆ ಹೋಗದೆ, ನಿರಶನರಾಗಿಯೇ ಉಳಿದು, ಅಂದಿನ ಮಟ್ಟಿಗಾದರೂ ತಮ್ಮ ತಮ್ಮ ವರ್ಣಾಶ್ರಮಧರ್ಮವನ್ನು ಕಾಯ್ದುಕೊಂಡು, ದ್ವೀಪಾಂತರ ಗಮನಕ್ಕೆ ಸಿದ್ಧರಾದರು.

# ಹನ್ನೊಂದನೆಯ ಪರಿಚ್ಛೇದ.

## ಸವತಿ ಮತ್ಸರ.

ಕಮಲಾ ಸುಂದರಬಾಯಿ ವಾರಣಾಸಿಯಲ್ಲಿ ಯಾವ ಮಂದಿರ ಹಾಗು ಅನಾಥಾಲಯಗಳನ್ನು ನಿರ್ಮಿಸತೊಡಗಿದ್ದಳೋ, ಇಂಜಿನಿಯರ ರಾಮರಾಯನೇ ಅವುಗಳನ್ನು ಕಟ್ಟಿಸುತ್ತಿದ್ದನು; ಮತ್ತು ಆ ಕೆಲಸಕ್ಕಾಗಿಯೇ ಅವನು ನಡುನಡುವೆ ನಾಗಪೂರ ಕಡೆಯಿಂದ ಕಾಶಿಗೆ ಬರುತ್ತಿದ್ದನು. ರಾಮರಾಯನು ಇಂದು ಬೆಳಗಿನ ಕಲಕತ್ತಾ ಮೇಲಿನಿಂದ ಕಾಶಿಗೆ ಬಂದಿದ್ದನು. ಕಮಲೆಯೂ-ವಿಮಲೆಯೂ ಸ್ನಾನ ಮಾಡಿ ಮನೆಗೆ ತಿರುಗಿ ಬಂದ ಬಳಿಕ ರಾಮರಾಯನೂ ಗಂಗಾಸ್ನಾನಕ್ಕಾಗಿ ಹೊರಟನು. ಅವನು ಒಂದು ಟಾಂಗೆ (ರಥದಂಥ ಚಿಕ್ಕ ಕುದುರೆಯ ಗಾಡಿ) ಯಲ್ಲಿ ಪರಿ ಪ್ರಶಸ್ತವಾದ ದಶಾಶ್ವಮೇಧ ಘಾಟದ ಕಡೆಗೆ ಸ್ನಾನಕ್ಕೆ ನಡೆದನು. ಅದೇ ಸಮಯದಲ್ಲಿ ಅದೇ ಮಾರ್ಗದಿಂದ ಸಾಗಿದ್ದ ಅಮೃತರಾಯನಿಗೆ ರಾಮರಾಯನು ಕಾಣಿಸಿಕೊಳ್ಳಲು, 'ರಾಮರಾಯ' 'ರಾಮರಾಯ' ಎಂದು ಅವನು ಗಟ್ಟಿಯಾಗಿ ಕೂಗಿಕೊಂಡನು. ತನ್ನನ್ನು ಹೆಸರುಗೊಂಡು ಕೂಗುವವರಾರೆಂಬದನ್ನು ನೋಡುವದಕ್ಕಾಗಿ ರಾಮರಾಯನು ಟಾಂಗೆಯನ್ನು ನಿಲ್ಲಿಸಿದನು. ಆಗ ಅವನಿಗೆ ಅಮೃತರಾಯನ ಭೇಟಿಯಾಗಲು ಅವನು ಟಾಂಗೆಯಿಂದಿಳಿದು, ಅವನನ್ನು ಅಪ್ಪಿಕೊಂಡು—ಮಿತ್ರನೇ, ನೀನು ಇಲ್ಲಿಗೆ ಬಂದು ಎಷ್ಟು ದಿವಸಗಳಾದವು? ಎಂದು ಕೇಳಿದನು. "ಎರಡು ವಾರಗಳಿಂದ ನಾನು ಇಲ್ಲಿಯೇ ವಾಸಿಸುತ್ತಿದ್ದೇನೆ" ಎಂದು ಅಮೃತರಾಯನು ನಗೆ ಮೊಗದಿಂದ ಉತ್ತರ ಕೊಟ್ಟನು. ಪರದೇಶದಲ್ಲಿ ಹೀಗೆ ಆಕಸ್ಮಿಕವಾಗಿ ಭೇಟಿಯಾದ ಆ ಉಭಯ ಮಿತ್ರರೂ ಪುಳಕಾಂಕಿತರಾಗಿ ಪರಮಾಹ್ಲಾದವನ್ನು ಹೊಂದಿದರು!

ನಂತರ ರಾಮರಾಯನು—ನಾನು ಆಗಾಗ ಮೇಲಿಂದಮೇಲೆ ಇಲ್ಲಿಗೆ ಬರುತ್ತಿರುವೆನು. ಅದರಂತೆ ಇಂದು ಇಲ್ಲಿಗೆ ಬಂದೆನು. ನಿನ್ನ ಯೋಗಕ್ಷೇಮವು ಗೊತ್ತಾಗದೆ ಬಹಳ ದಿನಗಳಾಗಿದ್ದವು. ಈಗ ನೀನು ಎಲ್ಲಿ ನೌಕರಿ ಮಾಡುತ್ತೀಯೆ? ಮುಂತಾದ ಆನುಷಂಗಿಕ ಪ್ರಶ್ನೆಗಳನ್ನು ಮಾಡಿದನು.

"ನಾನು ಇನ್ನೂ ಮುಂಬಯಿ ಇಲಾಖೆಯ ಮಧ್ಯಭಾಗದಲ್ಲಿಯೇ ನೌಕರಿ

ಮಾಡುತ್ತಿರುವೆನು. ಆದರೆ ಶರೀರದ ಅಸ್ವಾಸ್ಥ್ಯದ ಮೂಲಕ ಈಗ ಆರು ತಿಂಗಳ ಫರ್ಲೋರಜೆಯನ್ನು ಪಡೆದು ಇಲ್ಲಿಗೆ ಬಂದಿರುತ್ತೇನೆ.''

''ಮತ್ತು ಅದೇ ನೆವದಿಂದ ಕಾಶೀಯಾತ್ರೆಯನ್ನು ಮಾಡಿ ಅತುಲ ಪುಣ್ಯ ಪದವನ್ನು ಸಂಪಾದಿಸಬೇಕೆಂದು ಮಾಡಿರುವೆನೆಂಬುದನ್ನೂ ಯಾಕೆ ಹೇಳಲೊಲ್ಲೆ?'' ಎಂದು ರಾಮರಾಯನು ಹಾಸ್ಯಕ್ಕಾಗಿ ಪ್ರಶ್ನೆ ಮಾಡಿದನು.

''ಹಾಗೆಂದರೂ ಅಡ್ಡಿಯಿಲ್ಲ; ಆದರೆ ಈವರೆಗಂತೂ ನನ್ನ ಮೇಲೆ ಶ್ರೀವಿಶ್ವೇಶ್ವರನ ಕೃಪೆಯಾಗಿಲ್ಲ; ಹಾಗು ಇನ್ನು ಮುಂದಾದರೂ ಆಗುವ ಸಂಭವವಿರುವದಿಲ್ಲ.''

''ಇರಲಿ, ಆ ಬಗ್ಗೆ ಮತ್ತೊಮ್ಮೆ ಮಾತಾಡೋಣವಂತೆ. ನೀನು ಈಗ ಹೊರಟಿರುವದಾದರೂ ಎಲ್ಲಿಗೆ?''

''ಸ್ನಾನಕ್ಕಾಗಿ; ಆದರೆ ನೀನು ಇಳುಕೊಂಡಿರುವದೆಲ್ಲಿ? ಹಾಗು ನೀನು ಇಲ್ಲಿಗೆ ಆಗಾಗ್ಗೆ ಬರುತ್ತಿರುವದೇಕೆ?'' ಎಂಬ ಅಮೃತರಾಯನ ಪ್ರಶ್ನೆಗೆ ರಾಮರಾಯನು—:''ನಾನು ನಮ್ಮ ಯಜಮಾನರ ಮನೆಯಲ್ಲಿಳಿದಿರುತ್ತೇನೆ; ಮತ್ತು ಅವರ ಕೆಲಸಕ್ಕಾಗಿಯೇ ನಾನು ಆಗಾಗ್ಗೆ ಇಲ್ಲಿಗೆ ಬರುತ್ತಿರುತ್ತೇನೆ.''

''ನೀನು ನಾಗಪೂರ ಪ್ರಾಂತದಲ್ಲಿಯ ಶಿವರಾಯನ ಕಾರಖಾನೆಗಳ ಮ್ಯಾನೇಜಿಂಗ ಇಂಜನೀಯರನಾಗಿರುವಿಯಷ್ಟೆ? ಅಂದಮೇಲೆ ಇಲ್ಲಿ, ಈ ಭೂಕೈಲಾಸದಲ್ಲಿ ನಿನ್ನ ಬೇರೆ ಯಜಮಾನರಾರಿರುವರು? ಮತ್ತು ನೀನು ಮಾಡುವ ಅವರ ಕೆಲಸವಾದರೂ ಆವುದು?''

''ನಮ್ಮ ಶಿವರಾಯರು ಪತ್ತೆಯಾಗದಂತೆ ಹೊರಟು ಹೋದದ್ದನ್ನು ನೀನು ಬಲ್ಲೆಯಷ್ಟೆ? ಅವರ ಪತ್ನಿಯಾದ ಕಮಲಾಸುಂದರಿಯು ತನ್ನ ಶೇಷಾಯುಷ್ಯವನ್ನು ಈ ಕಾಶೀಧಾಮದಲ್ಲಿ ಕಳೆಯುವದಕ್ಕಾಗಿ ಬಂದಿರುತ್ತಾಳೆ. ಅವಳು ಇಲ್ಲಿಯೊಂದು ಭವ್ಯ ಮಂದಿರವನ್ನೂ ಒಂದು ಅನಾಥಾಲಯವನ್ನೂ ಕಟ್ಟಿಸುವದನ್ನು ಸಂಕಲ್ಪಿಸಿರುತ್ತಾಳೆ. ಆ ಕೆಲಸಗಳ ದೇಖರೇಖಿಗಾಗಿಯೇ ನಾನು ಆಗಾಗ್ಗೆ ಇಲ್ಲಿಗೆ ಬಂದುಹೋಗುತ್ತಿರುತ್ತೇನೆ.''

ಅಮೃತರಾಯನು ತಾನು ಇಂದೇ ಬೆಳಿಗ್ಗೆ ಗಂಗಾತೀರದಲ್ಲಿ ಕಂಡ ಆ ಉಭಯ ಹೆಣ್ಣುಮಕ್ಕಳಲ್ಲಿ ಒಬ್ಬಳು ಕಮಲಾಸುಂದರಿಯೆಂಬದನ್ನು ಈ ಮೊದಲು ತಿಳಿದೇ ಇದ್ದನು; ಆದರೆ ಇನ್ನೊಬ್ಬಳಾರೆಂಬದು ಅವನಿಗೆ ನಿಶ್ಚಿತವಾಗಿ ತಿಳಿದಿದ್ದಿಲ್ಲ. ಅದನ್ನು ತಿಳಕೊಳ್ಳುವದಕ್ಕೆಂದು ರಾಮರಾಯನನ್ನುದ್ದೇಶಿಸಿ—. ಮಿತ್ರಾ, ಇಂದು ಬೆಳಿಗ್ಗೆ ಶಿವರಾಯನ ಹೆಂಡತಿಯು ತನ್ನ ಭಗಿನಿಯೊಡನೆ ಗಂಗಾ

ಸ್ನಾನಕ್ಕೆ ಬಂದಿದ್ದಳಷ್ಟೆ? ಎಂದು ಪ್ರಶ್ನೆಮಾಡಲು,

ರಾಮರಾಯನು—"ಅಹುದು; ಆದರೆ ಅವರು ಒಡಹುಟ್ಟಿದ ಅಕ್ಕ-ತಂಗೆಯರಲ್ಲ."

"ಅವರು ಅಕ್ಕ-ತಂಗಿಯರೆಂಬದನ್ನು ಇಲ್ಲಿಯ ಒಬ್ಬ ನನ್ನ ಪರಿಚಯಸ್ಥನು ಹೇಳಿದ್ದರಿಂದಲೇ ತಿಳಿದಿದ್ದೆನು. ಹಾಗಾದರೆ ಅವಳು ಶಿವರಾಯನ ಭಗಿನಿಯಾಗಿರಬಹುದಲ್ಲವೆ?"

"ಛೇ-ಛೇ, ವಿಮಲಾದೇವಿಗೂ ಕಮಲಾಸುಂದರಿಗೂ ಯಾವ ಆಪ್ತತ್ವದ ಸಂಬಂಧವೂ ಇರದೆ, ಅವರೀರ್ವರಲ್ಲಿ ಕೇವಲ ಧರ್ಮಸಂಬಂಧವಿರುವದರಿಂದ ಅವರು ಪರಸ್ಪರರನ್ನು ಅತ್ಯಂತ ಪ್ರೀತಿಸುತ್ತಾ ಒಡಹುಟ್ಟಿದವರಂತೆ ನಡೆಯುತ್ತಿರುತ್ತಾರೆ."

ಆ ಹೆಣ್ಣುಮಗಳ ಹೆಸರು ವಿಮಲೆಯೆಂಬದನ್ನು ಕೇಳಿ ಅಮೃತರಾಯನು ಅತ್ಯಂತ ಚಕಿತನಾದನು. ಆದರೂ ಅದನ್ನು ತೋರ್ಪಡಿಸದೆ—"ಏ ತಾ॥, ಆ ವಿಮಲಾದೇವಿಯು ಯಾವ ಊರವಳು? ಅವಳು ಒಬ್ಬೊಂಟಿಗಳಾಗಿ ಕಮಲಾಸುಂದರಿಯ ಬಳಿಯಲ್ಲೇಕೆ ಇರುತ್ತಾಳೆ?"

"ಅವಳು ಯಾವ ಊರವಳು, ಯಾರ ಮನೆಯವಳು? ಮುಂತಾದ ಸಂಗತಿಯು ನನಗೂ ತಿಳಿದಿರುವದಿಲ್ಲ. ಆದರೆ ಅವಳೂ ಕಮಲಾಸುಂದರಿಯಂತೆ ಪತಿಯಿಂದ ವಂಚಿತಳಾದವಳೆಂಬದೂ, ಅವಳ ವಿವಾಹವು ತೀರಬಾಲ್ಯಕಾಲದಲ್ಲಿ ಆಗಿತ್ತೆಂಬದೂ, ನಂತರ ವಿಶೇಷಕಾರಣವಿಲ್ಲದೆ ಆಕೆಯ ಮಾವನು ಅವಳನ್ನು ತ್ಯಜಿಸಿ, ಮಗನಿಗೆ ಬೇರೆ ಲಗ್ನವನ್ನು ಮಾಡಿರುವನೆಂಬದೂ ಬಲ್ಲೆನಷ್ಟೇ."

ಈ ಸಂಗತಿಯನ್ನು ಕೇಳಿ, ಅಮೃತರಾಯನ ಅಂತಃಕರಣವು ವಿಹ್ವಲವಾಗಿ ಅವನಿಗೆ ಭ್ರಮವಾಗಿ ಬವಳಿ ಬರಲಾರಂಭಿಸಿತು. ಆದರೂ ಅವನು ತನ್ನನ್ನು ತಾನು ಸಾವರಿಸಿಕೊಂಡು—"ಆ ಮೇಲೆ ಏನಾಯಿತು?" ಎಂದು ಪ್ರಶ್ನೆಮಾಡಿದನು.

"ಆ ಮೇಲೆ ಏನು; ಮನೆತನಸ್ಥರ ಮನೆಯ ಆ ಹೆಣ್ಣುಮಗಳು ತನ್ನ ಬಾಲ್ಯವನ್ನು ಪಿತ್ರಾಲಯದಲ್ಲಿಯೇ ಕಳೆದಳು. ಅವಳ ಗಂಡನು ಅತ್ತ ಕಡೆಗೆ ಅಡ್ಡ ಹಾಯಲಿಲ್ಲ! ಪುಣೆಯಲ್ಲಿರುವಾಗ ಕೆಲವು ವರ್ಷಗಳ ಪೂರ್ವದಲ್ಲಿ ನಮ್ಮ ಕಮಲಾಸುಂದರಿಯೊಡನೆ ಅವಳ ಪರಿಚಯವಾಯಿತು. ಅಂದಿನಿಂದಲೇ ಅವರು ನಿಜಭಗಿನಿಯಂತೆ ಒಬ್ಬರನ್ನೊಬ್ಬರು ಅಗಲಿರುವದಿಲ್ಲ. ಆ ಸುಂದರಿಯು ರೂಪ-ಲಾವಣ್ಯಗಳಿಂದ ಮಿಗಿಲಾಗಿರುವಂತೆ, ಸದ್ಗುಣಗಳಿಂದಲೂ ಪರಿಪೂರ್ಣಳಾಗಿರುತ್ತಾಳೆ.

ದೇವರು ಅವಳಿಗೆ ಈ ತರಹದ ದುಃಖವನ್ನು ಏಕೆ ಉಂಟುಮಾಡಿರುವನೋ ಯಾರು ಬಲ್ಲರು?''

ರಾಮರಾಯನು ಹೇಳಿದ ಸಂಗತಿಯಿಂದ ವಿಮಲೆಯು ಖಂಡಿತವಾಗಿ ತನ್ನ ಪತ್ನಿಯೇ ಎಂಬದು ಅಮೃತರಾಯನಿಗೆ ಖಾತ್ರಿಯಾದಂತಾಯಿತು. ಆದರೂ ಮತ್ತೂ ಒಂದು ಬಗೆಯಿಂದ ಪರೀಕ್ಷಿಸಿ ನೋಡಬೇಕೆಂದು ಅವನು—''ಮಿತ್ರಾ, ಆ ವಿಮಲಾದೇವಿಯ ಪತಿಯು ನನ್ನ ಪರಿಚಯದವನಾಗಿರಬಹುದಾಗಿ ತೋರುತ್ತದೆ; ಆದರೆ ಅವಳ ತಂದೆಯ ಹೆಸರೇನು? ಹೇಳು ನೋಡುವಾ, ಎಂದನು.

ರಾಮರಾಯ—'' ಅವರ ಹೆಸರು ನನಗೆ ಗೊತ್ತಿದೆ. ಆದರೆ ಈಗ ನೆನಪಾಗಲೊಲ್ಲದು. ಇವಳ ಅಣ್ಣನಾದ ಅಚ್ಯುತರಾಯನು ಪುಣೆಯಲ್ಲಿ ಪ್ರೊಫೇಸರನಾಗಿರುತ್ತಾನೆ.''

ಉತ್ಸುಕತೆಯಿಂದ ಅಮೃತರಾಯನು—''ಆ ನಮ್ಮ ಮಹಾಜನ ಅಚ್ಯುತರಾಯ ಪ್ರೊಫೇಸರನೇ?''

''ಹೌದೋ, ಅವನೇ. ನಿನಗೆ ಅವನ ಪರಿಚಯವಿರಲಿಕ್ಕೆ ಸಾಕು. ಯಾಕಂದರೆ ನೀನೂ ಪುಣೆಯ ಫರ್ಗ್ಯೂಸನ್ ಕಾಲೇಜಿನಲ್ಲಿಯೇ ಓದಿದವನು.''

''ಅಚ್ಯುತರಾಯನ ತಂದೆಯ ಹೆಸರು ನರಸಿಂಗರಾಯನಲ್ಲವೆ?''

''ಅಹುದಹುದು! ಅದೇ ನರಸಿಂಗರಾಯರಿಗೆ ಮೊದಲು ಬೆಳಗಾವಿಯ ಕೋರ್ಟಿನಲ್ಲಿ ಕೆಲಸವಿತ್ತು. ಅಲ್ಲಿಯೇ ಅವರು ತಮ್ಮ ಒಬ್ಬ ಮಿತ್ರನ ಮಗನೊಡನೆ ಮಗಳ ಲಗ್ನವನ್ನು ಬೆಳಿಸಿದ್ದರು. ಅದಿರಲಿ ಬಿಡು; ಬಾ. ಈ ಚೌಕಿಯಲ್ಲಿ ಕೂಡ್ರುಬಾ. ಗಂಗಾಸ್ನಾನ ಮಾಡಿ ಬರಲಿಕ್ಕೆ ತಡವಾಗುವದಿಲ್ಲವೆ?''

ಸೂತ್ರದ ಗೊಂಬೆಯಂತೆ ಅಮೃತರಾಯನು ರಾಮರಾಯನೊಡನೆ ಚೌಕಿಯನ್ನೇರಿದನು. ಆಗ ಅವನ ಅಂತರಂಗದಲ್ಲಿ ಕಾಡ ಬೇಗೆಯಂತೆ ಉರಿಯೆದ್ದಿತು. ''ಇವಳೇ ತನ್ನ ಬಾಲ್ಯಕಾಲದ ಸಹಚಾರಿಣಿಯೂ, ಪತಿಯಿಂದ ವಂಚಿತಳಾದವಳೂ, ಚಿರದುಃಖಿನಿಯೂ ಆದ ವಿಮಲೆಯು. ಇವಳ ಸಂಧಾನಕ್ಕಾಗಿ ತಾನು ಎಷ್ಟು ಅರ್ಥವ್ಯಯ-ಕಾಲವ್ಯಯಗಳನ್ನು ಮಾಡಿದೆನಲ್ಲ? ಈ ವರೆಗೂ ಪತ್ತೆಯಾಗದ ಇವಳನ್ನು ಒಮ್ಮೆ ಕಣ್ಣು ಮುಟ್ಟ ನೋಡಬೇಕು'' ಎಂಬ ಲಾಲಸೆಯು ಅಮೃತರಾಯನಲ್ಲಿ ಉತ್ಪನ್ನವಾಯಿತು. ಇವಳನ್ನು ಕಾಣುವದಕ್ಕೆ ಏನು ಯುಕ್ತಿ ಮಾಡಬೇಕೆಂಬದನ್ನು ಅವನು ಯೋಚಿಸಹತ್ತಿದನು. ಅಷ್ಟರಲ್ಲಿ ಅವನಿಗೊಂದು ಸುಲಭ ಯುಕ್ತಿಯು ಸೂಚಿಸಿತು. ಆಗ ಅವನು ಹರ್ಷಭರಿತನಾಗಿ, ಇಂದು ನನಗೆ ಈ ರಾಮರಾಯನು

ಅನಪೇಕ್ಷಿತನಾಗಿ ಭೇಟಿಯಾದದ್ದನ್ನು ನೋಡಿದರೆ ಶ್ರೀ ವಿಶ್ವೇಶ್ವರನೇ ನನ್ನಮೇಲೆ ಕೃಪೆ ಮಾಡಿರುವನೆಂದು ತಿಳಿದು ಸುಮ್ಮನಾದನು.

ಚೌಕಿಯು ದಶಾಶ್ವಮೇಧಘಾಟದ ಕಡೆಗೆ ಭರದಿಂದ ಸಾಗಹತ್ತಲು ರಾಮರಾಯನು ಅಮೃತರಾಯನನ್ನು ಕುರಿತು—"ಮಿತ್ರಾ, ನಮ್ಮ ವಿಮಲಾದೇವಿಯ ಗಂಡನು ಜೀವಂತನಾಗಿರುವನೇ?"

"ಇದ್ದಾನೆ. ಇಷ್ಟೇ ಅಲ್ಲ; ಅವನು ನನಗೆ ಕೇವಲ ಪರಿಚಯದವನಾಗಿರುತ್ತಾನೆ."

"ಯಾವ ಊರಲ್ಲಿರುತ್ತಾನೆ; ಏನು ಮಾಡುತ್ತಿರುತ್ತಾನೆ?"

"ಅವನೂ ಸರಕಾರಿನೌಕರನಾಗಿದ್ದು, ಬಹಳ ದಿವಸಗಳಿಂದ ತನ್ನ ಪತ್ನಿಯ ಅನುಸಂಧಾನದಲ್ಲಿರುತ್ತಾನೆ."

ಈ ಸಂಗತಿಯನ್ನು ಕೇಳಿ, ರಾಮರಾಯನಿಗೆ ಕಡು ದುಃಖವೆನಿಸಿ, ಅವನ ಕಣ್ಣಿಂದ ಅಶ್ರುಗಳು ಸುರಿಯತೊಡಗಿದವು. ಆಗ ಅವನು—ಮಿತ್ರಾ, ಹಾಗಾದರೆ, ಅವನಿಗೆ ಅವನ ಪತ್ನಿಯ ಪತ್ತೆಯನ್ನು ಅತ್ಯವಶ್ಯವಾಗಿ ತಿಳಿಸಿ, ಅವನನ್ನು ಇಲ್ಲಿಗೆ ಬರಮಾಡು. ಪಾಪ! ಅಭಾಗ್ಯಳೂ, ಪತಿಕಂಗಾಲಳೂ, ಚಿರದುಃಖಿತಳೂ ಎಂಬದನ್ನು ತಿಳಿದೇ ಭಗವಂತನು ಈಗ ಈ ವಿಮಲಾದೇವಿಯನ್ನು ಕೃಪಾದೃಷ್ಟಿಯಿಂದ ನೋಡಿದ ಹಾಗೆ ಕಾಣುತ್ತಿದೆ.

ಸ್ನಾನಾನಂತರದಲ್ಲಿ ಅಮೃತರಾಯನನ್ನು ಅವನ ಮನೆಯ ಎದುರಿಗೆ ಬಿಟ್ಟು ರಾಮರಾಯನು ತನ್ನ ಬಿಡಾರದ ಕಡೆಗೆ ಹೊರಡಲು, ಅಮೃತರಾಯನು ಅವನನ್ನು ಕುರಿತು,—ನಾನೇ ಇಂದು ಸಾಯಂಕಾಲಕ್ಕೆ ಕಮಲಾಸುಂದರಿಯ ಮನೆಗೆ ಬಂದು, ಒಮ್ಮೆ ಆ ವಿಮಲಾದೇವಿಯನ್ನು ಕಾಣುತ್ತೇನೆ. ಆದರೆ ಆ ವರೆಗೆ ಅವಳಿಗೆ ಅಥವಾ ಅಲ್ಲಿಯವರಿಗೆ ನನ್ನ ಹೆಸರು-ದೆಶೆಗಳನ್ನು ತಿಳಿಸಬೇಡ, ಎನ್ನಲು, "ಹಾಗೇ ಮಾಡುವೆನು. ಆದರೆ ವಿಮಲಾದೇವಿಯಗಂಡನ ಹೆಸರನ್ನೂ, ಅವನಿರುವ ಸ್ಥಳವನ್ನೂ ತಿಳಿಸು. ನಾನು ಆ ಸಂಗತಿಯನ್ನು ಅವಳಿಗೆ ತಿಳಿಸುವೆನು" ಎಂದು ರಾಮರಾಯನು ಪ್ರಶ್ನಮಾಡಲು, "ಅದೆಲ್ಲವನ್ನು ನಾನೇ ತಿಳಿಸುವೆನು. 'ನಿನ್ನ ಅತ್ತೆಯ ಮನೆಯವರಾರೋ ಇಂದು ನಿನ್ನ ಭೇಟಿಗೆ ಬರುವವರಿದ್ದಾರೆ' ಎಂಬದಿಷ್ಟೇ ಸಂಗತಿಯನ್ನು ನೀನು ಅವಳಿಗೀಗ ತಿಳಿಸಿಡು" ಎಂದು ಹೇಳಿ, ಅಮೃತರಾಯನು ತನ್ನ ಮನೆಯನ್ನು ಸೇರಿದನು. ರಾಮರಾಯನು ಮನೆಗೆ ಹೋಗುತ್ತಲೇ ಅಮೃತರಾಯನು ಕಟ್ಟಕಡೆಗೆ ಹೇಳಿದ ಸಂಗತಿಯನ್ನಷ್ಟೇ ವಿಮಲಾದೇವಿಗೆ ತಿಳಿಸಿದನು.

ಅದನ್ನು ಕೇಳಿ ವಿಮಲೆಯು ಬಹು ಗೊಂದಲದಲ್ಲಿ ಬಿದ್ದಳು. ಯಾಕಂದರೆ, ಗಂಡನ ಮನೆಯಲ್ಲಿ ತನ್ನ ಗಂಡನು ಹಾಗು ಮಾವನು ಇವರೀರ್ವರ ಹೊರತು ಬೇರೆ ಯಾರೂ ಇದ್ದಂತೆ ಅವಳಿಗೆ ಗೊತ್ತಿರಲಿಲ್ಲ. ಆದರೆ ಈಚೆಗೆ ಈ ಇಪ್ಪತ್ತು ವರ್ಷಗಳಲ್ಲಿ ತಮ್ಮ ಮಾವನಿಗೆ ಮತ್ತೆ ಕೆಲವು ಜನ ಮಕ್ಕಳುಗಳೇಕೆ ಆಗಿರಬಾರದು? ಅಥವಾ ತನ್ನ ಗಂಡನ ಬೇರೆ ಆಪ್ತ ಸಂಬಂಧಿಕನೊಬ್ಬನು ಇಲ್ಲಿಗೇಕೆ ಬಂದಿರಬಾರದು? ಮುಂತಾದ್ದನ್ನು ಕಲ್ಪಿಸಿಕೊಂಡು, ಅವಳು ಆ ವ್ಯಕ್ತಿಯ ಬರುವಿಕೆಯನ್ನೇ ಇದಿರು ನೋಡುತ್ತಾ ಸಾಯಂಕಾಲದವರೆಗೆ ಕಾಲಯಾಪನೆಯನ್ನು ಮಾಡಲಾರಂಭಿಸಿದಳು.

ಚೌಕಿಯಿಂದಿಳಿದು ಮನೆಯನ್ನು ಪ್ರವೇಶಿಸಿದಾಗ ಅಮೃತರಾಯನು ಪ್ರಕೃತಿಸ್ಥನಾಗಿರಲಿಲ್ಲೆಂದೇ ಹೇಳಬೇಕಾಗುವದು. ಕಾರಣವೇನೆಂದರೆ, ಅವನು ಊಟಕ್ಕೆ ಕುಳಿತಾಗ ಎಲ್ಲಕ್ಕೂ ಮೊದಲು ಅನ್ನವನ್ನುಣ್ಣುವದನ್ನು ಬಿಟ್ಟು ಬರೇ ಪಲ್ಲೆಯನ್ನೇ ತಿನ್ನುವನು. ರೊಟ್ಟಿಗೆ ಹುಳಿಯನ್ನು ಹಚ್ಚಿಕೊಳ್ಳದೆ ಅನ್ನವನ್ನೇ ಹಚ್ಚಿ ಉಣ್ಣುವನು. ಮನಸ್ಸಿನಲ್ಲಿ ಏನೋ ವಿಚಾರ ಬರಲು, ಉಣ್ಣ-ಉಣ್ಣುತ್ತ ಒಮ್ಮೆಲೆ ಎದ್ದುನಿಲ್ಲುವನು. ಇದೆಲ್ಲವನ್ನು ನೋಡಿ ಹೇಮಾವತಿಯು ವಿಸ್ಮಯಗೊಂಡು, "ನಿಮಗೆ ಆಗಿದೆಯಾದರೂ ಏನು? ಇಂದು ಬೆಳಗಿನಿಂದ ಹೀಗೇಕೆ ಮಾಡುವಿರಿ!" ಎಂದು ಕೇಳಲು, "ವಿಶೇಷವೇನೂ ಆಗಿರುವದಿಲ್ಲ"ಎಂದು ಹೇಳಿ ಮತ್ತೆ ಕುಳಿತು ಹ್ಯಾಗಾದರೊಮ್ಮೆ ಅವನು ಊಟವನ್ನು ಮುಗಿಸಿದನು; ಹಾಗು ಆ ಕೂಡಲೆ ಎಲ್ಲಿಯೋ ಹೊರಗೆ ಹೋಗುವ ತಯಾರಿಗೆ ನಿಂತನು. ಆದನ್ನು ಕಂಡು ಹೇಮಾವತಿಯು ಆಗ ಅವನನ್ನು ಹೊರಗೆ ಹೋಗಗೊಡದೆ "ಇಂದು ನಿಮ್ಮ ಮೈಯಲ್ಲಿ ಸ್ವಸ್ಥವಿಲ್ಲ. ತುಸ ಹೊತ್ತು ವಿಶ್ರಮಿಸಿರಿ" ಎಂದು ಹೇಳಿ, ಕೆಲ ಹೊತ್ತು ಮಲಗಿರಲಿಕ್ಕೆ ಆಗ್ರಹಪೂರ್ವಕ ತಿಳಿಸಿದಳು. ನಿರ್ವಾಹವಿಲ್ಲದೆ ಅಮೃತರಾಯನು ಮಲಗಿಕೊಂಡನು. ಆದರೆ ಅಂದು ಅವನಿಗೆ ಆ ವಿಮಲಾದೇವಿಯ ದೆವ್ವ ಬಡಿದಿತ್ತಾದ್ದರಿಂದ ನಿದ್ದೆ ಹೇಗೆ ಹತ್ತಬೇಕು? ಅವನ ಮನಸ್ಸು ಅದೇ ವಿಚಾರದಲ್ಲಿ ಮಗ್ನವಾಗಿಹೋಗಿತ್ತು. ಹಾಗೂ ಹೀಗೂ ಮಾಡಿ ಅವನು ಸಾಯಂಕಾಲದ ನಾಲ್ಕು ಗಂಟೆಯ ವರೆಗೆ ಅಲ್ಲಿ ಬಿದ್ದುಕೊಂಡಿದ್ದನು ಗಡಿಯಾರದಲ್ಲಿ ನಾಲ್ಕು ಬಡಿಯುತ್ತಲೆ ಚಟಕ್ಕನೆ ಹಾಸಿಗೆಯಿಂದ ಎದ್ದನು; ಆಗ ಎಲ್ಲಿಗೆ ಹೋಗುವದೆಂದು ಹೇಮಾವತಿಯು ಪುನಃ ಪ್ರಶ್ನೆ ಮಾಡಲು, "ನನ್ನ ಪರಮಮಿತ್ರನಾದ ರಾಮರಾಯನು ಇಂದು ಈ ಕಾಶೀನಗರಕ್ಕೆ ಬಂದಿರುತ್ತಾನೆ. ಇಳಿಹೊತ್ತಿನಲ್ಲಿ ಬಂದು ಭೇಟಿಯಾಗುತ್ತೇನೆಂದು ನಾನು ಅವನಿಗೆ ಹೇಳಿರುವದರಿಂದ, ಅತ್ತ ಹೋಗುತ್ತೇನೆ" ಎಂದು ಹೇಳಿ

ಹೊರಡಲು ಸಿದ್ಧನಾದನು.

"ಇನ್ನೂ ಬಿಸಿಲು ಬಹಳವಿದೆ ಸೂರ್ಯನ ತಾಪವು ಕಡಿಮೆಯಾದಮೇಲೆ ಹೋಗಿ ಬರ್ರಿ; ಆದರೆ ನೀವು ಇಂದು ತುಸ ಅಸ್ವಸ್ಥವಾಗಿರುವಿರಾದ್ದರಿಂದ ಸಂಗಡ ಮುರಾರಿಯನ್ನೂ ಕರಕೊಂಡು ಹೋಗಿರಿ" ಎಂದು ಹೇಮಾವತಿಯು ಅನ್ನಲು, "ಛೇ-ಛೇ, ಮುರಾರಿಯೇತಕ್ಕೆ? ನಾನೊಬ್ಬನೇ ಹೋಗಿಬರುವೆನು. ನೀನೇ ಮುರಾರಿಯನ್ನು ಕರಕೊಂಡು ಆರುಗಂಟೆಯ ಸಮಯಕ್ಕೆ ಶ್ರೀ ವಿಶ್ವೇಶ್ವರನ ದರ್ಶನಕ್ಕೆ ಬಂದು ಬಿಡು. ಆಗ ನಾನೂ ಅಲ್ಲಿಗೆ ಬರುವೆನು. ನಂತರ ಎಲ್ಲರೂ ಕೂಡಿ ಗಂಗಾ ತಟಾಕದಲ್ಲಿ ತುಸಕಾಲ ವಿಹರಿಸಿ, ಮನೆಗೆ ಬರೋಣವಂತೆ" ಎಂದು ಹೇಳಿ ಶೀಘ್ರಗತಿಯಿಂದ ಅಮೃತರಾಯನು ಒಮ್ಮೆ ಮನೆಯಿಂದ ಹೊರಹೊರಟನು.

ಅಮೃತರಾಯನು ಕಮಲಾಸುಂದರಿಯ ಮನೆಗೆ ತಲುಪಿದಾಗ ರಾಮರಾಯನು ಮನೆಯಲ್ಲಿರಲಿಲ್ಲ. ಅವನು ಮಂದಿರದ ಕಾಮಗಾರಿಯನ್ನು ನೋಡ ಹೋಗಿದ್ದನು. ಅಮೃತರಾಯನೂ ಅಲ್ಲಿಗೇ ಹೋಗಿ ಅವನನ್ನು ಕಂಡನು. ಇವನನ್ನು ನೋಡಿ ರಾಮರಾಯನಿಗೆ ಪರಮಾಹ್ಲಾದವಾಯಿತು. ಅಮೃತರಾಯನೂ ಇಂಜಿನಿಯರನು! ಮೇಲಾಗಿ ಇವನು ರಾಮರಾಯನ ಸಹಪಾಠಿಯು. ಆದ್ದರಿಂದ ರಾಮರಾಯನು ತನ್ನ ಮಿತ್ರನಿಗೆ ತಾನು ತೆಗೆದ ಆ ಮಂದಿರದ ಪ್ಲ್ಯಾನ (ನಕಾಶ) ವನ್ನು ತೋರಿಸಿ, ಈವರೆಗಾಗಿದ್ದ ಕಾಮಗಾರಿಯನ್ನು ತೋರಿಸಿದನು. ಅದನ್ನೆಲ್ಲ ನೋಡಿ ಅಮೃತರಾಯನು ಬಹು ಸಂತೋಷಪಟ್ಟು ನುಡಿದನೇನಂದರೆ,—"ಮಿತ್ರಾ, ಅತ್ಯುತ್ತಮ ಪ್ಲ್ಯಾನವಾಗಿರುತ್ತದೆ. ಇದಕ್ಕಿಂತಲೂ ಬೇರೆ ಸುಂದರ ಪ್ಲ್ಯಾನ ವಾಗುವದು ಶಕ್ಯವೇ ಇಲ್ಲ. ಮಿತ್ರಾ, ನೀನು ಇಷ್ಟು ದಿನ ಕಲ್ಲು ಮಣ್ಣುಗಳನ್ನಗಿಸುವ ಉದ್ಯೋಗದಲ್ಲಿ ತೊಡಗಿದ್ದರೂ ಇಂಜನೀಯರಿಂಗ ಕಲೆಯೊಳಗಿನ ನಕಾಶ ತೆಗೆಯುವ ಈ ಬಹು ಸೂಕ್ಷ್ಮವಿದ್ಯೆಯನ್ನು ಸ್ವಲ್ಪವೂ ಮರೆತಿರುವದಿಲ್ಲವಲ್ಲ?" ಪ್ಲ್ಯಾನ ತೆಗೆಯುವ ಕಲೆಯಲ್ಲಿ ರಾಮರಾಯನು ಇಂಜನಿಯರಿಂಗ ಕಾಲೇಜದ ಶ್ರೇಷ್ಠತರಗತಿಯಲ್ಲಿ ಪಾಸಾಗಿದ್ದನು.

ನಂತರ ರಾಮರಾಯನು ಅಮೃತರಾಯನೊಡನೆ ಕಮಲಾಸುಂದರಿಯ ಮನೆಗೆ ಬಂದನು; ಹಾಗು "ವಿಮಲಾದೇವಿಯ ಆ ನೆಂಟರು ಬಂದಿರುತ್ತಾರೆ"ಂದು ಒಳಗೆ ಹೇಳಿ ಕಳಿಸಿದನು. ತುಸ ಹೊತ್ತಿನಲ್ಲಿ ಒಬ್ಬ ದಾಸಿಯು ಬಂದು—"ವಿಮಲಾದೇವಿಯವರು ಆ ನೆಂಟರ ಹೆಸರನ್ನು ಕೇಳಿಕೊಂಡು ಬರಲಿಕ್ಕೆ ಹೇಳಿದ್ದಾರೆ" ಎಂದು ಬಿನ್ನವಿಸಲು, "ನಾಮಮಾತ್ರದಿಂದ ಗೊತ್ತಾಗುವ ಸಂಭವವಿಲ್ಲ. ಬೆಳಗಾ

ವಿಯಲ್ಲಿದ್ದ ಗಣಪತರಾಯರ ಮಗನು ನಿಮ್ಮ ಭೇಟಿಗೆ ಬಂದಿರುತ್ತಾನೆಂಬದನ್ನು ವಿಮಲಾದೇವಿಯವರಿಗೆ ತಿಳಿಸು'' ಎಂದು ಅಮೃತರಾಯನು ರಾಮರಾಯನು ಆ ದಾಸಿಗೆ ಉತ್ತರ ಹೇಳುವ ಮೊದಲೇ ಹೇಳಿಬಿಟ್ಟನು.

ದಾಸಿಯ ಬಾಯಿಂದ ಆ ಸಂಗತಿಯನ್ನು ಕೇಳಿ, ನನ್ನ ಭೇಟಿಗೆ ಬಂದವನು ನನ್ನ ಮೈದುನನಾಗಿರಬಹುದೆಂದು ವಿಮಲೆಯು ಭಾವಿಸಿದಳು. ವಿಮಲೆಯು ಅವನಿಗೆ ಭೇಟಿಯಾಗಬೇಕೋ ಇಲ್ಲವೋ ಎಂದು ಯೋಚಿಸುತ್ತಿರುವಷ್ಟರಲ್ಲಿ ಕಮಲೆಯು ಅವನನ್ನು ಆ ಪ್ರಕೋಷ್ಠಕ್ಕೆ ಕರೆತರುವುದಕ್ಕಾಗಿ ಒಬ್ಬ ದಾಸಿಯನ್ನು ಕಳುಹಿದಳು; ಹಾಗು ವಿಮಲೆಯನ್ನೊಬ್ಬಳನ್ನೇ ಅಲ್ಲಿ ಬಿಟ್ಟು ತಾನು ಬೇರೆಕಡೆಗೆ ನಡೆದಳು. ಸ್ವಲ್ಪಾವಕಾಶದಲ್ಲಿ ದಾಸಿಯು ಅಮೃತರಾಯನನ್ನು ವಿಮಲೆಯ ಕೊಠಡಿಗೆ ಕರೆತಂದು ಬಿಟ್ಟಳು; ವಿಮಲೆಯು ಆ ವ್ಯಕ್ತಿಯನ್ನು ನೋಡಿದಳು ಮಾತ್ರ. ಯಾವ ಪುರುಷನು ಇಂದು ಬೆಳಿಗ್ಗೆ ಗಂಗಾತಟಾಕದಲ್ಲಿ ತನ್ನನ್ನು ಟಕ ಮಕ ಒಂದೇಸವನೆ ನೋಡುತ್ತಿದ್ದನೋ, ಅವನೇ ಇವನಾಗಿದ್ದನು. ಆಗಲವಳು ತನ್ನ ಸೆರಗನ್ನು ಮತ್ತಿಷ್ಟು ಜಗ್ಗಿ ಮುಖವನ್ನು ಮುಚ್ಚಿಕೊಂಡು, ಇವರಿಗೆ ಕೂಡ್ರಲಿಕ್ಕೆ ಆಸನ ಕೊಡೆಂದು ದಾಸಿಗೆ ಸೂಚಿಸಿದಳು. ದಾಸಿಯು ಒಂದು ಆಸನವನ್ನು ಮುಂದೆಮಾಡಿ, ಅಲ್ಲಿಂದ ಹೊರಟು ಹೋದಳು. ಅಮೃತರಾಯನು ಆಸನಾಧಿಷ್ಠಿತನಾದನು; ಆದರೆ ವಿಮಲೆಯ ಕೂಡ ಏನೆಂದು ಮಾತಾಡಲು ಪ್ರಾರಂಭ ಮಾಡಬೇಕೆಂಬದು ತಿಳಿಯದ್ದರಿಂದ ಅವನು ಎಷ್ಟೋ ಕ್ಷಣಗಳವರೆಗೆ ಅವಿಚಲನಾಗಿ ಕುಳಿತನು. ಹೀಗೆ ಸುಮ್ಮನೆ ಕೂಡುವದೂ ಯುಕ್ತ ಸಮ್ಮತವಾಗಲಾರದೆಂದು ತಿಳಿದು, ಕಡೆಗೆ— ''ತಮ್ಮ ಪ್ರಥಮ ವಿವಾಹದ ನೆನಪು ತಮಗಿರಬಹುದಲ್ಲವೆ-......?'' ಎಂದು ವಿಮಲೆಯನ್ನು ಕುರಿತು ನುಡಿದು, ಮುಂದೆ ಏನನ್ನೋ ಹೇಳಬೇಕೆಂದಿದ್ದ ಅವನು ತೆಪ್ಪಗಾದನು.

''ಈ ಅಪರಿಚಿತನು ಹುಚ್ಚನು ಬೇರೆ ಇರಲಿಕ್ಕಿಲ್ಲವೆ? ನನ್ನ ಮೊದಲನೇ ಲಗ್ನವೆಂದರೇನು? ವೈದಿಕ ಧರ್ಮಾನುಯಾಯಿಗಳಾದ ಸ್ತ್ರೀಯರಿಗೆ ಎರಡನೇ-ಮೂರನೇ ಸಾರೆ ವಿವಾಹಗಳೆಲ್ಲಿಯಾದರೂ ಆಗುವವುಂಟೆ? ನನ್ನ ಮೈದುನನಾಗಿರಬಹುದೆಂದು ನಾನು ಇವನನ್ನು ಇಲ್ಲಿಗೆ ಬರಗೊಟ್ಟೆನು; ಆದರೆ ಇವನಾರೋ ಕೇವಲ ಮೂರ್ಖನಾಗಿ ಕಾಣುತ್ತಾನೆ. ಬೆಳಿಗ್ಗೆ ಗಂಗಾತಟಾಕದಲ್ಲಿ ಇವನು ನನ್ನ ಕಡೆಗೆ ಯಾವ ಬಗೆಯಾಗಿ ನೋಡುತ್ತಿದ್ದನೋ, ಈಗಲೂ ಅದೇ ತೆರನಾಗಿ ನೋಡುತಲಿದ್ದಾನೆ. ಆದುದರಿಂದ ಇವನು ಯೋಗ್ಯ ಮನುಷ್ಯನಾಗಿ ಕಾಣುವದಿಲ್ಲ. ಇವನು ಮೈದು

ನನೇ ಆಗಿರಲೊಲ್ಲನೇಕೆ,-ಭಾವನೇ ಆಗಿರಲೊಲ್ಲನೇಕೆ; ಇವನೊಡನೆ ನಾನು ಮಾತಾಡುವದು ತಕ್ಕದ್ದಾಗುವದಿಲ್ಲ'' ಎಂದು ವಿಮಲೆಯು ತನ್ನಂತರಂಗದಲ್ಲಿ ಯೋಚಿಸಿ, ಇನ್ನು ಅಲ್ಲಿಂದ ಹೊರಡತಕ್ಕವಳು; ಅಷ್ಟರಲ್ಲಿ ಅಮೃತರಾಯನು ಪ್ರಕೃತಿಸ್ಥನಾಗಿ—''ತೀರ ಬಾಲ್ಯದಲ್ಲಿಯೇ ತಮ್ಮ ಲಗ್ನವಾಗಿತ್ತು; ತಾವು ಎಂದೂ ನಮ್ಮ ಮನೆಯ ಹೊಸ್ತಿಲವನ್ನು ಕೂಡ ಮೆಟ್ಟಿರುವದಿಲ್ಲ. ನರಸಿಂಗರಾಯರೊಡನೆ ನಮ್ಮ ತಂದೆಯು ವಿವಾದವ ಹೂಡಿ, ನಿಮ್ಮ ಸಂಬಂಧವನ್ನು ಪರಿತ್ಯಜಿಸಿದನು. ನಮ್ಮ ತಂದೆಯು ನಿಧನದನಂತರ ಅಮೃತರಾಯನು ನಿಮ್ಮನ್ನು ಬಹುಮಟ್ಟಿಗೆ ಶೋಧಿಸಿದನು; ಈ ವರೆಗೂ ಅವನಿಗೆ ನಿಮ್ಮ ಪತ್ತೆಯಾಗಿರುವದಿಲ್ಲ. ಆದರೆ ಇಂದು ಅಕಸ್ಮಾತ್ತಾದ ರಾಮರಾಯರ ಭೇಟಿಯಿಂದ ನಿಮ್ಮ ವಾಸ್ತವ್ಯವು ಗೊತ್ತಾದ್ದರಿಂದ ನಾನು ನಿಮ್ಮ ಭೇಟಿಗೆ ಬಂದಿರುತ್ತೇನೆ'' ಎಂದನು.

ತನ್ನ ಪತಿಯ ಹೆಸರನ್ನು ಕೇಳಿ ವಿಮಲೆಯ ಹೃದಯವು ಸ್ಫುರಣವಾಗತೊಡಗಿತು. ಅವಳು ಅವನನ್ನು ತನ್ನ ಮೈದುನನೆಂದೇ ತಿಳಿದು—''ನಿಮ್ಮ ಅಣ್ಣಂದಿರು ಕ್ಷೇಮವಾಗಿದ್ದಾರಷ್ಟೇ?'' ಎಂದು ಪ್ರಶ್ನೆ ಮಾಡಲು,

''ಅಣ್ಣನೇ?'' ಹೀಗೆ ವಿಶೇಷಪ್ರಕಾರದ ದನಿಯಿಂದ ಅಮೃತರಾಯನು ನುಡಿದು, ಮನಸ್ಸಿನಲ್ಲಿ ನಗುತ್ತ—''ಸುಕ್ಷೇಮದಿಂದಿರುತ್ತಾರೆ; ಆದರೆ ನಿಮ್ಮ ಪತ್ತೆ ಹತ್ತದ್ದರಿಂದ ಅವರೊಳ್ಳೇ ಚಿಂತಾಕ್ರಾಂತರಾಗಿರುತ್ತಾರೆ.''

''ಅವರ ಕ್ಷೇಮವಾರ್ತೆಯನ್ನು ಕೇಳಿ ಸಂತೋಷವಾಯಿತು. ಈಗೆಷ್ಟೋ ವರ್ಷಗಳ ತರುವಾಯ ಅವರಲ್ಲಿ ನನ್ನ ವಿಷಯದ ಚಿಂತೆಯುತ್ಪನ್ನವಾಯಿತೆ? ನಿಮ್ಮ ಅಣ್ಣಂದಿರು ಈಗ ಎಲ್ಲಿ ಇರುತ್ತಾರೆ?''

''ಈ ಭೂಕೈಲಾಸದಲ್ಲಿಯೇ ಇರುತ್ತಾರೆ''

''ಈ ಕಾಶೀಪಟ್ಟಣದಲ್ಲಿಯೇ ಇದ್ದಾರೆಯೋ?''

''ಅಹುದು''

''ಇದೇ ಊರಲ್ಲಿದ್ದು, ನನ್ನ ವಾಸ್ತವ್ಯವು ಗೊತ್ತಾಗಿದ್ದು, ಭೇಟಿಗಾಗಿ ತಾವು ಬರದೆ ತಮ್ಮನನ್ನು ಕಳಿಸಿರುವದನ್ನು ನೋಡಿದರೆ ಅವರ ಮನಸ್ಸಿನಲ್ಲಿ ನನ್ನನ್ನು ಭೇಟಿಯಾಗುವದೂ, ತಮ್ಮ ಮನೆಗೆ ಕರೆದೊಯ್ಯುವದೂ ಇರುವದಿಲ್ಲೆಂತಲೇ ತೋರುತ್ತದೆ. ಹಾಗೇ ಆಗಲೊಲ್ಲದೇಕೆ, ಅವರು ಸುಖದಿಂದಿದ್ದಾರೆಂಬ ಸುವಾರ್ತೆಯೇ ನನಗೆ ಸಾಕು.'' ಎಂದು ವಿಮಲೆಯು ಮನಸ್ಸಿನಲ್ಲಿ ಯೋಚಿಸಿ, ಒಂದು ದೀರ್ಘ ನಿಶ್ವಾಸವ ಬಿಟ್ಟು—''ನಿಮ್ಮ ಅಣ್ಣಂದಿರು ನನ್ನನ್ನು ಶೋಧಿಸುವದಕ್ಕಾಗಿ ನಿಮ್ಮ

ನ್ನು ಕಳಿಸಿರುವರೋ?'' ಎಂದು ಅಮೃತರಾಯನನ್ನು ಕೇಳಿದಳು.

ಅಮೃತರಾಯನಿಗೆ ಅಂತರಂಗದಲ್ಲಿ ಎಷ್ಟೋ ಕಷ್ಟವಾಗುತ್ತಿದ್ದರೂ ಅವನು ಒತ್ತಾಯದಿಂದ ಧೈರ್ಯವ ತಂದುಕೊಂಡು, ಈ ವರೆಗೆ ಕಾಲಯಾಪನೆ ಮಾಡಿದ್ದನು. ಆದರೆ ಇನ್ನು ಅವನಿಂದ ಆ ಧೈರ್ಯವನ್ನು ಕಾಪಾಡಿಕೊಳ್ಳುವದಾಗಲಿಲ್ಲ. ಆಗ ಅವನು ವಿಮಲೆಯ ಪ್ರಶ್ನೆಗೆ ನಡುಗುವದನಿಯಿಂದ ಉತ್ತರ ಕೊಟ್ಟನೇನಂದರೆ—

''ಇಲ್ಲ, ವಿಮಲೇ, ನಾನೇ ಸ್ವತಃ ಬಂದಿರುವೆನು. ವಿಮಲೆ, ಪ್ರಾಣಪ್ರಿಯೇ, ನಾನು ಈಗ ಇಪ್ಪತ್ತು ವರ್ಷಗಳಲ್ಲಿ ನಿನ್ನನ್ನೊಂದು ದಿನವೂ ಮರೆತಿರುವದಿಲ್ಲ. ಶೈಶವಕಾಲದಿಂದ ಯಾವ ನಿನ್ನ ಮೂರ್ತಿಯು ನನ್ನ ಹೃದಯವನ್ನು ಆಕ್ರಮಿಸಿರುವದೋ, ಅಂಥ ಅದನ್ನು ಇಂದು ಗಂಗಾತೀರದಲ್ಲಿ ನೋಡಿದೊಡನೆಯೇ ಗುರ್ತಿಸಿದೆನು.''

ಅಮೃತರಾಯನ ಮಾತನ್ನು ಕೇಳಿ ವಿಮಲೆಯು ಕೇವಲ ಹತಬುದ್ಧಳಾದಳು. ಆಗ ಅವಳ ಕಣ್ಣಿಗೆ ವಿಶ್ವವಲಯವೇ ಬೊಗರೆಯ ಹಾಗೆ ಭ್ರಮಣ ಮಾಡಹತ್ತಿದಂತೆ ಭಾಸವಾಯಿತು. ಆಗ ವಿಹ್ವಲ ದನಿಯಿಂದ ಅವಳು—''ನೀವು ಯಾರು? ಯಾರನ್ನು ಏನೆಂದು ಸಂಬೋಧಿಸುತ್ತಿರುವಿರಿ?'' ಎಂದು ಪ್ರಶ್ನೆ ಮಾಡಲು,

''ನಾನೇ ನಿನ್ನ ಹತಭಾಗ್ಯಪತಿಯಾದ ಅಮೃತರಾಯನು'' ಎಂಬ ಅಮೃತರಾಯನ ಉತ್ತರವನ್ನು ಕೇಳಿ ವಿಮಲೆಯು ಬಿರುಗಾಳಿಗೆ ಸಿಕ್ಕ ಬಾಳೆಯಮರದಂತೆ ಥರಗುಟ್ಟಿ ನಡುಗಲಾರಂಭಿಸಿದಳು. ಅವಳ ಸಂಜ್ಞೆಯು ಲೋಪವಾಯಿತು. ಅವಳ ಶರೀರವು ಸಮೀಪದ ಶಿಲಾಮಯ ಗೋಡೆಯ ಮೇಲೆ ಬೀಳಲುಪಕ್ರಮಿಸಿತು. ಅಷ್ಟರಲ್ಲಿ ಅಮೃತರಾಯನು ಶೀಘ್ರವಾಗಿ ಮುಂದುವರಿದು ಅವಳ ದೇಹವನ್ನು ಎರಡೂ ಕೈಯಿಂದ ಅವಚಿ ಹಿಡಿದು ತನ್ನ ತೊಡೆಯ ಮೇಲೆ ಕೂರಿಸಿಕೊಂಡು ನಡುಗುವ ದನಿಯಿಂದ—'ವಿಮಲಾ-ವಿಮಲಾ' ಎಂದು ಆಗಾಗ್ಗೆ ಕರೆದರೂ ಉತ್ತರವು ದೊರೆಯದ್ದರಿಂದ ಅವನಿಗೆ ಅತ್ಯಂತ ಅಂಜಿಕೆಯಾಯಿತು. ''ಎಷ್ಟೋ ದಿನಗಳ ತರುವಾಯ ಇಂದು ಇವಳು ನನಗೆ ಅಕಸ್ಮಾತ್ತಾಗಿ ಲಭಿಸಿರಲು, ಈಗಲೇ ಇವಳು ಮತ್ತೆ ಹೀಗೆ ಕಣ್ಣುತಪ್ಪಿಸಿ ನಡೆದಳಲ್ಲ!'' ಎಂಬ ವಿಚಾರದಿಂದ ಅವನ ಮನಸ್ಸು ತಲ್ಲಣಿಸಿತು. ಅಶ್ರುಗಳು ಧಾರೆಗಟ್ಟಿ ಸುರಿಯಲಾರಂಭಿಸಿದವು. ಕಡೆಗೆ ಅವನು ಅವಳ ಮೂಗಿಗೆ ಕೈ ಹಚ್ಚಿ ನೋಡಿದನು. ಅದು ಬೆಚ್ಚಗಿದ್ದು ಮಂದವಾಗಿ ಶ್ವಾಸವಾಡುತ್ತಿತ್ತು. ಆದರೂ ಅವನಿಗೆ ಭರವಸೆಯಾಗಲಿಲ್ಲ. ಎದೆಗೆ ಕೈ ಹಚ್ಚಿ ನೋಡಿದನು. ಅದೂ ಬೆಚ್ಚಗಿದ್ದು, ಮಂದಮಂದವಾಗಿ ಹಾರುತ್ತಿತ್ತು.

ವಿಮಲೆಯು ಇನ್ನೂ ಜೀವಂತಳಾಗಿರುವಳೆಂದು ತೋಚಿ, ಆಗ ಅವನಿಗೆ ತುಸ ಧೈರ್ಯವಾಯಿತು. ನಂತರ ಅವನು ವಿಮಲೆಯ ಮುಖಕಮಲವನ್ನು ತನ್ನ ಮುಖಕ್ಕೆ ಆನಿಸಿ, ಪ್ರೀತಿಯಿಂದ ಮತ್ತೆ ಮತ್ತೆ ಚುಂಬಿಸಲಾರಂಭಿಸಿದನು. ಆ ಚುಂಬನಸಂಸ್ಕಾರದಿಂದ ದೇಹಭಾನವಿವರ್ಜಿತಳಾದ ವಿಮಲೆಯಲ್ಲಿ ವಿದ್ಯುತ್ಸಂಚಾರವಾದಂತಾಗಿ ಅವಳ ಮೂರ್ಛೆಯು ತಿಳಿಯಿತು. ತಾನು ಅಮೃತರಾಯನತೊಡೆಯ ಮೇಲೆ ಕುಳಿತಿರುವನೆಂದು ಆಗ ಅವಳಿಗೆ ಗೊತ್ತಾಗಲು, ಆದರಿಂದ ಅವಳ ಮನಸ್ಸಿನಲ್ಲಿ ಅತ್ಯಂತ ಸಂತೋಷವುಂಟಾಗಿದ್ದರೂ, ಅವಳಿಗೆ ಬಹು ನಾಚಿಕೆ-ಸಂಕೋಚಗಳೆನಿಸಿದವು. ಕೂಡಲೆ ಅವಳು ಅಲ್ಲಿಂದ ಏಳಹೋಗಲು, ಅಮೃತರಾಯನು ಗಟ್ಟಿಯಾಗಿ ಹಿಡಿದು ಕೂರಿಸಿಕೊಂಡು, ಮತ್ತೊಮ್ಮೆ ಅವಳನ್ನು ಚುಂಬಿಸಿ—'ವಿಮಲಾದೇವೀ, ನಾನು ತಪ್ಪಿತಸ್ಥನು-ಮಹದಪರಾಧಿಯು; ನನ್ನನ್ನು ಕ್ಷಮಿಸು; ಈಗ ಇಪ್ಪತ್ತು ವರ್ಷಗಳಲ್ಲಿ ಒಂದು ದಿನವೂ ನಾನು ನಿನ್ನನ್ನು ಮರೆತಿರುವದಿಲ್ಲ. ಆದರೆ ತಂದೆಯಿರುವವರೆಗೆ ನಾನು ನಿನ್ನ ಸುದ್ದಿ ಕೂಡ ಎತ್ತುವಂತಿರಲಿಲ್ಲ. ಆ ಬಗ್ಗೆ ಅವನು ನನ್ನನ್ನು ನಿರ್ಬಂಧಿಸಿದ್ದನು. ತಂದೆಯು ಮರಣಾದನಂತರ ಈ ಮೂರು ವರ್ಷಗಳಲ್ಲಿ ನಿನ್ನನ್ನು ನಾನು ಬಹು ಬಗೆಯಾಗಿ ಶೋಧಿಸಿದೆನು. ಆದರೆ ನನ್ನ ದುರ್ದೈವದಿಂದ ನನಗೆ ನಿನ್ನ ಪತ್ತೆಯೇ ಹತ್ತಲಿಲ್ಲ. ಇಂದು ಬೆಳಿಗ್ಗೆ ಗಂಗಾಸ್ನಾನಕ್ಕೆ ಹೋಗಿರಲು, ಆ ಗಂಗಾ-ವಿಶ್ವೇಶ್ವರರ ಅನುಗ್ರಹದಿಂದ ನಾನು ನಿನ್ನನ್ನು ಕಂಡೆನು; ಮತ್ತು ಕೂಡಲೆ ನನಗೆ ನಿನ್ನ ಗುರುತಹತ್ತಿತು. ನಾನು ಅಲ್ಲಿ ನಿನ್ನ ಬಗ್ಗೆ ವಿಚಾರಿಸುತ್ತಿರಲು, ನೀನು ಕಮಲಾಸುಂದರಿಯ ಭಗಿನಿಯೆಂದು ತಿಳಿಯಿತು. ಆದರೆ ಆ ಸಂಗತಿಯನ್ನು ನನ್ನ ಮನಸ್ಸು ನಂಬಲಾರದಾಯಿತು. "ಇವಳೇ ನಿನ್ನ ವಿಮಲೆ" ಎಂದು ಅದು ನನ್ನನ್ನು ಪುನಃ ಪುನಃ ಸ್ಫೂರ್ತಿಗೊಳಿಸಲಾರಂಭಿಸಿತು. ನಾನೂ ಆ ಸಂಗತಿಯನ್ನು ತಿಳಿಯುವದಕ್ಕಾಗಿ ಹಾತೊರೆಯುತ್ತಿರಲು, ನಮ್ಮಿಬ್ಬರ ದೈವಬಲದಿಂದ ನಮ್ಮ ರಾಮರಾಯನ ಭೇಟಿಯು ನನಗಾಗಿ ನೀನು ನನ್ನ ವಿಮಲೆಯೇ ಎಂಬದನ್ನು ತಿಳಿದುಕೊಂಡು ಇಲ್ಲಿಗೆ ನಿನ್ನ ಭೇಟಿಗಾಗಿ ಬಂದೆನು.''

ವಿಮಲೆಯು ತನ್ನ ಚಿರವಾಂಛಿತ ಸ್ಥಾನದಲ್ಲಿ-ಪತಿಯ ತೊಡೆಯ ಮೇಲೆ-ಕುಳಿತು, ಒಮ್ಮನಸ್ಸಿನಿಂದ ಪತಿಯ ಸಂಭಾಷಣವನ್ನು ಆಲಿಸುತ್ತಿದ್ದಳು. ಅವನ ಮಾತು ಮುಗಿಯಲು, ಅವಳು ತನ್ನ ಮೃಣಾಲನಿಂದಿತ ಕೋಮಲಬಾಹುಗಳೆಂಬ ವಲ್ಲಿಗಳಿಂದ ಪತಿಯನ್ನು ಗಟ್ಟಿಯಾಗಿ ಬಿಗಿದು ಹಿಡಿದು,— "ಇದು ಸ್ವಪ್ನವಲ್ಲವಷ್ಟೇ? ನೀವು ಸತ್ಯವಾಗಿಯೇ ನನ್ನ ಬಳಿಗೆ ಬಂದಿರುವಿರೋ? ಇಷ್ಟು ದಿನಗಳ

ತರುವಾಯ ನಿಮಗೆ ಈ ಅಭಾಗಿನಿಯ ನೆನಪಾದದ್ದು ನಿಶ್ಚಯವೋ? ಇಲ್ಲ, ಇದು ಸತ್ಯವಲ್ಲ; ಇದೊಂದು ದೀರ್ಘಸ್ವಪ್ನವೇ ಇರುತ್ತದೆ. ಇದು ಸ್ವಪ್ನವೇ ಆಗಿದ್ದರೆ, ಈ ಸ್ವಪ್ನವು ಕೊನೆಗಂಡು ಸ್ಮೃತಿಯುಂಟಾಗುವಷ್ಟರಲ್ಲಿಯೇ ನನಗೆ ಮರಣವುಂಟಾಗಲಿ! ನಾನು ಈ ವರೆಗೆ ನಿಮ್ಮ ವಿರಹದಿಂದ ಬಳಲಿರುವೆನು. ಈ ಸ್ವಪ್ನದಲ್ಲಿಯ ಮಿಲನವು-ಇಂದಿನ ವರೆಗೆ ನನಗಾದ ಅಪರಿಮಿತ ದುಃಖದ ಮಾನದಿಂದ-ಅತ್ಯಂತ ಶ್ರೇಷ್ಠಸುಖವಾಗಿರುವದು. ಈ ಸ್ವಪ್ನವು ಭಂಗವಾಗಿ ನಾನು ಜೀವಂತಳಾಗಿ ಉಳಿದರೆ, ಆ ಅಸಹ್ಯ ದುಃಖವನ್ನು ನಾನು ಸಹಿಸಲಾರೆನು. ಆದ್ದರಿಂದ ದಯವಿಟ್ಟು, ಬೇಗನೆ ಹೇಳಿರಿ, ಇದು ಸ್ವಪ್ನವೋ, ಸತ್ಯವೋ ಎಂಬುದನ್ನು?''

''ಸತ್ಯವು, ವಿಮಲಾ, ಇದು ನಿಶ್ಚಯವಾಗಿ ಸತ್ಯವು. ಖಂಡಿತವಾಗಿ ಸ್ವಪ್ನವಲ್ಲ'' ಎಂಬ ಅಮೃತರಾಯನ ಅಮೃತಮಯವಾದ ಉತ್ತರವನ್ನು ಕೇಳಿ, ಆವಳು ದೀರ್ಘನಿಶ್ವಾಸವನ್ನು ಬಿಟ್ಟು, ಇಷ್ಟು ದೀರ್ಘಕಾಲದ ತರುವಾಯ ಲಭಿಸಿದ ತನ್ನ ಪತಿಯು ತನ್ನಿಂದ ಅಂತರಿಸಬಾರದೆಂದು, ತನ್ನಲ್ಲಿ ಶಕ್ತಿಯಿದ್ದಷ್ಟು ಆವೇಶದಿಂದ ಅವನನ್ನು ಬಿಗಿದಪ್ಪಿಕೊಂಡು ಕುಳಿತಳು. ಈ ರೀತಿಯಾಗಿ ಅನೇಕ ಕ್ಷಣಗಳ ವರೆಗೆ ಆಲಿಂಗನಸುಖವನ್ನನುಭವಿಸಿದನಂತರವಿಮಲೆಯು ಪತಿಯನ್ನು ನೋಡುತ್ತ—

''ನೀವು ಈ ಭೂಕೈಲಾಸಕ್ಕೆ ಬಂದು ಎಷ್ಟು ದಿನಗಳಾದವು?''

''ಈಗ ಹದಿನೈದು ದಿನಗಳಿಂದ ನಾನು ಇಲ್ಲಿಯೇ ಇರುತ್ತೇನೆ''

''ಇಲ್ಲಿಗೆ ನೀವು ಒಬ್ಬರೇ ಬಂದಿರುವಿರೇನು?''

''ಇಲ್ಲ''

ಅಮೃತರಾಯನ ಈ ಕಡೆಯ ಉತ್ತರದಿಂದ ತನ್ನ ಸವತಿಯೂ ತನ್ನ ಪತಿಯೊಡನೆ ಈ ಕಾಶೀಧಾಮಕ್ಕೆ ಬಂದಿರುವಳೆಂದು ವಿಮಲೆಗೆ ತಿಳಿಯಿತು. ಆಗ ಅವಳಿಗೆ ತಿಳಿಯದ ಹಾಗೆ ಅವಳಿಂದ ಒಂದು ನಿಟ್ಟುಸಿರು ಹೊರಟಿತು. ಯಾವನೊಬ್ಬ ವೈಜ್ಞಾನಿಕನು ಆಗಿನ ಅವಳ ವಿವರ್ಣಿತ ಮುಖವನ್ನೂ, ಅವಳಿಂದ ಹೊರಟ ಆ ನಿಟ್ಟುಸಿರನ್ನೂ ನೋಡಿ ಪರೀಕ್ಷಿಸಿದ್ದರೆ, ಅವನಿಗೆ ವಿಮಲೆಯಲ್ಲಿ ಯಾವದೊಂದು ದುಶ್ಚಿಂತೆಯು ಆಕಸ್ಮಿಕವಾಗಿ ನೆಲೆಗೊಳಿಸಿದಂತೆ ಸ್ಪಷ್ಟವಾಗಿ ಕಂಡುಬರುತ್ತಿತ್ತಲ್ಲದೆ, ಆ ದುಶ್ಚಿಂತೆಯು ಬೇರೆ ಯಾವದೂ ಆಗಿರದೆ, ಲಲನಾಮಣಿಯರಲ್ಲಿ ಪರಂಪರಾಗತವಾಗಿ ನೆಲೆಸಿದ್ದ 'ಸವತಿ ಮತ್ಸರವೇ' ಎಂಬುದು ಸ್ಪಷ್ಟವಾಗಿ ಗೋಚರವಾಗುತ್ತಿತ್ತು.

ಆಗ ಅವಳು ಕ್ರಮವಾಗಿ ಗಂಡನ ತೊಡೆಯ ಮೇಲಿಂದ ಇಳಿಯಹತ್ತಿದಳು. ತನ್ನ ಸ್ವಾಮಿಯ ತೊಡೆಯನ್ನು ಆಕ್ರಮಿಸಲಿಕ್ಕೆ ತಾನೊಬ್ಬಳೇ ಅಧಿ

ಕಾರಿಣಿಯಾಗಿರದೆ ತನ್ನ ಸವತಿಯೂ ಒಬ್ಬಳಿರುವಳೆಂಬ ಸಂಗತಿಯು ಸ್ಮರಣದಿಂದ ಅವಳಿಗೆ ಹೇಗೆ ಹೇಗೋ ಅನಿಸಹತ್ತಿತು. ಆಗ ಅವಳು ನೀರವವಾಗಿ ಗಂಡನ ಮೋರೆಯ ಕಡೆಗೆ ನೋಡಹತ್ತಿದಳು. ಅಮೃತರಾಯನು ಅವಳ ಎರಡೂ ಕೈಗಳನ್ನು ತನ್ನ ಕೈಗಳಿಂದ ಒತ್ತಿ ಹಿಡಿದು, ಅವಳನ್ನು ತೊಡೆಯಿಂದ ಚಲಿಸಗೊಡದೆ—"ವಿಮಲಾ, ನಿನಗೊಬ್ಬ ಸವತಿಯಿರುವಳು."

"ಕೇಳಿರುವೆನು, ಮಾವನವರು ತಮಗೆ ಬೇರೆ ಲಗ್ನ ಮಾಡಿರುವರೆಂಬದನ್ನು"

" ಆ ವಿವಾಹದ ಕಾಲಕ್ಕೆ ನಾನು ತಂದೆಯ ಬಳಿಯಲ್ಲಿ ನನ್ನ ಮೊದಲಿನ ಲಗ್ನದ ಸುದ್ದಿಯನ್ನೆತ್ತಲು, ಅವನು ಅತ್ಯಂತ ರೇಗಿಗೆದ್ದು, "ನಾನು ಆ ಮೊದಲಿನ ಸಂಗತಿಯನ್ನು ಮರೆತು ಬಿಡಬೇಕೆಂದೂ, ತಾನು ಜೀವಂತನಿರುವವರೆಗೆ ನಾನು ಆ ಸುದ್ದಿಯನ್ನೇ ತೆಗೆಯಬಾರದೆಂದೂ, ನನ್ನಿಂದ ಪ್ರಮಾಣ ಮಾಡಿಸಿಕೊಂಡನು. ಆಗ ನಾನು ಸರಾಸರಿ ಹದಿನೈದು ವರ್ಷದವನಿದ್ದೆನು. ನಾನು ಆಗಲೆ ಪ್ರವೇಶಪರೀಕ್ಷೆಯಲ್ಲಿ ಪಾಸಾಗಿದ್ದೆನು. ವಿವಾಹ ಮಾಡಿಕೊಳ್ಳುವ ಇಚ್ಛೆಯು ಆಗ ನನ್ನದಿರಲಿಲ್ಲ; ತಂದೆಯು ಅಸಂತುಷ್ಟನಾಗುವನೆಂಬ ಭಯದಿಂದ ಮದುವೆಯಾದೆನು. ಆದರೆ ಯಾವ ದಿವಸ ಬೆಳಗಾವಿಯಿಂದ ನಾವು ಪುಣೆಗೆ ಹೊರಟು ಹೋದೆವೋ, ಆ ಬಾಲ್ಯಕಾಲದಿಂದ ಇಂದಿನವರೆಗೆ ನನ್ನ ಶೈಶವದ ಸಹಚಾರಿಣಿಯಾದ ನಿನ್ನನ್ನು ಒಂದು ದಿನವೂ ಮರೆತಿರುವದಿಲ್ಲ. ನಿನ್ನ ಆ ಬಾಲ್ಯಕಾಲದ ಪುಟ್ಟ ನಗೆಮೊಗವನ್ನು ಜ್ಞಾಪಿಸಿ-ಜ್ಞಾಪಿಸಿ ಆಗಾಗ್ಗೆ ನನ್ನ ಮನಸ್ಸು ಬಲು ಚಂಚಲವಾಗಿ ದಾರುಣವ್ಯಥೆಗೀಡಾಗುತ್ತಿತ್ತು. ತಂದೆಯ ನಿಧನದ ನಂತರ ನಾನು ಎಷ್ಟು ಹುಡುಕಿಸಿದರೂ ನೀನು ಸಿಗಲಿಲ್ಲ. ನೀನು ಈ ಲೋಕದಲ್ಲಿರುವದಿಲ್ಲಾದ್ದರಿಂದಲೇ ಇನ್ನು ನಿನ್ನ ಭೇಟಿಯಾಗುವ ಸಂಭವವಿಲ್ಲೆಂದು ಮನಸ್ಸಿನ ನಿರ್ಧಾರವನ್ನು ಮಾಡಿಕೊಳ್ಳಹತ್ತಿದ್ದೆನು. ಆದರೆ ದಯಾಘನ ಶ್ರೀ ವಿಶ್ವನಾಥನು ಕರುಣಿಸದಿದ್ದರೆ ಇಂದು ನಾನು ನಿನ್ನನ್ನು ಹೀಗೆ ಆಕಸ್ಮಿಕವಾಗಿ ಕಾಣುವ ಸಂಭವವೇ ಇರಲಿಲ್ಲ.

ಪತಿಯ ನುಡಿಯನ್ನು ಕೇಳಿ ವಿಮಲೆಯ ಅಂತಃಕರಣದಲ್ಲಿ ಸಮಾಧಾನವಾಯಿತು,- ಮನಸ್ಸಿಗೆ ಬಹು ಆನಂದವಾಯಿತು; ಆದರೆ ಪರಕ್ಷಣದಲ್ಲಿಯೇ ಸವತಿಮತ್ಸರವು ಅವಳಲ್ಲಿ ತಲೆದೋರಲು, ಅವಳ ಆ ಆನಂದವೆಲ್ಲ ಮಣ್ಣುಗೂಡಿಹೋಯಿತು. ಆಗಲವಳು ಪತಿಯನ್ನು ಕುರಿತು—"ಆದರೆ—ಆದರೆ. . ." ಎಂದು ನುಡಿದು ಸುಮ್ಮನಾಗಲು,

"ವಿಮಲಾ, ಆದರೆ-ಆದರೆ ಎಂದರೇನು?" ಎಂಬ ಅಮೃತರಾಯನ ಪ್ರಶ್ನೆಗೆ "ನೀವಂತೂ ನನ್ನವರು, ಆದರೆ..." ಎಂಬುವಿಷ್ಟೇ ಶಬ್ದಗಳು ವಿಮಲೆಯ ಬಾಯಿಂದ ಹೊರಟವೇ ವಿನಃ ಮತ್ತೆ ಏನನ್ನೂ ನುಡಿಯದೆ, ಅವಳು ಸುಮ್ಮನಾಗಿ ಬಿಟ್ಟಳು. ಅಮೃತರಾಯನಿಗೆ ಅವಳ ಸ್ತಬ್ಧತೆಯ ಕಾರಣವು ಗೊತ್ತಾದುದರಿಂದ ಅವನು—"ವಿಮಲೇ, ನಾನು ಜನ್ಮಗಳಿಂದ ನಿನ್ನವನೇ" ಎಂದು ನುಡಿದು ಮುಗುಳು ನಗೆ ನಗಲು, ವಿಮಲೆಯು ವಿಷಣ್ಣ ಸ್ವರದಿಂದಾಗಿ ನೋಡಿ, ಆಲಾಪಿಸಿ,—"ನನಗೀಗ ಇಪ್ಪತ್ತೈದು ವರ್ಷಗಳಾಗುತ್ತ ಬಂದಿವೆ. ಈ ಇಪ್ಪತ್ತು ವರ್ಷಗಳಲ್ಲಿ ನನಗೆ ನನ್ನ ಪತಿಯ ದರ್ಶನವು ಕೂಡ ಆಗಿರಲಿಲ್ಲ. ಅವನು ಈ ವರೆಗೆ ನನ್ನ ಸವತಿಯ ಬಳಿಯಲ್ಲಿಯೇ ಇರುತ್ತಿದ್ದುದರಿಂದ ಅವಳು ಅವನನ್ನು ಪ್ರೀತಿಸುತ್ತಾಳೆ; ಅವನಾದರೂ ಅವಳನ್ನು ಮನಃಪೂರ್ವಕವಾಗಿ ಪ್ರೀತಿಸುತ್ತಲಿದ್ದಾನೆ. ಆದ್ದರಿಂದ ನಾನು ನನ್ನ ಸವತಿಯ ಸುಖಕ್ಕೆ ಅಂತರಾಯವಾಗಲಾರೆನು. ನನಗೆ ವಿರಹ ದುಃಖವನ್ನು ಸಹಿಸಿಕೊಳ್ಳುವ ರೂಢಿಯಾಗಿದೆ. ಆದರೆ ಪಾಪ! ಆಕೆಗೆ ಅದು ದುಸ್ಸಹವಾದೀತು" ಎಂದು ಮಾತಾಡುವಷ್ಟರಲ್ಲಿ ವಿಮಲೆಯ ಕಂಠವು ಬಿಗಿದು ಬಂದು, ಸ್ತ್ರೀಯರ ಹೃದಯದ ತೀರ ಗಂಭೀರ ಭಾವವನ್ನು ವ್ಯಕ್ತಪಡಿಸಿತು. ಬಹು ಕಷ್ಟದಿಂದ ಅವಳು ಚಿತ್ತವನ್ನು ಸಮಾಧಾನಪಡಿಸಿಕೊಂಡು, ನುಡಿದಳು—"ನನ್ನ ಸಂಬಂಧದ ಸಂಗತಿಯನ್ನು ನೀವು ಇನ್ನೂ ಯಾರಿಗೂ ತಿಳಿಸಿರಲಾರಿರೆಂದು ನನ್ನ ಅನುಮಾನವಿದೆ. ಇದು ಸುಳ್ಳಲ್ಲವಷ್ಟೇ?" ಎಂದು ಕೇಳಲು ಅಮೃತರಾಯನು "ಇಲ್ಲವೆ"ಂದು ಉತ್ತರ ಕೊಟ್ಟಿದ್ದನ್ನು ಕೇಳಿ "ಹಾಗಾದರೆ ನನ್ನ ವಿಷಯದ ಸಂಗತಿಯನ್ನು ಇನ್ನು ಮುಂದಾದರೂ ಯಾರಿಗೂ ತಿಳಿಸುವ ಕಾರಣವಿಲ್ಲ. ಈ ಸಂಗತಿಯನ್ನು ನೀವು ಗುಪ್ತವಾಗಿಡುವದರಿಂದಲೇ ನನಗೆ ಸಮಾಧಾನವಾಗುತ್ತಿದೆ. ಇದರ ವಿನಃ ಬೇರೆ ಏನನ್ನೂ ನಾನು ಇಚ್ಛಿಸುವದಿಲ್ಲ" ಎಂದು ಹೇಳಿ, ವಿಮಲೆಯು ಸುಮ್ಮನಾದಳು. ಅವಳ ಕಣ್ಣಿಂದ ಧಾರೆಗಟ್ಟಿ ಅಶ್ರುಗಳು ಸುರಿಯಲಾರಂಭಿಸಿದವು.

ಆಗ ಅಮೃತರಾಯನ ಅಂತಃಕರಣದಲ್ಲಿ ಅಲ್ಲೋಲ-ಕಲ್ಲೋಲವಾಯಿತು. ಅವನು ಅವಳನ್ನುದ್ದೇಶಿಸಿ ನುಡಿದದ್ದೇನಂದರೆ—"ಪ್ರಿಯೆ, ವಿಮಲೇ, ಹಾಗೆ ಆಗಲಿಕ್ಕಿಲ್ಲ. ಈಗ ಇಪ್ಪತ್ತು ವರ್ಷಗಳ ತರುವಾಯ ನಾನು ನಿನ್ನನ್ನು ಪಡೆದಿರುವೆನು. ನನಗೆ ಇಡೀ ಜಗತ್ತೇ ಒಂದು ಪಾಲು ಆದರೆ, ನೀನು ಒಂದು ಪಾಲಾಗಿರುವೆ. ನಾನು ನನ್ನ ಇತರ ಎಲ್ಲ ಸಂಬಂಧಿಗಳನ್ನು ತ್ಯಜಿಸಿದರೂ ತ್ಯಜಿಸಿಬಿಟ್ಟೇನು; ಆದರೆ ನಿನ್ನನ್ನು ಮಾತ್ರ ಇನ್ನು ಒಂದು ಅರಕ್ಷಣ ಸಹ ಅಗಲಿರಲಾರೆನು, ಆದ್ದರಿಂದ ಪ್ರಿಯೆ,

ನಡೆ ಹೋಗೋಣ, ನಮ್ಮ ಮನೆಗೆ.'' ಅಮೃತರಾಯನ ಈ ವಚನಗಳಿಂದ ವಿಮಲೆಗೆ ಎಷ್ಟು ಆನಂದವಾಯಿತೆಂಬದನ್ನು ಯಾರು ಹೇಳಬೇಕು? ಅದನ್ನು ಪತಿಯ ಪರಮ ಗುಟ್ಟನ್ನು ಬಲ್ಲಂಥ ಪತಿವ್ರತೆಯರ ವಿನಃ ಬೇರೆ ಯಾರೂ ಎಂದೂ ಊಹಿಸಲಾರರು. ಆದರೆ ಆ ಪರಮಾನಂದವು ವಿಮಲೆಯ ಹೃದಯದಲ್ಲಿ ಸ್ಥಿರವಾಗಿ ಉಳಿಯಲಿಲ್ಲ. ಪರಕ್ಷಣದಲ್ಲಿಯೇ ಸವತಿಮತ್ಸರವೆಂಬ ಕಾಡುಬೇಗೆಯು ಅಲ್ಲಿ ಪುನಃ ಪ್ರಜ್ವಲಿಸಲು, ಅವಳು ಉದ್ರೇಕದಿಂದ—''ಈಗ ನಾನು ನಿಮ್ಮೊಡನೆ ಬರುವದಿಲ್ಲ. ನನ್ನ ಬರುವಿಕೆಯಿಂದ ಆ ನಿರ್ದೋಷಿಯಾದ ನನ್ನ ಸವತಿಗೆ ವಿನಃಕಾರಣ ದುಃಖ ಕೊಟ್ಟಂತಾಗುವದು. ಈವರೆಗೆ ಅವಳು ನನ್ನ ಸಂಬಂಧದ ಸುದ್ದಿಯನ್ನೇ ಅರಿಯದ್ದರಿಂದ ಅವಳು ನನ್ನಂತೆ ಸವತಿ ಮತ್ಸರವೆಂಬ ದಾವಾನಲಕ್ಕೆ ಆಹುತಿಯಾಗಿರುವದಿಲ್ಲ. ಆದ್ದರಿಂದಲೇ ನಾನು ನಿಮ್ಮೊಡನೆ ಅಲ್ಲಿಗೆ ಬರುವದಿಲ್ಲ'' ಎಂದು ಹೇಳಿ ಸುಮ್ಮನಾದಳು.

ನಂತರ ಅಮೃತರಾಯನು ಅವಳನ್ನು ಆ ಸವತಿ ಮತ್ಸರವೆಂಬ ಪಿಶಾಚಿಯಿಂದ ಬಿಡಿಸಿ ತನ್ನ ಮನೆಗೆ ಕರೆದೊಯ್ಯಬೇಕೆಂದು ಎಷ್ಟು ಪ್ರಯತ್ನಿಸಿದರೂ ಸಾಧ್ಯವಾಗದ್ದರಿಂದ, ಅಂದು ಅವನು ಒಬ್ಬನೇ ವಿಷಣ್ಣವದನದಿಂದ ಮನೆಗೆ ತಿರುಗಿದನು.

# ಹನ್ನೆರಡನೆಯ ಪರಿಚ್ಛೇದ.

## "ಸರ್ವಂ ಖಲ್ವಿದಂ ಬ್ರಹ್ಮ"

ದ್ವೀಪಾಂತರಕ್ಕೆ ಸಿದ್ಧರಾಗಿ ಹೊರಟಿದ್ದ ರಾಮಚಂದ್ರಾದಿ ಕೂಲಿಗಳು ಕುಳಿತ ಹಡಗವು ಅಂದು ರಾತ್ರಿ ೧೦ ಗಂಟೆಗೆ ಮುಂಬಯಿ ಬಂದರದಿಂದ ಇಕ್ಷುದ್ವೀಪಗಳಭಿಮುಖವಾಗಿ ಪ್ರಯಾಣ ಬೆಳೆಸಿತು. ಆ ಜಹಜವನ್ನು ಅನೇಕ ಪ್ರಾಂತಗಳ ಕೂಲಿಗಳು ಆರೋಹಿಸಿದ್ದರಷ್ಟೇ? ಪ್ರತಿಯೊಂದು ಪ್ರಾಂತದ ಕೂಲಿಗಳನ್ನು ಇಕ್ಷುದ್ವೀಪದವರೆಗೆ ಒಯ್ದು ಮುಟ್ಟಿಸಲಿಕ್ಕೆ ಆಯಾಪ್ರಾಂತದ ಒಬ್ಬ ಮುಖ್ಯಶಿಪಾಯಿಯೂ, ಅವನ ಕೈಕೆಳಗೆ ಹಲವು ಜನ ಸಹಾಯಕ ಶಿಪಾಯಿಗಳೂ ಬಂದಿದ್ದರು. ಪ್ರತಿಯೊಂದು ಪ್ರಾಂತದ ಕೂಲಿಗಳ ಊಟ-ಪಾಟಗಳಿಗೆ ಆ ಹಡಗದಲ್ಲಿ ವಿಭಾಗಿಸಲ್ಪಟ್ಟ ಸ್ಥಳಗಳಿದ್ದವು. ನಮ್ಮ ರಾಮಚಂದ್ರಾದಿಗಳನ್ನು ಇಕ್ಷುದ್ವೀಪಗಳವರೆಗೆ ತಲುಪಿಸಲು ಬಂದ ಶಿಪಾಯಿಗಳಲ್ಲಿ ಯಾವನು ಅಂದು ಮಧ್ಯಾಹ್ನ ಪುಣೆಯ ಸ್ಟೇಶನ್ನಿನ ದಾರಿಯಲ್ಲಿ ರಾಮಚಂದ್ರನ ಲತ್ತಾಪ್ರಹಾರಕ್ಕೀಡಾಗಿದ್ದನೋ, ಅವನೇ ಪ್ರಮುಖನಾಗಿದ್ದನು. ಅಂದಬಳಿಕ ರಾಮಚಂದ್ರಾದಿಗಳ ಸುಖಕ್ಕೆ ಪಾರವೇ ಇರಲಿಲ್ಲ!

ರಾಮಚಂದ್ರಾದಿಗಳು ಆರೋಹಿಸಿ ನಡೆದಿದ್ದ ಆ ಬೋಟಿನಲ್ಲಿ, ಬರೇ ಮನುಷ್ಯರಷ್ಟೇ ಕುಳಿತು ನಡೆದಿದ್ದರೆಂತಲ್ಲ; ಅವರೊಡನೆ ಆ ಇಕ್ಷುದ್ವೀಪದೊಳಗಿನ ಕಬ್ಬಿನ ವ್ಯವಸಾಯಕ್ಕೆ ಬೇಕಾಗುವ ಕುದುರೆಗಳೂ, ಹೇಸರಗತ್ತೆಗಳೂ, ಇತರ ಪಶುಗಳೂ ಸಾಗಿಸಲ್ಪಟ್ಟಿದ್ದವು. ಆದ್ದರಿಂದ ರಾಮಚಂದ್ರಾದಿಗಳಿಗೆ ಹಡಗಿನಲ್ಲಾದರೂ ಸ್ವಸ್ಥವಾಗಿ ಕುಳಿತುಕೊಳ್ಳಲಿಕ್ಕೆ ಅಸ್ಪದವಿರಲಿಲ್ಲ. ಅವರ ಸಂಗಡ ನಡೆದಿದ್ದ ಆ ಪಶುಗಳ ಸ್ವಚ್ಛತೆಯ ಹಾಗು ಸಂರಕ್ಷಣೆಯ ಭಾರವು ಅವರ ಮೇಲೆಯೇ ಬಿದ್ದಿತು. ರಾಮಚಂದ್ರಾದಿಗಳ ಜಹಜು ಇಕ್ಷುದ್ವೀಪಕ್ಕೆ ತಲುಪುವವರೆಗೆ ಅವರಿಗೆ ಅಡಿಗೆ ಮಾಡುವದಕ್ಕಾಗಿ ಯಾವನು ಪಾಜಗಾಂವ ಡಿಪೋದಲ್ಲಿ ಅವರಿಗೆ ಅಡಿಗೆ ಮಾಡಿ ಬಡಿಸಿದ್ದನೋ, ಆ ಮಾದರ ಬೀರನೇ ಬಂದಿದ್ದನು. ಆ ಬೀರನ ಸಹಾಯಕ್ಕಾಗಿ ಜೆಲುವಾದಿಯರ ಈರನೂ, ಕಟುಗರ ಕಾಳನೂ ನಿಯೋಜಿಸಲ್ಪಟ್ಟಿದ್ದರು.

ರಾಮಚಂದ್ರಾದಿಗಳ ಸಂಗಾತದಲ್ಲಿ ನಾರಾಯಣದೀಕ್ಷಿತನೆಂಬೊಬ್ಬ ಬ್ರಾಹ್ಮಣನು ಇಕ್ಷುದ್ವೀಪದ ಕೂಲೀದೀಕ್ಷೆಯನ್ನು ಪಡೆದು ನಡೆಸಿದ್ದನು. ನಾರಾಯಣದೀಕ್ಷಿತನು ಬಿ. ಎ. ದ ವರೆಗೆ ಕಲಿತಿದ್ದನು. ಆದರೆ ದುರ್ದೈವದಿಂದ ಅವನು ಆ ಪರೀಕ್ಷೆಯಲ್ಲಿ ಉತ್ತೀರ್ಣನಾಗಲಿಲ್ಲ. ಸಹಜವೆ ಕೆಲವೊಂದು ದುಶ್ಚಟಕ್ಕೊಳಗಾದ್ದರಿಂದ ಅವನ ತಂದೆ-ತಾಯಿಗಳು ಅವನನ್ನು ಬಿಗಿತಾಗಿ ಜರೆದರು. ಆಗ ಅವನು ಮನಸ್ಸಿನಲ್ಲಿ ಆಲೋಚಿಸಿದ್ದೇನೆಂದರೆ, ನಾನು ಯಾವುದೊಂದು ನೌಕರಿಯನ್ನು ಮಾಡಿ ವಿಪುಲವಾಗಿ ದುಡ್ಡುಗಳಿಸದ ಹೊರತು ಮನೆಯ ಹೊಸ್ತಿಲವನ್ನೇ ಮೆಟ್ಟಬಾರದು. ಅವನು ಈ ಬಗೆಯಾಗಿ ನಿಶ್ಚಯಿಸಿದ್ದು, ಪ್ರತಿ-ಪ್ರತಿಯೊಬ್ಬರ ಕಡೆಗೆ ಹೋಗಿ ನೌಕರಿಗಾಗಿ ಅಂಡಲೆಯುತ್ತಿದ್ದನು. [illegible] ಮುಂಬಯಿಯಲ್ಲಿದ್ದ ಇಕ್ಷುದ್ವೀಪಗಳಿಗೆ ಕೂಲಿಗಳನ್ನು ಸಾಗಿಸುವ ಧನಲುಬ್ಧನಾದ ಒಬ್ಬ ಧೂರ್ತ ಏಜಂಟನು ಗಂಟುಬಿದ್ದನು. ಅವನು ನಾರಾಯಣದೀಕ್ಷಿತನಿಗೆ—ನಿಮಗೆ ಎಷ್ಟೋ ರೂಪಾಯಿ ಪಗಾರದ ನೌಕರಿಯನ್ನು ಕೊಡಿಸುವೆನೆಂದು ಹೇಳಿ, ಅವನಿಂದ ಕರಾರಬದ್ಧ ಪತ್ರಕ್ಕೆ ಸಹಿಮಾಡಿಸಿಕೊಳ್ಳಲು ಅವನನ್ನು ಮ್ಯಾಜಿಸ್ಟ್ರೇಟರ ಬಳಿಗೆ ಕರೆದೊಯ್ದನು. ಆದರೆ ದೈವಸಂಯೋಗದಿಂದ ಯಾವ ಮ್ಯಾಜಿಸ್ಟ್ರೇಟನ ಬಳಿಗೆ ನಾರಾಯಣದೀಕ್ಷಿತನನ್ನು ಆ ಏಜಂಟನು ಕರೆದೊಯ್ದನೋ ಆ ಮ್ಯಾಜಿಸ್ಟ್ರೇಟನು ನಾರಾಯಣದೀಕ್ಷಿತನ ಆಪ್ತನೆಂಬುದು ಆ ಧೂರ್ತ ಏಜಂಟನಿಗೆ ತಿಳಿಯಲು, ಅವನು ನಾರಾಯಣದೀಕ್ಷಿತನನ್ನು ಅವನ ಎದುರಿಗೆ ನಿಲ್ಲಿಸದೆ ಉಳಿದ ಅನೇಕ ಜನ ಕೂಲಿಗಾರರಲ್ಲಿ ಒಬ್ಬನನ್ನು ನಾರಾಯಣದೀಕ್ಷಿತನೆಂದು ತೋರಿಸಿ ಆ ಕರಾರ ಪತ್ರಕ್ಕೆ ಮ್ಯಾಜಿಸ್ಟ್ರೇಟನ ಸಮ್ಮತಿ ಪಡೆಕೊಂಡು ನಾರಾಯಣನನ್ನು ಕೂಲೀಜನರ ಜತೆಯಲ್ಲಿ ರವಾನೆಮಾಡಿ ಹೊರಟು ಹೋದನು!

ನಾರಾಯಣದೀಕ್ಷಿತನು ಆ ಮೋಸಕ್ಕೆ ಒಳಗಾದವನು ಮಾತ್ರ. ತಾನು ಸರ್ವನಾಶದ ದಾರಿ ಹಿಡಿದಿರುವೆನೆಂಬುದು ಅವನಿಗೆ ಕೂಡಲೆ ಕಂಡು ಬಂದಿತು. ತನ್ನ ಜಾತಿಧರ್ಮವನ್ನು ರಕ್ಷಿಸಿಕೊಳ್ಳುವದಕ್ಕಾಗಿ ಅವನು ಮೂರು ದಿನಗಳವರೆಗೆ ನಿರಾಹಾರ ಮಾಡಿದನು. ಇವನ ಈ ಅನ್ನವರ್ಜ್ಯದ ಸುದ್ದಿಯು ಆ ಡಿಪೋದ ಮುಖ್ಯ ಏಜಂಟನಿಗೆ ತಲುಪಲು, ಅವನು ನಾರಾಯಣದೀಕ್ಷಿತನಿಗೆ ಬಲಪೂರ್ವಕವಾಗಿ ಅನ್ನಗ್ರಹಣ ಮಾಡಿಸಲು ಮೇಲೆ ವಿವರಿಸಿದ ಮಾದಿಗರ ಬೀರನೇ ಮೊದಲಾದವರನ್ನು ಯೋಜಿಸಿದನು. ಒಂದಕ್ಕೆ ಮುಸಲ್ಮಾನರ ರಾಜ್ಯದಲ್ಲಿ ಕಾಫರರನ್ನು ಇಸ್ಲಾಮು ಧರ್ಮದ ಅನುಯಾಯಿಗಳನ್ನಾಗ ಮಾಡುವದಕ್ಕಾಗಿ ಆ

ರಾಜರು ಈ ಪ್ರಕಾರ ಬಲಪೂರ್ವಕ ಸ್ವಗ್ರಹಣ ಮಾಡಿಸುತ್ತಿದ್ದರಂತೆ; ಆದರೆ ಈಗಿನ ಈ ಇಂಗ್ಲೀಷರ ರಾಜ್ಯದಲ್ಲಿ ಪ್ರತಿಯೊಬ್ಬರಿಗೂ ತಮ್ಮ ತಮ್ಮ ಧರ್ಮಗಳ ಪ್ರಕಾರ ನಡೆಯಲು ಸಂಪೂರ್ಣ ಸ್ವಾತಂತ್ರ್ಯವಿದೆಯೆಂದು 'ಇಂಗ್ಲೆಂಡದರಸರ ಜಾಹೀರನಾಮೆಗಳಲ್ಲಿ ಮಾತ್ರ ಆಶ್ವಾಸನ ಕೊಟ್ಟಿದೆಯೇ ವಿನಃ, ಮೇಲೆ ವಿವರಿಸಿದಂಥ ಪ್ರಸಂಗದಲ್ಲಿ ಆ ಆಶ್ವಾಸನಗಳು-ಜಾಹೀರನಾಮೆಗಳು ಕೆಲಸಕ್ಕೆ ಬಾರದ ಖರಡುಕಾಗದಗಳೆಂದು ಕೃತಿಯಲ್ಲಿ ಎಣಿಸಲ್ಪಡುತ್ತವೆ. ಯಥಾಸಮಯದಲ್ಲಿ ಕೈ-ಕಾಲುಗಳನ್ನು ಬಂಧಿಸಿದಂಥ ನಾರಾಯಣದೀಕ್ಷಿತನ ಬಾಯಲ್ಲಿ ಬೀರನು ಗೋಮಾಂಸವನ್ನು ತುಂಬಿ ಅವನ ಕುಲವನ್ನು ಕೆಡಿಸಿದನು' ಆಗ ನಾರಾಯಣದೀಕ್ಷಿತನು ತನ್ನ ಕುಲದೈವತವಾದ ಮಹಾಲಕ್ಷ್ಮೀಕಾಂತನನ್ನು ಅನನ್ಯವಾಗಿ ಪ್ರಾರ್ಥಿಸಿ, ತನ್ನನ್ನು ಈ ದುರ್ಧರ ಪ್ರಸಂಗದಿಂದ ಮುಕ್ತನನ್ನಾಗಮಾಡಲು ಬೇಡಿಕೊಳ್ಳುತ್ತಿದ್ದನು. ಆದರೆ ನಾರಾಯಣನ ಪ್ರಾರ್ಥನದಂತೆ ಅವನು ಆಗ ಬಿಡುಗಡೆಯಾದರೂ ಆ ದಯಾಘನ ಮಹಾಲಕ್ಷ್ಮೀಕಾಂತನ ಅನುಗ್ರಹದಿಂದ ಅವನಲ್ಲಿಯ ಕುಲ, ಜಾತಿ, ಪಂಥ ಮುಂತಾದವುಗಳ ದುರಭಿಮಾನವು-ಸಂಕುಚಿತ ದೃಷ್ಟಿಯು ಲೋಪವಾಗಿ ತಾನಿದ್ದ ಸ್ಥಿತಿಯಲ್ಲಿಯೇ ಅವನಿಗೆ ಪರಮಾನಂದವೆನಿಸಹತ್ತಿತು. ಗೋಮಾಂಸವು ಹೊಟ್ಟೆಯಲ್ಲಿ ಸೇರಿದ ಉತ್ತರಕ್ಷಣದಲ್ಲಿಯೇ ನಾರಾಯಣನು ತನ್ನ ಜುಟ್ಟು-ಜನಿವಾರಗಳನ್ನು ಕಿತ್ತೊಗೆದು ಇನ್ನು ಮುಂದೆ ಬರಬಹುದಾದ ಬೇಕಾದಂಥ ದುರ್ಧರ ಪ್ರಸಂಗಗಳಿಗೆ ಎದೆಗೊಟ್ಟು ನಿಲ್ಲಲು ಸಿದ್ಧನಾದನು; ಹಾಗು ಅಂದಿನಿಂದ ಅವನು ತನ್ನ ನಾರಾಯಣದೀಕ್ಷಿತ ಎಂಬ ಮೊದಲಿನ ಹೆಸರನ್ನು ಸಹ ಬಿಟ್ಟುಗೊಟ್ಟು, ಹೆಸರಿನಿಂದಲೂ ಕಾರ್ಯದಿಂದಲೂ ನಿರ್ವಿಕಾರನಾದ ನಾರಾಯಣನಾದನು!

ಹಡಗವು ಮಹಾಸಾಗರದಲ್ಲಿ ಧುಮಿಂಗ ನಡೆದಿರಲು, ರಾತ್ರಿ ತೀರಿ ಬೆಳಗಾಯಿತು. ಬೆಳಕು ಬಿದ್ದೊಡನೆಯೇ ಶಿಪಾಯಿಗಳ ಆಜ್ಞೆಯ ಪ್ರಕಾರ ರಾಮಚಂದ್ರಾದಿಗಳು ಆ ಪಶುಗಳ ಸ್ವಚ್ಛತೆ ಹಾಗು ಅವುಗಳ ಆಹಾರಗಳ ಸರಬರಾಯಿಗೆ ನಿಂತರು. ಬೆಳಗಿನ ಒಂಬತ್ತಕ್ಕೆ ಆ ಹಡಗದಲ್ಲಿಯ ಕೂಲಿಗಳ ಬೆಳಗಿನ ಊಟದ ಗಂಟೆಯು ಬಡಿಯಿತು. ಈಗಲೂ ರಾಮಚಂದ್ರನೇ ಮೊದಲಾದ ಶಿಷ್ಟರು ಆ ಮಾದಿಗರ ಬೀರನ ಕೈಯ ಅಡಿಗೆಯನ್ನು ಉಣ್ಣಲು ಸಮ್ಮತಿಸದೆ ಉಪವಾಸವಾಗಿರಬೇಕೆಂದರು; ಆದರೆ ನಾರಾಯಣದೀಕ್ಷಿತನು ತನ್ನ ಮೇಲೆ ಆದ ಅತ್ಯಾಚಾರದ ಸಂಗತಿಯನ್ನು ಅವರಿಗೆ ತಿಳಿಸಿ, "ಮಿಂಚಿಹೋದ ಮಾತಿಗೆ ಚಿಂತಿಸಿ ಫಲವಿಲ್ಲ."

ನಮ್ಮ ಸ್ವಕರ್ಮದಿಂದಾಗಲಿ, ದೇವರ ಪ್ರೇರಣೆಯಿಂದಾಗಲಿ ನಾವು ಈ ಗತಿಯನ್ನು ಹೊಂದಿದ್ದೇವೆ; ಆದರೆ ಇನ್ನು ಈ ಬಗ್ಗೆ ಚಿಂತಿಸಿ ಮಾಡುವದೇನು? 'ಬಂದದ್ದು ಬರಲಿ, ಶ್ರೀ ಗುರುವಿನ ದಯವೊಂದಿರಲಿ' ಎಂದನ್ನುತ್ತ ಕಾಲಕಳೆಯೋಣ, ಎಂದು ಅವರಿಗೆ ಬೋಧಿಸಿದನು. ಆಗ ರಾಮಚಂದ್ರಾದಿಗಳು ನಾರಾಯಣದೀಕ್ಷಿತನಂತೆ ತಮ್ಮ ಯಜ್ಞೋಪವೀತಾದಿಗಳನ್ನು ಸಮುದ್ರನಾಥನಿಗೆ ಅರ್ಪಿಸಿ, ಪ್ರಸ್ತುತ ಕೆಲಸಕ್ಕೆ ಸಿದ್ಧರಾದರು. ಒಬ್ಬಿಬ್ಬ ಆತತಾಯಿ ಧರ್ಮಶ್ರದ್ಧಾವಾನ ಜನರು ಆ ಧರ್ಮಚ್ಛಲವನ್ನು ಸಹಿಸಲಾರದೆ ಕಾವಲುಗಾರರ ಕಣ್ಣುತಪ್ಪಿಸಿ, ಸಮುದ್ರದ ಪಾಲಾದರು! ಈ ಕರಾರುಬದ್ಧತೆ ಕೂಲಿಯ ಪದ್ಧತಿಯಿಂದ ನಮ್ಮ ಜನರಿಗೆ ಎಷ್ಟು ಹಿಂಸೆಯಾಗುತ್ತವೆಂಬದನ್ನು ಹೇಳುವದೇ ಈ ಪ್ರಕರಣದ ಮುಖ್ಯ ವಿಷಯವಾಗಿರುತ್ತದೆ. ವಾಚಕರಿಗೆ ಇದರಿಂದ ಮುಖ್ಯ ಕಥೆಯ ಸಂದರ್ಭ ಹತ್ತುವದು ತುಸ ಗೊಂದಲವಾಗಬಹುದು. ಆದ್ದರಿಂದ ಇನ್ನು ನಾವು ಈ ಹೇಯಪದ್ಧತಿಯ ಅನನ್ವಿತಕೃತ್ಯಗಳನ್ನೇ ವಿವರಿಸುತ್ತ ಕೂಡ್ರದೆ, ಅವುಗಳನ್ನು ಪ್ರಸಂಗೋಪಾತ್ ವಾಚಕರ ಮುಂದಿಡುವೆವು.

ರಾಮಚಂದ್ರಾದಿಗಳು ಊಟಕ್ಕೆ ಸಿದ್ಧರಾಗಿ ತಮ್ಮ ತಮ್ಮ ತಗಡಿನ ತಾಟು ಮಣ್ಣಿನ ಮಗಿಯೊಡನೆ ಹೋಗಿ ಕುಳಿತೊಡನೆಯೇ ಮಾದಿಗರ ಬೀರನು, ಕೈಹಾಕಿ ಮುಳುಗಿದರೂ ಒಂದು ಅನ್ನದ ಅಗಳು ಕೂಡ ಸಿಗದಂಥ ಅರ್ಧಸೇರುಗಂಜಿಯನ್ನು ಪ್ರತಿಯೊಬ್ಬನಿಗೆ ನೀಡಿದನು. ಪೆಲುವಾದಿಯರ ಈರನು ಅರಶಿಣ ಬಣ್ಣದ ಹುಳಿ ಎಂಬ ನೀರನ್ನು ಒಂದೊಂದು ಸವಟಿನಂತೆ ಎಲ್ಲರ ಗಂಜಿಯ ಮೇಲೆ ಸುರವಿ ಹೋದನು. ನಂತರ ಒಂದೊಂದು ಚಮಚೆ ಕೊಳೆತು ದುರ್ಗಂಧವಡಗಿದ ಉಪ್ಪುಮೀನಗಳನ್ನು ಕಟುಗರ ಕಾಳನು ಎಲ್ಲರಿಗೂ ಬಡಿಸಿದನು. ಇದೇ ಆ ಕೂಲಿಗಳ ಪ್ರಾತರ್ಭೋಜನದ ಸೌರಣೆಯು!

ಸಾಯಂಕಾಲದ ನಾಲ್ಕುಗಂಟೆಗೆ ಮತ್ತೊಮ್ಮೆ ಊಟದ ಗಂಟೆಯಾಯಿತು. ಆಗಲೂ ಇದೇ ಪ್ರಕಾರದ ಗಂಜೀ ಅನ್ನವೂ, ಒಂದು ಸವಟು ಬಟಾಟಿ ಪಲ್ಲೆವೂ, ಅಲ್ಲದೆ ಗೋಮಾಂಸದ ಒಂದೊಂದು ತುಣುಕೂ ಬಡಿಸಲ್ಪಟ್ಟವು. ಮೊದಮೊದಲು ರಾಮಚಂದ್ರಾದಿಗಳು ಗೋಮಾಂಸವನ್ನು ಸ್ವೀಕರಿಸಲಿಕ್ಕೆ ಮನಸ್ಸು ಮಾಡದೆ, ಬರೇ ಗಂಜೀಅನ್ನ-ಬಟಾಟಿಗಳನ್ನು ಭುಂಜಿಸಿ ಕಾಲಯಾಪನೆ ಮಾಡುತ್ತಿದ್ದರು. ಎಲ್ಲರೂ ಗೋಮಾಂಸವನ್ನು ಭಕ್ಷಿಸಿಯೇ ತೀರಬೇಕೆಂದು ಇಕ್ಷುದ್ವೀಪದ ವಣಿಕರ ಆಗ್ರಹವಿದ್ದಿಲ್ಲ. ಅವರು ಪ್ರಯಾಣಕಾಲದಲ್ಲಿ ಕೂಲಿಗಳಿಗೆ ಇಂಥ ಗಂಜೀ ಅನ್ನ,

ಅರಿಶಿನ ಬಣ್ಣದ ನೀರಹುಳಿ ಕೊಡಬೇಕೆಂದು ನಿರ್ಧರಿಸಿದ್ದಿಲ್ಲ. ಕೂಲಿಗಳಿಗೆ ದಿನಾಲು ಎರಡೆರಡು ಸಾರೆ ಒಳ್ಳೇ ಅನ್ನ-ತಪ್ಪಿಗಳನ್ನೂ, ಕಾಯಿ-ಪಲ್ಲೆಗಳನ್ನೂ ಒದಗಿಸುವದಕ್ಕಾಗಿ ಅವರು ಸಾಕಷ್ಟು ಸಾಮಗ್ರಿಯನ್ನು ಆ ಹಡಗಿನಲ್ಲಿ ಶೇಖರಿಸಿಟ್ಟಿದ್ದರು. ಇಷ್ಟೇ ಅಲ್ಲ, ಪ್ರತಿ ರವಿವಾರಕ್ಕೊಮ್ಮೆ ಆ ಕೂಲಿಗಳಿಗೆ ಗೋದಿಯರೊಟ್ಟಿ-ತುಪ್ಪ-ಸಕ್ಕರೆಗಳನ್ನು ಕೊಡಬೇಕೆಂದು ಅವರು ಗೊತ್ತುಪಡಿಸಿದ್ದರು. ಆ ಹಡಗಿನಲ್ಲಿಯ ವ್ಯವಸ್ಥಾಪಕನು ಕೇವಲ ಸ್ವಾರ್ಥಪರನಾದ್ದರಿಂದ ಅವನು ಆ ಕೂಲಿಗಳಿಗೆ ಈ ಬಗೆಯ ತೊಂದರೆಕೊಡುತ್ತಿದ್ದನು. ರಾಮಚಂದ್ರಾದಿಗಳು ಗೋಮಾಂಸವನ್ನು ಮುಟ್ಟಬಾರದೆಂದು ನಿರ್ಧಾರಮಾಡಿದ್ದರಷ್ಟೇ? ಆದರೆ ಮೇಲೆ ವಿವರಿಸಿದ ಗಂಜಿಯ ಆಹಾರದಿಂದ ಅವರ ಹಸಿವು ತಡೆಯದಾಯಿತು. ಹಸಿವೇ ತಡೆಯದಾದ ಬಳಿಕ ಮನಃಸಂಯಮನವಾಗುವ ಬಗೆ ಹೇಗೆ? ಆದರಿಂದ ಅವರು ಕೆಲದಿನಗಳ ನಂತರ ಸಂಕುಚಿತ ಮನಸ್ಸಿನಿಂದ ಗೋಮಾಂಸಕ್ಕೆ ಕೈಯೊಡ್ಡಹತ್ತಿದರು. ತುಸ ದಿನಗಳ ಅಭ್ಯಾಸದಿಂದ ಗೋಮಾಂಸದ ವಿಷಯಕವಾದ ಅವರ ಮನಸ್ಸಿನ ಸಂಕುಚಿತ ಭಾವವೂ, ಅರುಚಿಯೂ ಅಳಿದುಹೋದವು. ಆ ಪುಣ್ಯವಂತರು ಸಮುದ್ರನಾಥನ ಪೃಷ್ಠಭಾಗದ ಮೇಲೆ ತಿಂಗಳು ಗಟ್ಟಲೆ ಪ್ರಯಾಣ ಮಾಡಿ ನಿರ್ವಿಕಾರರೂ ನಿರಾನಂದರೂ ನಿಷ್ಕಾಮರೂ ಆಗಿ, ಆ ಇಕ್ಷುದ್ವೀಪಕ್ಕೊಮ್ಮೆ ಹೋಗಿತಲುಪಿದರು. ಆಗ ಅವರು ಜಾತಿ-ಧರ್ಮಗಳಲ್ಲಿಯೂ, ಖಾದ್ಯಾಖಾದ್ಯ ವಿಚಾರದಲ್ಲಿಯೂ ದ್ವಿಧಾಶೂನ್ಯರಾಗಿ, ಪರಮಹಂಸಯತಿಯಂತೆ "ಸರ್ವಂ ಖಲ್ವಿದಂ ಬ್ರಹ್ಮ" ಎಂಬ ಶ್ರೇಷ್ಠ ಜ್ಞಾನವನ್ನು ಪಡೆದರು.





## ಹದಿಮೂರನೆಯ ಪರಿಚ್ಛೇದ.

### ನ ಬ್ರೂಯಾತ್ ಸತ್ಯಮಪ್ರಿಯಮ್.

ಇಕ್ಷುದ್ವೀಪದ ಬಂದರದಲ್ಲಿ ಈ ಕೂಲಿಗಳ ಹಡಗವು ಲಂಗರ ಹಾಕಿನಿಂತಿತು. ಅಲ್ಲಿಯ ಕೂಲಿಗಳ ಏಜಂಟನು ಕೂಲಿಗಳ ಲೆಕ್ಕ ಮಾಡಿ, ಇವರನ್ನು ಅಲ್ಲಿಯ ವಣಿಕರ ಸ್ವಾಧೀನಕ್ಕೊಳಪಡಿಸಿದನು. ಆ ವಣಿಕರು ತಮತಮಗೆ ಬೇಕಾಗುವಷ್ಟು ಕೂಲೀಜನಗಳನ್ನು ಹಂಚಿಕೊಂಡು ಅವರನ್ನು ತಮ್ಮ ತಮ್ಮ ಕ್ಷೇತ್ರಗಳಿಗೆ ಸಾಗಿಸಿದರು. ಪ್ರತಿಯೊಬ್ಬ ವಣಿಕನ ಕಬ್ಬಿನ ಕ್ಷೇತ್ರದಲ್ಲಿ ಒಂದೊಂದು ಕೂಲೀಜನರ ಹಳ್ಳಿ ಇರುತ್ತದೆ. ಆ ಕೂಲಿಗಳ ವಾಸಸ್ಥಾನದಲ್ಲಿ ಐವತ್ತು ಫೂಟು ಉದ್ದ, ಇಪ್ಪತ್ತು ಫೂಟು ಅಗಲಾದಂಥ ಗಿಡ್ಡಕ್ಕಾದ (ಕುಳ್ಳನ್ನ) ನೆಲಮಾಳಿಗೆಯ ಮನೆಗಳಿರುವವು. ಆ ಮನೆಯು ಸಮವಾಗಿ ಭಾಗಮಾಡಿದ ಹತ್ತು ಕೋಣೆಗಳುಳ್ಳದ್ದಾಗಿರುವದು. ಅಂಥ ಪ್ರತಿಯೊಂದು ಕೋಣೆಯಲ್ಲಿ ಜಾತಿ ಮತಭೇದಗಳನ್ನು ಎಣಿಸದಂತೆ ಮೂವರು ಕೂಲಿಗಳು ವಾಸ ಮಾಡಬೇಕಾಗುತ್ತದೆ; ಆದರೆ ಯಾರು ಹೆಂಡತಿಸಹಿತವಾಗಿ ಹೋಗಿರುತ್ತಾರೋ ಅವರು ಮಾತ್ರ ಇಬ್ಬರೇ ಆ ಕೋಣೆಗಳಲ್ಲಿ ವಾಸಿಸಬಹುದು. ಒಂದು ಪ್ರವೇಶದ್ವಾರದ ವಿನಃ ಆ ಕೋಣೆಗಳಿಗೆ ಬೇರೆ ಬಾಗಿಲ, ಕಿಟಕಿಗಳು ಇರುವದಿಲ್ಲ. ಬೆಳಕು ಹಾಗು ಹವೆಯಾಡುವ ಸಲುವಾಗಿ ಬಿಟ್ಟ ಬೆಳಕಿಂಡಿಗಳ ಮೇಲೆ ಮುಚ್ಚಳಗಳಿರುವದಿಲ್ಲ. ಮಳೆಯಾಗ ಹತ್ತಿದರೆ, ಆ ಬೆಳಕಿಂಡಿಯಿಂದ ಆ ಕೋಣೆತುಂಬ ನೀರು ಇಳಿಯುವದು. ಮಳೆಗಾಲದಲ್ಲಿ ಆ ಬಡಕೂಲೀಕಾರರಿಗೆ ಆ ಮನೆಗಳಲ್ಲಿ ಎಷ್ಟು ತೊಂದರೆಯಾಗುತ್ತಿರುವದೆಂಬದನ್ನು ಯಾರು ಹೇಳಬೇಕು?

ಅಲ್ಲಿಯ ಕೂಲೀಜನರು ದಿನಾಲು ನಸುಕಿನ ಮೂರು ಗಂಟೆಗೆ ಎದ್ದು; ತಮ್ಮ ಅಡಿಗೆಯನ್ನು ಮಾಡಿಕೊಂಡು, ಬೆಳಗಿನ ಐದು ಹೊಡೆಯುವಷ್ಟರಲ್ಲಿ ಕಬ್ಬಿನ ಕ್ಷೇತ್ರಗಳಲ್ಲಿ ಹಾಜರಿರಬೇಕಾಗುವದು. ಆ ಕ್ಷೇತ್ರಗಳಲ್ಲಿ ಇಡೀ ಹಗಲು ಮಳೆಯಲ್ಲಿ ತೊಯ್ಯಿಸಿಕೊಳ್ಳುತ್ತ ಒಂದೇಸಮನೆ ಕೆಲಸ ಮಾಡಬೇಕಾಗುವದು. ಸಾಯಂಕಾಲದಲ್ಲಿ ಸೂಟಿಯಾದಬಳಿಕ ಮನೆಗೆ ಬಂದು ತಲುಪಲಿಕ್ಕೆ ರಾತ್ರಿ ಒಂಬತ್ತು ಗಂಟೆಯಾಗುವದು. ಆಗ ಅವರು ತಮ್ಮ ಅಡಿಗೆ ಮಾಡಿಕೊಳ್ಳಬೇಕೆನ್ನುವಷ್ಟರಲ್ಲಿ ಮಳೆ ಬಂದರಂತೂ ಮುಗಿದೇ ಹೋಯಿತು. ಆಗಿನ ಅವರ ಗೋಳನ್ನು

ದೇವರೇ ಬಲ್ಲ! ಮುಚ್ಚಳವಿಲ್ಲದ ವಿಶಾಲವಾದ ಆ ಬೆಳಕಿಂಡಿಯಿಂದ ಆ ಚಿಕ್ಕ ಮನೆತುಂಬ ನೀರು ಸುರಿದು, ಒಲಿಯು ಬೆಂಕಿಯು ನಂದಿಹೋಗುವದು. ಹಾಸಿಗೆ ಹುಪ್ಪಡಿಗಳು ತೊಯ್ದು ಹೋಗುವವು. ಇಡೀ ರಾತ್ರಿಯನ್ನು ಅನಾಹಾರದಿಂದಲೂ ಅನಿದ್ರೆಯಿಂದಲೂ ಕಳೆಯಬೇಕಾಗುವದು. ಆದರೂ ಪುನಃ ಮರುದಿನ ಬೆಳಗಿನ ಐದಕ್ಕೆ ಹೊಲದಲ್ಲಿ ತಪ್ಪದೆ ಹಾಜರಿರಬೇಕಾಗುವದು.

ಆ ಇಕ್ಷುದ್ವೀಪದಲ್ಲಿ ಪಶುಗಳು ಬಹಳ ದಿನಗಳವರೆಗೆ ತಾಳುವದಿಲ್ಲ. ಎಂಥ ಬಲವಾನ್ ಎತ್ತು-ಕತ್ತೆಗಳನ್ನು ಒಯ್ದರೂ ಅಲ್ಲಿಗೆ ತಲುಪಿದ ಕೆಲವು ತಿಂಗಳುಗಳಲ್ಲಿಯೇ ಅವು ದುರ್ಬಲವಾಗುವವು. ಆದ್ದರಿಂದ ಅಲ್ಲಿಯ ವಣಿಕರು ಎತ್ತು-ಕತ್ತೆಗಳೊಡನೆ ಕೂಲೀ ಆಳುಗಳನ್ನು ಹೂಡಿ ಪಶುಗಳಂತೆ ಅವರಿಂದ ಬೇಸಾಯ ಮಾಡಿಸಿಕೊಳ್ಳುವ ಪರಿಪಾಠವನ್ನಿಟ್ಟುಕೊಂಡಿರುವರು. ಅಲ್ಲಿಗೆ ಹೋದ ಕೂಲಿಗಳು ಹೀಗೆ ನಾನಾ ಬಗೆಯ ಶಾರೀರಿಕ-ಮಾನಸಿಕ ಕಷ್ಟಗಳನ್ನು ಸಹಿಸಬೇಕಾಗುವದರಿಂದ ತುಸ ದಿನಗಳಲ್ಲಿಯೇ ಅವರ ಅನುಭವಶಕ್ತಿ, ಸದಸದ್ವಿವೇಕ ಬುದ್ಧಿ ಮುಂತಾದ ಶ್ರೇಷ್ಠ ಗುಣಗಳು ಅಳಿದುಹೋಗಿ ಅವರು "ಆಹಾರ ನಿದ್ರಾ ಭಯ ಮೈಥುನಂಚ ಸಾಮಾನ್ಯ ಮೇತತ್ ಪಶುಭಿರ್ನರಾಣಾಂ" ಎಂಬಂತೆ ಕೇವಲ ಪಶುಗಳ ಹಾಗೆಯೇ ವರ್ತಿಸ ಹತ್ತುವರು.

ನಮ್ಮ ರಾಮಚಂದ್ರಾದಿ ೧೬೧ ಕೂಲಿಗಳು ಹೆಗ್‌ಸಾಹೇಬನ ಪಾಲಿಗೆ ಬಂದರು. ಇಕ್ಷುದ್ವೀಪಕ್ಕೆ ತಲುಪಿದ ನಂತರ ಆರು ತಿಂಗಳುಗಳವರೆಗೆ ಅಲ್ಲಿಯ ವಣಿಕರೇ ಸ್ವಂತ ಖರ್ಚಿನಿಂದ ಆ ಕೂಲಿಕಾರರಿಗೆ ಸಿಧಾಸಾಮಗ್ರಿಗಳನ್ನು ಸಲ್ಲಿಸಬೇಕೆಂಬ ನಿಯಮವಿರುವದು. ಆದರೆ ಆ ವಣಿಕರು ಕೂಲಿಕಾರರಿಗೆ ಒಂದು ವಾರದ ಮಟ್ಟಿಗೆಂದು ಕೊಡುವ ಸಿಧಾಸಾಮಗ್ರಿಗಳು ಸಾಮಾನ್ಯವಾಗಿ ಇವರಿಗೆ ನಾಲ್ಕೈದು ದಿನಗಳವರೆಗೆ ಸಹ ಸಾಲುವದಿಲ್ಲ. ಐದನೇ ದಿವಸ ಈ ಜನರು ಪುನಃ ಸಾಮಗ್ರಿಯನ್ನು ತರಲಿಕ್ಕೆಂದು ಆ ವಣಿಕರ ವಖಾರುಗಳಿಗೆ ಹೋಗಲು, ಅಲ್ಲಿಯ ಕಾವಲುಗಾರನು ಇವರನ್ನು ಬೆತ್ತದಿಂದ ಚೆನ್ನಾಗಿ ಥಳಿಸಿ ಕಳಿಸುವನು. ಅಲ್ಲಿಗೆ ತಲುಪಿದ ಮೊದಲನೇ ವಾರದಲ್ಲಿಯೇ ಕಡೆಯ ೨-೩ ದಿನಗಳಲ್ಲಿ ನಿರಶನ ಬೀಳುವ, ಹಾಗು ಅತ್ಯಂತ ಶಾರೀರಿಕ ಶ್ರಮಗಳನ್ನು ಮಾಡುವ ಪ್ರಸಂಗ ಒದಗುವದರಿಂದ ಅಲ್ಲಿಗೆ ಹೋಗಿದ್ದ ಕೂಲಿಕಾರರಲ್ಲಿಯ ಬಹುಜನ ಕೂಲಿಗಳು ಒಮ್ಮೆಲೆ ಬೇನೆಯಿಂದ ಬೀಳುವರು. ರವಿವಾರ ಬೇಸಾಯದ ಕೆಲಸಕ್ಕೆ ರಜೆಯಿರುವುದು. ಅಂದು ಕೂಲಿಗಳಿಗೆ ಪುನಃ ಒಂದು ವಾರದ ಸಿಧಾಸಾಮಗ್ರಿಗಳು ಕೊಡಲ್ಪಡುವವು. ಎರಡು-

ಮೂರು ದಿನಗಳಿಂದ ನಿರಶನರಾಗಿದ್ದ ಕೂಲಿಗಳಲ್ಲಿ ಎಷ್ಟೋ ಜನ ಕೂಲಿಗಳು ಅಂದು ಹಸಿಯ ಧಾನ್ಯವನ್ನೇ ಮುಕ್ಕುತ್ತಿದರು. ಅದರಿಂದ ರಾಮಚಂದ್ರಾದಿಗಳ ದಳದಲ್ಲಿಯ ಬಹುಜನರು ವಿಶೇಷ ತರದ ರೋಗಕ್ಕೀಡಾದರು. ರಾಮಚಂದ್ರನಿಗೆ ಉಪವಾಸ ಬೀಳುವ ರೂಢಿಯು ಬಹಳ ದಿವಸಗಳಿಂದ ಬಿದ್ದಿತ್ತು. ಆದರೆ ಅವನಿಗೆ ಅಮಲಿನ ಪದಾರ್ಥಗಳಿಲ್ಲದಿದ್ದರೆ ಮಾತ್ರ ನಡೆಯುತ್ತಿದ್ದಿಲ್ಲ. ಪುಣೆಯಿಂದ ದ್ವೀಪಾಂತರಕ್ಕೆ ಹೊರಡಲಿಕ್ಕೆ ಸಿದ್ಧನಾದಾಗ ತಳವಾರ ಭೀಮಪ್ಪನಿಂದ ದೊರೆತ ಮುಂಗಡ ಹಣದಿಂದ ಆವನು ಬೇರೆ ಯಾವ ಸಾಮಾನುಗಳನ್ನೂ ಕೊಂಡುಕೊಂಡಿದ್ದಿಲ್ಲ; ಆ ಹಣಕ್ಕೆ ಬಂದಷ್ಟು ಹೆಚ್ಚು ಅಫು ಗಾಂಜಾ ಮುಂತಾದ ಅಮಲಿನ ಪದಾರ್ಥಗಳನ್ನೇ ಕೊಂಡುಕೊಂಡು ಸಂಗ್ರಹಿಸಿದ್ದನು; ಹಾಗು ಅವನ್ನೇ ಮಿತವ್ಯಯ ಮಾಡುತ್ತ ಇಕ್ಷುದ್ವೀಪಕ್ಕೆ ತಲುಪುವವರೆಗೆ ಕಾಲಕ್ರಮಣ ಮಾಡಿದ್ದನು. ಅಲ್ಲಿಗೆ ತಲುಪಿದಬಳಿಕ ಅವನು ಅವುಗಳನ್ನು ಸಂಪಾದಿಸುವದಕ್ಕಾಗಿ ಬಹಳ ಸಾಹಸಪಟ್ಟನು. ಆದರೆ ದುರ್ದೈವದಿಂದ ಅವನಿಗೆ ಅವು ಎಲ್ಲಿಯೂ ದೊರೆಯದ್ದರಿಂದ ಅವನು ತೀರ ನಿಶ್ಶಕ್ತನಾಗಿ ಹಾಸಿಗೆ ಹಿಡಿದನು. ಕೆಲಸಕ್ಕೇ ಹೋಗದ ಬಳಿಕ ಅವನಿಗೆ ಸಿಧಾಸಾಮಗ್ರಿಗಳನ್ನು ಕೊಡುವವರಾರು? ಹೀಗೆ ಅವನು ಕೇವಲ ನಿರ್ವಿಣ್ಣನಾಗಲು, ಅವನನ್ನು ದವಾಖಾನೆಗೆ ಕಳಿಸಿದರು. ಡಾಕ್ಟರನು ಇವನನ್ನು ಪರೀಕ್ಷಿಸಿ ಕೆಲವು ವಾರಗಳವರೆಗೆ ಇವನಿಗೆ ಹೆಚ್ಚು ಪರಿಶ್ರಮವಾಗದಂಥ ಹಗುರ ಕೆಲಸವನ್ನು ಕೊಡಬೇಕೆಂದು ತಿಳಿಸಿದನು.

ಕೂಲಿಗಳು ಅಲ್ಲಿಗೆ ಹೋದ ಆರು ತಿಂಗಳುಗಳವರೆ ಅವರಿಗೆ ಸಿಧಾಸಾಮಗ್ರಿಗಳನ್ನು ವಣಿಕರು ತಮ್ಮ ಸ್ವಂತ ಕೋಠಿಯಿಂದ ಕೊಡುತ್ತಿದ್ದರೆಂದು ಹಿಂದೆ ಹೇಳಿದೆಯಷ್ಟೆ? ಆರು ತಿಂಗಳುಗಳ ತರುವಾಯ ಸಾಮಾನು ಕೊಡುವದನ್ನು ನಿಲ್ಲಿಸಿ, ಹಣದ ರೂಪದಿಂದ ಕೂಲಿ ಕೊಡಹತ್ತಿದರು. ನಿಯಮಿತ ಪೂರ್ಣ ಕೆಲಸವನ್ನು ಮಾಡುವವರಿಗೆ ವಾರಕ್ಕೆ ನಾಲ್ಕು ರೂಪಾಯಿ ಕೂಲಿ ಕೊಡುವರು. ಆದರೆ ಆ ನಿಯಮಿತ ಪೂರಾ ಕೆಲಸವನ್ನು ಎಂಥ ಸುದೃಢ ಕಾಯದವನಿಂದಲೂ ಒಂದೆರಡು ವಾರಗಳಿಗಿಂತ ಹೆಚ್ಚು ಕಾಲ ಮಾಡುವದು ಶಕ್ಯವಿರುವದಿಲ್ಲ. ಆದ್ದರಿಂದ ಗೊತ್ತಾದ ಸಂಪೂರ್ಣ ಕೂಲಿಯನ್ನು ಸಂಪಾದಿಸುವಜನರು ವಿರಳವೆಂದೇ ಹೇಳಬಹುದು, ಬಹು ಸಂಖ್ಯಾಕರು ಅರೆಗೂಲಿಯಿಂದಲೇ ಉಪಜೀವಿಸಬೇಕಾಗುವದು. ಸಾಮಾನ್ಯ ಕೂಲಿಯವನು ಅಲ್ಲಿ ದಿನಾಲು ಆರು ಆಣೆಯಿಂದ ಹತ್ತು ಆಣೆಗಳವರೆಗೆ ಸಂಪಾದಿಸಬಲ್ಲನು. ಆದರೆ ಅಷ್ಟು ಕೂಲಿಯಿಂದ ಅಲ್ಲಿ ಒಬ್ಬನ ಎರಡು ಹೊತ್ತಿನ ಊಟವು

ಕೂಡ ಬಗೆಹರಿಯುವದಿಲ್ಲ. ಇನ್ನು ಒಟ್ಟೆ-ಬರೆಗಳ, ಅನುವು-ಆಪತ್ತುಗಳ ಮಾತು ಒತ್ತಟ್ಟಿಗೇ ಉಳಿಯುವುದು. ಹೀಗಾಗಲಿಕ್ಕೆ ಕಾರಣವೇನಂದರೆ, ಅಲ್ಲಿಯ ಆ ನೀಚ ಗೌರಾಂಗ ವಣಿಕರ ಅಂಗಡಿಗಳಲ್ಲಿ ನಿತ್ಯೋಪಯೋಗಿ ಸಾಮಾನುಗಳನ್ನು ಬಹು ತುಟ್ಟಿಯಾಗಿ ಮಾರುತ್ತಿರುತ್ತಾರೆ. ಅವರ ಅಂಗಡಿಗಳ ಹೊರತು ಬೇರೆ ಅಂಗಡಿಗಳೇ ಅಲ್ಲಿ ಇರದ್ದರಿಂದ, ಪಾಪ! ಆ ಬಡ ಕೂಲಿಕಾರರು ಹಗಲು ಹನ್ನೆರಡುತಾಸು ಅತ್ಯಂತ ಪರಿಶ್ರಮವಹಿಸಿ ಸಂಪಾದಿಸಿದ ಆ ಅತ್ಯಲ್ಪ ಕೂಲಿಯನ್ನು ಆ ನೀಚರ ಗಳಗ್ರಾಸಕ್ಕೀಡು ಮಾಡಬೇಕಾಗುವದು!

ಡಾಕ್ಟರರ ಶಿಫಾರಸಿನ ಮೇರೆಗೆ ರಾಮಚಂದ್ರನಿಗೆ ಸಾಮಾನ್ಯ ಪರಿಶ್ರಮದ ಕೆಲಸವೆಂದು ಕಟುಗರ ಕೆಲಸ ಮಾಡುವದಕ್ಕೆ ಅಪ್ಪಣೆಯಾಯಿತು; ಆದರೆ ರಾಮಚಂದ್ರನು ಆ ನಿಂದ್ಯಕೆಲಸವನ್ನು ಮಾಡಲಿಕ್ಕೆ ಸಮ್ಮತಿಸದ ಅಪರಾಧಕ್ಕಾಗಿ ಅವನಿಗೆ ಮೂರು ತಿಂಗಳ ಕಠಿಣ ಶಿಕ್ಷೆಯು ವಿಧಿಸಲ್ಪಟ್ಟಿತು. ಕಾರಾಗೃಹದ ಡಾಕ್ಟರನೂ ಇವನ ಅಶಕ್ತ ಪ್ರಕೃತಿಗನುಸರಿಸಿ ಇವನಿಗೆ ಹೆಚ್ಚಿನ ಪರಿಶ್ರಮದ ಕೆಲಸ ಕೊಡಕೂಡದೆಂದು ನಿರ್ಬಂಧಿಸಿದನು. ಆದರಿಂದ ಅಲ್ಲಿ ಅವನಿಗೆ ಭಂಗಿಯ ಕೆಲಸವು ನೇಮಕವಾಯಿತು. ಆದರೆ ಆ ಹೇಸಿ ಕೆಲಸಕ್ಕೆ ನಮ್ಮ ಎಡಸೊಕ್ಕಿನ ರಾಮಚಂದ್ರನ ತಾನಾಗಿ ಅಣಿಯಾಗುವನೇ? ವಾರ್ಡರರ ಬೆತ್ತದಿಂದ ಮೈ ಮೆತ್ತಗಾದಮೇಲೆ ಅವನು ಆ ಕೆಲಸವನ್ನು ಸುಸೂತ್ರವಾಗಿ ಮಾಡಹತ್ತಿದನು. ಹೀಗೆ ರಾಮಚಂದ್ರನು ಶಿವರಾಯನಲ್ಲಿ ತಾನು ಮಾಡಿದ ಕೃತಘ್ನತೆಯ ಅಪರಾಧಕ್ಕಾಗಿ ಇಹಲೋಕದಲ್ಲಿಯೇ ಆ ನರಕ ಭೋಗವನ್ನು ಮೂರು ತಿಂಗಳವರೆಗೆ ಅನುಭವಿಸಿ ನಂತರ ಜೇಲಿನಿಂದ ಬಿಡುಗಡೆ ಹೊಂದಿ, ತನ್ನ ಮೊದಲಿನ ಕೆಲಸಕ್ಕೆ ಹೋದನು.

ಈ ಪ್ರಕಾರವಾಗಿ ರಾಮಚಂದ್ರಾದಿ ಕೂಲಿಗಳು ಅಲ್ಲಿ ಮೂರುವರುಷ ಕಾಲಕ್ರಮಣ ಮಾಡಿದರು. ನಂತರ ಹೇಗ್ ಸಾಹೇಬನು ತನ್ನ ಕ್ಷೇತ್ರದೊಳಗಿನ ಕೂಲಿಗಳಲ್ಲಿಯ ಐವತ್ತು ಜನ ಕೂಲಿಗಳನ್ನು ಬೇರೆ ವಣಿಕರಿಗೆ ಮಾರುವದನ್ನು ನಿಶ್ಚೈಸಿದನು. ಆ ಇತರ ವಣಿಕರು ನಮ್ಮ ರಾಮಚಂದ್ರಾದಿ ಮೂವತ್ತು ಜನ ಗಂಡಸರನ್ನೂ, ಇಪ್ಪತ್ತು ಜನ ಹೆಂಗಸರನ್ನೂ ಆರಿಸಿಕೊಂಡರು. ಅವರು ಆರಿಸಿಕೊಂಡ ಕೂಲಿಗಳಲ್ಲಿ ಎಷ್ಟೋ ಕೂಲಿದಂಪತಿಗಳಲ್ಲಿಯ ಗಂಡನು ಹೇಗ್‌ಸಾಹೇಬನಲ್ಲಿ ಉಳಿದು ಹೆಂಡತಿಯೊಬ್ಬಳೇ ಆ ಬೇರೆ ವಣಿಕರ ಕಡೆಗೆ ಹೋಗಬೇಕಾಗಿಯೂ, ಹೆಂಡತಿಯು ಇಲ್ಲಿ ಉಳಿದು ಗಂಡನು ಅಲ್ಲಿಗೆ ಹೋಗಬೇಕಾಗಿಯೂ ವಿಚಿತ್ರ ಪ್ರಸಂಗಗಳುಂಟಾದವು. ಈ ಬಗೆಯಾಗಿ ವಿಚ್ಛಿನ್ನರಾದ ಆ ದಂಪತಿಗಳು ಹೇಗ್‌ಸಾಹೇಬ

ನಲ್ಲಿ ತಮ್ಮ ದೂರು ಹೇಳಿಕೊಂಡರು. ಆ ಗೆ ಅದರಿಂದ ಪ್ರಯೋಜನವೇನೂ ಆಗದೆ, ಆ ವಣಿಕರ ಅನುಮತಿಯಂತೆಯೇ ಕಾರ್ಯವಾಯಿತು! ನಮ್ಮ ನಾರಾಯಣದೀಕ್ಷಿತನಾದರೂ ರಾಮಚಂದ್ರಾದಿಗಳೊಡನೆ ಆ ಬೇರೆ ಕ್ಷೇತ್ರಕ್ಕೆ ಸಾಗಿಸಲ್ಪಟ್ಟನು.

ಯಾವ ಇಪ್ಪತ್ತು ಜನ ಹೆಣ್ಣುಮಕ್ಕಳನ್ನು ಅವರ ಗಂಡಂದಿರಿಂದ ಅಗಲಿಸಿ ತಂದಿದ್ದರೋ, ಅವರಲ್ಲಿ ಮೋಹಿನಿ ಎಂಬ ಸುಂದರ ಯುವತಿಯು ಒಬ್ಬಳಾಗಿದ್ದಳು. ಮೋಹಿನಿಯು ಹೆಸರಿಗೆ ತಕ್ಕಂತೆ ಕೇವಲ ಮನಮೋಹಿನಿಯಾಗಿರದಿದ್ದರೂ, ಶಾಕಿನಿ-ಡಾಕಿನಿಯರಂತೆ ತೀರ ವ್ಯಂಗ್ಯಳಾಗಿರಲಿಲ್ಲ. ಅವಳ ಸುದೃಢ ಶರೀರ, ನಸುಗೆಂಪಿನ ಮೈಬಣ್ಣ, ನವತಾರುಣ್ಯ ಇವೆಲ್ಲವುಗಳು ಕಾಮುಕರ ಮನವನ್ನಾಕರ್ಷಿಸಲಿಕ್ಕೆ ಸಹಾಯಕಾರಿಗಳಾಗುತ್ತಿದ್ದವು. ಆ ನೂತನ ಕ್ಷೇತ್ರದ ಓವರ್ಸೀರನಾದ ಜೋಲ್ಬನ್‌ಸಾಹೇಬನು ಅವಳನ್ನು ಮಿಕಿ-ಮಿಕಿಯಾಗಿ ನೋಡಲುಪಕ್ರಮಿಸಿದನು; ಹಾಗು ಅವನ ಇಂಗಿತದಿಂದಲೇ ಅಲ್ಲಿಯ ಶಿಪಾಯಿಗಳು ಅವಳಿಗೆ ಮೊದಮೊದಲು ಬಲು ಹಗುರ ಕೆಲಸಗಳನ್ನು ಕೊಡುತ್ತ, ನಾನಾ ಪ್ರಕಾರದ ಆಶೆತೋರಿಸುತ್ತ ಅವಳನ್ನು ಅವನ ಅಂಕಶಾಯಿನಿಯನ್ನಾಗಮಾಡಲು ಯತ್ನಿಸಿದರು. ಆದರೆ ಆ ಖಂಬೀರಳು ಅವರ ಆ ಪ್ರಲೋಭನದ ಮುಚ್ಚಿಗೆ ಬೀಳಲಿಲ್ಲ. ಅದರಿಂದ ಆ ಶಿಪಾಯಿಗಳು ಅವಳನ್ನು ಬಗೆ ಬಗೆಯಾಗಿ ಹಿಂಸಿಸ ತೊಡಗಿದರು. ಅವರು ಅವಳಿಗೆ ಹೆಂಗಸರು ಮಾಡಬಹುದಾದ ಕೆಲಸ ಕೊಡುವದನ್ನು ಬಿಟ್ಟು, ಕಸವುಳ್ಳ ಗಂಡಸರು ಸಹ ಮಾಡಲಾರದ ಕೆಲಸವನ್ನು ಹೇಳಹತ್ತಿದರು. ಜೋಲ್ಬನ್‌ಸಾಹೇಬನೂ ಮನುಷ್ಯರು ಮಾಡಲಾರದ ಬಗೆಯ ಕುತ್ಸಿತ ವ್ಯವಹಾರಗಳನ್ನು ಮಾಡಿ ಅವಳನ್ನು ಹೆದರಿಸ ಹತ್ತಿದನು. ಆದರೆ ಅವರ ಯಾವ ಪ್ರಕಾರದ ಹಿಂಸೆಗೂ ಹೆದರಿಕೆಗೂ ಪ್ರಲೋಭನಕ್ಕೂ ಬಕ್ಕೆ ಹಾಕದೆ ಆ ಸಾಧ್ವಿಯು ಕಾಲವನ್ನು ಕಳೆಯುತ್ತಿದ್ದಳು.

ಹೀಗಿರಲು ಒಂದುದಿನ ರಾತ್ರಿ ಮೋಹಿನಿಯು ದಿನದಂತೆ ರಾತ್ರಿ ಒಂಬತ್ತಕ್ಕೆ ತನ್ನ ಕೊರಡಿಗೆ ಬಂದು, ಒಲೆ ಹೊತ್ತಿಸಿ ಅಡಿಗೆಗೆ ಇಡಹತ್ತಿದಳು. ಆದರೆ ದಿನದಂತೆ ಅವಳಿಗೆ ಅವಳ ಎಡ-ಬಲದ ಕೋಣೆಯಲ್ಲಿಯ ಜನರ ಸುಳಿದಾಟದ ಭಾಸವಾಗಲಿಲ್ಲ. ಆದರಿಂದ ಅವಳು ತನ್ನ ಕೋಣೆಯ ಹೊರಗೆ ಬಂದು ಎಡಬಲದ ಬಾಗಿಲುಗಳ ಬಳಿಗೆ ಹೋಗಿ ನೋಡುತ್ತಾಳೆ, ಒಂದೂ ತೆರವಿರದೆ, ಎಲ್ಲವೂ ಕೀಲಿಹಾಕಲ್ಪಟ್ಟಿರುತ್ತವೆ. ಆದರಿಂದ ಅವಳು ಮನಸ್ಸಿನಲ್ಲಿ ಬಲು ಅಂಜಿದಳು. ಆದರೂ ಆ ಸ್ತ್ರೀಯಳು ಲಗು-ಬಗನೆ ಅಡಿಗೆಮಾಡಿ ಉಂಡು ಕೋಣೆಯ ಕದಕ್ಕೆ ಒಳಗಿ

ನಿಂದ ಅಗಳಿ-ಚಿಲಕಗಳನ್ನು ಹಾಕಿ ಮಲಗಿಕೊಂಡಳು. ಅವಳಿಗೆ ಮೊದಮೊದಲು ನಿದ್ರೆಯೇ ಬರಲಿಲ್ಲ. ಆದರೆ ಹಗಲು ಹನ್ನೆರಡು ತಾಸುಗಳ ಅವಿಶ್ರಾಂತ ಶ್ರಮದಿಂದ ದಣಿದಿದ್ದ ಅವಳ ದೇಹವು, ಮನಸ್ಸು ವಿಶ್ರಾಂತಿ ಸುಖಕ್ಕೆ ಸಮ್ಮತಿಸದಿದ್ದರೂ ವಿಶ್ರಾಂತಿಯನ್ನು ಹೊಂದಲು, ತುಸಹೊತ್ತಿನಲ್ಲಿ ಅವಳಿಗೆ ಗಾಢನಿದ್ರೆಯು ಹತ್ತಿತು.

ಅಪರಾತ್ರಿಯಲ್ಲಿ ಎಂಥದೋ ಒಂದು ಭಯಂಕರ ಸಪ್ಪಳದಿಂದ ಅವಳ ನಿದ್ರಾಭಂಗವಾಯಿತು. ಆಗ ಎಚ್ಚತ್ತು ಕಣ್ದೆರೆದು ನೋಡುವಷ್ಟರಲ್ಲಿ ಬೋಲ್ಪನ್ ಸಾಹೇಬನು ಬಾಗಿಲದ ಅಗಳಿ-ಚಿಲಕಗಳನ್ನು ಮುರಿದು ಒಳಗೆ ಬಂದಿದ್ದು ತನ್ನನ್ನು ಅವಚಿ ಹಿಡಿಯುವ ಸಾಹಸದಲ್ಲಿರುತ್ತಾನೆಂಬದು ಅವಳಿಗೆ ಕಾಣಿಸಿತು. ಕೂಡಲೆ ಅವಳು ಶಂಖಹೊಡೆದು ಗದ್ದಲಮಾಡಹತ್ತಲು, "ಚೂಪ್, ಸೂವ್ವರಕಾ ಬಚ್ಚಾ" ಎಂದೆನ್ನುತ್ತ ಬೋಲ್ಪನ್ನನು ಎರಡು-ಮೂರು ಸಾರೆ ಅವಳನ್ನು ಬೂಟುಗಾಲಿಲೆ ಒದ್ದನು. ಆದರೂ ಅವಳು ಸುಮ್ಮನಾಗದೆ ಒದರುತ್ತ, ಕೂಗುತ್ತ ಹಾಸಿಗೆಯಿಂದ ಎದ್ದೇಳುವ ಪ್ರಯತ್ನ ಮಾಡಹತ್ತಿದಳು ಸಾಹೇಬ ಬಹದ್ದೂರನು ಆ ನಿರಾಶ್ರಿತ ಹಾಗು ಏಕಾಂಗಿನಿಯಾದ ಅಬಲೆಯ ಬಾಯಿಯನ್ನು ಒತ್ತಿಹಿಡಿದು, ಅವಳ ಸೀರೆಯನ್ನು ಸೆಳೆಯಲುಪಕ್ರಮಿಸಿದನು. ಆ ಸಾಹೇಬನ ಆಜ್ಞೆಯ ಮೇರೆಗೆ ಮೋಹಿನಿಯಿದ್ದ ಮನೆಯ ಇತರ ಕೂಲಿಗಳೆಲ್ಲ ಅಂದು ಸಾಯಂಕಾಲವೇ ಬೇರೆ ಕಡೆಗೆ ಸಾಗಿಸಲ್ಪಟ್ಟಿದ್ದರು. ಆದರಿಂದ ಇವಳು ಬೇಕಾದಷ್ಟು ಆರ್ತನಾದವನ್ನು ಮಾಡಿದರೂ ಇಲ್ಲಿಗೆ ಯಾರೂ ಬರಲಾರರೆಂದು ತಿಳಿದೇ ಸಾಹೇಬನು ಅವಳನ್ನು ಭ್ರಷ್ಟಗೊಳಿಸುವ ಆ ನಿಂದ್ಯ ಕೆಲಸಕ್ಕೆ ಸಜ್ಜಾಗಿದ್ದನು. ಆದರೆ ಕರ್ಮ-ಧರ್ಮ ಸಂಯೋಗದಿಂದ ಅವಳ ಆ ಶಂಖಧ್ವನಿಯು ಬಹು ದೂರದಲ್ಲಿಯ ಇತರ ಮನೆಗಳ ಕೂಲಿಗಳ ಕರ್ಣಪಾತವಾದ್ದರಿಂದ ಅವರಲ್ಲಿಯ ಬಹು ಜನರು ಧಾವಿಸುತ್ತ ಮೋಹಿನಿಯ ಕೋಣೆಗೆ ಬಂದರು. ಆದರಿಂದ ಸಾಹೇಬ ಬಹದ್ದೂರನ ಗರ್ಹಣೀಯಕೃತ್ಯಕ್ಕೆ ಅಡ್ಡಿಯುಂಟಾಯಿತು. ನಂತರ ಸಾಹೇಬನು ಆ ಬಂದ ಜನರನ್ನು ಕಿಡಿಗಣ್ಣಿನಿಂದ ನೋಡುತ್ತ ಅಲ್ಲಿಂದ ಕಾಲ್ದೆಗೆದನು. ಅಂದು ರಾತ್ರಿ ಮೋಹಿನಿಯನ್ನು ಆ ಅನನ್ವಿತ ಕೃತ್ಯದಿಂದ ಪಾರುಮಾಡಿದ ಶ್ರೇಯಸ್ಸು ನಮ್ಮ ನಾರಾಯಣದೀಕ್ಷಿತನಿಗೇ ಹೆಚ್ಚು ಬಂದಿತು.

ಮರುದಿನ ನಾರಾಯಣದೀಕ್ಷಿತಾದಿಗಳ ಸೂಚನೆಯಮೇರೆಗೆ ಮೋಹಿನಿಯು ಹಿಂದಿನ ರಾತ್ರಿಯಲ್ಲಿ ಬೋಲ್ಪನನು ಮಾಡಿದ ಅಭಿಯೋಗದ ದೂರನ್ನು ಆ ಕ್ಷೇತ್ರದ ಮುಖ್ಯವಣಿಕನಿಗೆ ತಿಳಿಸಿದಳು. ಅವನು ಸಜಾತಿಯ ಅಭಿಮಾನದಿಂದ ಮೋಹಿನಿಯು

ಸಂಗತಿಯನ್ನು ಕಿವಿಯ ಮೇಲೆ ಹಾಕಿಕೊಳ್ಳಲಿಲ್ಲ. ಆಗ ನಾರಾಯಣದೀಕ್ಷಿತನೇ ಪ್ರಮುಖನಾಗಿ ಆ ಕೂಲಿಗಳಿಂದ ಪಟ್ಟಿ ಕೂಡಿಸಿ ಬೋಲ್ಟನ್‌ಸಾಹೇಬನಮೇಲೆ ಫೌಜದಾರಿಯಲ್ಲಿ ಫಿರ್ಯಾದು ಕೊಡುವದಕ್ಕಾಗಿ ಮೋಹಿನಿಗೆ ಕೆಲವು ರೂಪಾಯಿಗಳನ್ನು ಕೂಡಿಸಿ ಕೊಟ್ಟನು. ಮರುದಿನವೇ ಫಿರ್ಯಾದಿಯಾಯಿತು. ಅಪರಾಧದ ವಿಚಾರಣೆಯಾಗುವ ಮೊದಲನೇ ದಿವಸ ಆ ಕೂಲಿಗಳ ಹಳ್ಳಿಯ ಎಲ್ಲ ಕೂಲಿಗಳನ್ನು ಬೋಲ್ಟನ್‌ಸಾಹೇಬನು ಅಲ್ಲಿಂದ ೩೦-೪೦ ಮೈಲುಗಳ ಅಂತರದಲ್ಲಿರುವ ಕ್ಷೇತ್ರದ ಯಾವುದೊಂದು ಕೆಲಸದ ನೆವಮಾಡಿ ದಾಟಿಸಿದನು. ಫಿರ್ಯಾದುದಾರಳಾದ ಮೋಹಿನಿಯೊಬ್ಬಳೇ ಅಲ್ಲಿ ಉಳಿದಳು. ಇಲ್ಲೆನ್ನಲಿಕ್ಕೆ ಆಜಾರಿಯಿದ್ದದರಿಂದ ನಾರಾಯಣದೀಕ್ಷಿತನನ್ನೂ ಅನಿವಾರ್ಯವಾಗಿ ಆ ಹಳ್ಳಿಯಲ್ಲಿರಗೊಡಬೇಕಾಯಿತು. ವಿಚಾರಣೆಯ ಕಾಲಕ್ಕೆ ಮ್ಯಾಜಿಸ್ಟ್ರೇಟನು ಫಿರ್ಯಾದಿಯು ತನ್ನ ಆರೋಪವನ್ನು ಸಿದ್ಧಪಡಿಸುವುದಕ್ಕಾಗಿ ಸಾಕಷ್ಟು ಜನ ಸಾಕ್ಷಿದಾರರನ್ನು ತರಬೇಕೆಂದು ಅಪ್ಪಣೆ ಮಾಡಿದನು. ಆದರೆ ಆ ಅನಾಥ ಮೋಹಿನಿಯು ಸಾಕ್ಷಿದಾರರನ್ನೆಲ್ಲಿಂದ ತರಬೇಕು? ಅವಳಿಗೆ ಸಾಕ್ಷಿದಾರರು ಸಿಗಬಾರದೆಂದೇ ಆರೋಪಿಯು ಮುನ್ನಾ ದಿನವೇ ಅಲ್ಲಿಯ ಜನರನ್ನು ಬಹು ದೂರ ದಾಟಿಸಿದ್ದನು. ನಂತರ ಅವಳು ಜೆನೆಯಿಂದ ಬಳಲುತ್ತಿದ್ದ ನಾರಾಯಣನೊಬ್ಬನನ್ನೇ ತನ್ನ ಪಕ್ಷದ ಸಾಕ್ಷಿದಾರನೆಂದು ಸೂಚಿಸಿದಳು. ಕೂಡಲೆ ನಾರಾಯಣನು ಕೋರ್ಟಿಗೆ ಕರೆಯಿಸಲ್ಪಟ್ಟನು. ಬೋಲ್ಟನ್ ಸಾಹೇಬನು ಮೋಹಿನಿಯಮೇಲೆ ಅತ್ಯಾಚಾರ ಮಾಡಿದ್ದು ಖಂಡಿತವೆಂದು ಅವನು ಪ್ರಮಾಣಪೂರ್ವಕವಾಗಿ ಕೋರ್ಟಿಗೆ ತಿಳಿಸಿದನು.

ನಂತರ ಆರೋಪಿಯ ಜಬಾನಿಯಾಯಿತು. ಆರೋಪಿಯು ತನ್ನ ತಪ್ಪನ್ನು ಒಪ್ಪಿಕೊಳ್ಳದೆ, ಈ ಬದ್‌ಮಾಷ ನಾರಾಯಣ ದೀಕ್ಷಿತ ಹಾಗು ಮೋಹಿನಿಯ ಸಂಬಂಧವಿರುವುದೆಂತಲೂ, ಒಂದುದಿನ ಇವರ ಆ ಸಂಕೇತವನ್ನು ಕಂಡುಹಿಡಿದು, ನಾನು ಇವರಿಗೆ ಬುದ್ಧಿವಾದವನ್ನು ಹೇಳಿದ್ದರಿಂದ, ಈ ಇಂಡಿಯನ್ ಬಗರರು ಸುಮ್ಮಸುಮ್ಮನೆ ನನ್ನ ಮೇಲೆ ಆರೋಪ ಹೊರಿಸಿರುತ್ತಾರೆಂತಲೂ ನಿಜಸಂಗತಿಯು ಸುಳುವುಕೂಡ ಹತ್ತದಹಾಗೆ ಆವೇಶದಿಂದ ತಿಳಿಸಿದನು. ಮ್ಯಾಜಿಸ್ಟ್ರೇಟಸಾಹೇಬರಿಗೆ ಬೋಲ್ಟನನು ನಿರಪರಾಧಿ ಎಂಬದು ಕೂಡಲೆ ಮನವರಿಕೆಯಾಯಿತು. ಸಜಾತಿಯ ಮನುಷ್ಯನು ಎಂಥಮಹತ್ವದ ತಪ್ಪು ಮಾಡಿದರೂ ಅದಕ್ಕೆಕ್ಷುಲ್ಲಕ ಸ್ವರೂಪಕೊಡುವುದೂ ನಮ್ಮಹಿಂದನಿವಾಸಿಯು ತೀರಸಣ್ಣತಪ್ಪಿತಸ್ಥನಾಗಿದ್ದರೂ ಅವನ ಆ ತಪ್ಪಿಗೆ ಭಯಂಕರ ಸ್ವರೂಪವನ್ನು ಕೊಟ್ಟು ಮಿತಿಮೀರಿದ ಶಿಕ್ಷೆಯನ್ನು ಕೊಡುವುದೂ

ಬ್ರಿಟಿಶ ನ್ಯಾಯದೇವತೆಯ ಲಕ್ಷಣವಾಗಿದೆಯೆಂಬದನ್ನು ನಮ್ಮ ಹಿಂದುನಿವಾಸಿಗಳೆಲ್ಲರೂ ಈಗೀಗ ತಿಳಿದಿರುವರಲ್ಲದೆ, ಜಪಾನ, ಅಮೇರಿಕಾ, ಫ್ರಾನ್ಸ ಮುಂತಾದ ಪರರಾಷ್ಟ್ರದ ಜನರೂ ಮನಗಂಡಿರುವರು. ಇಷ್ಟೇ ಏಕೆ, ಬ್ರಿಟನ್ನದ ನಿವಾಸಿಗಳಲ್ಲಿಯ ಬಹು ಜನರು ತಮ್ಮ ಬ್ರಿಟಿಶ ನ್ಯಾಯದೇವತೆಗುಂಟಾಗುತ್ತಿರುವ ಈ ಕಲಂಕವನ್ನು ಬಹುಪರಿಯಾಗಿ ಜಗತ್ತಿನ ನಿದರ್ಶನಕ್ಕೆ ತಂದು ಕೊಡಹತ್ತಿರುವರು. ಮೇಲೆ ಹೇಳಿದಂತೆ ಬೋಲ್ಟನನು ನಿರಪರಾಧಿಯೆಂದು ನಿರ್ಧರಿಸಲ್ಪಟ್ಟ ಬಳಿಕ ಅವನು ಕೊಟ್ಟ ಪುರಾವೆಯಿಂದಲೇ ಮೋಹಿನಿ ಹಾಗು ನಾರಾಯಣದೀಕ್ಷಿತರಿಗೆ ಆರು ಆರು ತಿಂಗಳುಗಳ ಕಠಿಣ ಸಜೆಯು ವಿಧಿಸಲ್ಪಟ್ಟಿತು. ನಾರಾಯಣದೀಕ್ಷಿತನು ನಿಜವಾದ ಸಂಗತಿಯನ್ನು ಹೇಳಿದ್ದನು. ಆದರೆ ತಮ್ಮ ಅಧಿಕಾರಿಗಳಿಗೆ ಪ್ರಿಯವಾಗದಂತಹ "ನಬ್ರೂಯಾತ್ ಸತ್ಯಮಪ್ರಿಯಮ್" ಸತ್ಯವನ್ನು ಹೇಳಿದುದರಿಂದಲೇ ಅವನು ಆ ಸಶ್ರಮ ಶಿಕ್ಷೆಗೆ ಗುರಿಯಾಗಬೇಕಾಯಿತು!!!

## ಹದಿನಾಲ್ಕನೆಯ ಪರಿಚ್ಛೇದ.

### ಪಲಾಯನ.

ಈ ಕಾರಾಗೃಹವಾಸವೇ ನಾರಾಯಣದೀಕ್ಷಿತನ ಉದ್ಧಾರಕ್ಕೆ ಕಾರಣವಾಯಿತು. ಇವನು ಸೆರೆಮನೆಯಲ್ಲಿರುವಾಗ ನಮ್ಮ ಮಿಸ್ಟರ ಎಸ್. ಚಂದ್ರನು—ನ್ಯೂಯಾರ್ಕ ಚಂದ್ರ ಕಂಪನಿಯ ಪ್ರಸ್ತುತದ ಮಾಲಕನು—ಒಂದು ದಿನ ಇಕ್ಷುದ್ವೀಪದೊಳಗಿನ ಆ ಸೆರೆಮನೆಯ ವ್ಯವಸ್ಥೆಯನ್ನು ನೋಡುವದಕ್ಕಾಗಿ ಹೋಗಿದ್ದನು. ಅವನಿಗೆ ಅಲ್ಲಿ ತಮ್ಮ ಹಿಂದುನಿವಾಸಿಯಾದ ಈ ನಾರಾಯಣನು ಕಾಣಿಸಿಕೊಂಡನು. ಕೂಡಲೆ ಅವನಿಗೆ ಪರಮಾಶ್ಚರ್ಯವಾಯಿತು. ಇವನು ತಮ್ಮ ದೇಶದ ಮಾನ್ಯವಂತರಂತೆ ಕಾಣುತ್ತಿದ್ದು, ಇಲ್ಲಿ ಈ ದ್ವೀಪಾಂತರದಲ್ಲಿಯ ಕಾರಾಗೃಹದಲ್ಲಿ ಏಕೆ ಬಂದಿರುವನೆಂಬದು ಅವನಿಗೆ ತಿಳಿಯದಾಯಿತು. ಆಗ ಅವನು ಆ ಸೆರಮನೆಯ ಸಾರ್ಜಂಟನ ಮುಖಾಂತರ ನಾರಾಯಣನನ್ನು ತನ್ನ ಬಳಿಗೆ ಬರಮಾಡಿಕೊಂಡನು; ಹಾಗು ಅವ

ನನ್ನು ಕುರಿತು—ನಿನ್ನ ಹೆಸರೇನು? ನಿನ್ನ ಜನ್ಮ ಭೂಮಿಯಾವದು? ನಿನಗೆ ಶಿಕ್ಷೆಯಾಗಲಿಕ್ಕೆ ಕಾರಣವೇನು? ಇತ್ಯಾದಿ ಪ್ರಶ್ನೆಗಳನ್ನು ಮಾಡಿದನು.

"ನಾನು ಹಿಂದುಸ್ಥಾನ ದೇಶದೊಳಗಿನ ಮುಂಬಯಿ ಇಲಾಖೆಯ ದಕ್ಷಿಣ ಪ್ರಾಂತದವನು. ಮೊದಲು ನನಗೆ ನಾರಾಯಣದೀಕ್ಷಿತನೆಂದು ಕರೆಯುತ್ತಿದ್ದರು; ಈಗ ನಾರಾಯಣನೆನ್ನುವರು. ಸತ್ಯವನ್ನು ಹೇಳಿದುದಕ್ಕಾಗಿ ನನಗೆ ಕಠಿಣ ಸಜೆಯಾಗಿದೆ." ಎಂದು ನಾರಾಯಣನು ಹೇಳಿದ ಉತ್ತರವನ್ನು ಕೇಳಿ, ಎಸ್. ಚಂದ್ರನಿಗೆ ಮತ್ತಿಷ್ಟು ವಿಸ್ಮಯವಾಯಿತು. ಆಗ ಅವನು ಪುನಃ ಅವನನ್ನು ಕೇಳಿದನೇನಂದರೆ—"ನೀನು ನನ್ನೊಡನೆ ಉಪಹಾಸ ಮಾಡುವ ಹಾಗೆ ಕಾಣುತ್ತದೆ. ಬಲು ಎಚ್ಚರಿಕೆಯಿಂದ ಮಾತಾಡು." ಎಂದು ಗದ್ದರಿಸಿದ್ದಕ್ಕೆ ನಾರಾಯಣನು ಅತ್ಯಂತ ವಿನಯದಿಂದ—"ರಾವಸಾಹೇಬರೇ, ನನ್ನಂಥ ಕ್ಷುಲ್ಲಕನು ತಮ್ಮಂಥ ಮಹನೀಯರ ಉಪಹಾಸ ಮಾಡುವದೆಂದರೇನು? ಸತ್ಯವಾಗಿ ನುಡಿದುದರಿಂದಲೇ ನಾನು ಕಾರಾಗೃಹಕ್ಕೆ ಪಾತ್ರನಾಗಿರುವೆನು, ಎಂದಂದು, ತಾನು ತನ್ನ ಊರಿಂದ ಹೊರಟಲಾಗಾಯಿತು ಇಂದಿನವರೆಗಿನ ತನ್ನ ವಿಷಯದ ಇತ್ಥಂಭೂತ ಸಂಗತಿಯನ್ನು ಅವನಿಗೆ ನಿವೇದಿಸಿದನು.

ಬಳಿಕ ಮಿ. ಯಸ್. ಚಂದ್ರನು-ನಮ್ಮ ನಾರಾಯಣನು-ಅವನ ಹೆಸರನ್ನೂ ಆ ಮೋಹಿನಿಯ ಹೆಸರನ್ನೂ ತನ್ನ ನೋಟಬುಕ್ಕಿನಲ್ಲಿ ಬರಕೊಂಡು ತನ್ನ ಬಿಡಾರಕ್ಕೆ ಬಂದನು. ನಂತರ ಅವನು ಒಬ್ಬ ಸಕ್ಷಮ ವಕೀಲನಿಗೆ ನಾರಾಯಣ ಹಾಗು ಮೋಹಿನಿಯ ಪಕ್ಷ ವಹಿಸಿ, ಕೋರ್ಟಿನಲ್ಲಿ ಕೆಲಸ ನಡಿಸಲು ಹೇಳಿ. ಅವರ ಆ ಖಟ್ಲೆಯನ್ನು ಅಪೀಲ ಕೋರ್ಟಿಗೆ ದಾಖಲ ಮಾಡಿಸಿದನು. ವಕೀಲನ ಹಾಗು ಶಿವರಾಯನ ಪ್ರಯತ್ನದಿಂದ ಅಪೀಲ ಕೋರ್ಟಿನಲ್ಲಿ ನಾರಾಯಣ ಹಾಗು ಮೋಹಿನಿಯ ಶಿಕ್ಷೆಗಳು ರದ್ದಾದವು. ಬೋಲ್ಟನ್ ಸಾಹೇಬನು ಅಪರಾಧಿಯೆಂದು ನಿರ್ಣಯವಾಗಿ ಅವನಿಗೆ ಆರು ತಿಂಗಳ ಕಠಿಣ ಶಿಕ್ಷೆಯು ವಿಧಿಸಲ್ಪಟ್ಟಿತು. ನಂತರ ಶಿವರಾಯನು ಯಾವ ವಣಿಕನಲ್ಲಿ ನಾರಾಯಣ ಹಾಗು ಮೋಹಿನಿಯರು ಇರುತ್ತಿದ್ದರೋ, ಆ ವಣಿಕನಿಗೆ ಪತ್ರ ಬರೆದು, ಇವರ ಬಗ್ಗೆ ನಿಮಗೆ ಸಲ್ಲಬೇಕಾದ ಹಣವನ್ನು ನಾನು ಸಲ್ಲಿಸುವೆನೆಂದೂ, ನೀವು ಇವರನ್ನು ನನ್ನ ಇಸ್ಟೇಟಿಗೆ ಕಳಿಸಬೇಕೆಂದೂ ತಿಳಿಸಿದನು. ಆ ವಣಿಕನು ಈ ಇಬ್ಬರು ಕೂಲಿಗಳ ಬಗ್ಗೆ ತನಗೆ ಬರಬೇಕಾದ ಹಣವನ್ನು ಶಿವರಾಯನಿಂದ ಪಡೆದು ಅವರನ್ನು ಇವನ ವಶಕ್ಕೆ ಒಪ್ಪಿಸಿದನು.

ನಾರಾಯಣನು ಉಚ್ಚ ಕುಲದವನೂ ಸುಶಿಕ್ಷಿತನೂ ಇರುವುದನ್ನು ತಿಳಿದು

ಶಿವರಾಮನು ಅವನನ್ನು ಕೂಲೀ ಕರಾರುಬಂಧದ ವಿಮುಕ್ತನಾಗಿ ಮಾಡಿ ತನ್ನ ಖಾಸಗಿ ಕಾರಭಾರಿಯ ಕೆಲಸಕ್ಕೆ ನೇಮಿಸಿಕೊಂಡನು. ಅದರಂತೆ ಮೋಹಿನಿಯನ್ನು ತನ್ನ ದಾಸಿಯನ್ನಾಗಿರಿಸಿಕೊಂಡನಲ್ಲದೆ, ಹೇಗ್‍ಸಾಹೇಬನಲ್ಲಿ ಉಳಿದಿದ್ದ ಅವಳ ಗಂಡನನ್ನು ಕರೆಯಿಸಿಕೊಂಡು, ಅವನನ್ನೂ ತನ್ನ ತೈನಾತಿಗೆ ನಿಯಮಿಸಿದನು.

ನಾರಾಯಣದೀಕ್ಷಿತನು ಕರಾರುಬದ್ಧತೆಯೆಂಬ ಶಾಸನದಿಂದ ಕೂಲಿಗಳಿಗೆ ಎಷ್ಟು ಭಯಂಕರ ತಾಪವಾಗುತ್ತದೆಂಬುದನ್ನು ಸ್ವತಃ ಅನುಭವಿಸಿ ಮನಗಂಡವನಾದ್ದರಿಂದ ಅವನು ಶಿವರಾಮನಿಗೆ ಸೂಚಿಸಿ ಸೂರ್ಯಚಂದ್ರ ಕಂಪನಿಯ ಕ್ಷೇತ್ರದಲ್ಲಿ ಆ ಬಗೆಯ ಕರಾರುಬದ್ಧ ಕೂಲಿಗಳನ್ನು ತರಿಸಿಕೊಳ್ಳುವದನ್ನು ಕಟ್ಟು ಮಾಡಿಸಿದನು; ಹಾಗು ಆ ಕಂಪನಿಯಲ್ಲಿ ಈ ವರೆಗೆ ಆ ಕರಾರಿನಿಂದ ಇದ್ದವರನ್ನು ಮುಕ್ತರನ್ನಾಗಿ ಮಾಡಿದನು. ನಂತರ ಆ ತಾಲ್ಲೂಕಿನೊಳಗಿನ ಇತರ ವಣಿಕರಲ್ಲಿ ಕರಾರುಬದ್ಧತೆಯಿಂದ ದುಡಿಯುತ್ತಿದ್ದ ಕೂಲಿಗಳನ್ನು—ಅವರು ವಣಿಕರಿಗೆ ಸಲ್ಲಿಸಬೇಕಾಗಿದ್ದ ಹಣವನ್ನು ಕೊಟ್ಟು—ಅವರ ದಾಸ್ಯದೊಳಗಿಂದ ಬಿಡಿಸಲಾರಂಭಿಸಿದನು. ಹೀಗಾಗಿ ಕೆಲವು ದಿವಸಗಳಲ್ಲಿಯೇ ಸೂರ್ಯಚಂದ್ರಕಂಪನಿಗೆ ಬೇಕಾದಷ್ಟು ಜನ ಕರಾರುಬದ್ಧತೆಯಿಲ್ಲದ ಕೂಲಿಗಳು ದೊರೆತರು. ಆ ಕೂಲಿಕಾರರಿಗೆ ಆ ಭಯಂಕರ ಕರಾರುಬದ್ಧತೆಯ ಶಾಸನದಿಂದ ವಿಮುಕ್ತರಾದದ್ದಕ್ಕಾಗಿ ಬಲು ಸಂತೋಷವೆನಿಸತೊಡಗಿತು.

ನಮ್ಮ ರಾಮಚಂದ್ರನು ಹೇಗ್‍ಸಾಹೇಬನ ಕ್ಷೇತ್ರದಲ್ಲಿಯೇ ಕಾಲಹರಣ ಮಾಡುತ್ತಿದ್ದನು. ಘಟನಾಚಕ್ರದಿಂದ ಯಾವ ಮಾದಿಗರ ಬೀರನು ರಾಮಚಂದ್ರನಿಗೆ ಮಾಜಗಾಂವದ ಕೂಲಿ ಡಿಪೋದಲ್ಲಿ ಪರಿಚಯವಾಗಿದ್ದನೋ, ಅವನು ಯಾವದೊಂದು ಘನಬೇನೆಗೆ ಈಡಾಗಿದ್ದದರಿಂದ ಅವನ ಸಹಾಯ ಯಾಚನೆಗಾಗಿ ಅವನ ಆಶ್ರಯಕ್ಕೆ ಬಂದನು. ಬೀರನು ತನ್ನ ಸ್ವಗ್ರಾಮದಲ್ಲಿ ಹರಿಣಾಕ್ಷಿಯೆಂಬ ತಂದೆ-ತಾಯಿಗಳಿಲ್ಲದ, ಅನಾಥ ಕುಲಗೋತ್ರದ ಚಿಕ್ಕ ಹುಡುಗಿಯನ್ನು ಮದುವೆಯಾಗಿದ್ದನು. ಈಗ ಹರಿಣಾಕ್ಷಿಯು ಷೋಡಶ ವರುಷದ ತರುಣಿಯಾಗಿದ್ದಳು. ಆದರೆ ಅವಳ ಗಂಡನಾದ ಬೀರನು ಮಾತ್ರ, 'ವೃದ್ಧಸ್ಯ ತರುಣೀ ವಿಷಂ' ಎಂಬಂತೆ ರೋಗಗ್ರಸ್ತನಾಗಿ ಹಾಸಿಗೆ ಹಿಡಿದಿದ್ದನು. ಅದರಿಂದ ಕೂಲಿಯ ಕೆಲಸಮಾಡುವ ಸಾಮರ್ಥ್ಯವು ಅವನಲ್ಲಿರಲಿಲ್ಲ. ಅದಕ್ಕಾಗಿಯೇ ಅವನು ನಮ್ಮ ರಾಮಚಂದ್ರನನ್ನು ಆಶ್ರಯಿಸಿ, ತಾವು ಮೂವರೂ ಒತ್ತಟ್ಟಿಗೆ ಒಂದೇ ಮನೆಯಲ್ಲಿ ವಾಸಿಸುತ್ತಿದ್ದರು. ಬೀರನು ರೋಗಗ್ರಸ್ತನಾಗಿದ್ದರೂ ಮನೆಯಲ್ಲಿದ್ದು ಮೂವರಿಗೂ ಅಡಿಗೆ ಮಾಡುತ್ತಿದ್ದನು.

ಬೀರನು ಅಡಿಗೆಯಲ್ಲಿ ಹೆಚ್ಚಾಗಿ ನುರಿತದ್ದರಿಂದ ಅವನು ಅದನ್ನು ದ್ರೌಪದಿಯಂತೆ ಬಹು ಸವಿಕಟ್ಟಾಗಿ ಮಾಡುತ್ತಿದ್ದನು. ರಾಮಚಂದ್ರನು ಬೀರನ ದ್ರೌಪದಿಯಂತಹ ಸವಿಅಡಿಗೆಯ ಲೋಭದಿಂದಲೋ, ಅವನ ದ್ರೌಪದೀಸದೃಶ ಪತ್ನಿಯಾದ ಹರಿಣಾಕ್ಷಿಯ ಲೋಭದಿಂದಲೋ ಅವನಿಗೆ ತನ್ನಲ್ಲಿ ಆಶ್ರಯಕೊಟ್ಟು ತಾನೂ ಅವರೊಡನೆ ಕೂಡಿ ನಡೆಯುತ್ತಿದ್ದನು. ಆದರೆ ಅಡಿಗೆಯಲ್ಲಿ ನಿಷ್ಣಾತನಾದ ಆ ಬೀರನು ಮುಂದೆ ತುಸ ದಿನಗಳಲ್ಲಿಯೇ ನೆಲಪಟ್ಟಿದನು. ಎದ್ದು ಕೂರುವದು ಕೂಡಾ ಅವನಿಂದಾಗದಾಯಿತು. ಆಗ ರಾಮಚಂದ್ರ ಹಾಗು ಹರಿಣಾಕ್ಷಿಯರು ಹೊಲದಿಂದ ರಾತ್ರಿ ಒಂಬತ್ತಕ್ಕೆ ಬಂದು ಅಡಿಗೆ ಮಾಡಿದ ನಂತರ ಆ ರೋಗಿಗೆ ಊಟ ಕಾಣಿಸಬೇಕಾಗುತ್ತಿತ್ತು. ಆ ಅಪರಾತ್ರಿಯಲ್ಲಿ ಅವನು ಒಂದೊಂದು ದಿನ ಉಣ್ಣುವನು; ಒಂದೊಂದು ದಿನ ಉಪವಾಸವೇ ಬೀಳುವನು. ಕ್ರಮವಾಗಿ ಅವನ ರೋಗವು ವೃದ್ಧಿಂಗತವಾಯಿತು. ಒಂದು ದಿನ ಬೀರನು ಒಲ್ಲೆನೆಂದರೂ ಕೇಳದೆ ಆ ಕೂಲಿಗಳ ವಸತಿಯ ವ್ಯವಸ್ಥಾಪಕನು ಅವನನ್ನು ಆಸ್ಪತ್ರೆಗೆ ಕಳಿಸಿದನು.

ಮರುದಿವಸ ರಾತ್ರಿ ಹೊಲದಿಂದ ಬಂದಬಳಿಕ ಅಡಿಗೆ ಮಾಡುವಾಗ ಹರಿಣಾಕ್ಷಿಯು ರಾಮಚಂದ್ರನಿಗೆ ಹೇಳಿದಳೇನಂದರೆ:—"ಇಂದು ರಾತ್ರಿ ನಮ್ಮ ಧಣಿಯರು (ವಣಿಕರು) ನನ್ನನ್ನು ಕರೆದಿರುವರೆಂದು ಒಬ್ಬ ಶಿಪಾಯಿಯು ಆಗಲೇ ನನಗೆ ತಿಳಿಸಿರುವನು."

"ಹಾಗಾದರೆ, ನೀನು ಅಲ್ಲಿಗೆ ಹೋಗುತ್ತೀಯೇನು?"

"ಹೋಗಲಿಯಾ-ಬೇಡವೋ?

"ಏನು ಮಾಡುವದನ್ನು ನಿಶ್ಚಯಿಸಿರುವೆ?"

"ನಾನು ಹೋಗಬಾರದೆಂದೇ ನಿರ್ಧರಿಸಿದ್ದೇನೆ"

"ಆ ಮೇಲೆ?"

"ಆ ಮೇಲೆಯೇನು? ಏನು ಆಗುವದು ? ಹೋಗಲಿ? ನಾನಾಗಿ ಹೋಗದಿದ್ದರೆ, ಹಿಂದಕ್ಕೆ ಮೋಹಿನಿಗೆ ಆದ ಗತಿಯೇ ನನಗಾಗಬಹುದಲ್ಲವೆ?"

"ಮೋಹಿನಿಯ ಸಂಗತಿಯು ನಿನಗೆ ಗೊತ್ತಿರುವದಷ್ಟೆ!"

"ಚನ್ನಾಗಿ ಬಲ್ಲೆನು; ಆಗ ನಾನು ತೀರ ಚಿಕ್ಕವಳಿರಲಿಲ್ಲ. ನಾನಂತೂ ಈಗ ಅಲ್ಲಿಗೆ ಹೋಗಲಾರೆನು. ಆದದ್ದಾಗಲಿ."

"ಆ ಅತ್ಯಾಚಾರವನ್ನು ಸಹಿಸುವ ಸಾಮರ್ಥ್ಯವು ನಿನಗುಂಟೋ?"

ಬಹಳಹೊತ್ತಿನವರೆಗೆ ಆಲೋಚಿಸಿ ಹರಿಣಾಕ್ಷಿಯು ನುಡಿದಳೇನಂದರೆ—'ಇಲ್ಲ'

"ಹಾಗಾದರೆ ಇಲ್ಲಿಂದ ಓಡಿಹೋಗು" ಎಂದು ರಾಮಚಂದ್ರನು ಅವಳಿಗೆ ಸೂಚಿಸಿದನು.

"ನಾನೊಬ್ಬಳೇ ಹೋಗುವದಾದರೂ ಎಲ್ಲಿಗೆ?"

"ನ್ಯೂಯಾರ್ಕ ಚಂದ್ರ ಕಂಪನಿಯ ಕ್ಷೇತ್ರಕ್ಕೆ ಈ ವಣಿಕನಲ್ಲಿಯ ನನ್ನ ಕರಾರು ಪೂರೈಸಿದೆ; ನೀನೂ ಕರಾರುಬದ್ಧತೆಯ ಕೂಲಿಯಿಂದ ಮುಕ್ತಳಾಗಿರುವೆ. ಈ ವಣಿಕನಿಂದ ಸಾಲವಾಗಿ ಇಸಕೊಂಡ ಹಣವನ್ನು ನಮ್ಮಿಂದ ಮುಟ್ಟಿಸಲಿಕ್ಕಾಗದ್ದರಿಂದ ನಾವು ಇವನ ಈ ವರೆಗಿನ ಅತ್ಯಾಚಾರವನ್ನು ಸಹಿಸಿದೆವು. ನಾವು ನಮ್ಮ ಸಾಲವನ್ನು ತೀರಿಸಿದ್ದರೆ, ಎಂದೋ ಹೋಗಿ ನ್ಯೂಯಾರ್ಕಚಂದ್ರಕಂಪನಿಯಲ್ಲಿ ಸುಖವಾಗಿರಬಹುದಾಗಿತ್ತು."

"ಈ ವಣಿಕರ ಸಾಲವು ಕೊಟ್ಟು ತೀರಿಸೇವೆಂದರೆ ಎಂದಾದರೂ ಮುಗಿಯಬಲ್ಲದೆ? ಇವರಲ್ಲಿ ಒಮ್ಮೆ ಒಂದು ರೂಪಾಯಿ ಸಾಲ ತೆಗೆದರೆ ಸಾಕು. ಅದರ ಬಡ್ಡಿ, ಸರಳಬಡ್ಡಿ, ಚಕ್ರಬಡ್ಡಿ, ಮಹಾಬಡ್ಡಿಗಳು ಬೆಳೆದು ಅದು ಕುಸದಿನಗಳಲ್ಲಿಯೇ ಘನರೂಪವನ್ನು ಹೊಂದುವದು. ನಾವು ಪ್ರತಿ ವಾರಕ್ಕೆ ನಮ್ಮ ಕೂಲಿಯೊಳಗಿಂದ ಒಂದೊಂದು ರೂಪಾಯಿ ಮುಟ್ಟಿಸುತ್ತ ಹೋಗಿದ್ದರೂ ಆ ಸಾಲವು ಇನ್ನೂ ೨೫ ರೂಪಾಯಿ ಇದ್ದೇ ಇದೆಯಂತೆ."

"ನಾವು ಇನ್ನು ನೂರುವರ್ಷ ಬದುಕಿದ್ದು ಇವನಲ್ಲಿ ಕೆಲಸ ಮಾಡಿ ಪ್ರತಿ ವಾರಕ್ಕೆ ಒಂದೊಂದು ರೂಪಾಯಿ ಮುರಕೊಟ್ಟರೂ ಇವನ ಸಾಲವು ತೀರುವದಿಲ್ಲ. ನಾವೂ ಇವನ ಆ ಋಣದಿಂದ ಮುಕ್ತರಾಗುವದಿಲ್ಲ. ಇವನ ಸಾಲವು ನಾವು ಸತ್ತರೆ ಮಾತ್ರ ಒಮ್ಮೆಲೆ ತೀರಿ ಹೋಗುವದು. ಇನ್ನು ಓಡಿ ಹೋಗುವದು ಹ್ಯಾಗೆ? ಯಾವಾಗ? ಅದು ಬಲು ಸಾಹಸದ ಮಾತಾಗಿರುತ್ತದೆ" ಎಂದು ನುಡಿದು ರಾಮಚಂದ್ರನು ನಿಟ್ಟುಸಿರುಗರೆದನು.

ಕೆಲ ಕಾಲದ ಮೇಲೆ "ಹಾಗಾದರೆ ಏನು ಮಾಡಬೇಕೆಂಬದನ್ನು ಬೇಗನೆ ನಿರ್ಧರಿಸಿದರ ಏನೂ ನಿರ್ವಾಹವೇ ಇಲ್ಲವಲ್ಲ?" ಎಂದು ಮೀನಾಕ್ಷಿಯು ಚಿಂತಾಕಾತರಳಾಗಿ ನುಡಿಯಲು,

"ಓಡಿ ಹೋದ ಹೊರತು ಈಗ ಬೇರೆ ಉಪಾಯವೇ ಉಳಿದಿರುವದಿಲ್ಲ." ರಾಮಚಂದ್ರನು ನ್ಯೂಯಾರ್ಕಚಂದ್ರ ಕಂಪನಿಯ ಲೋಕಪ್ರಿಯತೆಯನ್ನು ಕೇಳಿದ್ದನು; ಹಾಗು ಅವನು ತನ್ನ ಕರಾರುಬದ್ಧತೆಯು ತೀರಿದೊಡನೆಯೇ ಒಮ್ಮೆ ಅಲ್ಲಿಗೆ ಹೋಗಿದ್ದನು. ಆದರೆ ಅಲ್ಲಿ [illegible] ನ್ಯೂಯಾರ್ಕ ಚಂದ್ರ ಕಂಪನಿಯು ಈಗಿನ

ಮಾಲಕನಾದ ಮಿ|| ಎಸ್. ಚಂದ್ರನ ದನಿಯೂ, ಕಂಠಮುಷ್ಟಿಯೂ ಸಂಚಿತವಾಗಿ ಕಾಣಿಸಿಕೊಳ್ಳಲು, ಅವನು ಅಲ್ಲಿಂದ ಹೇಳದೆ ಕೇಳದೆ ಕಾಲ್ತೆಗೆದು ಬಂದು, ಪುನಃ ತನ್ನ ಮೊದಲಿನ ಯಜಮಾನನಲ್ಲಿಯೇ ಇರಹತ್ತಿದ್ದನು. ಆದರೆ ಈಗ ಹರಿಣಾಕ್ಷಿಯನ್ನು ಈ ಅತ್ಯಾಚಾರದಿಂದ ಪಾರು ಮಾಡುವದಕ್ಕಾಗಿ ಅವನು ಪುನಃ ಅಲ್ಲಿಗೇ ಹೋಗುವದನ್ನು ನಿಶ್ಚಯಿಸಿದನು. ''ಅಲ್ಲಿಗೆ ಹೋಗಿ ಕೆಲದಿನ ಶಿವರಾಯನಿಗೆ ಗುರುತು ಹತ್ತದಹಾಗೆ ಇರಬೇಕು. ಕದಾಚಿತ್ ಅವನು ನನ್ನನ್ನು ಗುರುತಿಸಿದರೂ ತಪ್ಪೇನು? ಅಥವಾ ಹರಿಣಾಕ್ಷಿಯನ್ನು ಅಲ್ಲಿ ಬಿಟ್ಟುಕೊಟ್ಟು ನಾನು ಮರಳಿ ಇಲ್ಲಿಗೆ ಬಂದರೂ ಬರಬಹುದು. ಇದರಿಂದ ಹರಿಣಾಕ್ಷಿಯು ಸಂರಕ್ಷಿಸಲ್ಪಡುವಳು'' ಎಂದು ಆಲೋಚಿಸುತ್ತಿರುವಷ್ಟರಲ್ಲಿ ಹರಿಣಾಕ್ಷಿಯು ಅಡಿಗೆಯನ್ನು ಪೂರೈಸಿದಳು. ಆಗ ರಾಮಚಂದ್ರನು ಅವಳಿಗೆ ಹೇಳಿದುದೇನಂದರೆ,—''ಅನ್ನವನ್ನು ಬುತ್ತಿಯಲ್ಲಿ ಕಲಿಸಿ, ನಿನ್ನ ಕಾಬಂಡಿಯಲ್ಲಿ ಅದನ್ನು ತುಂಬಿ ಮೇಲೆ ನನ್ನ ತಾಬಂಡಿಯನ್ನು ಡಬ್ಬುಹಾಕಿ ಅರಿವೆಯಲ್ಲಿಕಟ್ಟಿಕೊಂಡು ನಡೆ ನಾನು ನೀರಿನ ಚಂಬುವನ್ನು ತಕ್ಕೊಂಡು ನಿನ್ನೊಡನೆ ಬರುವೆನು. ಹೂ, ಹೊರಡು, ಆ ಶಿವರಾಯನು ಇಷ್ಟರಲ್ಲೇ ನಿನ್ನನ್ನು ಪುನಃ ಕರೆಯಲಿಕ್ಕೆ ಬರಬಹುದಾಗಿದೆ. ಅವನು ಇಲ್ಲಿಗೆ ಬಂದು ಈ ಕೋಣೆಯನ್ನು ಹುಡುಕುವಷ್ಟರಲ್ಲಿ ನಾವು ಇಲ್ಲಿಂದ ಒಂದೆರಡು ಹರದಾರಿ ದಾರಿಯನ್ನು ಕ್ರಮಿಸಿರಬೇಕಾಗುವದು. ಪೂರ್ಣಿಮಾಚಂದ್ರ ಕಂಪಿಸಿದ ಕ್ಷೇತ್ರವು ಇಲ್ಲಿಂದ ಇನ್ನೆರಡು ಹರದಾರಿಯ ಮೇಲಿರುವದು. ಬೆಳಗಾಗುವಷ್ಟರಲ್ಲಿ ಅಲ್ಲಿಗೆ ಹೋಗಿ ತಲುಪಿದರೇ ನಾವು ಪಾರಾದೇವು.''

''ಹಾಗಾದರೆ ಈಗಲೇ ನಡೆಯಿರಿ, ನಾನು ಸಿದ್ಧಳಾಗಿರುವೆನು'' ಎಂದು ಹೇಳಿ, ಹರಿಣಾಕ್ಷಿಯು ಮನೆಯಿಂದ ಹೊರಬಿದ್ದಳು. ಕೂಲಿಗಳ ಊಟದ ಸಮಯವೆಂದು ಆ ಹಳ್ಳಿಯ ಆಗಸಿಯ ಪಹರೆಯವರು ಅಷ್ಟೊಂದು ಜಾಗರೂಕರಾಗಿರಲಿಲ್ಲ. ರಾಮಚಂದ್ರನು ಸರಳ ದಾರಿಯನ್ನು ಹಿಡಿಯದೆ ಹಳ್ಳಿಯ ಹಿಮ್ಮಗ್ಗಲಿನ ಸಂದಿಯ ದಾರಿಯಿಂದ ಹರಿಣಾಕ್ಷಿಯೊಡನೆ ಹೊರಬಿದ್ದು ಹೋದನು.

ಮಧ್ಯರಾತ್ರಿಯು ಮೀರಲು ಕೂಲಿಹಳ್ಳಿಯು ನಿಶ್ಶಬ್ದವಾಯಿತು. ಬಳಿಕ ಸುಮಾರು ಎರಡುಗಂಟೆಯ ಮೇಲೆ ಒಬ್ಬ ಶಿವರಾಯನು ಹರಿಣಾಕ್ಷಿಯ ಕೋಣೆಗೆ ಬಂದು ಬಾಗಿಲ ಬಡಿಯಲು ಅದು ತಾನಾಗಿಯೇ ತೆರೆಯಿತು. ಆಗ ಅವನು ಮೆಲ್ಲಗೆ—'' ಹರಿಣಾಕ್ಷಿ, ಹರಿಣಾಕ್ಷಿ '' ಎಂದು ಕೂಗಿದನು. ಆದರೆ ಅವನಿಗೆ ಉತ್ತರಕೊಡಲಿಕ್ಕೆ ಅಲ್ಲಿ ಇದ್ದರಾರು? ನಂತರ ಅವನು ಕತ್ತಲಲ್ಲಿಯೇ ಆ ಕೋಣೆ

ತುಂಬ ಹುಡುಕಹತ್ತಿದನು. ಅವನು ಎಡವುತ್ತ ಮುಗ್ಗುತ್ತ ನಡೆದಿರಲು, ಅವನ ಪದಾಘಾತದಿಂದ ಅಲ್ಲಿದ್ದ ಒಂದು ನೀರು ತುಂಬಿದ ಮಡಿಕೆಯೊಡೆದು ಕೋಣೆತುಂಬ ನೀರೇನೀರಾಯಿತು. ಆದರೂ ಅವನು ಹಾಗೆಯೇ ಮುಂದಕ್ಕೆ ನಡೆಯಲು ಒಂದು ರಗಟಿ–ಗೊಂಗಡಿಯು ಅವನ ಕಾಲಿಗೆ ಸ್ಪರ್ಶವಾಯಿತು. ಇಲ್ಲಿಯೇ ಹರಿಣಾಕ್ಷಿಯು ಮಲಗಿರುವಳೆಂದು ಅವನು—'ಹರಿಣಾಕ್ಷಿ, ಏ ಹರಿಣಾಕ್ಷಿ' ಎಂದು ಕೂಗಿದನು. ಆದರೂ ದನಿಕೊಡದ್ದರಿಂದ ಆ ಶಿಪಾಯಿಯು ಇವಳನ್ನು ಚನ್ನಾಗಿ ಒದೆದು ಕರೆದೊಯ್ಯಬೇಕೆಂದು ಹಾಗೆಯೇ ಆ ಕತ್ತಲಲ್ಲಿ ಕಾಲನ್ನಪ್ಪಳಿಸುತ್ತ ಮುಂದೆ ಸಾಗಿದನು. ಹರಿಣಾಕ್ಷಿಯು ಅಡಿಗೆ ಮಾಡಿಕೊಂಡು ಅವಸರದಿಂದ ಹೋಗುವಾಗ ದಿನದಂತೆ ಬೆಂಕಿ ನಂದಿಸಲಿಕ್ಕೆ ಮರೆತಿದ್ದಳು. ಅದು ಬೂದಿ ಮುಸುಕಿಕೊಂಡಿದ್ದರಿಂದ ಆ ಶಿಪಾಯಿಗೆ ಕಾಣಲಿಲ್ಲ. ಅದರಿಂದ ಹರಿಣಾಕ್ಷಿಗೆ ಒದೆಯಬೇಕೆಂದು ಜೋರಿನಿಂದ ಎತ್ತಿದ ಆ ಶಿಪಾಯಿಯ ಕಾಲು ಆ ಬೆಂಕಿಯಲ್ಲಿ ಬಿದ್ದು, ಚನ್ನಾಗಿ ಬೆಂದುಹೋಯಿತು. ಕಾಲನ್ನು ಬೇಗನೆ ಹೊರಗೆ ತೆಗೆದುಕೊಳ್ಳಬೇಕೆಂದು ಪ್ರಯತ್ನಿಸುತ್ತಿರುವಾಗ ಮೊದಲೇ ಗಿಡ್ಡವಾದ ಆ ಮನೆಯ ತೊಲೆಯೂ, ಗೋಡೆಯೂ ಹಣೆಗೆ ಬಡೆದು ಚೆನ್ನಾಗಿ ಅವನಿಗೆ ಕಪಾಲಮೋಕ್ಷವಾಯಿತು. ಹೀಗೆ ಆ ಶಿಪಾಯಿಯು ಕಾಯಿಕತಾಪವನ್ನೂ, ಹರಿಣಾಕ್ಷಿಯು ಫರಾರಿಯಾಗಿರುವಳೆಂಬ ಸುದ್ದಿಯನ್ನೂ ಯಾವ ಮೋರೆಯಿಂದ ತನ್ನ ಯಜಮಾನನಿಗೆ ತಿಳಿಸಬೇಕೆಂಬ ಮಾನಸಿಕ ತಾಪವನ್ನೂ ಒಮ್ಮೆಲೆ ಹೊಂದಿ ಅತ್ಯಂತ ಕ್ಷುಬ್ಧನಾದನು. ಬಳಿಕ ಅವನು ದೀಪ ತಂದು ಆ ಮನೆಯನ್ನು ಚೆನ್ನಾಗಿ ನಿರೀಕ್ಷಿಸಿದನು. ಅವನಿಗೆ ಅಲ್ಲಿ ಹರಿಣಾಕ್ಷಿಯಾಗಲಿ, ರಾಮಚಂದ್ರನಾಗಲಿ ಒಬ್ಬರೂ ಕಂಡುಬರಲಿಲ್ಲ ಆದರೂ ಅವರು ಓಡಿಹೋಗಿರುವರೆಂಬ ಭರವಸೆಯು ಅವನಿಗಾಗಲೊಲ್ಲದು. ನೆರೆಹೊರೆಯ ಮನೆಗೆ ಹೋಗಿರಬಹುದೆಂದು ನಂಬಿ, ಅವನು ಬಹಳ ಕ್ಷಣಗಳ ವರೆಗೆ ಅವರ ಮಾರ್ಗವನ್ನು ನಿರೀಕ್ಷಿಸಿದನು. ಇತ್ತ ವಣಿಕನು ಶಿಪಾಯಿಯು ಹರಿಣಾಕ್ಷಿಯನ್ನು ಇಷ್ಟು ಹೊತ್ತಿಗೆ ಏಕೆ ಕರೆತಂದಿರಲಿಕ್ಕಿಲ್ಲ? ನಡುದಾರಿಯಲ್ಲಿ ತಾನೇ ಅವಳನ್ನು ಕೈಹಚ್ಚಿರುವನೋ ಏನು? ಎಂಬ ನಾನಾಬಗೆಯ ಸಂಶಯಕ್ಕೀಡಾಗಿ, ಮನೆಯಿಂದ ಹೊರಟು ಹರಿಣಾಕ್ಷಿಯ ಮನೆಗೆ ಬಂದನು ಆಗ ಅಲ್ಲಿ ಸುಮ್ಮನೆ ನಿಂತಿರುವ ಶಿಪಾಯಿಯನ್ನು ನೋಡಿ ಅವನನ್ನುದ್ದೇಶಿಸಿ,— ಏಕೆ, ವಿಳಂಬವೇಕೆ? ಎಲ್ಲಿಗೆ ಹೋಗಿರುವಳು? ಎಂದು ಪ್ರಶ್ನೆಮಾಡಲು,

ಭಯದಿಂದಲೂ, ಸಂತಾಪದಿಂದಲೂ ನಡುಗುತ್ತಿದ್ದ ಶಿಪಾಯಿಯು—ನನಗೆ

ಅವಳು ಇನ್ನೂ ಭೇಟಿಯೇ ಆಗಿರುವದಿಲ್ಲ. ಕತ್ತಲೆಯಲ್ಲಿ ಹಾತೊರೆದು ಒದರಿದರೂ ಪತ್ತೆಯಾಗಲಿಲ್ಲ. ಆದರಿಂದ ಈಗ ಬೆಳಕು ತಂದು ಹುಡುಕಲಾರಂಭಿಸಿರುವೆನು.

"ಅವಳು ಹೋದದ್ದಾದರೂ ಎಲ್ಲಿಗೆ?"

"ಅವಳು ಬಹಿರ್ದಿಶೆಗೆ ಹೋಗಿರಬಹುದೆಂದು ಭಾವಿಸಿ, ನಾನು ಈ ವರೆಗೆ ಅವಳ ದಾರಿ ಕಾಯುತ್ತ ಇಲ್ಲಿ ನಿಂತಿರುವೆನು; ಆದರೆ ಅರ್ಧ ಘಂಟೆಯಾದರೂ ಬಂದಿರುವದಿಲ್ಲ."

"ಎಲ್ಲಿಯಾದರೂ ಓಡಿಹೋಗಿರಲಿಕ್ಕಿಲ್ಲವಷ್ಟೆ?"

"ಅಶಕ್ಯವಾಗಿ ಕಾಣುವದಿಲ್ಲ."

"ಹಾಗಾದರೆ ಹುಡುಕಲು ಎತ್ತುಗಡೆ ಮಾಡು. ಬೇರೆ ಶಿಪಾಯಿಗಳನ್ನೂ ಕಾವಲುಗಾರರನ್ನೂ ಕರೆ ನಮ್ಮಲ್ಲಿಯ ಕೂಲಿಗಳ ಹಾಜರಿ ತಕ್ಕೋ."

ಆ ಅಪರಾತ್ರಿಯಲ್ಲಿ ಆ ಕೂಲೀ ಪಳ್ಳಿಯಲ್ಲಿ ಈ ಪ್ರಕಾರ ಗದ್ದಲವೆದ್ದಿತು. ಕೈಯಲ್ಲಿ ದೀಪವನ್ನು ಹಿಡಿದಿದ್ದ ಆ ಶಿಪಾಯಿಗಳು ಆ ಹಳ್ಳಿಯ ಪ್ರತಿಯೊಂದು ಮನೆಯ ಪ್ರತಿಯೊಂದು ಕೋಣೆಯ ಕೂಲಿಗಳನ್ನೆಬ್ಬಿಸಿ ಅವರ ಹಾಜರಿ ತಕ್ಕೊಂಡು ಅವರ ಮನೆಯಲ್ಲಿ ಮತ್ತಾರಾದರೂ ಇರುವರೇನೆಂದು ಝಡತಿ ಮಾಡಿದರು. ಸ್ವಲ್ಪಹೊತ್ತಿನಲ್ಲಿಯೇ ಆ ವಣಿಕನ ಸ್ವಾಧೀನಕ್ಕೊಳಪಟ್ಟ ಎಲ್ಲ ಕೂಲಿಗಳ ಹಾಜರಿಯೂ ಹತ್ತಿತು. ಕೇವಲ ರಾಮಚಂದ್ರನೂ ಹರಿಣಾಕ್ಷಿಯೂ ಮಾತ್ರ ಪತ್ತೆಯಾಗಲಿಲ್ಲ. ಹರಿಣಾಕ್ಷಿಯು ರಾಮಚಂದ್ರನ ಮನೆಯಲ್ಲಿಯೇ ಇರುತ್ತಿದ್ದಳೆಂದೂ, ಅವರಿಬ್ಬರೂ ಕೂಡಿಯೇ ಕೆಲಸವನ್ನು ಮಾಡುತ್ತಿದ್ದರೆಂದೂ ಹೇಳಿದ ಶಿಪಾಯಿಗಳ ಮಾತನ್ನು ಕೇಳಿ ಆ ವಣಿಕನು ನುಡಿದನೇನಂದರೆ—ಓಹೋ ತಿಳಿಯಿತು. ಅದೇ ಬದ್‌ಮಾಷನು ಅವಳನ್ನು ಓಡಿಸಿಕೊಂಡು ಹೋಗಿರುವನು. ನೀವು ಇಬ್ಬರು ಸಿಪಾಯಿಯರೂ, ಇಬ್ಬರು ಕಾವಲುಗಾರರೂ ಹಿಲಾಲುಗಳನ್ನು ತಕ್ಕೊಂಡು ಶೀಘ್ರಗತಿಯಿಂದ ಷ್ಟ್ಯೂಯಾರ್ಟಚಂದ್ರ ಕಂಪನಿಯ ಮಾರ್ಗದಿಂದ ಹುಡುಕ ಹೋಗಿರಿ. ಅವರು ಬಹುಶಃ ಅತ್ತ ಕಡೆಗೇ ಹೋಗಿರಬಹುದು. ಅವರು ಆ ಕಂಪನಿಯ ಹದ್ದಿನಲ್ಲಿ ಹೋಗುವಷ್ಟರಲ್ಲಿ ಅವರನ್ನು ಹಿಡಿದು ತರ್ರಿ, ಎಂದು ಅಪ್ಪಣೆಮಾಡಿದನು.

ಶಿಪಾಯರೂ ಕಾವಲುಗಾರರೂ ಕೈಯಲ್ಲಿ ಪ್ರಜ್ವಲಿತ ಹಿಲಾಲುಗಳನ್ನು ಹಿಡಕೊಂಡು ಷ್ಟ್ಯೂಯಾರ್ಟಚಂದ್ರಕಂಪನಿಯ ದಾರೀ ಹಿಡಿದು ಬಹು ವೇಗವಾಗಿ ಸಾಗಿದರು. ಆದರೆ ರಾಮಚಂದ್ರ ಹಾಗು ಹರಿಣಾಕ್ಷಿಯರು ಹೊರಟು ಹೋಗಿ ಇಷ್ಟೊತ್ತಿಗೆ ಮೂರುತಾಸು ಕಾಲವಾಗಿದ್ದು ಇಷ್ಟರಲ್ಲಿ ಅವರು ನಾಲ್ಕೈದು ಹರ

ದಾರಿ ದಾರಿಯನ್ನು ಸಹಜವಾಗಿ ತುಳಿದಿದ್ದರು. ಆದ್ದರಿಂದ ಈ ಶಿಪಾಯಿಗಳು ಎಷ್ಟು ಧಾವಿಸಿ ಹೋದರೂ ಅವರು ಇವರಿಗೆ ಸಿಗಲಿಲ್ಲ.

ರಾಮಚಂದ್ರ ಹಾಗು ಹರಿಣಾಕ್ಷಿಯರು ಮೊದಮೊದಲು ಓಡುತ್ತಲೇ ದಾರಿಯನ್ನು ಕ್ರಮಿಸಿದರು. ಆದರೆ ಎಂಥ ತರುಣ ಹಾಗು ಬಲವಾನ್ ಹೆಂಗಸಾದರೂ ಅವಳಲ್ಲಿ ಗಂಡಸಿನಷ್ಟು ಶಕ್ತಿಯೆಲ್ಲಿಂದ ಬರಬೇಕು? ಎರಡು-ಮೂರು ತಾಸುಗಳ ತರುವಾಯ ಹರಿಣಾಕ್ಷಿಯ ಕಾಲು ಸೋತುದರಿಂದ ಅವಳು ಸಾವಕಾಶವಾಗಿ ನಡೆಯಲಾರಂಭಿಸಿದಳು. ಆದ್ದರಿಂದ ಅವರು ಬೆಳಗಾಗುವಷ್ಟರಲ್ಲಿ ಹೋಗತಕ್ಕ ಸ್ಥಳಕ್ಕೆ ತಲುಪಲಿಲ್ಲ. ಅವರಿಗೆ ಎಲ್ಲಿ ಬೆಳಗಾಯಿತೋ, ಅಲ್ಲಿಂದ ಪ್ರಾಯಾರ್ಟ ಚಂದ್ರಕಂಟಿಯ ಕ್ಷೇತ್ರವು ಎರಡೇ ಹರಿದಾರಿ ಉಳಿದಿತ್ತು. ಬೆಳಗಾದದ್ದರಿಂದ ಇನ್ನು ರಾಜಮಾರ್ಗ ಹಿಡಿದು ಹೋದರೆ, ತಮ್ಮ ವಣಿಕನ ಶಿಪಾಯಿಗಳು ಹಿಂದಿನಿಂದ ಬಂದು ತಮ್ಮನ್ನು ಹಿಡಿದೊಯ್ಯಬಹುದೆಂದು ಯೋಚಿಸಿ, ಅವರು ಕಬ್ಬಿನ ಹೊಲದಲ್ಲಿ ಅಡ್ಡಬಿದ್ದು ಕೆಲದಾರಿ ಕ್ರಮಿಸಿದರು. ಆದರೆ ಇಡಿರಾತ್ರಿಯಲ್ಲಿ ಆಹಾರ-ನಿದ್ರೆಗಳಿಲ್ಲದ್ದರಿಂದಲೂ, ಒಂದೇಸವನೆ ೮-೧೦ ಹರದಾರಿ ದಾರಿಯನ್ನು ಶೀಘ್ರಗತಿಯಿಂದ ಬಂದದ್ದರಿಂದಲೂ ಅವರು ಅತ್ಯಂತ ಶ್ರಾಂತರಾಗಿದ್ದರು; ಮೇಲಾಗಿ ಆ ಕಬ್ಬಿನ ಪೈರಿನಲ್ಲಿ ಅಡ್ಡಡ್ಡಾಗಿ ಹೋಗುವದರಿಂದ ದಾರಿಯೂ ಸಾಗದಾಯಿತು. ಆಗ ಅವರು ತಮ್ಮ ಪ್ರಯಾಣವನ್ನು ನಿಲ್ಲಿಸಿ, ಇಡಿ ಹಗಲಲ್ಲಿ ಆ ಇಕ್ಷುಕ್ಷೇತ್ರದಲ್ಲಿಯೇ ಒತ್ತಟ್ಟಿಗೆ ವಿಶ್ರಮಿಸಿದರು; ಹಾಗು ಸೂರ್ಯಾಸ್ತವಾದನಂತರ ಪುನಃ ಅವರು ರಾಜಮಾರ್ಗವನು ಹಿಡಿಯದೆ ಹಾಗೆಯೇ ಆ ಕಬ್ಬಿನ ಹೊಲದ ದಾರಿಯಿಂದಲೇ ಮುಂದಕ್ಕೆ ನಡೆದರು.

ಅಂದು ರಾಮಚಂದ್ರನು ಹರಿಣಾಕ್ಷಿಗೆ ಈ ಪ್ರಕಾರ ಓಡಿಹೋಗುವ ಸಲಹೆಯನ್ನು ಕೊಟ್ಟು, ಅವಳನ್ನು ಅಲ್ಲಿಂದ ಹೊರಡಿಸಿಕೊಂಡು ಬರದಿದ್ದರೆ,—ಈ ಮೊದಲು ಜೋಲ್ಸನ್ ಸಾಹೇಬನು ಮೋಹಿನಿಯ ಮೇಲೆ ಮಾಡಿದ ಅತ್ಯಾಚಾರದಿಂದ ಅವನು ಶ್ರೇಯಸ್ಸಿಗೆ ಭಾಗಿದಾರನಾಗಿಲ್ಲ; ಆದರೆ ಇಂದು—ಆ ವಣಿಕನ ಅತ್ಯಾಚಾರಕ್ಕೆ ಹರಿಣಾಕ್ಷಿಯು ಸಂಪೂರ್ಣವಾಗಿ ಆಹುತಿಯಾಗಬೇಕಾಗುತ್ತಿತ್ತು.

## ಹದಿನಯ್ದನೆಯ ಪರಿಚ್ಛೇದ.

### ದುಃಖಿಗೆ ಆಯುಷ್ಯವು ಹೆಚ್ಚು.

ಅಮೃತರಾಯನು ಹೊರಟು ಹೋದ ಬಳಿಕ ವಿಮಲೆಯ ಮನಸ್ಸಿನ ಸ್ಥೈರ್ಯವು ಲೋಪವಾಯಿತು. ಅವಳು ಇನ್ನು ಒಬ್ಬಳೇ ಆ ಪ್ರಕೋಷ್ಠದಲ್ಲಿ ಕೊಡ್ರಲಾರದಾದಳು. ಅದರಿಂದ ಅವಳು ಶೀಘ್ರವಾಗಿ ಕಮಲೆಯ ಬಳಿಗೆ ನಡೆದಳು. ವಿಮಲೆಯು ಕಮಲಾಸುಂದರಿಯ ಕೋಣೆಗೆ ಬಂದಾಗ ಅವಳು ಹಾಸಿಗೆಯ ಮೇಲೆ ಸುಮ್ಮನೆ ಬಿದ್ದುಕೊಂಡು, ಕೋಣೆಯ ಗೋಡೆಯ ಕಡೆಗೆ ಎವೆಯಿಕ್ಕದೆ ನೋಡುತ್ತ ಮನಸ್ಸಿನಲ್ಲಿ ಏನನ್ನೋ ಚಿಂತಿಸುತ್ತಿದ್ದಳು. ಅಷ್ಟರಲ್ಲಿ ಅವಳ ಕಿವಿಗೆ ಯಾರವೋ ಕಾಲ ಸಪ್ಪಳವು ಕೇಳಿಸಲು, ಅವಳು ಬಾಗಿಲ ಕಡೆಗೆ ಹೊರಳಿ ನೋಡಿದಳು. ಆಗ ಅಲ್ಲಿ ವಿಮಲೆಯು ಬರುತ್ತಿರುವದು ಕಾಣಿಸಿತು. ವಿಮಲೆಯು ಓಡುತ್ತ ಬಂದು ಕಮಲೆಯ ಎದೆಯ ಮೇಲೆ ಮುಖವನ್ನಿಟ್ಟು ಎಷ್ಟೋ ಕ್ಷಣಗಳ ವರೆಗೆ ಅಶ್ರುಗಳನ್ನುದುರಿಸಿದಳು. ನಂತರ ಮೋರೆಯನ್ನೆತ್ತಿ ಕಮಲೆಯ ಮುಖದ ಕಡೆಗೆ ನೋಡುತ್ತ—'ತಂಗೀ, ಕಮಲಕ್ಕಾ, ಇಂದು ನಾನು ನಮ್ಮವರನ್ನು ಕಂಡೆನು...' ಎಂದಂದು ಮತ್ತೇನೋ ಹೇಳಬೇಕೆಂದಳು; ಆದರೆ ಅವಳು ಅದನ್ನು ಹೇಳಲು ಶಕ್ತಳಾಗಲಿಲ್ಲ. ಯಾಕಂದರೆ, ಆಗ ಅವಳ ಕಂಠವು ಬಿಗಿದು ಬಂದಿತು. ಹೃದಯದ ಆವೇಗವು ನಯನಗಳ ದ್ವಾರದಿಂದ ಪ್ರವಹಿಸಹತ್ತಿತು. ವಿಮಲೆಯ ಮುಖಲಕ್ಷಣಗಳಿಂದ ಇವಳಿಗೆ ಇವಳ ಸ್ವಾಮಿಯು ಸಾಕ್ಷಾತ್ಕಾರನಾಗಿರುವನೆಂಬದನ್ನು ಕಮಲೆಯು ಅರಿತುಕೊಂಡಳು. ಆಗ ಸಾಂಸರ್ಗಿಕ ರೋಗದಂತೆ ಅವಳಿಗೂ ದುಃಖವಾಗಿ ಅವಳ ಕಣ್ಣುಗಳಿಂದಲೂ ಅಶ್ರುಗಳುದುರ ತೊಡಗಿದವು. ನಂತರ ಕಮಲೆಯು ಮಧುರಸ್ವರದಿಂದ ವಿಮಲೆಯನ್ನು ಕುರಿತು,—''ಅಕ್ಕಾ, ಸ್ವಾಮಿಯ ದರ್ಶನವಾದ ಮೇಲೆ ಅಳುವದುಂಟೆ? ಛೀ, ಹುಚ್ಚೀ, ಶಾಂತಳಾಗು'' ಎನ್ನಲು, ವಿಮಲೆಯು ಬಿಕ್ಕಿಬಿಕ್ಕಿ ಅಳುತ್ತ,—''ಅಳುತ್ತೀ ಏಕಂದೆಯಾ? ತಂಗೀ, ಅಳುವದಕ್ಕಾಗಿಯೇ ನನ್ನ ಜನ್ಮವಾಗಿರುತ್ತದೆ. ಸ್ವಾಮಿಯ ದರ್ಶನವಾಗುವ ವರೆಗೆ ಸ್ವಾಮಿಯನ್ನು ನೆನೆನೆನೆಸಿ, ಮನದಲ್ಲಿಯೇ ಅಳುತ್ತಿದ್ದೆನು. ಈ ವರೆಗೆ ಎಂದೂ ನಾನು ನನ್ನ ಕಣ್ಣಿನ ನೀರನ್ನು ಹೊರಗೆಡವಿರಲಿಲ್ಲ. ಆದರೆ ತಂಗೀ, ಇಂದು ನನ್ನ

ಶುಷ್ಕ ಹೃದಯಕ್ಕೆ ಸೋನಿಯೊಡೆದಿರುತ್ತದೆ. ಈ ಪ್ರವಾಹವನ್ನು ತಡೆದು ನಿಲ್ಲಿಸುವ ಶಕ್ತಿಯು ನನಗಿರುವುದಿಲ್ಲ. ತಂಗೀ, ಹಿಂದು ಧರ್ಮಗಳಲ್ಲಿ ನೈಸರ್ಗಿಕವಾಗಿರುವ ರೂಢಿಯಂತೆ ನಾನು ಇಂದಿನವರೆಗೆ ನನ್ನ ಪತಿಯನ್ನು ಪ್ರೀತಿಸುತ್ತಿದ್ದೆನು ಮಾತ್ರ. ನನಗೆ ಪತಿಸುಖವೆಂಬುದು ಎಂತಹದೋ ಗೊತ್ತಿರಲಿಲ್ಲ. ಆದರೆ ನಾನು ಇಂದು ಆ ಸುಖವನ್ನು ಕ್ಷಣಮಾತ್ರ ಅನುಭವಿಸಿರುವೆನು. ಆದರಿಂದ ನಾನು ನಿಶ್ಚಯಿಸಿರುವದೇನಂದರೆ, ನನ್ನ ಅಮರಣಾಂತ ದುಃಖವು ನಿನ್ನ ದುಃಖದ ಮಾನದಿಂದ ತುಚ್ಛವೇ ಸರಿ. ನಾನು ಈ ವರೆಗೆ ಅನುಭವಿಸಿದ ಕಷ್ಟಗಳನ್ನು ಬಹು ಜನರು ಸಹಜವಾಗಿ ಅನುಭವಿಸಬಹುದಾಗಿವೆ. ನೀನು ಹಿಂದಕ್ಕೆ ''ವಿಮಲಕ್ಕಾ, ನೀನು ಪತಿಸುಖದ ಸ್ವಾದವನ್ನು ತಿಳಿಯದೆ ಕಷ್ಟಪಡುವೆ; ಆದರೆ ನಾನು ಅದನ್ನು ಅನುಭವಿಸಿ ಕಳಕೊಂಡಿರುವೆನು'' ಎಂದ ಮಾತು ಈಗ ನನ್ನ ನಿದರ್ಶನಕ್ಕೆ ಬಂದಿತು. ನಾನು ಆಗ ನನ್ನ ದುಃಖವು ನಿನ್ನ ದುಃಖಕ್ಕಿಂತ ಎಷ್ಟೋ ಪಾಲು ಹೆಚ್ಚೆಂದು ಸುಮ್ಮನೆ ವಾದಿಸುತ್ತಿದ್ದೆನು. ಆದರೆ ತಂಗೀ, ನಾನು ಈಗ ಆ ಸುಖವನ್ನು ಹೊಂದಿದ್ದರೂ ಅನುಭವಿಸುವಂತಿರುವದಿಲ್ಲ'' ಎಂದು ಹೇಳಿ, ತನ್ನ ಅಶ್ರುಪೂರ್ಣ ನಯನಗಳನ್ನು ಪುನಃ ಅವಳ ವಕ್ಷಸ್ಥಳದ ಮೇಲಿಟ್ಟಳು.

ಕಮಲೆಗೆ ವಿಮಲೆಯ ಮಾತಿನ ಕಡೆಯ ವಾಕ್ಯದ ಅರ್ಥವಾಗಲಿಲ್ಲ. ಆಗದ್ದರಿಂದ ಅವಳು ''ಯಾಕೆ, ಅಕ್ಕಾ ಅದೇಕೆ? ನಿನ್ನ ಸ್ವಾಮಿಯು ನಿನ್ನನ್ನು ಪರಿಗ್ರಹಿಸಲು ಸಮ್ಮತವಾಗುವದಿಲ್ಲವೇನು?'' ಎಂದು ಪ್ರಶ್ನೆ ಮಾಡಿದಳು. ವಿಮಲೆಯು ಹಾಗಲ್ಲೆಂದು ಗೋಣು ಅಲ್ಲಾಡಿಸಿ ಸೂಚಿಸಿದಳು. ಆಗ ಎಷ್ಟೋ ಭರದಿಂದ ಕಮಲೆಯು—''ಹಾಗಾದರೇನು?''

''ನನ್ನ ಪತಿಯು ನನ್ನ ಸವತಿಯವನು. ಸವತಿಗೆ ನನ್ನ ಇರುವಿಕೆಯು ಅವಗತವಾಗಿರುವದಿಲ್ಲ. ಇದನ್ನು ತಿಳಿಯುವದರಿಂದ ಅವಳಿಗೆ ಕಷ್ಟವಾಗಬಹುದೆಂದೆಣಿಸಿ, ನಾನು ನನ್ನ ಪತಿಯನ್ನು ಸವತಿಗಾಗಿಯೇ ಬಿಟ್ಟುಕೊಟ್ಟಿರುತ್ತೇನೆ''

''ನಿನ್ನ ಸವತಿಯ ಸಂಬಂಧದ ಸಂಗತಿಯು ನಿನಗೆ ಈ ಮೊದಲೇ ಗೊತ್ತಿತ್ತೇನು?''

''ಅಹುದು; ತಂಗೀ, ನಿನಗೆ ನನ್ನ ಮಾತಿನ ರಹಸ್ಯವು ತಿಳಿಯದೇ? ಸವತಿಯು ಪತಿಯನ್ನು ಪ್ರೀತಿಸುತ್ತಾಳೆ. ಅವಳಿಗೆ ನನ್ನ ಸಂಬಂಧದ ಸಂಗತಿಯೇ ಗೊತ್ತಿರುವದಿಲ್ಲ. ಆದರಿಂದ ನಾನು ನನ್ನ ಮನಸ್ಸಿಗೆ ಖಾತ್ರಿಮಾಡಿಕೊಂಡಿರುವುದೇನಂದರೆ, ಸ್ವಾಮಿಯು ನನ್ನವನಲ್ಲ. ಅವನು ಸವತಿಯ ಪಾಲಿನವನು. ಆದರಿಂದ ಮನಸ್ಸೇ,

ನೀನು ಇನ್ನು ಸ್ವಾಮಿಯ ಸುಖಕ್ಕೆಂದು ಹಾತೊರೆಯಬೇಡ. ಇದರಲ್ಲಿ ಆ ಸವತಿಯ ದೋಷವೇನು? ನನ್ನನ್ನು ತ್ಯಜಿಸಬೇಕೆಂದು ಅವಳೇನೂ ಸ್ವಾಮಿಗೆ ಹೇಳಿರುವದಿಲ್ಲ. ನನ್ನ ವಿಷಯದ ಸುದ್ದಿಯು ಅವಳಿಗೆ ತಿಳಿದರೆ, ಕದಾಚಿತ್ ಅವಳು ಬಂದು ನನ್ನು ಕರಕೊಂಡು ಹೋಗಬಹುದು. ಆದರೆ ಅವಳ ಮನಸ್ಸಿಗೆ ಎಷ್ಟು ದುಃಖವಾದೀತೆಂಬದನ್ನು ನಾನು ಈಗ ಪ್ರತ್ಯಕ್ಷ ಅನುಭವಿಸುತ್ತಿರುವೆನು. ಆ ಸಾಧ್ವಿಗೆ ಸುಮ್ಮಸುಮ್ಮನೆ ಏಕೆ ದುಃಖ ಕೊಡಬೇಕು? ನನ್ನ ಪೂರ್ವಜನ್ಮದ ಪಾಪವನ್ನು ಭೋಗಿಸುವದಕ್ಕಾಗಿ ನಾನು ಹೀಗೆ ಕಷ್ಟಪಡುತ್ತಿದ್ದು, ಮತ್ತೆ ಈ ದುಃಖಕ್ಕೆ ಅವಳನ್ನೇಕೆ ಭಾಗಿದಾರಳನ್ನಾಗಿ ಮಾಡಿಕೊಳ್ಳಲಿ?''

''ಪತಿಯಂತು ನಿನ್ನವನಷ್ಟೇ? ಅಂದಮೇಲೆ ನೀನು ಅವನೆಡೆಗೆ ಹೋಗುವದೇ ಶ್ರೇಯಸ್ಕರವು.''

''ತಂಗೀ, ಅವನು ನನ್ನ ಪತಿಯು ಪರಮದೈವತವು. ಆ ಪರಮ ಕಾರುಣಿಕ ದೈವತವು ನನ್ನನ್ನು ಕರೆದೊಯ್ಯಬೇಕೆಂದು ಆಗಲೇ ಬಹು ಸಾಹಸಪಟ್ಟಿತು. ಆದರೆ ನಾನೇ ಅಲ್ಲಿಗೆ ಹೋಗಲು ಸಮ್ಮತಿಸದೆ ಉಳಿದಿರುವೆನು.........''

''ಅಕ್ಕಾ, ನೀನು ದುರಭಿಮಾನಕ್ಕೊಳಪಟ್ಟೇ ಅವರಿಗೆ ಹಾಗೆ ಉತ್ತರ ಕೊಟ್ಟೆಯೆಂದೆನ್ನಬೇಕಾಯಿತು.........''

''ತಂಗೀ ಅಭಿಮಾನದಿಂದ ನಾನು ಅವರಿಗೆ ಹಾಗೆ ಹೇಳಿಕಳಿಸಿದೆನೆಂತಲ್ಲ. ಆದರೆ ಅದಕ್ಕೆ ಏನೆನ್ನುವರೋ ನಾನರಿಯೆ. ನನ್ನ ಹೃದಯದಲ್ಲಿ ಉಂಟಾದ ಆಗಿನ ಉದ್ವೇಗವು ಬಹು ಭಯಾನಕವಾಗಿತ್ತು. ತಂಗೀ ನಮ್ಮ ಸ್ತ್ರೀಜಾತಿಯ ಹೃದಯವು ಪುರುಷವರ್ಗದ ಹೃದಯದಷ್ಟು ಪ್ರಶಸ್ತ ಹಾಗು ಉದಾರವಾದದ್ದಲ್ಲ. ನಮ್ಮ ಹೃದಯವು ಬಲು ಸಂಶಯಗ್ರಸ್ತವಾದದ್ದು; ಬಹು ಸ್ವಾರ್ಥಪರವಾದದ್ದು. ನನ್ನ ಸ್ವಾಮಿಯ ಭಾಗಶಃ ಪ್ರೇಮದಿಂದ ನನ್ನ ಸ್ವಾರ್ಥವು ತೃಪ್ತಿಹೊಂದದೆ, ನನ್ನಲ್ಲಿ ಸವತಿಮತ್ಸರವುಂಟಾಯಿತು. ಆದರಿಂದಲೇ ನಾನು ನನ್ನ ಸ್ವಾಮಿಯನ್ನು ಸವತಿಗಾಗಿ ಬಿಟ್ಟುಗೊಟ್ಟಿರುತ್ತೇನೆ''

ವಿಮಲೆಯು ಈ ವಿಚಾರವನ್ನು ಕೇಳಿ ಕಮಲಾಸುಂದರಿಯು ಕ್ರೋಧ ಸಂತಪ್ತಳಾಗಿ—''ಅಕ್ಕಾ, ನೀನು ತೀರ ಕಲ್ಲೆದೆಯವಳು.''

''ತಂಗೀ, ನನ್ನ ಹೃದಯ ಪರೀಕ್ಷೆಯು ನಿನಗೆಂದಿಗೂ ಆಗದು. ನಿನಗೆ ನನಗಿಂತ ಗುರುತರ ಹೃದಯದಾಹವು ಉಂಟಾಗಿದ್ದರೂ ನಿನಗೆ ಸಮಾಧಾನಕ್ಕೆ ಸ್ವಲ್ಪಾದರೂ ಇಂಬು ಇರುತ್ತದೆ. ಯಾಕಂದರೆ, ನಿನ್ನ ಗಂಡನು ನಿನ್ನನ್ನು ಪ್ರಾಣಕ್ಕಿಂ

ತಲೂ ಹೆಚ್ಚಾಗಿ ಪ್ರೀತಿಸುತ್ತಿದ್ದನು; ಈಗಲಾದರೂ ಪ್ರೀತಿಸುತ್ತಿರಬಹುದು. ಅದ್ದರಿಂದಲೇ ನಿನ್ನ ವಿಷಯವಾಗಿ ಅವನಲ್ಲಿ ಮೊದಲು ಸಂದೇಹವುಂಟಾಗಿ, ನಂತರ ಅವನ ಹೃದಯದಲ್ಲಿ ದಾರುಣ ದಾಹವಾಯಿತು. ಆದರೂ ಅವನು ನಿನಗೆ ದುಃಖ ಕೊಡಬಾರದೆಂದೂ, ನಿನ್ನ ಸುಖಕ್ಕೆ ತಾನೇ ಕಂಟಕಕಾರಿಣಿಯೆಂದೂ ಭಾವಿಸಿ, ದೇಶತ್ಯಾಗಮಾಡಿ ಹೊರಟುಹೋಗಿರುವನು. ಒಂದುವೇಳೆ ಆ ವೈರಾಗ್ಯದ ಭರದಲ್ಲಿ ಅವನು ಸನ್ಯಾಸದೀಕ್ಷೆಯನ್ನು ತಕ್ಕೊಂಡು ದೇವರನ್ನು ಅನನ್ಯಭಾವದಿಂದ ಚಿಂತಿಸತೊಡಗಿದ್ದರೂ, ಅವನು ತನ್ನ ನಿತ್ಯಕ್ರಮಕ್ಕೆ ಪ್ರಾರಂಭಿಸುವ ಮೊದಲು ನಿನ್ನ ವಿಷಯಕ ಚಿಂತೆಯು ಅವನ ಮನಸ್ಸಿನಲ್ಲಿ ಉತ್ಪನ್ನವಾಗದೆ ಇರುವದಿಲ್ಲ. ತಂಗೀ, ನಿನ್ನ ಮನಸ್ಸಿನಲ್ಲಿ ಪಾಪವಿರುವದಿಲ್ಲ. ನೀನು ಪ್ರತಿನಿತ್ಯ ನಿನ್ನ ಸ್ವಾಮಿಯ ಪೂಜೆ ಮಾಡುತ್ತಿರುವೆ. ಆದರೆ ಆಗ ನೀನು ನಿನ್ನ ಆಚರಣೆಯ ವಿಷಯವಾಗಿ ನಿನ್ನ ಸ್ವಾಮಿಯಲ್ಲಿ ಸಂದೇಹವುಂಟಾಗಲು ಅಸ್ಪದಕೊಟ್ಟ ಪಾಪಕ್ಕಾಗಿ ಈ ಕಠೋರ ಪ್ರಾಯಶ್ಚಿತ್ತವನ್ನು ಅನುಭವಿಸುತ್ತಿರುವಿಯಮ್ಮಾ. ಆದರೆ ತಂಗೀ ಕಮಲಕ್ಕಾ, ನನ್ನ ಸ್ವಾಮಿಯೇ ನನ್ನವನಾಗಿ ಉಳಿದಿರುವದಿಲ್ಲ.''

ಆಗ ಕಮಲಾಸುಂದರಿಯು ತನ್ನ ಮನದಲ್ಲಿಯೇ ತನ್ನ ಸ್ವಾಮಿಯು ಒಂದುವೇಳೆ ತಿರುಗಿ ಬಂದರೆ, ಅವನು ಬರುವಾಗ ತನ್ನ ಸಂಗಡ ಒಬ್ಬ ಸವತಿಯನ್ನು ಕಟ್ಟಿಕೊಂಡು ಬಂದನೆಂದು ತಿಳಿದು, ತನ್ನ ಮನಸ್ಸಿಗೆ ಅದರಿಂದ ಸುಖವಾಗುವದೋ ದುಃಖವಾಗುವದೋ ಎಂಬ ವಿಷಯವಾಗಿ ಚಿಂತಿಸಿದಳು. ಬಹು ದಿವಸಗಳ ತರುವಾಯ ತನ್ನ ಸ್ವಾಮಿಯು ತನಗೆ ಲಭಿಸಿದನೆಂಬ ಕಾಲ್ಪನಿಕ ಸುಖದಿಂದ ಅವಳಿಗೆ ಮಿಗಿಲಾದ ಆನಂದವುಂಟಾದರೂ, ತನ್ನ ಸ್ವಾಮಿಯು ಒಬ್ಬ ಸವತಿಯ ಪ್ರೇಮಪಾಶಕ್ಕೀಡಾಗಿರುವನೆಂಬ ಕಾಲ್ಪನಿಕ ಸಂಗತಿಯಿಂದಲೂ ಅವಳ ಅಂತರಂಗದಲ್ಲಿ ಒಂದುತರದ ಅಕಲ್ಪನೀಯ ಭಾವವುಂಟಾಗಿ ಅದರಿಂದ ಅವಳಿಗೆ ಬಹು ದುಃಖವೆನಿಸಿತು. ಆಗಲವಳು ಉಸುರ್ಗರೆಯುತ್ತ ವಿಮಲೆಯನ್ನು ಕುರಿತು—''ಅಕ್ಕಾ, ನೀನನ್ನುವ ಮಾತಿನ ನಿಜತ್ವವು ನನಗೀಗ ಹೊಳೆಯಿತು. ಸವತಿಯೊಡನೆ ಕೂಡಿ ಇರುವದು ನನಗಂತೂ ಶಕ್ಯಕಾಣುವದಿಲ್ಲ. ಆದರೆ ಅಕ್ಕಾ, ಎಷ್ಟೋಜನ ಗೃಹಿಣಿಯರು ತಮ್ಮ ಸವತಿಯರೊಡನೆ ಕೂಡಿ ಬಾಳುವೆ ಮಾಡುವದು ಲೋಕರೂಢಿಯಾಗಿರುವದಲ್ಲ! ಅವರು ಹಾಗೆ ಹ್ಯಾಗೆ ಕೂಡಿದ್ದುಕೊಂಡು ಸಂಸಾರ ಸಾಗಿಸುವರು?''

''ತಂಗೀ, ನನಗೂ ಆ ಮಾತಿನ ಗೂಢವು ತಿಳಿಯದು. ಅದನ್ನು ದೇವರೇ ಬಲ್ಲ.'' ನಂತರ ಒಬ್ಬರನ್ನೊಬ್ಬರು ಆಲಿಂಗಿಸಿಕೊಂಡು ಎಷ್ಟೋ ಕ್ಷಣಗಳ

ವರೆಗೆ ಅವರು ಅಲ್ಲಿ ಮಲಗಿಕೊಂಡಿದ್ದರು. ವಿಮಲೆಯು ಮನಸ್ಸಿನಲ್ಲಿ ಭಾವಿಸುತ್ತಿದ್ದಳೇನಂದರೆ, ''ಪತಿಯಸ್ಪರ್ಶ, ಪತಿಯಆಲಿಂಗನ, ಪತಿಯಚುಂಬನ ಇವು ಎಷ್ಟು ಸುಖಕರಗಳಾಗಿರುವವಲ್ಲ! ಈ ಸುಖವನ್ನು ನಾನು ಇಂದಿನವರೆಗೆ ಕಲ್ಪಿಸಿಕೊಳ್ಳಲಿಕ್ಕೆ ಕೂಡ ಶಕ್ತಳಾಗಿರಲಿಲ್ಲ! ಭಾಗ್ಯವತಿಯರಾದ ಸತಿಯರು ಇಂಥ ಈ ದುರ್ಲಭ ಸುಖವನ್ನು ಪ್ರತಿನಿತ್ಯ ಅನುಭವಿಸುವರಲ್ಲವೆ? ನಾನು ದುರ್ಭಾಗ್ಯಳೆಂದೇ ಈ ವರೆಗೆ ಈ ಸುಖದ ಮಾರ್ಗವನ್ನು ಕೂಡ ನೋಡಿದ್ದಿಲ್ಲ; ಹಾಗು ಇನ್ನು ಮುಂದೆ ಸಾಯುವವರೆಗೂ ಇದು ನನಗೆ ಲಭಿಸುವಸಂಭವವಿರುವದಿಲ್ಲ.'' ಹೀಗೆ ವಿಮಲೆಯು ಪತಿಸುಖವನ್ನು ಸ್ಮರಿಸುತ್ತಿದ್ದದರಿಂದ ಅವಳ ಮುಖದ ಮೇಲೆ ಆ ಸುಖವನ್ನು ಪ್ರತ್ಯಕ್ಷ ಅನುಭವಿಸುವವರಿಗಾಗುವ ಆನಂದದ ಕಳೆಯು ಉಕ್ಕುತ್ತಿತ್ತು; ಆದರೆ ಅದೇಕಾಲಕ್ಕೆ ಕಮಲೆಯು ಪತಿಯ ವಿಯೋಗವನ್ನು ಚಿಂತಿಸುತ್ತಿದ್ದದರಿಂದ ಅವಳ ಮುಖವು ದಾರುಣದ್ಯದಯಬಾಹದಿಂದ ಕಪ್ಪಿಟ್ಟಿತ್ತು. ಆಗ ಅವಳು ವಿಮಲೆಯನ್ನುಕುರಿತು --''ಅಕ್ಕಾ, ನೀನು ಮನುಷ್ಯಳಲ್ಲ, ಪ್ರತ್ಯಕ್ಷದೇವಿಯು'' ಎಂದಳು. ಕೆಲಕ್ಷಣಗಳ ಪೂರ್ವದಲ್ಲಿ ತನ್ನ ಪತಿಯಾದ ಅಮೃತರಾಯನೂ ತನಗೆ ಇದೇ ಪ್ರಕಾರವಾಗಿ ಗೌರವಿಸಿದ್ದನ್ನು ಮನದಂದು ವಿಮಲೆಯು ನಕ್ಕು— ''ನೀವೆಲ್ಲರೂ ನನ್ನಲ್ಲಿ ದೇವತ್ವವನ್ನು ವಹಿಸಿರುವದು ಪರಮಾಶ್ಚರ್ಯದ ಸಂಗತಿಯಾಗಿ ತೋರುತ್ತದೆ. ಯಾಕೆಂದರೆ, ನಾನಂತೂ ಕೇವಲ ಸ್ವಾರ್ಥಪರಳಿದ್ದು, ಅನುದಾರಳೂ, ಹೀನಳೂ ಆದ ಸಾಮಾನ್ಯ ಹೆಂಗಸಾಗಿರುವೆನು. ನನ್ನ ಅಂತರಂಗದಲ್ಲಿ ಆತ್ಮತ್ಯಾಗದ ಇಲ್ಲವೆ ಉದಾರತೆಯ ಚಿಹ್ನವು ಕೂಡ ಇರುವದಿಲ್ಲ. ಅಲ್ಲಿ ಕೇವಲ ಸಂಕೀರ್ಣತೆಯೂ ದುಃಸ್ವಾರ್ಥವೂ ತುಂಬಿತುಳುಕುತ್ತಿರುವವು. ಸ್ವಾರ್ಥಕ್ಕಾಗುವ ಹಾನಿಯನ್ನು ಸಹನ ಮಾಡಲು ಅಸಮರ್ಥಳಾಗಿರುತ್ತೇನೆ. ಆದರೂ ನಾನೇ ಆತ್ಮತ್ಯಾಗಿಯೂ, ಉದಾರಳೂ ಆಗಿ, ಸವತಿಗಾಗಿ ನಾನು ನನ್ನಸ್ವಾಮಿಯನ್ನು ಬಿಟ್ಟುಗೊಟ್ಟಿರುವೆನು. ಆದರೆ ನಾನು ಅದನ್ನು ನನ್ನ ಮಹತ್ವಕ್ಕಾಗಿ ಮಾಡಿರುವದಿಲ್ಲ. ಕೇವಲ ಹಿಂಸೆ, ದ್ವೇಷ ಹಾಗು ಸ್ವಾರ್ಥಪರಾಯಣತೆಗಳಿಗಾಗಿ ಮಾಡಿರುತ್ತೇನೆ.''

''ಅಕ್ಕಾ, ನಿನ್ನ ಅಂತರಂಗದಲ್ಲಿ ಹಿಂಸೆ, ದ್ವೇಷ, ಹಾಗು ಸ್ವಾರ್ಥಪರಾಯಣತೆಗಳು ವಾಸಿಸಲಾರವು. ಯಾರಲ್ಲಿ ಅವು ವಾಸಿಸುತ್ತವೆಯೋ, ಅವರು ಆ ಬಗೆ ಬಾಯಿಂದ ಎಂದೂ ನುಡಿದು ತೋರಿಸಲಾರರು; ಗೌಪ್ಯವಾಗಿಟ್ಟುಕೊಳ್ಳುವರು. ಹೊದಿಕೆಯನ್ನು ತೆಗೆದು ಯಾರೂ ತಮ್ಮ ಅಂತರಂಗದ ಗುಟ್ಟನ್ನು ನೋಡಲಾರರು; ಮುಂದಿಗೂ ತೋರಿಸಲಾರರು. ಆದರೆ ಎಷ್ಟು ಗೌಪ್ಯವಾಗಿಟ್ಟುಕೊಂಡರೂ ಅಂತ

ರಂಗದ ಭಾವವು ಕೃತಿಗಳಲ್ಲಿ ಒಡೆದು ಕಂಡೇಕಾಣುವದು. ಆದ್ದರಿಂದಲೇ ಮಾನವರಲ್ಲಿಯೂ ಯಾರು ಸತ್ವಗುಣ ಪ್ರಧಾನರಿರುವರೋ ಅವರು ಸುರರು, ಯಾರು ತಮೋಗುಣಪ್ರಧಾನರಿರುವರೋ ಅವರು ಅಸುರರು ಎಂಬದನ್ನು ಸಹಜವಾಗಿ ತಿಳಿಯುವಂತಾಗಿದೆ. ಅಕ್ಕಾ, ನೀನು ಸತ್ವಗುಣಗಳ ನಿಧಿಯಾಗಿರುವದರಿಂದ ನಿಜವಾಗಿ ನೀನು ದೇವಿಯೇ ಆಗಿರುತ್ತೀ.''

"ತಂಗೀ, ನೀನು ಈಗ ನನ್ನಲ್ಲಿಯ ತುಚ್ಛಗುಣಗಳಿಗೆ ಸತ್ವಗುಣಗಳೆಂದು ಹೆಸರಿಟ್ಟು, ನನ್ನನ್ನು ದೇವಿಯೆಂದು ಸಂಬೋಧಿಸುವದಕ್ಕಿಂತ, ನಿನ್ನ ಸದ್ಗುಣನಿಧಿಯಾದ ಪತಿಯನ್ನು ದೇವರೆಂದು ತಿಳಿದು ನಡೆದಿದ್ದರೆ, ನಿನ್ನಗತಿಯು ಈ ಮನೆಗೆ ಮುಟ್ಟುತ್ತಿರಲಿಲ್ಲ.''

"ಅಕ್ಕಾ, ಆಗ ನನ್ನೀ ಬಾಯಿಂದ ಈ ಪ್ರಕಾರದ ಭಾಷಣವೇ ಹೊರಡುತ್ತಿರಲಿಲ್ಲ. ನನ್ನ ಸ್ವಾಮಿಯನ್ನು ಕಳಕೊಳ್ಳುವೆನೆಂಬುದನ್ನು, ಕಳಕೊಂಡರೂ ಜೀವಂತಳಾಗಿ ಉಳಿಯುವೆನೆಂಬದನ್ನೂ ನಾನು ಆಗ ಕನಸಿನಲ್ಲಿ ಕೂಡ ಕಂಡಿರಲಿಲ್ಲ. ಆದರೆ ಅಕ್ಕಾ, ಮನುಷ್ಯರ ಬಾಳು ಕಠಿಣವಕ್ಕಾ. ಹಾಪಿನ [illegible] ಬಹು ದಿವಸ ಬದುಕಿ ಸತತ ದುಃಖ ಭೋಗಿಸಬೇಕಾಗುವದು. ಆದರೂ ಮರಣವು ಪ್ರಾಪ್ತವಾಗುವದಿಲ್ಲ. ಸಹಸ್ರಾರು ಪ್ರಕಾರದ ದುಃಖಗಳನ್ನು ಭೋಗಿಸಿದರೂ ಮನುಷ್ಯಜೀವಿಗೆ ದುಃಖಭೋಗದ ಲಾಲಸೆಯು ಇಲ್ಲದಂತಾಗುವದಿಲ್ಲ. ಆದ್ದರಿಂದ 'ದುಃಖಿಗೆ ಆಯುಷ್ಯವು ಹೆಚ್ಚು' ಎಂಬದು ಸುಳ್ಳಲ್ಲ.

ಅಷ್ಟರಲ್ಲಿ ಸಂಧ್ಯಾಕಾಲವಾಗಲು, ವಿಮಲೆಯು ದುಃಖ-ಕಷ್ಟಗಳಿಂದ ಜರ್ಜರಳಾದ ಕಮಲೆಯನ್ನು ಎಬ್ಬಿಸಿಕೊಂಡು ನೂತನ ಮಂದಿರದ ಕಡೆಗೆ ನಡೆದಳು.

# ಹದಿನಾರನೆಯ ಪರಿಚ್ಛೇದ.

## ಸವತಿಯ ಸುಹೃದಯ.

ಈಚೆಗೆಷ್ಟೋ ದಿನಗಳಿಂದ ಅಮೃತರಾಯನು ಒಂದುಬಗೆಯ ಹುಚ್ಚನಂತೆ ವರ್ತಿಸುತ್ತಿದ್ದನು. ಮನೆಯಲ್ಲಿದ್ದಾಗ, ಅಡ್ಡಾಡಲು ಹೋದಾಗ, ಉಣ್ಣುವಾಗ, ಮಲಗುವಾಗ ಯಾವಾಗಲೂ ಒಂದು ಬಗೆಯ ಘೋರಚಿಂತೆಗೊಳಗಾದವನ ಹಾಗೆ ಕಾಣಿಸುತ್ತಿದ್ದನು. ಒಮ್ಮೊಮ್ಮೆ ಆತನನ್ನು ಎಷ್ಟೋಸಾರೆ ಹೆಸರುಗೊಂಡು ಗಟ್ಟಿಯಾಗಿ ಕೂಗಿದರೂ ಅವನು ಓ ಎನ್ನುತ್ತಿದ್ದಿಲ್ಲ. ಒಮ್ಮೊಮ್ಮೆ ಯಾರೂ ಅವನನ್ನು ಕರೆಯದಿದ್ದರೂ ನೀವು ನನ್ನನ್ನೇಕೆ ಕೂಗಿದಿರೆಂದು ಅವನು ಕೇಳುವನು. ಅವನಿಗೆ ಯಾವ ಪ್ರಕಾರದ ದೇಹಜಾಡ್ಯವೂ ಆದಂತೆ ತೋರುತ್ತಿರಲಿಲ್ಲ. ಯಾಕಂದರೆ, ಅವನು ದಿನಾಲು ನಸುಕಿನಲ್ಲೆದ್ದು ಗಂಗಾಸ್ನಾನಕ್ಕಾಗಿ ಹೋಗುವನು, ಹತ್ತುಗಂಟೆಗೆ ತಿರುಗಿ ಬರುವನು. ಹೀಗೆ ನಾಲ್ಕೈದುತಾಸುಗಟ್ಟಲೆ ಅವನು ಸ್ನಾನಕ್ಕೆಂದು ಹೋಗುತ್ತಿದ್ದರೂ, ವಾರದಲ್ಲಿ ೩-೪ ದಿನಗಳಾದರೂ ಅವನು ಸ್ನಾನಮಾಡದೆ ಹಾಗೆಯೇ ಬರುವನು; ಹಾಗು ಮರೆತೆನೆಂದು ಹೇಳಿ ಮತ್ತೆ ಸ್ನಾನಕ್ಕೆ ಹೋಗುವನು. ಮಧ್ಯಾಹ್ನದ ಊಟವಾದ ಬಳಿಕ ತುಸ ಹೊತ್ತು ಕೂಡ ವಿಶ್ರಮಿಸದೆ, ಎಷ್ಟೋ ಅವಸರದಿಂದ ಹೊರಬೀಳುವನು. ಹೊತ್ತುಮುಳುಗಿ ಕತ್ತಲು ಗವಿಯದ ವಿನಃ ತಿರುಗಿ ಬರುವುದೇ ಕಡಿಮೆ. ರಾತ್ರಿಯಲ್ಲಿ ಮಾತ್ರ ಮನೆಯಲ್ಲಿಯೇ ಇರುವನು. ಆದರೆ ಸದಾಸರ್ವದಾ ಅವನ ಚಿತ್ತವೇ ಬಸ್ತಟ್ಟಿಗೆ. ಯಾವ ಬಹಿರ್ವ್ಯಾಪಾರದಕಡೆಗೂ ಅವನ ಲಕ್ಷ್ಯವಿರುತ್ತಿರಲೇ ಇಲ್ಲ. ಯಾರಕೂಡವೂ ಮಾತುಕಥೆಗಳಿಲ್ಲ. ಇಷ್ಟೇ ಅಲ್ಲ, ಅವನ ಅತ್ಯಂತ ಪ್ರೀತಿಯ ನಕಾಶ ತೆಗೆಯುವ ಪೆಟ್ಟಿಗೆ, ಯಾವುದಕ್ಕೆ ಹೇಮಾವತಿಯು ತನ್ನ ಸವತಿಯೆಂದು ಸಂಬೋಧಿಸುತ್ತಿದ್ದಳೋ, ಅದರ ಮೇಲೆ ಈಚೆಗೆ ದೊಟ್ಟುದಪ್ಪ ಧೂಳು ಕೂತಿತ್ತು. ಗಂಡನ ಈಬಗೆಯ ವರ್ತನದಿಂದ ಯಾವ ಮಾನಭಾವಸತಿಗೆ ಸಮಾಧಾನವಾದೀತು? ಹೇಮಾವತಿಯಾದರೂ ವಿರಕ್ತಿಯಿಂದಲೂ ಸಿಟ್ಟಿನಿಂದಲೂ ಈಚೆಗೆ ಗಂಡನೊಡನೆ ವಿಶೇಷ ಆಲಾಪ ಬೆಳಿಸುವ ಗೋಜಿಗೆ ಹೋಗುತ್ತಿರಲಿಲ್ಲ. ಆದರೆ ತನ್ನ ಆ ಮೌನವ್ರತದಿಂದಲೂ ಗಂಡನ ಸ್ಥಿತಿಯಲ್ಲಿ ಲವಲೇಶ

ವೂ ಹೆಚ್ಚು ಕಡಿಮೆಯಾಗದ್ದನ್ನು ಕಂಡು ಅವಳಿಗೆ ಬಲು ಅಂಜಿಕೆಯಾಯಿತು. ತನ್ನ ಗಂಡನಿಗೆ ಅಗವ್ಯವಾದ ವ್ಯಾಧಿಯೇ ಆಗಿರುವುದೆಂದು ಭಾವಿಸಿದಳು. ತಾನು ತನ್ನ ಗಂಡನಮೇಲೆ ಸಿಟ್ಟಾಗಿ ಅವನ ವ್ಯಾಧಿಗೆ ಯೋಗ್ಯ ಉಪಚಾರ ಮಾಡದಿದ್ದದ್ದು ಸರ್ವಸ್ವ ತಪ್ಪಾಯಿತೆಂದು ತಿಳಕೊಂಡು ಅನುತಪ್ತಳಾದಳು. ಇಂದು ಗಂಡನನ್ನು ಸ್ಪಷ್ಟವಾಗಿ ಕೇಳಿ ಅವನ ಸ್ಥಿತಿಗತಿಯನ್ನು ತಿಳಕೊಳ್ಳಬೇಕೆಂದು ನಿಶ್ಚಯಿಸಿಕೊಂಡಳು; ಹಾಗು ಇಂದಿನಿಂದ ಎಂದೂ ತಾನು ತನ್ನ ಗಂಡನಲ್ಲಿ ವಿರಕ್ತಿ ಇಲ್ಲವೆ ಕ್ರೋಧಗಳನ್ನು ಧರಿಸಕೂಡದೆಂದು ಸೆರಗಿಗೆ ಗಂಟು ಹೊಸೆದುಕೊಂಡಳು.

ಸಾಯಂಕಾಲಕ್ಕೆ ಅಮೃತರಾಯನು ಮನೆಗೆ ಬರಲು, ಹೇಮಾವತಿಯು ಕಾಸಿದ ಹಾಲಿನ ಪಾತ್ರೆಯನ್ನು ಕೈಯಲ್ಲಿ ಹಿಡಿದುಕೊಂಡು ಪತಿಯ ಬಳಿಗೆ ಬಂದು—"ಈ ಹಾಲನ್ನು ಸ್ವೀಕರಿಸಿರಿ" ಎಂದು ಪ್ರಾರ್ಥಿಸಿದಳು. ಆದರೆ ಅಮೃತರಾಯನು ನಿರುತ್ತರನಾಗಿ ಆಲೋಚಿಸುತ್ತ ಸುಮ್ಮನೆ ಕುಳಿತಿದ್ದನು. ನಂತರ ಹೇಮಾವತಿಯು ಕೂಗಬಹುದಾದಷ್ಟು ದೊಡ್ಡ ದನಿಯಿಂದ ಕೂಗಿ ಪುನಃ ಮೇಲಿನಂತೆ ಹೇಳಿದಳು. ಆದರೂ ಅವನ ಚಿತ್ತವು ಚಲಿಸಲಿಲ್ಲ. ಇಂದಿನಿಂದ ಪತಿಯಲ್ಲಿ ಕ್ರೋಧವಹಿಸಲಿಕ್ಕಿಲ್ಲೆಂದು ನಿಶ್ಚಯಿಸಿಕೊಂಡಿದ್ದರೂ ಹೇಮಾವತಿಯ ಸಿಟ್ಟು ಆವರಿಸಲಿಲ್ಲ. ಆಗ ಅವಳು ಸಿಟ್ಟಿನಿಂದ ಗಂಡನ ಮೋರೆಯನ್ನು ತನ್ನ ಕಡೆಗೆ ಹೊರಳಿಸಿಕೊಂಡು—"ನಿಮಗೆ ಆಗಿದೆಯಾದರೂ ಏನು?" ಎಂದು ಉಚ್ಚಸ್ವರದಿಂದ ಕೇಳಿದಳು.

ಚಕಿತನಾಗಿ ಅಮೃತರಾಯನು ಹೆಂಡತಿಯ ಕಡೆಗೆ ನೋಡಿದನು. ಇವಳ ಕೈಯಲ್ಲಿ ಪಯಃಪಾತ್ರವಿದ್ದು, ಇವಳು ಆರಕ್ತಮುಖದಿಂದ ತನ್ನ ಕಡೆಗೆ ನೋಡುತಲಿದ್ದಾಳೆ. ಆಗ ಅವನು ಲಜ್ಜೆಗೊಂಡವನಾಗಿ "ಹಾಲು ಕೊಡು, ಕುಡಿಯುತ್ತೇನೆ" ಎಂದು ಹೇಳಿ ಆ ಹಾಲಿನ ಪಾತ್ರೆಯನ್ನು ತಕ್ಕೊಳ್ಳುವದಕ್ಕಾಗಿ ಕೈಮುಂದೆ ಮಾಡಿದನು. ಹೇಮಾವತಿಯು ಪಾತ್ರೆಯನ್ನು ಅವನ ಕೈಗೆ ಕೊಡದೆ, ಬೇರೆ ಕಡೆಗೆ ಹಿಡಿದು—"ನಿಮಗೆ ಆಗಿದೆಯೇನೆಂಬದನ್ನು ಮೊದಲು ತಿಳಿಸಿರಿ. ಅದನ್ನು ತಿಳಿಸಿದ ಮೇಲೆ ಹಾಲನ್ನು ಕೊಡುವೆನು" ಎಂದು ಹೇಳಿದಳು.

"ನನಗೇನಾಗಿದೆ?" ಎಂದಂದು ಅಮೃತರಾಯನು ಶೂನ್ಯದೃಷ್ಟಿಯಿಂದ ಹೆಂಡತಿಯನ್ನು ನೋಡತೊಡಗಿದನು.

"ನಿಮಗೇನಾಗಿದೆಯೆಂಬದು ನನಗೆ ಹೇಗೆ ತಿಳಿಯಬೇಕು? ನಿಮಗೇನಾಗಿದೆಯೆಂಬನ್ನು ನೀವೇ ಬಲ್ಲಿರಿ"

"ಏನು-ಏನಂದಿ? ನನಗಂತೂ ಏನೂ ಆಗಿರುವದಿಲ್ಲ.

"ನಿಮಗೆ ಬೇನೆ-ಬೇಸರಿಕೆಗಳೇನಾದರೂ ಆಗಿವೆಯೇನು?

"ಛೇ ಛೇ, ಆ ಮಾತೇ ಎತ್ತಬೇಡ"

"ಹಾಗಾದರೆ ನೀವು ಯಾವಾಗಲೂ ಚಿಂತಾಕ್ರಾಂತರಾಗಿ ಕಾಣುವಿರಲ್ಲ! ಕೂಗಿದರೆ, ಓ ಕೊಡುವದಿಲ್ಲ; ಹೆಚ್ಚಾಗಿ ಮಾತು-ಕಥೆಗಳನ್ನೂ ಆಡುವದಿಲ್ಲ. ನಿಮಗೆ ನನ್ನ ಕೊರಳ ಆಣೆಯಿದೆ, ಸತ್ಯವಿದ್ದುದನ್ನು ತಿಳಿಸದಿದ್ದರೆ" ಹೀಗೆಂದು ನುಡಿದು ಹೇಮಾಂಗಿನಿಯು ಪತಿಯ ತೊಡೆಯಮೇಲೆ ಕುಳಿತು ಅವನ ಬಾಯಿಗೆ ಆ ದುಗ್ಧಪಾತ್ರವನ್ನು ಹಚ್ಚಿಹಿಡಿದಳು. ಆಗ ಅಮೃತರಾಯನಿಗೆ ಅನುತಾಪವಾಯಿತು—"ಅವನು ಹೇಮಾವತಿಯನ್ನು ಮನಃಪೂರ್ವಕವಾಗಿ ಪ್ರೀತಿಸುತ್ತಿದ್ದುದೇನೋ ನಿಜ. ಆದರೆ ಈಚೆಗೆ ತನ್ನಲ್ಲುಂಟಾದ ಭಾವಾಂತರವು ಈವರೆಗೆ ತನಗೆ ತಿಳಿದುಬರದಿದ್ದರೂ ಅದು ಈಗ ತಿಳಿದು ಬಂದಿರುತ್ತದೆ. ಇದರಲ್ಲಿ ಇವಳದೇನೂ ದೋಷವಿರುವದಿಲ್ಲ. ಹೇಮಾವತಿಗೆ ಕಷ್ಟವಾಗಬಾರದೆಂದೇ ತನ್ನ ವಿಷಯದ ಸಂಗತಿಯನ್ನು ಪ್ರಕಾಶಗೊಳಿಸಬಾರದೆಂದು ವಿಮಲೆಯ ನಿರ್ಬಂಧಿಸಿರುವಳು. ಸವತಿಯಾದರೂ ಅವಳಿಗೆ ಹೇಮಾವತಿಯ ದುಃಖದ ಕಲ್ಪನೆಯಾಗಿರುವದು. ಮತ್ತು ಇವಳಿಗೆ ಆ ಕಷ್ಟವುಂಟಾಗಬಾರದೆಂದೇ ಅವಳು ತನ್ನ ಆತ್ಮಸುಖಕ್ಕೆರವಾಗಿರುವಳು; ಆದರೆ ನಾನು ಇವಳ ಪ್ರಿಯಪತಿಯಾಗಿದ್ದಾಗ್ಯೂ ಇವಳಿಗುಂಟಾಗಬಹುದಾದ ಕ್ಲೇಶದ ಅನುಮಾನವು ನನಗ್ಯಾಗಲಿಲ್ಲವಲ್ಲ? ಈಚೆಗೆಷ್ಟೋ ದಿವಸಗಳಿಂದ ನಾನು ಇವಳೊಡನೆ ಚನ್ನಾಗಿ ಮಾತು ಕೂಡಾ ಆಡಿರುವುದಿಲ್ಲ." ಈ ಪ್ರಕಾರವಾಗಿ ಮನದಲ್ಲಿ ಆಲೋಚಿಸಿ ಅವನು ಹೇಮಾವತಿಯನ್ನು ಒಮ್ಮೆ ಪ್ರೇಮಲ ದೃಷ್ಟಿಯಿಂದ ನೋಡಿದನು ಮಾತ್ರ. ಪರಕ್ಷಣದಲ್ಲಿಯೇ ಅವನು ಮೊದಲಿನಂತೆ ಭ್ರಾಂತನಾಗಿ ಅನ್ಯಮನಸ್ಕನಾದನು. ಗಂಡನ ಹಾವಭಾವಗಳನ್ನು ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ನೋಡುತ್ತ ಅವನ ವಾಮಭಾಗದಲ್ಲಿ ಕುಳಿತಿದ್ದ ಹೇಮಾವತಿಯು, ಅವನು ಅನ್ಯಮನಸ್ಕನಾದದ್ದನ್ನು ಕಂಡಕೂಡಲೆ, ಅವಳಲ್ಲಿಯು ಸ್ವಾಭಿಮಾನವು ಜಾಗೃತವಾಯಿತು. ಕೂಡಲೆ ಅವಳು ಸ್ವಾಮಿಯ ತೊಡೆಯಮೇಲಿಂದಿಳಿದು ಆವೇಶಭರದಿಂದ ಒಳಗೆ ಹೊರಟುಹೋದಳು; ಹಾಗು ತನ್ನ ಹಾಸಿಗೆಯ ಮೇಲೆ ಬಿದ್ದುಕೊಂಡು ಕೆಲ ಕಾಲದ ವರೆಗೆ ನೀರವವಾಗಿ ಕಣ್ಣೀರು ಹಾಕಿದಳು. ನಂತರ ಶಯ್ಯಾತ್ಯಾಗಮಾಡಿ, ತಮ್ಮನಾದ ಮುರಾರಿಯ ಬಳಿಗೆ ಬಂದು—'ತಮ್ಮಾ, ನನ್ನದೊಂದು ಕೆಲಸ ಮಾಡುವೆಯಾ?' ಎಂದು ವಿಚಾರಿಸಿದಳು.

"ಅದೇನು ಕೆಲಸ? ಹೇಳಿದರೆ ನೋಡುವೆನು."

"ದಿನಾಲು ಮುಂಜಾವು ನಸುಕಿನಲ್ಲೆದ್ದು ಎಲ್ಲಿಗೆ ಹೋಗುತ್ತಾರೆಂಬ ದನ್ನು ನೋಡಿ ಬರುವೆಯಾ? ನಾಳೆ ಬೆಳಿಗ್ಗೆ ಅವರು ಎದ್ದು ಹೋಗುತ್ತಲೆ, ನಿನ್ನನ್ನೂ ಎಬ್ಬಿಸುವೆನು. ಗುಪ್ತವಾಗಿ ನೀನು ಅವರನ್ನು ಹಿಂಬಾಲಿಸಿ, ಅವರು ಎಲ್ಲಿಗೆ ಹೋಗುತ್ತಾರೆ, ಏನೇನು ಮಾಡುತ್ತಾರೆಂಬದನ್ನು ತಿಳಕೊಂಡು ಬಾ; ಆದರೆ ಬಹು ಎಚ್ಚರ. ಅವರಿಗೆ ನಿನ್ನ ಸುಳುವು ಕೂಡ ಹತ್ತದಂತೆ ಬಹು ಎಚ್ಚರವಾಗಿರು."

"ಒಳ್ಳೇದು. ಹಾಗೆಯೇ ಮಾಡುವೆನು," ಎಂದು ನುಡಿದು, ಮುರಾರಿಯು ಒಡಂಬಟ್ಟನು. ದಿನದಂತೆ ಅಪ್ಪುತರಾಯನು ಮರುದಿನ ಪ್ರಾತಃಕಾಲ ೪|| ಗಂಟೆಗೆದ್ದು ಹೊರಬಿದ್ದನು. ಮುರಾರಿಯೂ ಭಗಿನಿಯ ಆದೇಶದಂತೆ ಅವನನ್ನು ನುಸರಿಸಿ ನಡೆದನು. ಬೆಳಿಗ್ಗೆ ಹತ್ತುಗಂಟೆಯ ವರೆಗೆ ಅವನು ಅಪ್ಪುತರಾಯನ ಅನುಸರಣ ಮಾಡಿ ಮನೆಗೆ ಹಿಂದಿರುಗಿದನು. ಆಗ ಅವನು ಹೇಮಾವತಿಗೆ ತಿಳಿಸಿ ದುದೇನಂದರೆ—"ಭಾವಯ್ಯನು ನಸುಕಿನಿಂದ ಈ ವರೆಗೆ ಆಗೋ, ಆ ದುರಾತ್ಮ ಮೇಧ ಘಾಟದ ಒಂದು ಪಕ್ಕದಲ್ಲಿ ಸ್ವಸ್ಥವಾಗಿ ಕುಳಿತಿದ್ದನು; ಹಾಗು ಇದೀಗ ಸ್ನಾನ ಮಾಡಿ ಮನೆಗೆ ಬಂದಿರುವನು." ಬಳಿಕ ಮುರಾರಿಯು ಭಗಿನಿಯ ಸೂಚನೆ ಯಂತೆ ಊಟವಾದನಂತರ ಪುನಃ ಅಪ್ಪುತರಾಯನ ಅನುಸರಣ ಮಾಡಿದನು. ತನ್ನ ಗಂಡನು ಪ್ರತಿನಿತ್ಯ ನಸುಕಿನಿಂದ ಮಧ್ಯಾಹ್ನದ ವರೆಗೂ, ಮಧ್ಯಾಹ್ನದಿಂದ ರಾತ್ರಿ ಒಂಭತ್ತರ ವರೆಗೂ ನಿಯಮಿತವಾಗಿ ಎಲ್ಲಿಯೋ ಹೊರಗೆ ಹೋಗುತ್ತಿರುವುದನ್ನೂ, ಅವನು ಹೀಗೆ ಹೋಗಹತ್ತಿದಂದಿನಿಂದ ಅನ್ಯಮನಸ್ಕನಾಗಿರುವುದನ್ನೂ ಕಂಡ ಆ ಹೇಮಾವತಿಯಲ್ಲಿ ಅವನ ವಿಷಯವಾಗಿ ಒಂದುಬಗೆಯ ಸಂಶಯವುತ್ಪನ್ನವಾ ಗಿತ್ತು. ಆ ಸಂಶಯವು ಬೇರೆ ಯಾವ ಪ್ರಕಾರದ್ದೂ ಆಗಿರದೆ, ಯಾವನೊಬ್ಬ ಹೆಸರುವಾಸಿಯಾದ ಗುಪ್ತಪೋಲೀಸನು ಯಾವದೊಂದು ಭಯಂಕರ ಗುಹ್ನೆ ಯನ್ನು ಪತ್ತೆ ಹಚ್ಚುವದಕ್ಕೆ ಪ್ರಾರಂಭಿಸುವ ಮೊದಲು, ಆ ಗುಹ್ನೆಗೆ ಯಾವ ಳೊಬ್ಬ ಸ್ತ್ರೀಯ ಸಂಬಂಧವಿದೆಯೋ ಹೇಗೆಂಬದನ್ನು ಸೂಕ್ಷ್ಮವಾಗಿ ಆಲೋಚಿಸಿ ತಿಳಿದ ಬಳಿಕ, ಮುಂದೆ ಆ ಹೆಂಗಸಿನ ಮುಖಾಂತರ ಗುಹ್ನೆಯ ತಪಾಸು ಹಚ್ಚು ಲಿಕ್ಕೆ ಅವನಿಗೆ ಹೇಗೆ ಸೌಲಭ್ಯವುಂಟಾಗುತ್ತದೆಯೋ, ಹಾಗೆಯೇ ತನ್ನ ಗಂಡನ ಈ ತರಹದ ಆಚರಣೆಗೆ ಯಾವಳೊಬ್ಬ ಸ್ತ್ರೀಯೇ ಕಾರಣವಾಗಿರಬೇಕೆಂದು ಹೇಮಾವತಿ ಯು ಅನುಮಾನಗೊಂಡಿದ್ದಳು; ಹಾಗೂ ಅದರ ಸಂಧಾನಕ್ಕಾಗಿಯೇ ಅವಳು

ಇಂದು ತನ್ನ ತಮ್ಮನನ್ನು ನಿಯೋಜಿಸಿದ್ದಳು.

ಮಧ್ಯಾಹ್ನ ೫ ಗಂಟೆಗೆ ಮುರಾರಿಯು ಮನೆಗೆ ತಿರುಗಿ ಬಂದು ಭಗಿನಿಯನ್ನು ಕುರಿತು—"ಅಕ್ಕಾ, ಶ್ರೀಕೈಲಾಸನಾಥನ ದೇವಾಲಯದ ಆಜೆಬದಿಗೊಂದು ಭವ್ಯ ಮಂದಿರವು ಕಟ್ಟಲ್ಪಡುತ್ತಿರುವುದಷ್ಟೇ? ಆ ಮಂದಿರದ ಮಾಲಕಳ ಮನೆಗೆ ಭಾವಯ್ಯನು ಹೋಗಿರುವನು. ಆ ಮನೆಯು ಕಮಲಾಸುಂದರಿಯೆಂಬ ಧನಾಢ್ಯಳದಂತೆ. ಅವಳೂ ಅವಳ ಭಗಿನಿಯೂ ಪ್ರತಿನಿತ್ಯ ಚೌಕಿಯನ್ನಾರೋಹಿಸಿ, ದಶಾಶ್ವಮೇಧ ಘಾಟಿಗೆ ಗಂಗಾಸ್ನಾನಕ್ಕೆ ಬರುವದನ್ನು ನಾನು ನೋಡಿರುವೆನು. ಅವರು ಅಲ್ಲಿಗೆ ಬಂದು ಸ್ನಾನ ಮಾಡಿ ಹೋಗುವ ವರೆಗೆ ಭಾವನು ಗಂಗಾತಟಾಕ ದಲ್ಲಿಯೇ ಕುಳಿತಿರುತ್ತಾನೆ. ಅವರು ಹೊರಟು ಹೋದಬಳಿಕ ಅವನು ಸ್ನಾನ ಮುಗಿಸಿಕೊಂಡು ಮನೆಗೆ ಬರುತ್ತಿರುತ್ತಾನೆ."

"ಆ ಹೆಂಗಸರು ಒಳ್ಳೇ ಲಾವಣ್ಯವತಿಯರಿರುವರೇನು?"

"ಓಹೋ, ನಿನಗಿಂತಲೂ ಸುಂದರಿಯರಿರುವರು." ಎಂದು ಬಾಲಬ್ರಹ್ಮಚಾರಿಯಾದ ಮುರಾರಿಯು ಹೇಳಿ ನಕ್ಕನು.

"ಅವರು ನನಗಿಂತ ಚಿಕ್ಕವರೋ, ನನ್ನಷ್ಟೇ ವಯಸ್ಸಿನವರೋ?"

"ಅವರೀರ್ವರೂ ನಿನಗಿಂತ ತುಸ ದೊಡ್ಡವರು"

ಆ ಸ್ತ್ರೀಯರ ಬಳಿಗೆ ನನ್ನ ಪತಿಯು ಹಗಲೂ ಹನ್ನೆರಡು ತಾಸು ಹೋಗಿ ಮಾಡುವದೇನು? ಅವರಾದರೂ ಇವನನ್ನು-ಪರಪುರುಷನನ್ನು ತಮ್ಮ ಮನೆಗೆ ಬರಗೊಡುತ್ತಿರುವುದೇಕೆ? ಅವರು ನನ್ನ ಪತಿಯ ಸಂಪರ್ಕೀಯರು ಅಪ್ಪಿರಬಹುದೇನು? ಆದರೆ ಪತಿಯು ಈವರೆಗೂ ಆ ಸಂಗತಿಯನ್ನು ನನಗೆ ತಿಳಿಸಿರುವದಿಲ್ಲವಲ್ಲ! ನಿಜವಾಗಿ ಸಂಬಂಧಿಕರಾಗಿದ್ದರೆ, ತಿಳಿಸದಿರುವದುಂಟೆ? ಅವರ ಬಳಿಗೆ ಪತಿಯು ಹೋಗುವ ಕಾರಣವನ್ನು ಗೊತ್ತುಹಚ್ಚಲಿಕ್ಕೆ ಮುರಾರಿಯಂಥ ಪೋರನು ಅಸಮರ್ಥನು. ಆ ಕೆಲಸಕ್ಕಾಗಿಯಾರನ್ನು ಯೋಜಿಸಬೇಕೆಂದು ಹೇಮಾವತಿಯು ಏಕಾಗ್ರತೆಯಿಂದ ಆಲೋಚಿಸುತ್ತಿರುವಷ್ಟರಲ್ಲಿ,—"ತಂಗೀ, ಹೇಮಾ, ರಾಯರು ಬಂದಿರುವರು. ಅವರ ಊಟ-ಪಾಟಗಳ ಸೌರಣೆಯನ್ನು ಮಾಡಬಾರದಮ್ಮಾ" ಎಂದು ಹೇಳುತ್ತ ಅವರ ಮನೆಯ ದಾಸಿಯಾದ ನೀಲಾಂಬಿಕೆಯು ಅಲ್ಲಿಗೆ ಬಂದಳು. ಆಗ ತನ್ನ ಗುಪ್ತ ಕೆಲಸಕ್ಕೆ ಇವಳೇ ಯೋಗ್ಯಳೆಂದು ಭಾವಿಸಿ, ಹೇಮಾವತಿಯು—"ನೀಲಾಂಬಿಕಾ, ನೀನು ನನ್ನದೊಂದು ಕೆಲಸವನ್ನು ಮಾಡಲೇಬೇಕು." ಎಂದು ಪ್ರಸ್ತಾಪ ತೆಗೆಯಲು, ಆ ದಾಸಿಯು ಸಿಟ್ಟಿನಿಂದ—ಬೆಳಗಿನಿಂದ ದುಡಿದು-ದುಡಿದು

ಬೇಸತ್ತಿರುವೆನು, ನಿನ್ನ ಯಾವ ಕೆಲಸ-ಬಿಲಸಗಳನ್ನೂ ಈಗ ನಾನು ಮಾಡಲಾರೆನು. ಹೋಗು, ರಾಯರು ಕೈಕಾಲು ತೊಳಕೊಂಡು ಬಂದು ಆಗೋ, ಮಣೆಯಮೇಲೆ ಸಹ ಕುಳಿತಿರುವರು. ತೀವ್ರ ಹೋಗಿ ಅವರಿಗೆ ಊಟಕ್ಕೆ ಬಡಿಸು'' ಎಂದು ಹೇಳಿ ಹೇಮಾವತಿಯನ್ನು ಅಡಿಗೆಯ ಮನೆಗೆ ಕಳಿಸಿದಳು.

ನೀಲಾಂಬಿಕೆಯು ಹೇಮಾವತಿಯ ತವರು ಮನೆಯಲ್ಲಿ ಚಿಕ್ಕಂದಿನಿಂದಲೂ ಇರುತ್ತಿದ್ದಳು. ಆಕೆಯು ಸುಹೃದಯಳೂ, ಒಳ್ಳೇ ಕಾರ್ಯತತ್ಪರಳೂ ಇದ್ದಂತೆ, ನಿಸ್ಪೃಹವೃತ್ತಿಯವಳೂ ಆಗಿದ್ದಳು. ಆಕೆಗೆ ಈಗ ಸರಾಸರಿ ೭೫ ವರ್ಷಗಳಾಗಿದ್ದವು. ಹೇಮಾವತಿಯ ತಂದೆಯನ್ನು ಕೂಡ ಅವಳು ಎತ್ತಿ ಆಡಿಸಿದ ವಳಿದ್ದಳೆಂದಬಳಿಕ ಹೇಮಾವತಿಯನ್ನೂ ಮುರಾರಿಯನ್ನೂ ಅವಳು ಸಂರಕ್ಷಿಸಿದ್ದ ಳೆಂದು ಹೇಳುವದರಲ್ಲಿ ವಿಶೇಷವೇನು? ಅವಳು ಬಹು ದಿವಸಗಳಿಂದ ಆ ಮನೆಯಲ್ಲಿ ದ್ದುದರಿಂದಲೂ, ಅವಳ ನಿಸ್ಪೃಹ ಸ್ವಭಾವಕ್ಕಾಗಿಯೂ ಹೇಮಾವತಿಯ ತಂದೆಯಾ ಗಲಿ, ತಾಯಿಯಾಗಲಿ ತೊತ್ತಿನಂತೆ ಅವಳೊಡನೆ ವ್ಯವಹರಿಸದೆ, ಅವಳೊಬ್ಬ ತಮ್ಮ ಹಿತಚಿಂತಕ ಆಪ್ತಳೆಂದೇ ತಿಳಿದು ನಡೆಯುತ್ತಿದ್ದರು. ಆದರಿಂದಲೇ ಪರದೇಶಕ್ಕೆ ನಡೆದಿದ್ದ ತಮ್ಮ ಪ್ರಿಯ ಪುತ್ರ-ಪುತ್ರಿಯರೊಡನೆ ಆ ನೀಲಾಂಬಿಕೆಯನ್ನೇ ಅವರು ಕಾಶಿಗೆ ಕಳುಹಿದ್ದರು.

ಮರುದಿನ ಬೆಳಗಿನಲ್ಲಿ ನೀಲಾಂಬಿಕೆಯು ತನ್ನ ನಿಯಮಿತ ಕೆಲಸಗಳನ್ನು ತೀರಿ ಸಿಕೊಂಡು ಹೇಮಾವತಿಯೆಡೆಗೆ ಬಂದು—ಅದೇನು ಕೆಲಸವಮ್ಮಾ, ನಿನ್ನೆ ಸಾಯಂ ಕಾಲ ನೀನು ನನಗೆ ಹೇಳುತ್ತಿದ್ದುದು? ಎಂದು ಪ್ರಶ್ನೆಮಾಡಿದಳು. ಹೇಮಾವ ತಿಯು ಅವಳಿಗೆ ಪತಿಯ ಪ್ರಸ್ತುತ ಸ್ಥಿತಿಯನ್ನು ತಿಳಿಸಿ, ಆ ಸ್ಥಿತಿಗೆ ಕಾರಣವೆಂದು ತಾನು ಮುರಾರಿಯ ಮುಖಾಂತರ ತಿಳಿದುಕೊಂಡಿದ್ದ ಆ ಇಬ್ಬರು ಹೆಂಗಳೆಯರ ಸಂಗತಿಯನ್ನು ತಿಳಿಸಿದಳು. ಕೂಡಲೆ ನೀಲಾಂಬಿಕೆಗೂ ಹೇಗೆ ಹೇಗೋ ಅನಿಸಿತು. ಅದಾವ ಸಟವಿಯು ತನ್ನ ಹೇಮಾವತಿಯ ಪತಿಯನ್ನು ತನ್ನ ಜಾಲದಲ್ಲಿ ತೊಡಕಿಸಿ ಕೊಂಡು ತಮ್ಮ ಕುಟುಂಬವನ್ನೇ ದುಃಖಕ್ಕೀಡುಗೊಳಿಸಿರುವಳೆಂಬದನ್ನು ತಿಳಕೊ ಳ್ಳಲಿಕ್ಕೆ ನೀಲಾಂಬಿಕೆಯು ಹವಣಿಸಿದಳು. ಆಗ ಅವಳು ಮುರಾರಿಯನ್ನು ಸಂಗಡ ಕರಕೊಂಡು ಕೈಲಾಸನಾಥನ ಸ್ವರ್ಗದ್ವಾರದ ಬಳಿಯಲ್ಲಿಯ ಆ ಕಮಲಾಸುಂದ ರಿಯ ವಾಡೆಗೆ ಹೋದಳು. ಅಲ್ಲಿ ಒಳಗೆ ಹೋಗಿ, ಒಬ್ಬಿಬ್ಬ ದಾಸಿಯರ ಪರಿಚಯ ಮಾಡಿಕೊಂಡು ಸಾಯಂಕಾಲದಲ್ಲಿ ಅಲ್ಲಿಯ ಆ ನೂತನ ಮಂದಿರ ನೋಡುವದ ಕ್ಕಾಗಿ ಬರುತ್ತೇನೆಂದು ಹೇಳಿ, ಮನೆಗೆ ತಿರುಗಿದಳು. ನಂತರ ಸಾಯಂಕಾಲದ

೪ ಗಂಟೆಯ ಹೊತ್ತಿಗೆ ಅವಳು ಅಮೃತರಾಯನಿಗಿಂತ ಮೊದಲು ಅಲ್ಲಿಗೆ ಹೋಗಿ, ಒತ್ತಟ್ಟಿಗೆ ನಿಂತು, ಅವನು ಬಂದು ಅಲ್ಲಿ ಯಾರಿಗೆ ಭೇಟಿಯಾಗುತ್ತಾನೆ, ಯಾರೊಡನೆ ಮಾತಾಡುತ್ತಾನೆ ಮುಂತಾದವುಗಳನ್ನು ನಿರೀಕ್ಷಿಸಿದಳು. ನಂತರ ಅಲ್ಲಿಯ ದಾಸಿಯರೊಡನೆ ಆ ನೂತನ ಮಂದಿರ ನೋಡುವ ನೆವದಿಂದ ಹೋಗಿ, ಅಮೃತರಾಯನೊಡನೆ ಮಾತಾಡುತ್ತ ಕುಳಿತಿದ್ದ ಆ ಸ್ತ್ರೀಯು ಅವನ ಪ್ರಥಮ ಪತ್ನಿಯಾದ ವಿಮಲೆಯೆಂಬದನ್ನೂ, ಮೊನ್ನೆ ಮೊನ್ನೆ ಅವರ ಪುನರ್ಮಿಲನವಾಯಿತೆಂಬದನ್ನೂ ತಿಳಕೊಂಡು ಮನೆಗೆ ಹಿಂದಿರುಗಿದಳು.

ಮನೆಗೆ ಬಂದಾಗ ನೀಲಾಂಬಿಕೆಯು ಅಮೃತರಾಯ ಹಾಗು ಹೇಮಾವತಿಯರಿಗಿಂತಲೂ ದುಃಖಿತ್ತಳಾಗಿ ತೋರುತ್ತಿದ್ದಳು. ಆದರಿಂದ ಹೇಮಾವತಿಯು ಆಗ ಅವಳನ್ನೇನೂ ಕೇಳಿ ತಿಳಕೊಳ್ಳುವ ಭರಕ್ಕೆ ಬೀಳದೆ, ತನ್ನ ಕೆಲಸ ಬೊಗಸೆಗಳನ್ನು ಮುಗಿಸಿಕೊಂಡು ಸ್ವಸ್ಥವಾಗಿ ಮಲಗಿಕೊಂಡಳು. ಹೇಮಾವತಿಯು ಮಲಗಲಿಕ್ಕೆ ತನ್ನ ಕೋಣೆಗೆ ಹೊರಟು ಹೋದಬಳಿಕ ನೀಲಾಂಬಿಕೆಯು ಮುರಾರಿಯ ಕೈಯಿಂದ ಪುಣೆಗೆ ಹೇಮಾವತಿಯ ತಂದೆಗೆ ಒಂದು ಪತ್ರ ಬರೆಯಿಸಿದಳು. ಅದರ ಸಂಗತಿಯೇನಂದರೆ, "ತಾವು ತಮ್ಮ ಮಗಳನ್ನು ಸವತಿಯ ಮೇಲೆ ಕೊಟ್ಟಿರುವಿರೆಂಬದು ಇಂದು ತಿಳಿದು ಬಂದದ್ದರಿಂದ ನನಗೆ ಅತ್ಯಂತ ದುಃಖವೂ ಕ್ಲೇಷವೂ ಉಂಟಾಗಿರುತ್ತದೆ. ಆದರೆ ಈ ಸಂಗತಿಯು ಈಗಲೆ ಹೇಮಾವತಿಗೆ ತಿಳಿದರೆ, ಅವಳು ತನ್ನ ಜೀವಕ್ಕೇನಾದರೂ ಮಾಡಿಕೊಂಡಾಳೆಂಬ ಭಯದಿಂದ ನಾನು ಇದನ್ನು ಈಗ ಅವಳಿಗೆ ತಿಳಿಸುವದಿಲ್ಲ. ನೀವು ಮಾಯಿಜಿಯವರೊಡನೆ ಕೂಡಲೆ ಹೊರಟು ಬರ್ರಿ. ಅವಳ ಸಾಂತ್ವನ ಮಾಡಲನುಕೂಲವಾಗುವವರೆಗೆ ನಾನೀ ಸಂಗತಿಯನ್ನು ಹೊರಗೆಡವುವದಿಲ್ಲ. ತೀವ್ರ ಬರ್ರಿ" ಈ ಪತ್ರದ ಸಂಗತಿಯನ್ನು ಹೇಮಾವತಿಯ ಬಳಿಗಾಗಲಿ, ಅಥವಾ ಬೇರೆ ಯಾರ ಬಳಿಗಾಗಲಿ ಉಸುರಲಾಗದೆಂದು ನೀಲಾಂಬಿಕೆಯು ಮುರಾರಿಗೆ ಖಂಡಿತವಾಗಿ ತಿಳಿಸಿದಳು.

ಮುರಾರಿಯು ಪತ್ರವನ್ನು ಓದಿ ದತ್ತಾತ್ರಯರಾಯರು ಚಿಂತಿತರಾದರು; ಮತ್ತು ಅಂದೇ ಪತ್ನಿಯೊಡನೆ ಹೊರಟು ಊರಿಗೆ ಬಂದರು. ತಾಯಿತಂದೆಗಳು ಆಕಸ್ಮಿಕವಾಗಿ ತಮ್ಮಲ್ಲಿಗೆ ಬಂದದ್ದನ್ನು ನೋಡಿ, ಹೇಮಾವತಿಗೆ ಅತ್ಯಂತ ಆಶ್ಚರ್ಯವೆನಿಸಿತು. ನಿನ್ನೆಯೇ ತಂದೆಯವರ ಪತ್ರ ಬಂದಿದ್ದು, ಅದರಲ್ಲಿ ಅಣ್ಣನಿಗೆ ತುಸ ದೇಹಜಾಡ್ಯವುಂಟಾಗಿದೆಯೆಂದು ಬರೆದಿದೆ; ಇಂದು ಇವರು ಹೀಗೆ ಒಮ್ಮೆಲೆ ಇಲ್ಲಿಗೇಕೆ ಬಂದಿರಬಹುದು? ನೀಲಾಂಬಿಕೆಯು ಪತ್ರ ಬರೆಸಿ ಇವರನ್ನು ಕರೆಸಿಕೊಂಡಿರಬಹು

ದೇನು? ಹಾಗೆ ಕರೆಯಿಸಲಿಕ್ಕೆ ಕಾರಣವೇನಾಗಿರಬಹುದು? ಅಂಥ ಮಹತ್ವದ ಕಾರಣವಿರದಿದ್ದರೆ, ಬಡ್ಡಿನ ಅಣ್ಣನನ್ನು ಮನೆಯಲ್ಲಿ ಬಿಟ್ಟುಗೊಟ್ಟು ಇವರು ಹೀಗೆ ಬರುತ್ತಿದ್ದರೇ? ಅಂದು ನೀಲಾಂಬಿಕೆಯು ಕಮಲಾಸುಂದರಿಯ ಮನೆಗೆ ಹೋಗುವವದಕ್ಕೂ, ಇವರು ಹೀಗೆ ಒಮ್ಮಿಂದೊಮ್ಮೆಲೆ ಇಲ್ಲಿಗೆ ಬರುವದಕ್ಕೂ ಏನಾದರೂ ಸಂಬಂಧವಿರಲೇಬೇಕಲ್ಲದೆ, ಬೇರೆ ಕಾರಣವಿರುವಂತೆ ತೋರುವದಿಲ್ಲ'' ಎಂದು ಅವಳು ಮನಸ್ಸಿನಲ್ಲಿ ತರ್ಕಿಸಿದಳು. ಹೇಮಾವತಿಯು ಹೀಗೆ ವಿಚಾರಗ್ರಸ್ತಳಾಗಿರುವ ಸಂಧಿಸಾಧಿಸಿ ನೀಲಾಂಬಿಕೆಯು ದತ್ತಾತ್ರೇಯರಾಯರಿಗೂ ಅವರ ಪತ್ನಿಗೂ ವಿಮಲೆಯ ವೃತ್ತಾಂತವನ್ನು ಗುಪ್ತವಾಗಿ ನಿವೇದಿಸಿದಳು. ಮೊದಮೊದಲು ಆ ದಂಪತಿಗಳು ನೀಲಾಂಬಿಕೆಯ ಮಾತಿನಲ್ಲಿ ವಿಶ್ವಾಸವಿಡಲಿಲ್ಲ. ಆದರೆ ಅವಳು ವಿಮಲೆಯ ಸಂಪೂರ್ಣ ಸಂಗತಿಯನ್ನು ಅವರಿಗೆ ಮನನ ಮಾಡಿ ಕೊಟ್ಟಹಾಗೆ ಅವರಲ್ಲಿ ಆ ಬಗ್ಗೆ ನಂಬಿಕೆಯುಂಟಾಗತೊಡಗಿತು.

ಅವರು ಬಹಳ ಹೊತ್ತು ಏನೋ ಮಾತಾಡುತ್ತಿರುವದನ್ನು ತಿಳಿದು, ಹೇಮಾವತಿಯು ಅವರಿಗೆ ತಿಳಿಯದ ಹಾಗೆ ಅವರ ಸಮೀಪದಲ್ಲಿ ಮರೆಗೆ ನಿಂತು ಅವರ ಭಾಷಣದ ಸಾರಾಂಶವನ್ನು ತಿಳಿದಳು. ಆಗ ಅವಳಿಗೆ ಬಹು ಸಿಟ್ಟುಬಂದಿತು. ಆದರೆ ಆ ಸಿಟ್ಟಿನ ಭರದಲ್ಲಿ ಅವಳಲ್ಲಿ ಸವತಿಮತ್ಸರವು ಮತ್ಕಿಂಚಿತ್ತೂ ಉಂಟಾಗಿದ್ದಿಲ್ಲ. ತನ್ನ ಗಂಡನು ತನ್ನ ಗುಣವಾನ್ ಹಾಗು ಸುಸ್ವರೂಪಿಯಾದ ಸವತಿಯ ಸಂಬಂಧದ ಸಂಗತಿಯನ್ನು ಈ ವರೆಗೂ ತನಗೆ ತಿಳಿಸದಿರುವದೇ ಅವಳ ಆ ಸಿಟ್ಟಿನ ಕಾರಣವಾಗಿತ್ತು. ಕ್ಷಣಾರ್ಧದಲ್ಲಿ ಅವಳ ಮನೋಭೂಮಿಕೆಯು ಕ್ರೋಧವೆಂಬ ವಿಕಾರವನ್ನು ಬಿಸುಟಿ ನಿರ್ಮಲವಾಗಲು, ತನ್ನ ಸವತಿಯನ್ನು ಕಣ್ಣಾರೆ ನೋಡಬೇಕೆಂಬ ಲವಲವಿಕೆಯು ಅವಳಲ್ಲಿ ಹುಟ್ಟಿತು.

ಕೂಡಲೆ ಅವಳು ತಮ್ಮ ಮನೆಯ ಆಳಿಗೆ ಹೇಳಿ ಎರಡು ಬಾಡಿಗೆಯ ಚಾಕ್ಕಿಗಳನ್ನು ತರಿಸಿದಳು. ಒಂದರಲ್ಲಿ ತಂದೆತಾಯಿಗಳನ್ನೂ ನೀಲಾಂಬಿಕೆಯನ್ನೂ ಕೂರಿಸಿ, ಅವರನ್ನು ದಶಾಶ್ವಮೇಧ ಘಾಟಿಗೆ ಗಂಗಾಸ್ನಾನಕ್ಕೆ ಕಳಿಸಿದಳು; ಹಾಗು ತಾನು ಮುರಾರಿಯೊಡನೆ ಇನ್ನೊಂದನ್ನು ಆರೋಹಿಸಿ, ಕಮಲಾಸುಂದರಿಯ ವಾಡೆಯ ಕಡೆಗೆ ನಡೆದಳು.

''ಅಲ್ಲಿಗೆ ಹೋಗಿ ಮಾಡುವದೇನು? ನಿನಗೆ ಅಲ್ಲಿ ಯಾರ ಗುರುತು-ಪರಿಚಯ ಕೂಡ ಇರುವದಿಲ್ಲ. ಸಂಗಡ ನಮ್ಮ ನೀಲಾಂಬಿಕೆಯನ್ನಾದರೂ ಕರೆತಂದಿದ್ದರೆ ಒಳಿತಾಗುತ್ತಿತ್ತೆ''ಂದು ಮುರಾರಿಯು ನುಡಿಯಲು, ''ಅದನ್ನೆಲ್ಲ ಕಟ್ಟಿಕೊಂಡು

ನೀನು ಮಾಡುವದೇನು? ಅಲ್ಲಿ ನನ್ನ ಪರಿಚಯದವರಿರದಿದ್ದರೂ ನನ್ನ ಪರಮಾಪ್ತಳು-ಭಗಿನಿಯು ಇರುತ್ತಾಳೆ'' ಎಂದು ಹೇಮಾವತಿಯು ಮಾತಾಡುವಷ್ಟರಲ್ಲಿ ಚೌಕಿಯು ಕಮಲಾಸುಂದರಿಯ ವಾಡೆಯ ಎದುರಿಗೆ ಬಂದು ನಿಂತಿತು.

ಕೂಡಲೆ ಅಲ್ಲಿಯ ಭಯ್ಯಾನಾದ ಭೂಪಾಲಸಿಂಹನು ಎದ್ದುನಿಂತು ಇವರೀರ್ವರಿಗೂ ಮುಜುರೆ ಮಾಡಿ, ಇವರನ್ನು ಒಳಗೆ ಕರಕೊಂಡು ನಡೆದನು. ಒಳಗೆ ಹೋಗಲಿಕ್ಕೆ ಮುರಾರಿಯು ಸಂಕೋಚಪಡುತ್ತಿದ್ದರೂ, ಹೇಮಾವತಿಯು ನಿಃಸಂಕೋಚದಿಂದಲೂ, ನಿರಾಲೋಚನೆಯಿಂದಲೂ ಆ ವಾಡೆಯ ಒಳಗೆ ಸಾಗಿದಳು. ಆಗ ಭೂಪಾಲಸಿಂಹನು ಮುರಾರಿಯನ್ನು ಕುರಿತು ''ಕಹಾಸೇ ಆಯಾ ಬಾಬೂ?'' ಎಂದು ಪ್ರಶ್ನೆಮಾಡಿದನು. ''ಇದೇ ಊರಲ್ಲಿಯ ನಮ್ಮ ಮನೆಯಿಂದ ಬಂದಿರುವೆವೆ''ಂದು ಮುರಾರಿಯು ಹೇಳಿದನು. ಭೂಪಾಲಸಿಂಹನು ಮುರಾರಿಯನ್ನು ದಿವಾಣಖಾನೆಯೊಳಕ್ಕೆ ಕರೆತಂದು, ಆಸನದ ಮೇಲೆ ಕೂಡ್ರುಹೇಳಿದನು. ಆದರೆ ಅವನು ಅದಕ್ಕೆ ಒಪ್ಪದೆ ಬಾಗಿಲಲ್ಲಿಯೇ ನಿಂತುಕೊಂಡನು.

ಹೇಮಾವತಿಯು ಹಾಗೆಯೇ ಮುಂದಕ್ಕೆ ಹೋಗಲು, ಒಬ್ಬ ದಾಸಿಯು ಇವಳ ಬಳಿಗೆಬಂದು—ತಾವು ಯಾರನ್ನು ಕಾಣಬೇಕಾಗಿದೆ? ಎಂದು ವಿಚಾರಿಸಲು, ''ನಾನು ನಮ್ಮ ಅಕ್ಕನಿಗೆ ಭೇಟಿಯಾಗಬೇಕಾಗಿದೆ'' ಎಂದು ತಿಳಿಸಿದಳು. ಆಗ ದಾಸಿಗೆ ಇವಳು ಕಮಲಾಸುಂದರಿಯ ಭಗಿನಿಯೋ, ವಿಮಲಾದೇವಿಯ ಭಗಿನಿಯೋ ಎಂಬಬಗ್ಗೆ ಇತಿ-ಮಿತಿಯುಂಟಾದ್ದರಿಂದ ಅವಳು ಪುನಃ ಪ್ರಶ್ನೆಮಾಡಿದಳೇನಂದರೆ—''ನಿಮ್ಮ ಭಗಿನಿ ಯಾರು?''

''ವಿಮಲಾದೇವಿಯು.''

''ಓಹೋ, ತಾವು ನಮ್ಮ ಅಬಚಿಯವರ ಭಗಿನಿಯರಾದ್ದರಿಂದ ನಮಗೆ ಅಬಚಿಯವರೇ ಆದಿರಿ. ಬರ್‍ರಿ, ಅಬಚಿಯವರೇ, ನಿಮ್ಮ ಅಕ್ಕಂದಿರು ಅಗೋ ಅಲ್ಲಿರುವರು'' ಎಂದು ನುಡಿದು, ದಾಸಿಯು ಹೇಮಾವತಿಯನ್ನು ಅತ್ತ ಕರೆದೊಯ್ದಳು. ಆ ಮನೆಯ ಎಲ್ಲ ದಾಸದಾಸಿಯರೂ ಕಮಲೆಯನ್ನು ತಾಯಿಯೆಂದೂ, ವಿಮಲೆಯನ್ನು ಅಬಚಿಯೆಂದೂ ಕರೆಯುತ್ತಿದ್ದರು.

ದಾಸಿಯು ಹೇಮಾವತಿಯನ್ನು ಕರೆದೊಯ್ದು—ಅಬಚಿಯವರೇ, ಇಗೋ ನಿಮ್ಮ ಭಗಿನಿಯವರು ಬಂದಿದ್ದಾರೆ, ಎಂದು ತಿಳಿಸಿದಳು. ವಿಮಲೆಗೆ ಒಡಹುಟ್ಟಿದ ಅಕ್ಕತಂಗಿಯರಾರೂ ಇದ್ದಿಲ್ಲ. ಅವಳ ಮಾವನ ಮಗಳೊಬ್ಬಳು ಮಾತ್ರ ಅವಳನ್ನು ಅಕ್ಕ ಎಂದು ಕರೆಯುತ್ತಿದ್ದರಿಂದ ಅವಳೇ ಬಂದಿರಬಹುದೆಂದು ತಿಳಿದು

ಅವಳು ಹೇಮಾವತಿಯ ಕಡೆಗೆ ಟಕಮಕ ನೋಡಿ, ಅವಳಿವಳಲ್ಲೆಂದು ತಿಳಿದು ವಿಸ್ಮಯಾನ್ವಿತಳಾಗಿ ದಾಸಿಯನ್ನು ಕುರಿತು—"ಏನೇ, ನನ್ನ ಭಗಿನಿಯು ಎಲ್ಲಿರುವಳೆ"ಂದು ಕೇಳಿದಳು.

"ಇವರೇ ನಿಮ್ಮ ತಂಗೆಂದಿರು. ಇವರು ನಿಮ್ಮ ಭಗಿನಿಯರೆಂದು ಹೇಳಿದ್ದರಿಂದಲೇ ನಾನು ಇವರನ್ನು ನಿಮ್ಮೆಡೆಗೆ ಕರೆತಂದಿರುವೆನು" ಎಂದು ನುಡಿದು ದಾಸಿಯು ಸುಮ್ಮನಾದಳು. ಇದನ್ನು ಕೇಳಿ, ವಿಮಲೆಯ ವಿಸ್ಮಯವು ಇನ್ನೂ ಹೆಚ್ಚಿತು. ಹೇಮಾವತಿಯು ಈವರೆಗೆ ವಿಮಲೆಯನ್ನು ಎವೆಯಿಕ್ಕದೆ ಒಂದೇಸವನೆ ನೋಡಹತ್ತಿದ್ದಳು. ನೀಲಾಂಬಿಕೆಯು ತನ್ನ ತಂದೆ-ತಾಯಿಗಳ ಬಳಿಯಲ್ಲಿ ವರ್ಣಿಸಿದಂತೆ ಇವಳು ಸಾಕ್ಷಾತ್ ಜಗದ್ಧಾತ್ರಿಯಂತೆ ಮನೋಹರರೂಪವುಳ್ಳವಳೆಂಬದನ್ನು ಮನಗಂಡಳು. ಅವಳು ತನ್ನ ಸವತಿಯಾದ ವಿಮಲೆಯೊಡನೆ ವಿವಾದ ಮಾಡುವದಕ್ಕೆಂದು ಬಂದಿದ್ದಳು; ಆದರೆ ಇವಳ ರೂಪಲಾವಣ್ಯಾದಿಗಳನ್ನು ನೋಡಿ, ಅವಳ ಕ್ರೋಧವು ಮನದಲ್ಲಿಯೇ ಇಂಗಿಹೋಯಿತು. ವಿಮಲೆಯ ವಿಷಾದಗ್ರಸ್ತ ಮುಖವನ್ನು ಕಂಡು ಅವಳು ಕಣ್ತುಂಬ ನೀರುತಂದು ವಿಮಲೆಯನ್ನು ಕುರಿತು—"ನಾನೇ ನಿನ್ನ ಭಗಿನಿಯು" ಎಂದು ನುಡಿದಳು.

"ತಂಗೀ, ನೀನು ಯಾರವ್ವಾ? ನಾನಂತೂ ನಿನ್ನನ್ನು ಗುರ್ತಿಸಲಾರದವಳಾಗಿರುತ್ತೇನೆ."

"ನನ್ನ ಹೆಸರು ಹೇಮಾವತಿಯು. ನಾನು ನಿನ್ನ ಖಾಸ ತಂಗಿಯು."

ಹೇಮಾವತಿಯ ಬಾಯಿಂದ ಹೊರಟ ಹೇಮಾವತಿ ಎಂಬ ಹೆಸರನ್ನು ಕೇಳಿ, ವಿಮಲೆಯು ಚಮಕಿತಳಾದಳು. ಅಮೃತರಾಯನಿಂದ ತನ್ನ ಸವತಿಯ ಹೆಸರು ಹೇಮಾವತಿಯೆಂಬದನ್ನು ಅವಳು ಈ ಮೊದಲೇ ತಿಳಿದದ್ದರಿಂದ, ತನ್ನ ಸವತಿಯೇ ತನ್ನ ಭೇಟಿಗಾಗಿ ಬಂದಿರುವಳೆಂಬದು ಈಗ ಅವಳಿಗೆ ತಿಳಿಯಿತು. ಕೂಡಲೆ ಅವಳು ಮುಂದುವರಿದು ಬಂದು ಹೇಮಾವತಿಯ ಕೈಹಿಡಿದು--ಬಾ, ತಂಗೀ, ಒಳಗೆ ಬಾರವ್ವಾ; ಎಂದಂದು ಅವಳನ್ನು ತನ್ನ ಕೋಣೆಗೆ ಕರೆದೊಯ್ದು ಅಲ್ಲಿಯ ಆಸನದ ಮೇಲೆ ಕುಳ್ಳಿರಿಸಿ, ತಾನೂ ಅವಳ ಬಳಿಯಲ್ಲಿ ಕುಳಿತಳು. ನಂತರ ಅವಳು ಹೇಮಾವತಿಯನ್ನು ಕುರಿತು—ತಂಗೀ, ನೀನು ನನ್ನ ಸಂಬಂಧದ ಸಂಗತಿಯನ್ನು ಹೇಗೆ ತಿಳಕೊಂಡೆ? ನಿನ್ನ ಬಳಿಗೆ ನನ್ನ ವಿಷಯದ ಮಾತನ್ನು ಎತ್ತಕೂಡದೆಂದು ನಾನು ಅವರಿಗೆ ನಿರ್ಬಂಧಪಡಿಸಿದ್ದೆನಲ್ಲ!"

ಹೇಮಾವತಿ—"ಅವರು ತಿಳಿಸಿರುವದಿಲ್ಲ; ನಾನೇ ಬೇರೆ ಬಗೆಯಿಂದ

ತಿಳಕೊಂಡಿರುವೆನು; ಹಾಗು ನಿನ್ನನ್ನು ಭೇಟಿಯಾಗಿ ಮನೆಗೆ ಕರೆದೊಯ್ಯುವದಕ್ಕೆಂದೇ ಬಂದಿರುವೆನು. ನನಗೆ ಈ ಮೊದಲೇ ಈ ಸಂಗತಿಯು ತಿಳಿದಿದ್ದರೆ, ನಾನು ಈ ವರೆಗೆ ಒಬ್ಬಳೇ ಏಕೆ ಪತಿಸೌಖ್ಯವನ್ನು ಅನುಭವಿಸುತ್ತಿದ್ದೆನು?''

''ನೀನು ನಿನ್ನ ಸ್ವಂತ ಬುದ್ಧಿಯಿಂದ ನನ್ನನ್ನು ಕರೆಯಬಂದಿರುವಿಯೇನು?''

''ನಾನು ಸವತಿಯೆಂದು ನನ್ನನ್ನು ಈ ಬಗೆಯಾಗಿ ಪ್ರಶ್ನೆಮಾಡುವೆಯಲ್ಲವೆ?''

ಹೇಮಾವತಿಯ ಈ ಉತ್ತರವನ್ನು ಕೇಳಿ ವಿಮಲೆಯು ಲಜ್ಜಿತಳಾಗಿ—
''ಇಲ್ಲ-ಇಲ್ಲ, ತಂಗೀ, ಹಾಗಿಲ್ಲ''

''ನಾನು ನಿನ್ನ ಸವತಿಯಾಗಿದ್ದು ನಾನಾಗಿ ನಿನ್ನನ್ನು ಕರೆಯಬಂದದ್ದರಿಂದ ನಿನಗೆ ಆಶ್ಚರ್ಯವೆನಿಸಿದರೆ, ನೀನು ನಿನ್ನ ಈ ಸವತಿಗೆ ನಿನ್ನ ಸಂಬಂಧದ ಸಂಗತಿ ಕೂಡ ತಿಳಿದರೆ ಎಲ್ಲಿ ದುಃಖಕ್ಕೀಡಾಗುವಳೋ ಎಂಬ ಭಯದಿಂದ ಅದನ್ನು ತಿಳಿಸ ಕೂಡದೆಂದು ಅವರನ್ನು ನಿರ್ಬಂಧಿಸಿದ್ದುದು, ಇದಕ್ಕೂ ಆಶ್ಚರ್ಯಕರವಾದ ಸಂಗತಿಯಲ್ಲವೆ?''

''ಇಲ್ಲ-ನೀನು ಕರೆಯ ಬಂದದ್ದಕ್ಕೆ ನನಗೆ ಆಶ್ಚರ್ಯವಾಗಿಲ್ಲ. ಆದರೆ—''

''ಅಕ್ಕಾ, ನಾನು ನಿನ್ನ ಆ ಆದರೆ—ಪರಂತುಗಳನ್ನು ಕೇಳಲಿಕ್ಕಿಲ್ಲ. ಹೊರಗೆ ಗಾಡಿಯು ನಿಂತಿರುವದು. ಆದ್ದರಿಂದ ನೀನು ಈಗಲೇ ನನ್ನೊಡನೆ ನಮ್ಮ ಮನೆಗೆ ಹೊರಟು ಬರಲೇಬೇಕು.''

ಹೇಮಾವತಿಯು ಎಷ್ಟು ಪ್ರಾರ್ಥಿಸಿದರೂ ವಿಮಲೆಯು ಸಮ್ಮತಿಸಲಿಲ್ಲ. ಕಟ್ಟಕಡೆಗೆ ವಿಮಲೆಯು ನುಡಿದಳೇನಂದರೆ:—ನಾನು ಕೆಲಕಾಲ ವಿಚಾರ ಮಾಡಿ ಆ ಮೇಲೆ ಏನು ಮಾಡುವೆನೆಂಬದನ್ನು ತಿಳಿಸುವೆನು.

ಆದರೆ ಆ ಸುಹೃದಯ ಸವತಿಯಾದ ಹೇಮಾವತಿಯು ವಿಮಲೆಯ ಈ ಸವತಿಮತ್ಸರಗ್ರಸ್ತ ಮಾತಿಗೆ ಒಪ್ಪದಾದಳು. ನಿನ್ನನ್ನು ಸಂಗಡ ಕರದೊಯ್ಯದ ಹೊರತು ನಾನು ಮನೆಗೆ ಹೋಗುವದೇ ಇಲ್ಲೆಂದು ಅವಳು ಹಟಹಿಡಿದು ಕೂರಲು, ''ನಾಳೆ ಖಂಡಿತವಾಗಿ ಬರುವೆನೆ''ಂದು ಹೇಳಿ ವಿಮಲೆಯು ಅಂದು ಅವಳನ್ನು ಮನೆಗೆ ಕಳಿಸಿಕೊಟ್ಟಳು.

# ಹದಿನೇಳನೆಯ ಪರಿಚ್ಛೇದ.

## ಅಪವಿತ್ರ ಪರದೇಶೀ ಸಕ್ಕರೆ.

ಹರಿಣಾಕ್ಷಿಯು ರಾಮಚಂದ್ರನೊಡನೆ ಅಂದು ಯಾವ ಕಬ್ಬಿನ ಹೊಲದಲ್ಲಿ ಅಡಗಿಕೊಂಡಿದ್ದಳೋ, ಆ ಹೊಲದ ಬದುವಿನಲ್ಲಿಯೇ ಗುಡ್ಡದಂಥ ಎಷ್ಟೋ ಎಲುವಿನ ರಾಶಿಗಳೂ, ಕೊಳೆತು ಹೊಲಸಿಟ್ಟಿದ್ದ ರಕ್ತದ ಕೊಳಗಳೂ ಕಾಣುತ್ತಿದ್ದವು. ಅವುಗಳ ಸಮೀಪದಲ್ಲಿಯೇ ಆ ಕಬ್ಬಿನ ಕ್ಷೇತ್ರದ ಒಡೆಯನ ಸಕ್ಕರೆಯ ಕಾರಖಾನೆಯಿತ್ತು. ಆ ಕಾರಖಾನೆಯಲ್ಲಿ ಅಚ್ಚಬಿಳೀ (ಚಿನ್ನಿ, ದಾಣೇಟೀ ಮುಂತಾದ ಜಾತಿಯ)ಸಕ್ಕರೆಯೂ, ಸಣ್ಣ ಹಳಕುಹಳಕಾದ(ಜಾನ್‌ಸನ್)ಸಕ್ಕರೆಯೂ ತಯಾರಾಗುತ್ತಿದ್ದವು. ನಮ್ಮ ದೇಶದ ಸಕ್ಕರೆಯು ಪರದೇಶದ ಸಕ್ಕರೆಯಷ್ಟು ಬಿಳುಪಾಗದಿರುವದಕ್ಕೆ ಕಾರಣವೇನಂದರ, ನಮ್ಮವರು ಅವರಂಥ ಹೇಸಿ ಪದಗಳನ್ನು ಉಪಯೋಗಿಸದಿರುವದೇ ಮುಖ್ಯವು. ಅಲ್ಲಿಯವರು ಸಕ್ಕರೆಯ ಪಾಕವು ಸಿದ್ಧವಾದ ಮೇಲೆ ಅದಕ್ಕೆ ಬಿಳೀಬಣ್ಣ ಬರುವದಕ್ಕಾಗಿ ಅದರಲ್ಲಿ ಪಶುಗಳ ಎಲುವಿನ ಇದ್ದಲಿಯ ಪುಡಿಯನ್ನೂ, ಎತ್ತು ಮೊದಲಾದ ಎಷ್ಟೋ ಪ್ರಾಣಿಗಳ ರಕ್ತವನ್ನೂ ಉಪಯೋಗಿಸುತ್ತಿರುತ್ತಾರೆ. ಆ ಹದ ಹಾಕೋಣದರಿಂದ ಆ ಪರದೇಶೀ ಸಕ್ಕರೆಯು ಎಷ್ಟು ನಯನಮನೋಹರವಾಗಿ ಕಂಡರೂ, ನಮ್ಮ ಆರ್ಯಾವರ್ತದವರ ಧಾರ್ಮಿಕ ದೃಷ್ಟಿಯಿಂದ ಅದು ತೀರ ಅಪವಿತ್ರ ಹಾಗು ತ್ಯಾಜ್ಯವಸ್ತುವೆಂದೇ ಎಣಿಸಲ್ಪಡತಕ್ಕದ್ದಾಗಿರುತ್ತದೆ.

ನಮ್ಮ ಹಿಂದುಸ್ಥಾನದಿಂದಲೂ, ಇತರ ದೇಶಗಳಿಂದಲೂ ಎಷ್ಟೋ ಜೀವಂತಪಶುಗಳೂ, ಅವುಗಳ ಅಸ್ತಿಪಂಜರಗಳೂ ಸಕ್ಕರೆಯ ಶುದ್ಧ್ಯರ್ಥವಾಗಿ ಪ್ರತಿನಿತ್ಯ ಆ ಇಕ್ಷುದ್ವೀಪಗಳ ಕಡೆಗೆ ವೇಗದಿಂದ ಸಾಗಿಸಲ್ಪಡುತ್ತಿರುತ್ತವೆ. ಅಲ್ಲಿ ಆ ಜೀವಂತ ಪ್ರಾಣಿಗಳನ್ನು ಹನನಮಾಡಿ ಅವುಗಳ ರಕ್ತದಿಂದಲೂ, ಅವುಗಳ ಮರಣದ ನಂತರ ಅವುಗಳ ಅಸ್ತಿಗಳ ಇದ್ದಲಿಗಳಿಂದಲೂ ಶುದ್ಧೀಕರಿಸಿ, ಅತಿಶುಭ್ರ

ವಾಗಿ ಪ್ರಕಾಶಿಸುವ ಆ ಪರದೇಶೀ ಸಕ್ಕರೆಯು ಅತ್ಯಂತ ಧಾರ್ಮಿಕರೆಂದೆನಿಸಿಕೊಳ್ಳುವ ನಮ್ಮ ಹಿಂದುನಿವಾಸಿಗಳ ಶ್ರಾದ್ಧ, ಪಕ್ಷ, ಹೋಮ, ಹವನ, ಅತಿಥಿಸತ್ಕಾರ ಮೊದಲಾದ ಧಾರ್ಮಿಕ ಹಾಗು ಪವಿತ್ರಕಾರ್ಯಗಳಲ್ಲಿ ತನ್ನ ಅಪವಿತ್ರತೆ ಹಾಗು ಅನಾರೋಗ್ಯತೆಯನ್ನು ಮರೆಮಾಜಿಸಿ, ಪ್ರಾಮುಖ್ಯವಾಗಿ ಸೇವಣೆ ಹೊಂದುತ್ತಿರುವದು! ಪರದೇಶೀಸಕ್ಕರೆಯನ್ನು ಅದರಲ್ಲಿಯ ಅತ್ಯಂತ ಅಪವಿತ್ರತೆ ಹಾಗು ಅನಾರೋಗ್ಯತೆಗಳಿಗಾಗಿಯೇ ತ್ಯಜಿಸಬೇಕೆಂದು ಕೈ ಲೋಕಮಾನ್ಯ ಟಿಳಕ ಹಾಗು ಮಹಾತ್ಮಾಗಾಂಧಿಯವರಂಥ ನಮ್ಮ ಹಿಂದುಸ್ಥಾನದ ಧರ್ಮಗುರುಸ್ವರೂಪರಾದವರು ಅದೇಕೆ, ಇಡೀ ಜಗತ್ತಿನ ಧರ್ಮಮೂರ್ತಿಗಳು ಕಂಠರವದಿಂದ ಸಾರುತ್ತಿದ್ದರೂ, ನಮ್ಮಲ್ಲಿಯ ಕೆಲಜನ ಚಂಡಾಲಚೌಕಡಿಗಳು ತಮ್ಮ ಸ್ವಂತ ಹಿತವನ್ನು ಕೂಡ ತಿಳಿಯದಲೆ, ಆ ಪರದೇಶೀಸಕ್ಕರೆಯಲ್ಲಿ ಇಲ್ಲದ್ದೊಂದು ಅಲಭ್ಯಗುಣವನ್ನು ಆರೋಪಿಸಿಕೊಂಡು, ಅದನ್ನು ಸೇವಿಸಿ ಸ್ವದೇಹವನ್ನೂ, ಸ್ವಗೇಹವನ್ನೂ, ಸ್ವದೇಶವನ್ನೂ ಅಪವಿತ್ರವನ್ನಾಗಿಯೂ, ಅನಾರೋಗ್ಯಕರವನ್ನಾಗಿಯೂ ಮಾಡುತ್ತಿರುವರು!

ಪರದೇಶೀ ಸಕ್ಕರೆಯಲ್ಲಿ ಮಿಶ್ರವಾಗುವ ಎತ್ತಿನ ರಕ್ತ ಹಾಗು ಎಲುವಿನ ಇದ್ದಲುಗಳಿಂದ ಎಷ್ಟೋ ಸಾಂಸರ್ಗಿಕ ರೋಗಗಳು ಜನಿಸುವವೆಂದು ಬಹುಜನ ಪೌರ್ವಾತ್ಯ ಹಾಗು ಪಾಶ್ಚಾತ್ಯ ಶೋಧಕರು ಈಚೀಚೆಗೆ ಕಂಡು ಹಿಡಿದಿರುತ್ತಾರೆ. ಪ್ಲೇಗು, ಇನ್ಫ್ಲುಎಂಝಾದಂಥ ಸಾಂಕ್ರಮಿಕ ರೋಗಗಳು ಜಗತ್ತಿನಲ್ಲೆಲ್ಲ ಹಬ್ಬಿ ಹರಬೀಳಲಿಕ್ಕೆ ಈ ಖೋಡಿ ಅಪವಿತ್ರ ಹಾಗು ಅನಾರೋಗ್ಯ ಪರದೇಶೀ ಸಕ್ಕರೆಯೇ ಒಂದು ಮುಖ್ಯ ಕಾರಣವೆಂದು ಅವರ ನಿಶ್ಚಿತ ಮತವಾಗಿರುತ್ತದೆ.

ನಮ್ಮಲ್ಲಿಯ ಬಹುಜನ ಹಡೆದವ್ವಗಳು ತಮ್ಮ ಹಸುಗೂಸುಗಳ ಆಹಾರ್ಯಪದಾರ್ಥಗಳಲ್ಲಿ ಈ ನಯನಮನೋಹರ, ಆದರೆ ಕೇವಲ ಅಪವಿತ್ರ ಹಾಗು ಅನಾರೋಗ್ಯಕರ ಸಕ್ಕರೆಯನ್ನು ಉಪಯೋಗಿಸುವ ಪರಿಪಾಠವು ಹೆಚ್ಚು! ಅದರಂತೆ ಮಿಠಾಯಿಗಾರರೂ ಈ ಸಕ್ಕರೆಗೆ ಪ್ರಾಧಾನ್ಯಸ್ಥಾನವನ್ನು ಕೊಡುವರು!! ಚಹಾ ಕಾಫಿಗಳ ಹೋಟಲ್ಲುಗಳ ಚಿತ್ರಸ್ವರೂಪವೇ ಈ ಪರದೇಶೀ ಸಕ್ಕರೆಯು!!! ಚಿಕ್ಕಮಕ್ಕಳಿಗೆ ಇದನ್ನು ಉಪಯೋಗಿಸುವದರಿಂದ ತಮ್ಮ ಪ್ರೀತಿಯ ಕಂದಮ್ಮಗಳಿಗೆ ತಮ್ಮ ಕೈಯಿಂದಲೇ ವಿಷಪಾನ ಮಾಡಿಸಿದಂತಾಗುವದೆಂಬುದು ಪಾಪ! ಅಜ್ಞರಾದ ಆ ಹಡೆದವ್ವಗಳಿಗೆ ತಿಳಿಯದು. ಅವರಿಗೆ ಪರದೇಶೀ ಸಕ್ಕರೆಯ ಅಪವಿತ್ರತೆಯನ್ನೂ ಅನಾರೋಗ್ಯತೆಯನ್ನೂ ಚೆನ್ನಾಗಿ ಮನದಟ್ಟಾಗುವಂತೆ ತಿಳಿಸಿ ಹೇಳಿದರೆ, ಅವರು ಅದನ್ನು ಉಪ

ಯೋಗಿಸದಿರುವದಕ್ಕ ಕೂಡಲೆ ಎಚ್ಚರಿಸಬಹುದು; ಆದರೆ ಪರದೇಶೀ ಸಕ್ಕರೆಯ ಅಪವಿತ್ರತೆಯ ಹಾಗು ಅನಾರೋಗ್ಯದ ವಿಷಯವನ್ನು ಹೆಚ್ಚು ಕಡಿಮೆ ತಿಳಿದವ ರಾದ ಮಿಠಾಯಿಗಾರರೂ ಚಹಾಕಾಫಿಗಳ ಅಂಗಡಿಯವರೂ ಆ ತ್ಯಾಜ್ಯವಸ್ತುವನ್ನು ಶಾವಾಗಿ ಬಿಡುವದೊತ್ತಟ್ಟಿಗೇ ಉಳಿಯಿತು, ಎಷ್ಟೋ ಪಾಪಭೀರು ಹಾಗು ಧರ್ಮ ಭೋಳೇ ಜನರಿಗೆ ಸುಳ್ಳುಹೇಳಿಯಾದರೂ ಅದನ್ನು ಅವರ ಗಂಟಲದಲ್ಲಿಳಿಸಲಿಕ್ಕೆ ಹೇಸರು; ಈ ಮೂರ್ಖ ವ್ಯಾಪಾರಸ್ಥರು ಹಾಗೆ ಮಾಡಲಿಕ್ಕೆ ಕಾರಣವೇನಂದರೆ, ಪರದೇಶೀ ಸಕ್ಕರೆಯ ನಯನಮನೋಹರ ಕಾಂತಿಯೂ, ಅಗ್ಗಳತೆಯೂ ಮುಖ್ಯವಾ ಗಿವೆ. ಬೆಲ್ಲದ ಇಲ್ಲವೆ ದೇಶೀ ಕೆಂಪು ಸಕ್ಕರೆಯೊಳಗಿನ ಪದಾರ್ಥಗಳಿಗಿಂತ ಈ ಪರ ದೇಶೀ ಸಕ್ಕರೆಯೊಳಗಿನ ಪದಾರ್ಥಗಳು (ರುಚಿಯಲ್ಲಿ ಹೇಗೆಯೇ ಇಂಲೊಲ್ಲವೇಕೆ?) ಒಳ್ಳೇ ಒಡೆದುಕಾಣಿಸುವದರಿಂದ, ಅವು ಗಿರಾಕಿಗಳಿಂದ ಆಕರ್ಷಿಸಲ್ಪಡುತ್ತವೆ. ಪರದೇಶೀ ಸಕ್ಕರೆಯ ಪದಾರ್ಥಗಳು ಇದಕ್ಕಾಗಿಯೇ ಹೆಚ್ಚುಬೆಲೆಗೆ ಮಾರಿ, ಅಂಗ ಡಿಕಾರರಿಗೆ ವಿಶೇಷ ಉಳಿತಾಯವಾಗುವದೆಂಬದು ಸಹಜವು. ಇರಲಿ.

ಈ ಪರದೇಶೀ ಸಕ್ಕರೆಯನ್ನುಪಯೋಗಿಸುವದರಿಂದ ನಮ್ಮಲ್ಲಿಯ ಬಹು ಸಂಖ್ಯಾಕ ಶಿಶುಗಳು ಅಲ್ಪವಯಸ್ಸಿನಲ್ಲಿಯೇ ಗತಪ್ರಾಣವಾಗುತ್ತವೆ; ನವಯುವಕರಿಗೆ ಹಾರ್ಟಡಿಸೀಝ್-ದಂಥ ಉಪಾಯಕ್ಕೂ ಹಿಮ್ಮೆಟ್ಟ-ದಂಥ ರೋಗಗಳಾಗುತ್ತವೆ.

ಪರದೇಶೀ ಸಕ್ಕರೆಯಲ್ಲಿ ರಕ್ತ-ಎಲವು ಮುಂತಾದ ಹೇಯಪದಾರ್ಥಗಳ ಮಿಶ್ರಣವಾಗುವದರಿಂದ, ಇದು ಜಗತ್ತಿನೊಳಗಿನ ಎಲ್ಲ ಧರ್ಮದವರಿಗಿಂತಲೂ ಸೂಕ್ಷ್ಮ ಧರ್ಮದವರೆಂದು ಪ್ರಖ್ಯಾತಿಪಡೆದಿರುವ ನಮ್ಮ ಹಿಂದೂ ಧರ್ಮದವರಿಗೆ, ವಿಶೇಷವಾಗಿ ಮಾಂಸಾಹಾರಿಗಳಲ್ಲದ ಹಿಂದುಗಳಿಗೆ, ಸ್ವಾಭಾವಿಕವಾಗಿ ಅತ್ಯಂತ ಅಪವಿತ್ರವೆನಿಸುತ್ತದೆ. ಯಾವ ಪ್ರಾಣಿಗಳ ರಕ್ತವೂ, ಅಸ್ಥಿಗಳ ಇದ್ದಲಿಯೂ ಆ ಪರದೇಶೀ ಸಕ್ಕರೆಯ ಶುದ್ಧ್ಯರ್ಥವಾಗಿ ಉಪಯೋಗಿಸಲ್ಪಡುತ್ತವೆಯೋ, ಆ ಪ್ರಾಣಿಯ ರಕ್ತ ಹಾಗು ಎಲುವಿನ ಇದ್ದಲಿಗಳು ಎಷ್ಟೋ ಕಾಲದವರೆಗೆ ಕೊಳಸಿ ದುರ್ಗಂಧಯುಕ್ತವಾದವೂ ಕ್ರಿಮಿಕೀಟಕಾದಿಗಳಿಂದ ಪರಿಪೂರ್ಣವಾದವೂ ಆಗಿರು ವವು; ಇಂಥವುಗಳಿಂದ ಹದಮಾಡುವದರಿಂದ ಆ ಪರದೇಶೀ ಸಕ್ಕರೆಗೆ ಅಪವಿತ್ರ ತೆಯ ಪುಟವೊಂದೇ ಏರುವದಲ್ಲದೆ, ಅತ್ಯಂತ ಅನಾರೋಗ್ಯತೆಯ ಕಾಲಕೂಟ ವಿಷ ದಂಥ ಜಾಲಿಮ ವಿಷದ ಪುಟವೂ ಏರುತ್ತದೆ.

ಪರದೇಶೀ ಸಕ್ಕರೆಯ ಬಗ್ಗೆ ನಮ್ಮ ಹಿಂದು ಧರ್ಮಿಗಳು ಇಲ್ಲದ್ದೊಂದು ಕಲ್ಪಿಸಿಕೊಂಡು, ಜನರಲ್ಲಿ ಆ ಬಗ್ಗೆ ತಿರಸ್ಕಾರವನ್ನುಂಟು ಮಾಡುತ್ತಿರಬಹುದೆಂದು

ಈವರೆಗೂ ನಮ್ಮಲ್ಲಿಯ ಸಾಮಾನ್ಯ ಜನರ ತಿಳುವಳಿಕೆಯಾದದ್ದರಿಂದ, ಅವರಲ್ಲಿ ಸಂಪೂರ್ಣ ಧರ್ಮನಿಷ್ಠೆಯಿದ್ದರೂ, ಪರದೇಶೀ ಸಕ್ಕರೆಯ ಅಪವಿತ್ರತೆಯ ಬಗ್ಗೆ ಅವರ ಮನಸ್ಸಿನ ಖಾತ್ರಿಯಾದಂತೆ ತೋರುವದಿಲ್ಲ; ಮತ್ತು ಅದರಿಂದಲೇ ಅವರು ಆ ಬಗ್ಗೆ ಹೆಚ್ಚು ಪೃಚ್ಛಾಪೃಚ್ಛ ಮಾಡದೆ, ಈಗಲೂ ಅದನ್ನು ಕೆಲಮಟ್ಟಿಗಾದರೂ ಉಪಯೋಗಿಸುತ್ತಿರುವರೆಂದು ವಿಷಾದಪೂರ್ವಕವಾಗಿ ಅನ್ನಬೇಕಾಗುತ್ತದೆ!

ಸಾಂಗಲಿಯ ಒಬ್ಬ ಜಿಜ್ಞಾಸುವು ಪರದೇಶೀ ಸಕ್ಕರೆಯನ್ನು ಶುದ್ಧಿಕರಿಸುವದಕ್ಕೆ ಯಾವ ಪದಾರ್ಥಗಳು ಉಪಯೋಗಿಸಲ್ಪಡುತ್ತವೆಂದು ಮದ್ರಾಸ ಇಲಾಖೆಯ ಸಕ್ಕರೆಯ ಕಾರಖಾನೆಗಳ ಖಾತೆಯ ಡೈರಕ್ಟರರನ್ನು ಕೇಳಲು, "ಎತ್ತಿನ ರಕ್ತವೂ, ದನಗಳ ಎಲುವಿನ ಇದ್ದಲಿಯೂ ಉಪಯೋಗಿಸಲ್ಪಡುವದೆ"ಂದು ಆ ಖಾತೆಯ ಪ್ರಮುಖ ದೊರೆಯು ಕಳಿಸಿದ ಮಾಹಿತಿಯನ್ನು ಸದರಿ ಸಾಂಗಲಿಯ ಗೃಹಸ್ಥನು ಇದೇ ೧೯೨೨ ನೇ ವರ್ಷದಲ್ಲಿ ಪುಣೆಯಲ್ಲಿ ಹೊರಡುವ "ಕೇಸರೀ" ಎಂಬ ಸರ್ವಮಾನ್ಯ ಮಹಾರಾಷ್ಟ್ರ ಪತ್ರದಲ್ಲಿಯೂ, ಮುಂಬಯಿಯ "ಲೋಕಮಾನ್ಯ" ಪತ್ರದಲ್ಲಿಯೂ ಪ್ರಸಿದ್ಧಿಸಿ, ಪರದೇಶೀ ಸಕ್ಕರೆಯ ಅಪವಿತ್ರತೆಯನ್ನು ಜಗಜ್ಜಾಹೀರು ಗೊಳಿಸಿರುವನು.

ಇದರಂತೆ ಮೊನ್ನೆ ಮೊನ್ನೆ ಇಕ್ಷುದ್ವೀಪಗಳಿಂದ 'ಕರಾರುಬದ್ಧತೆ'ಯೆಂಬ ಯಮದಂಷ್ಟ್ರದೊಳಗಿಂದ ಪಾರಾಗಿ ಬಂದಿರುವ ಒಬ್ಬ ಗುಜರಾಥಿಗೃಹಸ್ಥನು ಮುಂಬಯಿಯೊಳಗೆ ಇಕ್ಷುದ್ವೀಪಗಳ ಸಂಬಂಧದ ಮಾಹಿತಿಯನ್ನು ವ್ಯಾಖ್ಯಾನರೂಪದಿಂದ ಜಾಹೀರು ಮಾಡುವಾಗ್ಗೆ ಪರದೇಶೀಸಕ್ಕರೆಯ ಅಪವಿತ್ರತೆಯನ್ನು ಚೆನ್ನಾಗಿ ವಿವರಿಸಿ ಹೇಳಿರುತ್ತಾನೆ.

ಅಲ್ಲದೆ, ಪೂರ್ವಾಶ್ರಮದಲ್ಲಿ ನಮ್ಮ ಧಾರವಾಡ ಜಿಲ್ಲಾ ನಿವಾಸಿಗಳೂ ಕುರ್ತಕೋಟಿಯ ಮಹಾಭಾಗವತರೆಂದು ಖ್ಯಾತಿಗೊಂಡವರೂ, ಪ್ರಸ್ತುತ ಕರವೀರ-ಸಂಕೇಶ್ವರಮಠದ ಶ್ರೀ ಜಗದ್ಗುರು ಶ್ರೀಶಂಕರಾಚಾರ್ಯರೂ ಆಗಿರುವ ಮಹಾಸ್ವಾಮಿಗಳವರ ನೇತೃತ್ವದಲ್ಲಿ ಪುಣೆಯಲ್ಲಿ ಪ್ರಸಿದ್ಧವಾಗುತ್ತಿರುವ "ಸ್ವಧರ್ಮ" ಎಂಬ ಮಹಾರಾಷ್ಟ್ರಪತ್ರದ ತಾ. ೨೭-೭-೧೯೨೨ರ ಅಂಕಿನಲ್ಲಿ ಪರದೇಶೀ ಸಕ್ಕರೆಯ ಅಪವಿತ್ರತೆಯನ್ನೂ ಅನಾರಾರೋಗ್ಯತೆಯನ್ನೂ ವ್ಯಕ್ತೀಕರಿಸುವಂತಹ ಎಷ್ಟೋ ಪೌರ್ವಾತ್ಯ ಹಾಗು ಪಾಶ್ಚಾತ್ಯ ತಜ್ಞಶೋಧಕರ ಅಭಿಪ್ರಾಯಗಳು ಪ್ರಕಟಿಸಲ್ಪಟ್ಟಿವೆ. ಪರದೇಶೀಸಕ್ಕರೆಯ ಅಪವಿತ್ರತೆಯ ವಿಷಯವಾಗಿ ನಮ್ಮ ಕನ್ನಡ ನಾಡಿನ ಸಾಮಾನ್ಯಜನರಿಗೆ (ಸುಶಿಕ್ಷಿತರಿಗೆ ಪರದೇಶೀ ಸಕ್ಕರೆಯ ಅಪವಿತ್ರತೆಯ ವಿಷಯವು

ಚೆನ್ನಾಗಿ ಗೊತ್ತಿದ್ದರೂ, ಆ ಬಗ್ಗೆ ಅವರೇ ವ್ಯಾಖ್ಯಾನಗಳನ್ನು ಕೊಡುತ್ತಿದ್ದರೂ, ತಾವುಮಾತ್ರ ಅದನ್ನು "ಲೋಕಾ ಸಾಂಗೇ ಬ್ರಹ್ಮಜ್ಞಾನ, ಆಪಣ ಕೊರಡಾ ಪಾಷಾಣ," ಎಂಬಂತೆ ಜಹಾ ಪಕ್ವಾನ್ನಾದಿಗಳಲ್ಲಿ ಉಪಯೋಗಿಸದೆ ಇರಲಾರರು!) ಯೋಗ್ಯ ಹಾಗು ನಿಜವಾದ ಸಂಗತಿಯು ತಿಳಿಯಲೆಂದೂ, ಅದರ ಅಪವಿತ್ರತೆಯೂ, ಅನಾರೋಗ್ಯತೆಯೂ ಮನದಟ್ಟಾಗಿ ಅದನ್ನು ತಮ್ಮ ಮನೆಯ ಸನಿಯಕ್ಕೆ ಕೂಡ ಹಾಯಗೊಡದಂತೆ ಅವರ ಮನಸ್ಸಿನಲ್ಲಿ ಅದರ ಬಗ್ಗೆ ತಿರಸ್ಕಾರಬುದ್ಧಿಯು ಹುಟ್ಟಿ, ಅವರಿಗೆ ಸ್ವಹಿತವು ಸಾಧಿಸಲೆಂದೂ ಬಗೆದು, ಆ ಸ್ವಧರ್ಮಪತ್ರದೊಳಗಿನ ಕೆಲವು ಅಭಿಪ್ರಾಯಗಳ ಭಾಷಾಂತರವನ್ನು ಇದರಡಿಯಲ್ಲಿ ಕೊಡುತ್ತೇವೆ:—

"ಪರದೇಶೀ ಸಕ್ಕರೆಯು ಭ್ರಷ್ಟವಿರಲಿಕ್ಕೆ ಕಾರಣವೇನಂದರೆ, ಕೆಂಪು ಸಕ್ಕರೆಯನ್ನು ಬಿಸಿನೀರಿನಲ್ಲಿ ಕರಗಿಸಿ ಅದರಲ್ಲಿ ಸುಣ್ಣವನ್ನು ಬೆರಿಸುತ್ತಾರೆ; ಹಾಗು ಆ ರಸವನ್ನು ನಾಲ್ಕು ಮಡಿಕೆಯ ಅರಿವೆಯ ಮೇಲೆ ಸುರುವುತ್ತಾರೆ; ಬಳಿಕ ಎಲುವಿನ ಇದ್ದಲಿಯ ಜನಗು ಪುಡಿಯೊಳಗಿಂದ ಪುನಃ ಅದನ್ನು ಸೋಸುತ್ತಾರೆ. ಅದರಿಂದ ಆ ಸಕ್ಕರೆಯ ಬಿಳೀ ರಸವೇ ಕೆಳಗೆ ಇಳಿಯುತ್ತದೆ. —ಸ. ಕ್ರಿ. ಪು."

"೧೪೦ ಅಥವಾ ೧೬೦ ಮಣ ಸಕ್ಕರೆಯನ್ನು ಕಬ್ಬಿಣದ ಒಂದು ಕಢಾಯಿಯಲ್ಲಿ ಸುರುವುತ್ತಾರೆ. ಆ ಬಾಳ್ಗಿಗೆ ಒಂದು ನಳವನ್ನು ಹಚ್ಚುತ್ತಾರೆ; ಆ ನಳದಿಂದ ಬಿಸಿನೀರು ಬಾಳ್ಗಿಯೊಳಗೆ ಬರುತ್ತದೆ. ಅಸ್ವಚ್ಛವಾದ ಸಕ್ಕರೆಯನ್ನು ರಕ್ತದ ಮಿಶ್ರಣದಿಂದ ಮೊದಲು ಸ್ವಚ್ಛವಾಗಮಾಡುತ್ತಾರೆ. ಬಳಿಕ ಕಾಸಿದ ಆ ಸಕ್ಕರೆಯ ಪಾಕವನ್ನು ಜಾಳಿಗೆಯ ಚೀಲದೊಳಗಿಂದ ಸೋಸುತ್ತಾರೆ; ಪುನಃ ಆ ರಸವನ್ನು ಪಶುಗಳ ಎಲುವಿನ ಬೂದಿಯಲ್ಲಿ ಬೆರಸಿ ೩೦ ರಿಂದ ೪೦ ಫೂಟು ಎತ್ತರದ ನಳದೊಳಗಿಂದ ಕೆಳಗೆ ಇಡಲ್ಪಟ್ಟ ಪಾತ್ರೆಯಲ್ಲಿ ಸುರವುತ್ತಾರೆ.

—ಎನಸಾಯಕ್ಲೋಪಿಡಿಯಾ, ಬ್ರಿಟಾನಿಯಾ"

"ತಾಂಬ್ರದ ಚೌರಸ ಪಾತ್ರೆಯಲ್ಲಿ ತುಸ ಸುಣ್ಣದ ನೀರಿನೊಡನೆ ಸಕ್ಕರೆಯನ್ನು ಹಾಕಿ ಒಲೆಯಮೇಲಿಡುವರು. ಅದರಲ್ಲಿ ಸ್ವಲ್ಪ ಎತ್ತಿನ ರಕ್ತವನ್ನೂ, ೧೦೦ ಕ್ಕೆ ೫ ರಿಂದ ೨೦ರ ವರೆಗೆ ಪಶುಗಳ ಎಲುವಿನ ಇದ್ದಲಿಯನ್ನೂ ಬೆರಸುತ್ತಾರೆ. ಕೆಲಕೆಲವರು ಎಲುವಿನ ಇದ್ದಲಿಯಷ್ಟೇ ಎತ್ತಿನ ರಕ್ತವನ್ನು ಮಿಶ್ರಣ ಮಾಡುತ್ತಾರೆ. ನಂತರ ಕೆಲಹೊತ್ತಿನ ಮೇಲೆ ಆ ಸಕ್ಕರೆಯ ಪಾಕವನ್ನು ಒಲೆಯ ಮೇಲಿಂದ ಇಳಿಸಿ, ಫಿಲ್ಟರದೊಳಗಿಂದ ಸೋಸುತ್ತಾರೆ.

—ಡಾಕ್ಟರ ಬ್ರೇ."

"ಸಕ್ಕರೆಯನ್ನು ಸ್ವಚ್ಛಮಾಡುವದಕ್ಕೆ ರಕ್ತದ ಬದಲು ತತ್ತಿಗಳೊಳಗಿನ ಬಿಳೇ ಪದಾರ್ಥವನ್ನು ಉಪಯೋಗಿಸಿದರೆ ಬಹಳ ನೆಟ್ಟಗಾಗಬಹುದು. ಯಾಕಂದರೆ, ರಕ್ತಮಿಶ್ರಣದಿಂದ ಸ್ವಚ್ಛವಾದ ಸಕ್ಕರೆಯು ಶರೀರಕ್ಕೆ ಬಹು ಅಪಾಯಕರವಾಗುತ್ತದೆ.

—ಡಿಕ್ಶನರೀ ಆಫ್ ಆರ್ಟ್ಸ."

"ನನ್ನ ವಿಲಾಯತಿಯ ಪ್ರವಾಸದೊಳಗೆ ನಾನು ಅಲ್ಲಿಯ ಸಕ್ಕರೆಯ ಕಾರಖಾನೆಗಳನ್ನು ನೋಡಹೋದಾಗ್ಗೆ, ಆ ಕಾರಖಾನೆಯೊಳಗಿನ ಕೊಳೆತ ದುರ್ಗಂಧ ಎಡಗಿದ ರಕ್ತ ಹಾಗು ಎಲುವಿನ ರಾಶಿಗಳನ್ನು ನೋಡಿ ನನಗೆ ಓಕರಿಕೆ ಬರಲಾರಂಭಿಸಿತು; ಮತ್ತು ನನ್ನ ತಲೆತಿರುಗಲಾರಂಭಿಸಿತು. ಸಕ್ಕರಿ ಮಾಡಲಿಕ್ಕೆ ಇಂಥ ಅಪವಿತ್ರ ಪದಾರ್ಥಗಳನ್ನು ಉಪಯೋಗಿಸುತ್ತಿರಬಹುದೆಂಬದ ಕಲ್ಪನೆ ಕೂಡ ನನಗಿರಲಿಲ್ಲ. ಯಾವ ಯಾವಾಗ ನನಗೆ ಆ ಕಾರಖಾನೆಯೊಳಗಿನ ಆ ಭಯಂಕರ ದೃಶ್ಯದ ನೆನವಾಗುತ್ತದೋ, ಆ ಪ್ರತಿಯೊಂದು ಸಾರೆ ನನ್ನ ತಲೆತಿರುಗ ಹತ್ತಿ ನನಗೆ ಓಕರಿಕೆಗಳು ಬರುತ್ತಿರುತ್ತವೆ.

—ಸ್ವಾಮಿ ಭಾಸ್ಕರಾನಂದ ಸರಸ್ವತೀ."

"ಹಿಂದುಸ್ತಾನದೊಳಗಿಂದ ಪ್ರತಿವರ್ಷ ಸುಮಾರು ಒಂದು ಲಕ್ಷ ಟನ್ ಪಶುಗಳ ಎಲುವುಗಳು ಜರ್ಮನಿ, ಇಂಗ್ಲಂಡ ಮುಂತಾದ ದೇಶಗಳಿಗೆ ಸಾಗಿಸಲ್ಪಡುತ್ತವೆ; ಮತ್ತು ಅಲ್ಲಿಯವರು ಅವುಗಳನ್ನು ಸಕ್ಕರೆಯೇ ಮುಂತಾದ ಪದಾರ್ಥಗಳಿಗಾಗಿ ಉಪಯೋಗಿಸುತ್ತಾರೆ.

—ವಂಗವಾಸಿ."

"ಸಕ್ಕರೆಗೆ ಬಿಳೇ ಬಣ್ಣವುಂಟಾಗುವದಕ್ಕಾಗಿ (ಮಾರಿಶಸ್ ಮೊದಲಾದ) ಇಕ್ಷುದ್ವೀಪದ ವಣಿಕರು ಹಂದಿ, ಆಕಳು. ಹಾಗು ಬೇರೆ ಎಲ್ಲ ಪ್ರಾಣಿಗಳ ನೆಣವನ್ನು ಉಪಯೋಗಿಸುತ್ತಿರುತ್ತಾರೆ.

—ವೃಂದಾವನ"

"ಮಾರಿಶಸ್ (ಜಾನ್‌ಸನ್?) ಸಕ್ಕರೆಯನ್ನು ಎತ್ತಿನ ರಕ್ತ ಹಾಗು ಮನುಷ್ಯನ ಮೂತ್ರ ಇವುಗಳಿಂದ ಸ್ವಚ್ಛಮಾಡುತ್ತಿರುತ್ತಾರೆ.

—ಶ್ರೀ ವೆಂಕಟೇಶ ಸಮಾಚಾರ"

"ಪರದೇಶೀ ಸಕ್ಕರೆಯಿಂದ ಮನುಷ್ಯನ ಶರೀರದೊಳಗಿನ ರಕ್ತವು ಕಾದು ಕೆಡುತ್ತದೆ; ಈ ಸಕ್ಕರೆಯನ್ನುಪಯೋಗಿಸುವದೆಂದರೆ, ಹಾಲಿನ ಪಾತ್ರದಲ್ಲಿ ವಿಷ್ಟೆಯ

(ಮಲವ)ನ್ನು ಹಾಕಿಕೊಂಡು ಕುಡಿಯುವಷ್ಟು ಭಯಂಕರವಿರುತ್ತದೆ. ಈ ಪರದೇಶೀ ಸಕ್ಕರೆಯು ಬರಹತ್ತಿದಂದಿನಿಂದ ಹಿಂದುಸ್ತಾನದಲ್ಲಿ ಬಹಳ ರೋಗಗಳು ಉತ್ಪನ್ನವಾಗಹತ್ತಿರುತ್ತವೆ.

—ಫಿನಲೆ''

''ಹೊರಕಡಿಗೆ ಸರಿಯಾಗಿ ಆಗದಿರುವದೂ(ಮಲಬದ್ಧವಾಗುವದು) ರಕ್ತದೂಷಿತವಾಗುವದೂ, ಇವು ಪರದೇಶೀ ಸಕ್ಕರೆಯು ನಮ್ಮ ಜನರ ಮೇಲೆ ಮಾಡಿದ ಉಪಕಾರಗಳಾಗಿರುತ್ತವೆ.

—ಪಂಡಿತ ಹನುಮಾನ್''

''ಎಲಾಯಚಿ ಸಕ್ಕರೆಯೇ ಮರಕೀ—ಮಾರಕಾ (ಕಾಲರಾ) ರೋಗಕ್ಕೆ ಕಾರಣವು.

—ಪಂಡಿತ ಶರ್ಮಾ''

''ಮಾರಿಶಿಸ್ ಸಕ್ಕರೆಯನ್ನು ತಿನ್ನಹತ್ತಿದಾಗಿನಿಂದ ನಮ್ಮಲ್ಲಿ ಪ್ಲೇಗರೋಗವು ಉತ್ಪನ್ನವಾಗಿರುತ್ತದೆ

—ಪಂಡಿತ ರಾಮದಯಾಳ''

''ಪರದೇಶೀ ಸಕ್ಕರೆಯನ್ನು ಸ್ವಚ್ಛಗೊಳಿಸುವದಕ್ಕಾಗಿ ತರತರದ ಬೇನೆಗಳಿಂದ ಸತ್ತ ಢೋರ ಡುಗ್ಗರ ಪೇಶಿಗಳನ್ನು ಕೂಡ ಉಪಯೋಗಿಸುತ್ತಾರೆ.

—ವಲ್ಡ್ನ.''

''ಅಚ್ಚ ಬಿಳೀ ಪರದೇಶೀ ಸಕ್ಕರೆಗಿಂತ ಬೆಲ್ಲವು ಹೆಚ್ಚು ಸೀಯು, ಗುಣಕಾರಿಯೂ ಆಗಿರುವದಲ್ಲದೆ ಪಚನವೂ ಆಗುತ್ತದೆ ಪರದೇಶೀ ಸಕ್ಕರೆಯನ್ನು ಹೆಚ್ಚಾಗಿ ತಿಂದರೆ ಪ್ರಕೃತಿಯು ಕೆಟ್ಟುಹೋಗುತ್ತದೆ; ಆದರೆ ಬೆಲ್ಲವನ್ನು ತಿನ್ನುವದರಿಂದ ಹಾಗೇನೂ ಆಗುವದಿಲ್ಲ. ಬೆಲ್ಲದ ಸ್ವಾದವೇ ನನಗೆ ಹೆಚ್ಚು ಸೇರುತ್ತದೆ. ಸಕ್ಕರೆಯೊಳಗಿನ ಮುಖ್ಯ ಸತ್ವವೆಂದರೆ, ಅರಿಷಿಣ-ಕೆಂಪು ಮಿಶ್ರಣಬಣ್ಣಗಳುಳ್ಳ ಬೆಲ್ಲದ ಭಾಗವಾಗಿರುತ್ತದೆ. ಆ ಬೆಲ್ಲದ ಭಾಗವು ಸಕ್ಕರೆಯ ಆತ್ಮವೇ ಆಗಿರುತ್ತದೆ. ಸಕ್ಕರೆಯೊಳಗಿನ ಆ ಬೆಲ್ಲದ ಭಾಗವನ್ನಷ್ಟು (ಆತ್ಮನನ್ನು)ತೆಗೆದು ಬಿಟ್ಟರೆ, ಮನುಷ್ಯ ಪ್ರಾಣಿಯು ಅನ್ನವೆಂದು ಸಕ್ಕರೆಗೆ ಏನು ಅಲ್ಪಸ್ವಲ್ಪ ಬೆಲೆಯಿರುವದೋ ಅದು ನಾಮಶೇಷವಾದೀತು.

—ಡೆವ್ಹಿಡ್ ಗಾಸ್ಲಿಂಗ.''

"ಪರದೇಶೀ ಸಕ್ಕರೆಯನ್ನು ಸ್ವಚ್ಛಮಾಡುವದಕ್ಕಾಗಿ ಎಲುಬಿನ ಇದ್ದಲಿ ಹಾಗು ಎತ್ತಿನ ರಕ್ತವನ್ನು ಉಪಯೋಗಿಸುತ್ತಿರುತ್ತಾರೆ. ವಿಲಾಯತಿಯೊಳಗಿನ ಯಾವ ಜನರು ನಮ್ಮ ಹಿಂದುಧರ್ಮದವರಂತೆ ಪವಿತ್ರ-ಅಪವಿತ್ರಗಳ ಭೇದವನ್ನೆಣಿಸುವದಿಲ್ಲವೋ, ಅವರೂ ಕೂಡ ಈ ಸಕ್ಕರೆಗೆ ಮೂಗು ಮುರಿಯುತ್ತಾರೆ. ಯಾಕಂದರೆ ಸಕ್ಕರೆಯನ್ನು ಬಿಳುಪಾಗಿ ಮಾಡುವದಕ್ಕಾಗಿ ಉಪಯೋಗಿಸುವ ಆ ತ್ಯಾಜ್ಯ ಪದಾರ್ಥಗಳ ಸಂಪರ್ಕದಿಂದ ಸಹ ಅದು ದೇಹಕ್ಕೆ ಅಪಾಯ ಮಾಡದೆ ಎಂದೂ ಬಿಡಲಿಕ್ಕಿಲ್ಲೆಂದು ಅವರ ಅಭಿಪ್ರಾಯವಾಗಿರುತ್ತದೆ. ಇಂಥ ಅಪವಿತ್ರ ಹಾಗು ಅನಾರೋಗ್ಯಕರ ಸಕ್ಕರೆಯನ್ನುಪಯೋಗಿಸುವದಕ್ಕಿಂತ ಬೆಲ್ಲವನ್ನುಣ್ಣುವದೇ ಉತ್ತಮವು; ಅದು ಸಿಗದಿದ್ದರೆ ಉಪವಾಸಬೀಳುವದು ಲೇಸು; ಅದೂ ಆಗದಿದ್ದರೆ ಇಹಲೋಕವನ್ನು ತ್ಯಜಿಸಿ ಪರಲೋಕದ ದಾರಿ ಹಿಡಿಯುವದು ಬಹಳ ನೆಟ್ಟಗೆ. ಯಾಕಂದರೆ, ಈ ಅಪವಿತ್ರ ಪರದೇಶೀ ಸಕ್ಕರೆಯ ಸಂಪರ್ಕಕ್ಕಿಂತ ನಮ್ಮ ದೇಶಬಾಂಧವರಿಗೆ, ನಮ್ಮ ಪೀಳಿಗೆಗೆ ಮತ್ತು ನಮ್ಮ ಪೂಜ್ಯ ದೇವ-ದೇವತೆಗಳಿಗೆ ಹೆಚ್ಚು ತಿರಸ್ಕೃತವಾದಂಥ ಬೇರೆ ಯಾವ ವಸ್ತುವೂ ಈ ಜಗತ್ತಿನಲ್ಲಿರಲಿಕ್ಕಿಲ್ಲ!!!

—ಕಾಳಪತ್ರ, ಪುಣೆ."

# ಹದಿನೆಂಟನೆಯ ಪರಿಚ್ಛೇದ.

## ಪಾಪಿಯ ಪಶ್ಚಾತ್ತಾಪ.

ಈಚೆಗೆಷ್ಟೋ ದಿನಗಳಿಂದ ಕಬ್ಬಿನ ಹೊಲಗಳಿಗೆ ಕಾಡುಹಂದಿಗಳ ಉಪದ್ರವವಾಗಿತ್ತು. ಕತ್ತಲು ಬೀಳಹತ್ತಿದ ಕೂಡಲೆ ಸಮೀಪದ ಗುಡ್ಡ-ಪರ್ವತ ಪ್ರದೇಶಗಳಿಂದ ಅವು ಹಿಂಡುಗಟ್ಟಿಕೊಂಡು ಹೊರಬಿದ್ದು, ಕಬ್ಬಿನಹೊಲಗಳನ್ನು ಹೊಕ್ಕು, ಬೇಕಾದಷ್ಟು ಕಬ್ಬುಗಳನ್ನು ಮುರಿದು ತಿನ್ನುವದಲ್ಲದೆ, ಎಷ್ಟೋ ಕಬ್ಬುಗಳನ್ನು ಮುರಿಮುರಿದು ನಾಶಮಾಡುತ್ತಿದ್ದವು. ಅವುಗಳ ಉಪದ್ರವವನ್ನು ನಿಲ್ಲಿಸುವದಕ್ಕಾಗಿ ಷ್ಟ್ಯೂಯಾರ್ಟ-ಚಂದ್ರ ಕಂಪನಿಯವರು ಕೆಲವು ಬೇಟೆಗಾರರನ್ನು ಹಿಂದೆರಡು ವಾರಗಳಿಂದ ನಿಯಮಿಸಿದ್ದರು. ಆ ಬೇಟೆಗಾರರು ಅಲ್ಲಲ್ಲಿ ಬಲೆಗಳನ್ನೊಡ್ಡಿ ಅವುಗಳನ್ನು ಹಿಡಿಯುವ ಹಾಗು ಹೊಡೆಯುವ ಉದ್ಯೋಗವನ್ನು ನಡೆಸಿದ್ದರು.

ನಮ್ಮ ಮೀನಾಕ್ಷಿ ಹಾಗು ರಾಮಚಂದ್ರರು ಅಡಗಿದ್ದ ಆ ಕಬ್ಬಿನ ಹೊಲದಲ್ಲಿಯೂ ಮಿಕಗಳ ಉಪದ್ರವವು ಹೆಚ್ಚಾಗಿತ್ತು; ಮತ್ತು ಆದಕ್ಕಾಗಿಯೇ ಅಂದು ಸಂಜೆಯಾಗುತ್ತಲೆ ಬೇಟೆಗಾರರು ಆ ಕ್ಷೇತ್ರದ ಸಮೀಪದಲ್ಲಿ ಬಲೆಗಳನ್ನೊಡ್ಡಿ ಕೈಯಲ್ಲಿ ಡೊಣ್ಣೆ, ಬರ್ಚಿ, ತುಬಾಕಿ ಮುಂತಾದವುಗಳನ್ನು ಧರಿಸಿಕೊಂಡು, ಮಿಕಗಳ ಆಗಮನವನ್ನು ನಿರೀಕ್ಷಿಸುತ್ತ ಯಾವುದೊಂದು ಮರದ ಮೊದರನ್ನಾಶ್ರಯಿಸಿ ಕುಳಿತಿದ್ದರು. ಮೀನಾಕ್ಷಿ-ರಾಮಚಂದ್ರರು ತಾವು ಅಡಗಿಕೊಂಡಿದ್ದ ಸ್ಥಳದಿಂದ ಎದ್ದು ತಮ್ಮ ಗಂತವ್ಯ ಸ್ಥಳದ ಕಡೆಗೆ ಸಾಗಲಿಕ್ಕೂ, ಆ ಕಾರ್ಗತ್ತಲೆಯಲ್ಲಿ ಅವರ ಎದುರಿನಿಂದ ಎಷ್ಟೋ ಮಿಕಗಳು ಸರಸರ ಸಪ್ಪಳಮಾಡುತ್ತ ಆ ಕಬ್ಬಿನ ಕ್ಷೇತ್ರದೊಳಗಿಂದ ಓಡುತ್ತ ಬರಲಿಕ್ಕೂ ಗಂಟೇಬಿದ್ದಿತು. ರಾಮಚಂದ್ರಾದಿಗಳು ತುಸ ಬದಿಗೆ ಸರಿದು ಅವಕ್ಕೆ ದಾರಿಕೊಟ್ಟು, ಮತ್ತೆ ತಮ್ಮ ದಾರಿಹಿಡಿದು ನಾಲ್ಕಾರು ಹೆಜ್ಜೆ ಸಾಗುವಷ್ಟರಲ್ಲಿ ನಾಲ್ಕಾರು ಸಾರೆ ಬಂದೂಕ ಹಾರಿಸಿದ ಸಪ್ಪಳವು ಕೇಳಿಸಿತು; ಹಾಗು ಆ ಬಂದೂಕಿನ ಕಡೆಯ ಸಪ್ಪಳವು ಅಡಗುವಷ್ಟರಲ್ಲಿಯೇ "ಅಪ್ಪಾ ಸತ್ತೆನು-ಅಪ್ಪಾ ಸತ್ತೆನು" ಎಂದು ಚೀರುತ್ತ ರಾಮಚಂದ್ರನು ನೆಲಕ್ಕೆ ಉರುಳಿ ಬಿದ್ದನು.

"ಏನಾಯಿತು? ನಿಮಗೆ ಆದದ್ದಾದರೂ ಏನು?" ಎಂದು ಗಾಬರಿಯಿಂದ ಕೇಳುತ್ತ ಹರಿಣಾಕ್ಷಿಯೂ ಆತನ ಬಳಿಯಲ್ಲಿಯೇ ಕುಸಿಕುಳಿತಳು.

ಆಗ ರಾಮಚಂದ್ರನು ವ್ಯಥಿತ ದನಿಯಿಂದ—"ನನಗೆ ಗುಂಡು ತಾಕಿರುತ್ತದೆ. ಆಗೋ, ಅತ್ತ ಜನರಿರಬಹುದಾಗಿದೆ. ಅವರನ್ನು ಕೂಗಿ ಕರಮಾಡು" ಎಂದನು.

ಹರಿಣಾಕ್ಷಿಯು ಬೊಬ್ಬೆಹೊಡೆದು, ಆಕ್ರೋಶ ದನಿಯಿಂದ ಒದರ ಹತ್ತಲು, ಅವಳ ದನಿಯು ಸಮೀಪದಲ್ಲಿದ್ದ ಬೇಟೆಗಾರರಿಗೆ ಸಹಜವಾಗಿ ಕೇಳಿಸಿತು. ಕೂಡಲೆ ಅವರು ಕೈಯಲ್ಲಿ ದೀಪಹಿಡಕೊಂಡು ದನಿಯು ಕೇಳಬರುವ ದಿಕ್ಕಿನ ಕಡೆಗೆ ಶೀಘ್ರ ವಾಗಿ ಬಂದರು. ಆಸಮಯದಲ್ಲಿ, ಮನುಷ್ಯರ ವಸತಿಯಿಂದ ಬಹುದೂರದ ಈ ಸ್ಥಳ ದಲ್ಲಿ ಈ ತರುಣ-ತರುಣಿಯರನ್ನು ನೋಡಿ ಆ ಬೇಟೆಗಾರರು—ನೀವು ಎಲ್ಲಿಯವರು? ಇಲ್ಲಿಗೇಕೆ ಬಂದಿರುವಿರಿ? ಇತ್ತ ಯಾವಕಡೆಗೆ ನಡೆದಿರುವಿರಿ? ಇತ್ಯಾದಿ ಪ್ರಶ್ನೆಗಳನ್ನು ಮಾಡಿದರು. ಆಗ ರಾಮಚಂದ್ರನೇ ನಡುಗುವ ದನಿಯಿಂದ ಹೇಳಿದ್ದೇನಂದರೆ— "ನಾವು ಇಗೋ, ಈ ಬದಿಯ ಇಕ್ಷುಕ್ಷೇತ್ರಗಳ ವಣಿಕರಲ್ಲಿದ್ದವರು. ಆ ನೀಚನ ಉಪಟಳವನ್ನು ತಾಳಲಾರದೆ ದಯಾಘನ ಷ್ಟ್ರೂಯಾರ್ಟಚಂದ್ರ ಕಂಪನಿಯಲ್ಲಿ ಸೇರು ವದಕ್ಕಾಗಿ ಓಡಿ ಬಂದಿರುವೆವು. ಅದರೆ ನೀವು ಕಾಡು ಹಂದಿಗಳಿಗೆಂದು ಹಾರಿಸಿದ ಬಂದೂಕಿನ ಒಂದು ಗುಂಡು ನನಗೀಗ ತಾಕಿರುತ್ತದೆ." ಎಂದನು. ಬೇಟೆಗಾರರು ಕಬ್ಬಿನ ಗಳಗಳಿಂದಲೇ ಒಂದು ಜೋಲಿಯನ್ನು ತಡಮಾಡದೆ ಸಿದ್ಧಮಾಡಿ, ಅದರಲ್ಲಿ ಗಾಯಹೊಂದಿದ್ದ ರಾಮಚಂದ್ರನನ್ನು ಮಲಗಿಸಿಕೊಂಡು, ಕೂಲಿ ಜನರು ವಾಸಿಸುವ ಹಳ್ಳಿಗೆ ತೆಗೆದುಕೊಂಡು ನಡೆದರು. ವಿಷಣ್ಣಮನಸ್ಕಳಾದ ಹರಿಣಾಕ್ಷಿಯೂ ಅವ ರನ್ನನುಸರಿಸಿ ನಡೆದಳು.

ಷ್ಟ್ರೂಯಾರ್ಟಚಂದ್ರ ಕಂಪನಿಯು ಬೇರೆ ವಣಿಕರಂತೆ ಕೂಲಿಕಾರರನ್ನು ಪಶು ಗಳ ಹಾಗೆ ನಡೆಸಿಕೊಳ್ಳದೆ, ಅವರನ್ನು ಒಳ್ಳೇ ಸಹೃದಯತೆಯಿಂದ ನಡೆಸಿಕೊಳ್ಳುತ್ತಿ ತ್ತೆಂದು ಹಿಂದೆಯೇ ಹೇಳಿದೆ. ಇವರ ಪ್ರತಿಯೊಂದು ಕೂಲೀಹಳ್ಳಿಯಲ್ಲಿ ಒಂದು ದವಾಖಾನೆಯು ಇರುತ್ತಿದ್ದು, ಅದರಲ್ಲಿ ಒಬ್ಬ ಯೋಗ್ಯ ಡಾಕ್ಟರನಿರುತ್ತಿರುವನು. ಬೇಟೆಗಾರರು ರಾಮಚಂದ್ರನ ಜೋಲಿಯನ್ನು ನೆಟ್ಟಗೆ ಆಸ್ಪತ್ರಿಗೆ ಒಯ್ದು ಅವನನ್ನು ಅಲ್ಲಿ ಮಲಗಿಸಿದರು; ಹಾಗು ಆ ನಡುರಾತ್ರಿಯ ಸಮಯದಲ್ಲಿಯೇ ಅವರು ಡಾಕ್ಟರನಿಗೆ ಸುದ್ದಿ ತಿಳಿಸಿದರು. ಕೂಡಲೆ ಡಾಕ್ಟರನು ಬಂದು ರಾಮಚಂದ್ರನ ಗಾಯವನ್ನು ಪರೀಕ್ಷಿಸಿದನು. ಆ ಗುಂಡು ರಾಮಚಂದ್ರನ ಟೊಂಕದೊಳಗೆ ಸೇರಿತ್ತು. ಈ ಅಪರಾತ್ರಿಯಲ್ಲಿ ಇದನ್ನು ತೆಗೆಯುವದು ಸಾಧ್ಯವಿಲ್ಲೆಂದು ತಿಳಿದು, ಆ ಗಾಯಕ್ಕೆ

ಬ್ಯಾಂಡೇಜ ಕಟ್ಟಿ, ಪ್ರಾತಃಕಾಲದಲ್ಲಿ ಚೆನ್ನಾಗಿ ಪರೀಕ್ಷೆಮಾಡಿ ಮುಂದಿನ ಉಪಾಯವನ್ನು ಕೈಕೊಳ್ಳುವೆನೆಂದು ಹೇಳಿ ಡಾಕ್ಟರನು ಮನೆಗೆ ಹೋದನು. ಹರಿಣಾಕ್ಷಿಯು ರಾಮಚಂದ್ರನ ಶುಶ್ರೂಷೆ ಮಾಡುತ್ತ ಆ ಆಸ್ಪತ್ರೆಯಲ್ಲಿಯೇ ಉಳಿದಳು.

ಮರುದಿನ ಬೆಳಿಗ್ಗೆ ಡಾಕ್ಟರನು ರಾಮಚಂದ್ರನ ಗಾಯವನ್ನು ಪರೀಕ್ಷಿಸಿ— "ಗುಂಡನ್ನು ಹೊರಗೆ ತೆಗೆಯಹೋದರೆ ನೀನು ಈಗಲೆ ಸಾಯುವಿ, ಗುಂಡುಹೊರಗೆ ತೆಗೆಯದಿದ್ದರೂ ಸಾಯುವೆ; ಆದರೆ ಒಂದೆರಡು ದಿನಗಳ ನಂತರ." ಎಂದದ್ದನ್ನು ಕೇಳಿ ರಾಮಚಂದ್ರನು ಗುಂಡನ್ನು ಹೊರಗೆ ತೆಗೆಯಬೇಡಿರೆಂದು ಹೇಳಿದನಲ್ಲದೆ, ನಾನು ಸಾಯುವ ಮೊದಲು ಒಮ್ಮೆ ಈ ನ್ಯೂಯಾರ್ಕ-ಚಂದ್ರ ಕಂಪನಿಯ ಈಗಿನ ಮಾಲಕರಾದ ಮಿ. ಶಿವರಾಯರನ್ನು ಭೇಟಿಯಾಗಬೇಕೆನ್ನುತ್ತೇನೆ, ಎಂದನು.

"ಶಿವರಾಯರನ್ನೇ? ಅದೇಕೆ? ನಿನ್ನ ಸಲುವಾಗಿ ಅವರು ಇಷ್ಟು ದೂರ ಬರುವ ಬಗೆಹೇಗೆ? ಅವರು ವಾಸಿಸುವ ಸ್ಥಳವು ರೈಲುಮಾರ್ಗದಿಂದ ಇಲ್ಲಿಗೆ ಎಳ ತಾಸುಗಳ ಹಾದಿಯಿರುತ್ತದೆ" ಎಂದು ಡಾಕ್ಟರನು ಚಕಿತನಾಗಿ ನುಡಿದನು.

"ನಾನು ಅವರ ದೇಶದವನು,-ಅವರ ಊರವನು. ಒಂದು ವಿಶೇಷ ಕೆಲಸದ ಸಲುವಾಗಿ ಅವರಿಗೆ ನಾನು ಸಾಯುವ ಮೊದಲು ಭೇಟಿಯಾಗಿಯೇ ತೀರಬೇಕಾಗಿರುತ್ತದೆ. ಆದ್ದರಿಂದ ಡಾಕ್ಟರಸಾಹೇಬ, ಹೇಗಾದರೂ ಮಾಡಿ ನನಗೆ ಅವರ ಭೆಟ್ಟಿ ಮಾಡಿಸಬೇಕು," ಎಂದು ದೀನಸ್ವರದಿಂದ ನುಡಿದ ರಾಮಚಂದ್ರನ ಮಾತನ್ನು ಕೇಳಿ, ಡಾಕ್ಟರನು— "ನಿನ್ನ ಅಂಬೋಣದಂತೆ ನಾನು ತಿಳಿಸಿದರೂ ತಿಳಿಸಬಹುದು; ಆದರೆ ಅವರು ಬಂದೇ ಬರುವರೆಂಬುದನ್ನು ನಾನು ಖಾತ್ರಿಯಿಂದ ಹೇಗೆ ಹೇಳಲಿ?"

"ಡಾಕ್ಟರಸಾಹೇಬರೇ, ನೀವು ಈ ಬಗೆಯಾಗಿ ಅರ್ಜಂಟತಾರಿನಿಂದ ತಿಳಿಸಿದರೆ ಆ ದಯಾಳುವಿನ ಮೂರ್ತಿಯು ನನ್ನ ಜೀವವಿರುವಷ್ಟರಲ್ಲಿ ಬರದೇ ಇರಲಿಕ್ಕಿಲ್ಲೆಂದು ನನ್ನ ಮನೋದೇವತೆಯು ನನಗೆ ಖಾತ್ರಿಕೊಡುತ್ತದೆ. ಅವರಿಗೆ ತಿಳಿಸತಕ್ಕದ್ದೇನೆಂದರೆ, 'ಪೂರ್ವದೊಳಗೆ ನಿಮ್ಮ ಮನೆಯಲ್ಲಿ ರಾಮಚಂದ್ರನೆಂಬ ಯಾವ ಒಬ್ಬ ಗೃಹಸ್ಥನಿದ್ದನೋ, ಅವನ ಸಂಬಂಧದ ಒಂದು ಗುಪ್ತ ಸಂಗತಿಯನ್ನು ಈಗ ಆಸನ್ನ ಮರಣನಾಗಿದ್ದ ಇವನಿಂದ ತಿಳಿಯಬಹುದಾಗಿದೆ.' ಎಂದು ತಾರಿನಿಂದ ತಿಳಿಸಿದರೆ, ಅವರು ಶೀಘ್ರವೇ ಬರುವರು."

ಡಾಕ್ಟರನು ಆ ಸಂಗತಿಯನ್ನು ಅರ್ಜಂಟ ತಾರಿನಿಂದ ಆಗಲೆ ಶಿವರಾಯನಿಗೆ ತಿಳಿಸಿದನು; ಹಾಗು ರಾಮಚಂದ್ರನ ನೋವು ಕಡಿಮೆಯಾಗುವಬಗ್ಗೆ ಯೋಗ್ಯ ಉಪಚಾರ ಮಾಡಿದನು.

ಡಾಕ್ಟರನ ತಂತಿಯು ವಾರ್ತೆಯು ಯಥಾಸಮಯದಲ್ಲಿ ಶಿವರಾಯನಿಗೆ ತಲುಪಿತು. ರಾಮಚಂದ್ರನ ಸಂಬಂಧದ ಸುದ್ದಿಯನ್ನು ಕೇಳಿದಕೂಡಲೆ ಅವನಿಗೆ ಹೇಗೆಹೇಗೋ ಅನಿಸಿತು. "ಯಾವ ರಾಮಚಂದ್ರನ ಕಲಂಕಿತ ಪತ್ರವನ್ನೋದಿ ನನ್ನ ಸುಖಮಯ ನಂದನವನವು,-ಸಂಸಾರವು-ಭೀಕರ ಸ್ಮಶಾನವಾಗಿ ಪರಿಣಮಿಸಿತೋ, ನನ್ನ ಜೀವದ ಸುಖಶಾಂತಿಗಳು ಬೇರುಸಹಿತ ಕಿತ್ತುಹೋಗಿರುವವೋ, ಅದೇ ಆ ಖೋಟಿ ರಾಮಚಂದ್ರನ ಸುದ್ದಿಯು ಇಷ್ಟುವರ್ಷಗಳ ನಂತರ ಈ ಸಪ್ತಸಮುದ್ರಗಳನ್ನು ದಾಟಿಯೂ ನನ್ನನ್ನನುಸರಿಸುವುದಲ್ಲವೆ? ಬೇಡ, ಆ ನೀಚನ ಸಂವಾದವು ನನಗೆ ಬೇಡ.——ಆ ಮಾತಿಗೆ ಈಗ ಹನ್ನೆರಡು ವರ್ಷಗಳು ಪೂರಯಿಸುತ್ತ ಬಂದವು; ಆ ನೀಚ ರಾಮಚಂದ್ರನ ನಿಷ್ಠುರ ಪತ್ರದಿಂದ ನನ್ನ ಜೀವನದ ಜ್ಯೋತಿಯೇ ನಂದಿಹೋಗಿದೆ; ನನ್ನ-ಮನುಷ್ಯ-ಜೀವನದ ಸರ್ವಶ್ರೇಷ್ಠ ಸುಖಶಾಂತಿಗಳು ಬಹುಕಾಲದ ವರೆಗೂ ನಾಮಶೇಷವಾಗಿವೆ. ಆ ಪತ್ರದ ಸಾಂಘಾತಿಕ ಆಘಾತದಿಂದ ನನ್ನ ಹೃದಯಕ್ಕುಂಟಾದ ಭೀಷಣ ಕ್ಷತವು ಇಷ್ಟು ದಿನಗಳಾದರೂ ಮಾಯಲಿಲ್ಲ. ಆ ಆಘಾತದ ನೋವಿನಿಂದ ನಾನು ಬದುಕುವ ಸಂಭವವೇ ಇರಲಿಲ್ಲ; ಆದರೆ ನನ್ನ ಪ್ರಿಯ ಕಮಲೆಯು ನನ್ನ ಅಂತರಂಗದ ಕೇವಲ ಸ್ನೇಹದ ಮೂರ್ತಿಯಾದುದರಿಂದ, ಅವಳ ನೆನವು ಈ ವರೆಗೂ ನನಗೆ ವಿಸ್ಮರಣವಾಗಲೊಲ್ಲದು. ಅವಳು ಈಗ ಬದುಕಿರುವಳೋ-ಸತ್ತಿರುವಳೋ ಯಾರು ಬಲ್ಲರು? ಸುಖದಿಂದಿರುವಳೋ-ದುಃಖಪೀಡಿತಳಾಗಿರುವಳೋ ದೇವರೇ ಬಲ್ಲ! ನಾನು ಬಹಳ ವ್ಯಥೆಯಿಂದ ಅವಳನ್ನು ಪರಿತ್ಯಜಿಸಿ ಬಂದೆನು. ಕಾರಣವಿಷ್ಟೇ, ಆಕೆಯು ಕಣ್ಣುಮರೆಯಾದರೆ ಅವಳ ಸಂಬಂಧದ ತಾಪವು ಕಡಿಮೆಯಾಗಬಹುದೆಂದು; ಆದರೆ ಆ ತಾಪವು ಕಡಿಮೆಯಾಯಿತೋ? ಈ ಜೀವವಿರುವವರೆಗೆ ಅವಳ ಸಂಬಂಧದ ವ್ಯಥೆಯೂ ಸ್ಮರಣವೂ ಕಡಿಮೆಯಾಗುವಂತಿಲ್ಲ. ಮರಣಾನಂತರ ಏನಾಗುವದೋ ಯಾರುಬಲ್ಲರು? ಮರಣದಿಂದ ಆ ತಾಪವೆಲ್ಲ ಖಂಡಿತವಾಗಿ ಕಡಿಮೆಯಾಗುವದೆಂದು ಯಾವನೊಬ್ಬ ಮಹಾತ್ಮನು ಹೇಳಿದರೆ, ನಾನು ಬಹುಸಮಾಧಾನದಿಂದ ಮರಣವನ್ನು ಹೊಂದುವೆನು. ಎಷ್ಟೋ ಜನರು ಮರಣಕ್ಕೆ ಅಂಜುವರು; ಆದರೆ ಮರಣಾನಂತರ ನನ್ನ ಈ ತಾಪವು ನಿಶ್ಚಯವಾಗಿ ಶಮನವಾಗುವದೆಂದು ತಿಳಿದರೆ, ನಾನು ಒಳ್ಳೇ ಆನಂದದಿಂದ ನನ್ನ ಪ್ರಾಣವಾಯುಗಳನ್ನು ಹಿಂಡಿ, ಮರಣವನ್ನು ಸ್ವವಶಮಾಡಿಕೊಳ್ಳುವೆನು."

ಈ ಬಗೆಯ ನಾನಾ ವಿಚಾರಗಳಲ್ಲಿ ಶಿವರಾಯನು ಎಷ್ಟೋ ಕಾಲವನ್ನು ಕಳೆದನು. ನಂತರ ಭೋಜನ ಮಾಡಿ ವಾಮಕುಕ್ಷಿಗಾಗಿ ತುಸ ಅಡ್ಡಾದನು. ಆದರೂ

ಅವನ ತಲೆಯಲ್ಲಿ ಅವೇ ವಿಚಾರಗಳು ಹರಿದಾಡುತ್ತಿದ್ದುವು. ಆಗ ಅವನಿಗೆ ತುಸ ನಿದ್ರೆ ಹತ್ತಲು, ಅವನಿಗೊಂದು ವಿಚಿತ್ರ ಸ್ವಪ್ನವು ಬಿದ್ದಿತು. ಆ ಸ್ವಪ್ನದಲ್ಲಿ "ಕಮಲಾಸುಂದರಿಯು ಶುಚಿರ್ಭೂತಳಾಗಿ ಬಂದು ತನ್ನ ಪಾದಪೂಜೆ ಮಾಡುತ್ತಿದ್ದಳು. ಪೂಜೆಯು ಪೂರಯಿಸಿದ ಬಳಿಕ ಅವಳು ತನ್ನ ಪಾದದಮೇಲೆ ತಲೆಯಿಟ್ಟು ತನ್ನನ್ನು ಕುರಿತು ಪ್ರಾರ್ಥಿಸಿದಳೇನಂದರೆ.—ಬರ್ರಿ, ಬೇಗ ಬರ್ರಿ; ನೀವು ಎಲ್ಲಿರುವಿರೋ ಅಲ್ಲಿಂದ ಬಂದು ಒಮ್ಮೆ ನನಗೆ ದರ್ಶನ ಕೊಟ್ಟು ಹೋಗಿರಿ; ಖೊಟ್ಟಿ ಸಂವಾದದಿಂದ ವೃಥಾ ಸಂಶಯಕ್ಕೀಡಾಗಿ, ನೀವು ಕಷ್ಟವನ್ನು ಭೋಗಿಸುತ್ತಿರುವಿರಿ; ನನಗೂ ಕೊಡುತ್ತಿರುವಿರಿ. ಒಮ್ಮೆ ಬಂದು, 'ನಿಮ್ಮ ಈ ಕಮಲೆಯು ಅವಿಶ್ವಾಸಿನಿಯಲ್ಲ, ಇವಳು ಯಾವಾಗಲೂ ನಿಮ್ಮವಳೇ ಇರುವಳೆ' ಂಬಿದನ್ನು ಪ್ರತ್ಯಕ್ಷ ನೋಡಿ ಖಾತ್ರಿ ಮಾಡಿಕೊಳ್ಳಿರಿ. ವಿಶೇಷ ತಡಮಾಡಿದರೆ ಇಹಲೋಕದೊಳಗೆ ನನ್ನ ನಿಮ್ಮ ಭೆಟ್ಟಿಯಾದೀತೋ ಇಲ್ಲವೋ ಸಂಶಯಾಸ್ಪದ ಸಂಗತಿಯು. ನಿಮ್ಮ ದರ್ಶನಕ್ಕಾಗಿಯೇ ನಾನು ಇಷ್ಟು ದಿನಗಳ ವರೆಗೆ ಪ್ರಾಣಗಳನ್ನು ಹಿಗಿಹಿಡಿದು ಬದುಕಿರುವೆನು. ಸ್ವಾಮಿ, ಇನ್ನು ಮುಂದೆ ಬಹಳ ದಿನಗಳವರೆಗೆ ನಾನು ಇಲ್ಲಿ ಉಳಿಯಲಾರೆ..." ಆ ದೃಶ್ಯವನ್ನು ನೋಡಿ ನಿದ್ರಾಸಕ್ತನಾದ ಶಿವರಾಯನ ಕಣ್ಣುಗಳಿಂದಧಾರೆಗಟ್ಟಿ ಅಶ್ರುಗಳು ಸುರಿದು ಅವನು ಹೊತ್ತುಕೊಂಡಿದ್ದ ದೋತರದ ಸೆರಗು ತೊಯ್ದು ಹೋಯಿತು; ಹಾಗು ಅದರ ತಂಪಿನಿಂದ ಅವನ ನಿದ್ರಾಭಂಗವಾಯಿತು; ಆದರೆ ಕಮಲೆಯ ಆ ಪ್ರೇಮಲ ಆಹ್ವಾನವು ಈಗಲೂ ಅವನ ಕಿವಿಯಲ್ಲಿ ಘುಮುಘುಮಿಸುತ್ತಿತ್ತು. ಅಲ್ಲದೆ ಆ ಶಬ್ದಗಳು ಪ್ರತಿಧ್ವನಿಸಿದೊಂದಿ ಆಕಾಶದಿಂದ ಪುನಃ "ಬರ್ರಿ, ಬೇಗ ಬರ್ರಿ" ಎಂದು ಕೇಳಬರುವಂತೆ ಭಾಸವಾಗುತ್ತಿತ್ತು; "ಇಷ್ಟು ದಿನಗಳ ತರುವಾಯ ಇದೆಂಥ ವಿಚಿತ್ರ ಸ್ವಪ್ನವು ಇಂದು ಬಿದ್ದಿತಲ್ಲ! ನನ್ನ ಕಮಲೆಯು ಖಂಡಿತವಾಗಿ ಇನ್ನೂ ಜೀವಂತಳಾಗಿರುವಳೇ! ನಾನು ಅವಳನ್ನು ವೃಥಾಸವಾದದಿಂದ ತ್ಯಜಿಸಿರುವೆನೆ! ಅಯ್ಯೋ, ನಾನು ಎಂಥ ನಿಷ್ಠುರನು!" ಎಂದೆಂದುಕೊಂಡು ಆ ನಿರ್ಜನವಾದ ಪ್ರಕೋಷ್ಠದಲ್ಲಿ ಕೆಲಹೊತ್ತಿನವರೆಗೆ ಶಿವರಾಯನು ಬಿಕ್ಕಿ ಬಿಕ್ಕಿ ಅತ್ತನು.

ಕೆಲಕಾಲದಮೇಲೆ ಶಿವರಾಯನು ಶಯ್ಯಾತ್ಯಾಗಮಾಡಿದನು; ಹಾಗು ಮುಖವನ್ನು ತೊಳೆಕೊಂಡು ತನ್ನ ಕೋಣೆಯಲ್ಲಿ ಇತ್ತಿಂದತ್ತ ಅತ್ತಿಂದಿತ್ತ ಹೀಗೆ ಅಡ್ಡಾಡ ಹತ್ತಿದನು. ಆಗ ಅವನಿಗೆ ಪ್ರಾತಃಕಾಲದಲ್ಲಿ ಡಾಕ್ಟರನಿಂದ ಬಂದ ರಾಮಚಂದ್ರನ ವಿಷಯದ ಅರ್ಜಂಟ ತಾರಿನ ಸಂಗತಿಯು ನೆನಪಾಯಿತು. ಕೂಡಲೆ ಪೋಷಾಕನ್ನು ಹಾಕಿಕೊಂಡು ನೆಟ್ಟಗೆ ರೇಲ್ವೆಸ್ಟೇಶನ್ನಿಗೆ ಬಂದನು. ಆಗ ಅಲ್ಲಿಂದ ರಾಮ

ಚಂದ್ರಸಿದ್ಧ ಊರಕಡೆಗೆ ಹೋಗುವ ಒಂದು ಗಾಡಿಯು ಹೊರಡುತ್ತಿತ್ತು; ಆದರೆ ಆ ಗಾಡಿಯು ಅಲ್ಲಿಗೆ ಮುಟ್ಟಲಿಕ್ಕೆ ೨೪ ತಾಸುಗಳ ಅವಧಿಯು ಬೇಕಾಗುತ್ತಿತ್ತು. ಆ ವರೆಗೆ ಆ ರೋಗಿಯ ಅವಸ್ಥೆಯು ಯಥಾಸ್ಥಿತವಿದ್ದರೆ ತಾನು ಅಲ್ಲಿಗೆ ಹೋಗುವದರಿಂದ ಪ್ರಯೋಜನವಾದೀತು. ಇಲ್ಲದಿದ್ದರೆ ತನ್ನ ಪ್ರಯಾಣದ ಪ್ರಯೋಜನವೇನು? ಬೇಗ ತಲುಪಬೇಕಾದರೆ, ಬೇರೆ ಸ್ಪೆಶಲ್ ಗಾಡಿಯಿಂದ ಹೋಗುವದೇ ಲೇಸೆಂದು ಬಗೆದು, ಸ್ಟೇಶನ್‌ಮಾಸ್ತರನಿಗೆ ಹೇಳಿ, ಒಂದು ಸ್ಪೆಶಲ್ ಬಂಡಿಯನ್ನು ಬಿಡುವ ವ್ಯವಸ್ಥೆ ಮಾಡಿಸಿದನು.

ಶಿವರಾಯನೇ ಆ ಕಂಪನಿಯ ಹಾಗು ಅಲ್ಲಿಯ ರೇಲ್ವೆಯ ಮಾಲಕನಾದ್ದರಿಂದ ಅವನ ಆದೇಶದ ಪ್ರಕಾರ ಕೆಲ ನಿಮಿಷಗಳಲ್ಲಿಯೇ ಒಬ್ಬ ಸಕ್ಷಮ ಪ್ರಾಯಸ್ಥರನು ತನ್ನ ಇಂಜನ್ನಿಗೆ ಬೇಕು ಬೀಳುವ ಸಲಕರಣ ಹಾಗು ಪ್ರೀಕವ್ಯಾಸುಗಳನ್ನು ಜೋಡಿಸಿಕೊಂಡು ಬಂದನು. ಶಿವರಾಯನು ಅವನನ್ನು ಕುರಿತು---ಶಕ್ಯವಾದಷ್ಟು ತೀವ್ರ, ಅಂದರೆ ೨೪ ತಾಸಿನಲ್ಲಿ ಹೋಗುವ ದಾರಿಯನ್ನು ೮ ತಾಸಿನಲ್ಲಿಯೇ ಹೋಗಿ ಇವತ್ತೇ ರಾತ್ರಿ ೧೦ ಗಂಟೆಗೆ ನನ್ನನ್ನು ಆ ಸ್ಥಳಕ್ಕೆ ತಲುಪಿಸಬೇಕೆಂದು ಅಪ್ಪಣೆ ಮಾಡಿದನು. ಒಡೆಯನ ಮೆಚ್ಚುಗೆಯನ್ನು ಪಡೆಯುವ ಸಮಯವನ್ನು ಆ ಪ್ರಾಯಸ್ಥರನು ಕಳಕೊಳ್ಳದೆ ಒಳ್ಳೇ ವೇಗವಾಗಿ ಗಾಡಿಯನ್ನು ಬಿಟ್ಟನು.

ಇತ್ತ ದವಾಖಾನೆಯಲ್ಲಿದ್ದ ರಾಮಚಂದ್ರನು ಡಾಕ್ಟರನ ಅನುಮಾನದಂತೆ ಸಂಜೆಯಾಗುತ್ತ ನಡೆದ ಹಾಗೆ ಅತ್ಯಂತ ವ್ಯಥೆಪಡಲಾರಂಭಿಸಿದನು. ತನ್ನ ಆಸನ್ನ ಕಾಲವು ತೀರ ಸಮೀಪಿಸಿತೆಂಬುದು ಅವನಿಗೆ ಸ್ಪಷ್ಟವಾಗಿ ತೋರಹತ್ತಿತು. ಆದರಿಂದ ಅವನು ತನ್ನ ಶಾರೀರಿಕ ವ್ಯಥೆಗಿಂತ ಮಾನಸಿಕ ವ್ಯಥೆಯಿಂದ ಬಹು ಹಣ್ಣಾಗಹತ್ತಿದನು. ಅವನ ಆ ದುಷ್ಟ ಮಾನಸಿಕ ಸ್ಥಿತಿಯು ಯಾವ ಬಾಹ್ಯ ಉಪಚಾರಗಳಿಂದಲೂ ಕಡಿಮೆಯಾಗುವಂತಿರಲಿಲ್ಲೆಂಬುದೇ ನಿಜ. ಆದರೆ ತನ್ನ ಮನೋಭೂಮಿಕೆಯಲ್ಲಿ ಬಹುಕಾಲದ ವರೆಗೆ ನೆಟ್ಟಿರುವ ಯಾವುದೊಂದು ಗುಪ್ತ ಸಂಗತಿಯನ್ನು ತಿಳಿಯತಕ್ಕವನಿಗೆ ತಿಳಿಸಿದರೆ ಸಾಯುವದರಲ್ಲೂ ತನಗೆ ಒಳ್ಳೇ ಸಾವು ಲಭಿಸಿರುವದೆಂದು ಭಾವಿಸಿ ಅವನು ಸುಖದಿಂದ ಸಾಯಲಿಕ್ಕೆ ಸಿದ್ಧನಾಗುವಂತಿದ್ದನು; ಮತ್ತು ಅದಕ್ಕೋಸ್ಕರ ಯಾವ ವ್ಯಕ್ತಿಗೆ ಅವನು ತನ್ನ ಹೃದಯದ ಗುಟ್ಟನ್ನು ತಿಳಿಸಿ ತನ್ನ ಮನೋವ್ಯಥೆಯ ಭಾರವನ್ನು ಸ್ವಲ್ಪವಾದರೂ ಇಳಿಸಿಕೊಳ್ಳಬೇಕೆಂದು ಹಾತೊರೆಯುತ್ತಿದ್ದನೋ ಆ ವ್ಯಕ್ತಿಯು ಈವರೆಗೂ ಬಾರದ್ದರಿಂದ, ಅವನು ತೀರ ಅಧೀರನಾಗಿ ಬಾಯಿಗೆ ಬಂದ ಹಾಗೆ ಬಡಬಡಿಸಹತ್ತಿದನು. "ಡಾಕ್ಟರರೇ, ಶಿವರಾಯರು ಬಂದರೇನು?"

ಎಂದು ಸಂಜೆ ನಾಲ್ಕುವೇಳೆ ಅವನು ಅಗಾಗ್ಗೆ ಕೆಳಲಾರಂಭಿಸಿದನು. "ಇನ್ನು ಬರಲಿಲ್ಲ" ಎಂದು ಯಾರೊಬ್ಬರ ಕೇಳಿಸಿದ ಕೂಡಲೆ ರಾಮಚಂದ್ರನು ಪ್ರಜ್ಞಾಹೀನನಾಗಿ—"ಅವ್ವಾ,ಕಮಲಾದೇವಿ! ಆತ್ಮಾ ಕ್ಷಮಿಸುವದರಲ್ಲಿ ನೀನು ಧರಿತ್ರೀಸಮಾನಳು! ನಾನು ನಿನ್ನ ಮಗನು-ನನ್ನನ್ನು ಕ್ಷಮಿಸವ್ವಾ!' ಅವ್ವಾ, ನನಗೆ ಗೊತ್ತಿರಲಿಲ್ಲ-ಪತಿವ್ರತೆಯರಿಗೆ ವೃಥಾ ಕ್ಲೇಶಕೊಟ್ಟರೆ ಇದೇ ಜನ್ಮದಲ್ಲಿಯೇ ಇಂಥ ಮರಣಕ್ಕೆ ಸಮಾನವಾದ ಕಡುದುಃಖವನ್ನು ಭೋಗಿಸಬೇಕಾಗುವದೆಂಬದು. ಅವ್ವಾ, ರಕ್ಷಿಸು-ರಕ್ಷಿಸು; ನನ್ನಿಂದ ಈ ಅಸಹ್ಯ ವೇದನೆಗಳನ್ನು ಸಹಿಸಲಾರೆನವ್ವ. ಅಯ್ಯೋ-ಅಯ್ಯೋ-ಅಯ್ಯಯ್ಯೋ, ನನ್ನ ಹೃದಯದ ರಕ್ತವು ಸುಟ್ಟುಹೋಗುತ್ತಿರುವದರಿಂದ ಗಂಟಲು ಒಣಗಹತ್ತಿದೆ. ಅವ್ವಾ, ಕರುಣಾಮಯಿಯಾದ ಕಮಲಾದೇವೀ, ಈ ದೀನಬಾಲಕನ ಮೇಲೆ ಕ್ಷಮೆಯ ಮಳೆಗರೆಯಲಾರಿಯಾ?....." ಎಂದೆಂದುಕೊಂಡು ತುಸತಡೆದು, ಪುನಃ—"ಇದೇನು? ಅವ್ವಾ,ಇದೇನು? ನನ್ನ ದುಃಖಕ್ಕಾಗಿ ನೀನು ಕಣ್ಣೀರು ಹಾಕುವಿಯಾ? ಬೇಡ-ಬೇಡ, ಅವ್ವಾ, ದುಃಖಿಸಬೇಡ. ಈ ಪಾಪಿಗೋಸ್ಕರ ನಿನ್ನ ಪವಿತ್ರ ಅಶ್ರುಗಳನ್ನು ದಯಪಾಲಿಸಬೇಡ. ಅವ್ವಾ, ನಿನ್ನ ಕಣ್ಣುಗಳೊಳಗಿಂದ ಉದುರುವ ಅಶ್ರುಗಳು ದಯಾಶ್ರುಗಳಂತೆ ನನಗೆ ಭಾಸವಾಗದೆ, ನನ್ನ ಹೃದಯ-ದಾಹವನ್ನಾರಿಸುವದಕ್ಕಾಗಿ ನೀನು ಪವಿತ್ರ ವಾರಿಯನ್ನು ಸಿಂಚಿಸುತ್ತಿರುವದಾಗಿ ತೋರುತ್ತದೆ. ಅವ್ವಾ, ನಿನ್ನ ಈ ಪ್ರಯತ್ನದಿಂದ ನನ್ನ ಮನೋವ್ಯಥೆಯೆಲ್ಲ ನಾಶಹೊಂದುವದಾಯಿತು. ಅವ್ವಾ, ನನ್ನ ಕಟ್ಟಕಡೆಯ ಪ್ರಾರ್ಥನೆಯಿಷ್ಟೇ, ನಿನ್ನ ಪವಿತ್ರ ಪಾದೋದಕವನ್ನು ನನ್ನ ತಲೆಯಮೇಲಿಷ್ಟು ಸಿಂಪಡಿಸು. ಅಂದರೆ ನಾನು ಈ ಜನ್ಮದೊಳಗಿನ ಘೋರಪಾತಕಗಳಿಂದ ಮುಕ್ತನಾಗಿ, ಸುಖದಿಂದ ಪರಲೋಕದ ದಾರಿಯನ್ನು ಹಿಡಿಯುವೆನು." ಎಂದು ಬಡಬಡಿಸುವನು. ಕೆಲಕಾಲದಮೇಲೆ ಅವನು ಪುನಃ ಮೊದಲಿನಂತೆ ವಿಠಾಯನ ಆಗಮನದ ವಿಷಯವಾಗಿ ವಿಚಾರಿಸಿ, ಪುನಃ ವಿಹ್ವಲಚಿತ್ತನಾಗಿ ಬಡಬಡಿಸುವನು.

ಹೀಗೆ ರಾಮಚಂದ್ರನು ಎಷ್ಟೋ ಸಾರೆ ಎಲ್ಲರಿಗೂ ಕೇಳುವ ಹಾಗೆ ಬಡಬಡಿಸುತ್ತಿದ್ದರೂ, ಅವನ ಹೃದಯದ ಗುಟ್ಟಿನ ಲವಲೇಶವಾದರೂ ತಿಳಿಯದ ಆ ದವಾಖಾನೆಯ ಜನರಿಗೆ ಅವನ ಮಾತಿನ ಸಂದರ್ಭವೇ ತಿಳಿಯಲಿಲ್ಲ. ರಾತ್ರಿ ಹತ್ತು ಘಂಟೆಯ ವರೆಗೆ ಅವನು ಒಂದೇಸವನೆ ಕಂಠಶೋಷಣ ಮಾಡಿಕೊಂಡದ್ದರಿಂದ ಮೊದಲೇ ಕ್ಷೀಣನಾಗಿದ್ದ ಅವನಿಗೆ ಮತ್ತಿಷ್ಟು ಆಯಾಸವಾಗಲು, ತುಸ ಜಂಪು ಹತ್ತಿತು.

ರಾಮಚಂದ್ರನು ಯಾಪ ಕಡಲೀಪಳ್ಳಿಯ ದವಾಖಾನೆಯಲ್ಲಿ ಬಿದ್ದುಕೊಂಡಿ

ದ್ದನೋ, ಆ ಕಬ್ಬಿನ ಕ್ಷೇತ್ರವು ಷ್ಟ್ಯುಯಾರ್ಟ ಚಂದ್ರ ಕಂಪನಿಯ ಇಸ್ಟೇಟಿನ ತೀರ ಕೊನೆಯ ಭಾಗವು, ಬಂದರದಿಂದ ಬಹು ದೂರದ ಪ್ರದೇಶದಲ್ಲಿತ್ತು. ಅಂತೇ ಬಂದರದಿಂದ ಅಲ್ಲಿಗೆ ಬರಲಿಕ್ಕೆ ರೈಲಿನಿಂದ ೨೪ ತಾಸುಗಳು ಹತ್ತುತ್ತಿದ್ದವು. ಆದರೆ ಮೇಲೆ ಹೇಳಿದಂತೆ ನಮ್ಮ ಶಿವರಾಯನು ಮಧ್ಯಾಹ್ನ ೨ ಗಂಟೆಗೆ ಸ್ಪೆಶಲ್ ರೈಲಿನಿಂದ ಹೊರಟುದುದರಿಂದ ಅವನು ಅಂದೇ ರಾತ್ರಿ ಹತ್ತು ಹೊಡೆಯುವದಕ್ಕೆ ಸರಿಯಾಗಿ ರಾಮಚಂದ್ರನಿದ್ದ ಆ ಕೂಲೀ ಹಳ್ಳಿಯ ಸ್ಟೇಶನ್ನಿಗೆ ಬಂದು ಸೇರಿದನು. ಕೂಡಲೆ ಅವನು ದವಾಖಾನೆಗೆ ಬಂದು ಡಾಕ್ಟರನನ್ನು ಕಂಡು, ತನ್ನನ್ನು ಈಗಲೆ ಆ ಆಸನ್ನ ಮರಣ ರೋಗಿಯ ಬಳಿಗೆ ಕರೆದುಕೊಂಡು ನಡೆ, ಎಂದನು. ಡಾಕ್ಟರನು ಅವನನ್ನು ರಾಮಚಂದ್ರನು ಮಲಗಿರುವ ಕೋಣೆಯ ಕಡೆಗೆ ಕರೆದೊಯ್ಯುತ್ತ—ಈಗ ರೋಗಿಯ ಅವಸ್ಥೆಯು ಚೆನ್ನಾಗಿರುವದಿಲ್ಲ. ಸಂಜೆಯಿಂದ ಬಹಳೇ ಅಸ್ವಸ್ಥನಾಗಿರುವನು. ಅವನ ಒಡಬಡಿಸುವಿಕೆಯು ಕೂಡ ಈಗ ನಿಂತಂತಾಗಿದೆ. ತಾವು ಈ ಸಾಮಾನ್ಯ ರೋಗಿಯ ಸಲುವಾಗಿ ಇಲ್ಲಿಯವರೆಗೆ ಬಂದೀರೆಂದು ನಾನು ನಂಬಿರಲಿಲ್ಲ; ಆದರೆ ದಯಾಘನರಾದ ತಾವು ಬಂದುದನ್ನು ನೋಡಿದರೆ ಬಹು ಆಶ್ಚರ್ಯವೆನಿಸುತ್ತದೆ. ಇಂದೇ ಬೆಳಿಗ್ಗೆ ತಾರು ಮಾಡಿರಲು, ತಾವು ಇಷ್ಟು ಬೇಗ ಬಂದುದು ಹೇಗೆ? ಎಂದು ಕೇಳಲು, "ನಾನು ಬಹು ಶೀಘ್ರ ಗತಿಯುಳ್ಳ ಸ್ಪೆಶಲ್ ರೈಲಿನಿಂದ ಬಂದಿರುವೆನು." ಎಂದು ಶಿವರಾಯನು ಉತ್ತರ ಕೊಡುವಷ್ಟರಲ್ಲಿ ಅವರೀರ್ವರು ರಾಮಚಂದ್ರನ ಶಯ್ಯೆಯ ಬಳಿಗೆ ಬಂದರು. ಅಲ್ಲಿ ಹಾಸಿಗೆಯ ಮೇಲೆ ಜೀರ್ಣವೂ, ಮಲಿನವೂ, ಶತಗ್ರಂಥಿಗಳಿಂದ ಯುಕ್ತವೂ ಆದದ್ದೊಂದು ಹರಕು ಬಟ್ಟೆಯನ್ನು ಸರ್ವಸಾಧಾರಣವಾದ ಲಜ್ಜೆಯನ್ನು ನಿವಾರಿಸುವ ಸಲುವಾಗಿ ಉಟ್ಟು ಮಲಗಿದ್ದ ಒಬ್ಬ ವ್ಯಕ್ತಿಯು ಶಿವರಾಯನ ಕಣ್ಣಿಗೆ ಕಾಣಿಸಿಕೊಂಡನು. ಶಿವರಾಯನು ಅವಸರದಿಂದ ಅವನ ಹಾಸಿಗೆಯ ಬಳಿಗೆ ಹೋದನು. ಅವನ ಕಾಲ ಸಪ್ಪಳದಿಂದ ರಾಮಚಂದ್ರನ ತಂದ್ರಾವಸ್ಥೆಯು ಭಂಗವಾಯಿತು. ಅವನು ಕಣ್ಣು ತೆರೆಯಲು, ತನ್ನ ಎದುರಿಗೆ ಶಿವರಾಯನ ಪ್ರತ್ಯಕ್ಷಮೂರ್ತಿಯು ನಿಂತದ್ದು ಅವನಿಗೆ ಕಾಣಿಸಿತು. ಕೂಡಲೆ ಅವನು ಶಿವರಾಯನನ್ನು ಗುರ್ತಿಸಿ—"ಬಂದಿರೋ? ತಾವು ಪರಮ ದಯಾಘನರೆಂಬುವದು ಸುಳ್ಳಲ್ಲ!" ಎಂದು ಮಲಗಿಕೊಂಡೇ ಸ್ವಾಗತಮಾಡಿ, ಡಾಕ್ಟರನ ಕಡೆಗೆ ದೃಷ್ಟಿ ಹೊರಳಿಸಿ—"ಡಾಕ್ಟರಸಾಹೇಬರೇ, ತಾವೆಲ್ಲರೂ ದಯವಿಟ್ಟು ತುಸಹೊತ್ತು ಬೇರೆ ಕಡೆಗೆ ಹೋಗಬೇಕೆಂದು ಪ್ರಾರ್ಥಿಸುವೆನು." ಪರಕ್ಷಣದಲ್ಲಿ ಶಿವರಾಯನ ಹೊರತು ಎಲ್ಲರೂ ಅಲ್ಲಿಂದ ಹೊರಟು ಹೋದುದನ್ನು ಮನವರಿಕೆ ಮಾಡಿಕೊಂಡ

ಬಳಿಕ ರಾಮಚಂದ್ರನು ಶಿವರಾಯನನ್ನು ಕುರಿತು—ಶಿವರಾಯರಿಗೆ ಈ ಪಾಪಿಯ ಗುರುತು ಹತ್ತುವದೇನು?'' ಎಂದು ಪ್ರಶ್ನ ಮಾಡಿದನು.

ಶಿವರಾಯನು ಅಸಮ್ಮತಿ ಸೂಚಿಸುವದಕ್ಕೆ ಗೋಣು ಅಲ್ಲಾಡಿಸಿ—''ಇಲ್ಲ. ನನ್ನನ್ನು ನೀನು ಹೇಗೆ ಗುರ್ತಿಸುವಿಯೋ ತಿಳಿಯಲಾರೆನು.''

''ನಾನೇ ಆ ನಿಮ್ಮ ರಾಮಚಂದ್ರನು.''

ಅರಣ್ಯಮಧ್ಯದ ದಾರಿಯಲ್ಲಿ ಹೆಡೆಯೆತ್ತಿದ್ದ ಭಯಂಕರ ಸರ್ಪವನ್ನು ಆಕಸ್ಮಿಕವಾಗಿ ನೋಡಿದರೆ, ಯಾವನೊಬ್ಬ ಒಂಟಿಗನಾದ ಪಥಿಕನು ಹ್ಯಾಗೆ ಹೌಹಾರಿ ಬೆಚ್ಚಿಬಿದ್ದು, ಬಂದದಾರಿಯಿಂದ ಹಿಂತಿರುಗಿ ಓಡಿ ಹೋಗಲು ಪ್ರಯತ್ನಿಸುವನೋ, ಹಾಗೆಯೇ, ಶಿವರಾಯನು ''ರಾಮಚಂದ್ರ'' ಎಂಬ ಶಬ್ದವನ್ನು ಕೇಳಿ ಬೆಚ್ಚಿ ಬಿದ್ದು, ಒಂದೆ ಸಾರದು ನಿಂತು, ತಿರುಗಿ ಹೋಗುವ ಹವಣಿಕೆಯಲ್ಲಿದ್ದನು; ಆದರೆ ಅವನು ನಿಜವಾಗಿ ಹಾಗೆ ಮಾಡದೆ, ಉತ್ತರ ಕ್ಷಣದಲ್ಲಿ ರಾಮಚಂದ್ರನ ತೀರ ಸಮೀಪಕ್ಕೆ ಹೋಗಿ, ಕೇವಲ ದಯಾರ್ದ್ರ ದೃಷ್ಟಿಯಿಂದ ಅವನ ಕಡೆಗೆ ನೋಡುತ್ತ—''ನೀನು ಹೀಗೇಕಾಗಿರುವಿ?''

''ಪತಿವ್ರತೆಗೆ ವೃಥಾ ಕಷ್ಟಕೊಟ್ಟದ್ದಕ್ಕಾಗಿಯೂ, ಸಜ್ಜನರಿಗೆ ವೃಥಾ ಕ್ಲೇಶವನ್ನುಂಟುಮಾಡಿ ಅವರನ್ನು ದೇಶತ್ಯಾಗ ಮಾಡಿಸಿದುದಕ್ಕಾಗಿಯೂ ನನಗೆ ಈ ದೆಶೆಯು ಪ್ರಾಪ್ತವಾಗಿರುತ್ತದೆ. ನಾನು ಆ ಘೋರ ಪಾತಕಗಳಿಗಾಗಿ ಈಗ ಹನ್ನೆರಡು ವರ್ಷಗಳ ವರೆಗೆ ಈ ದ್ವೀಪಾಂತರದೊಳಗಿನ ಕರಾರುಬದ್ಧತೆಯ ಕೂಲಿತನದ ಕಡು ದುಃಖವನ್ನು ಭೋಗಿಸುತ್ತಿರುವೆನು. ಈ ಭಯಂಕರ ಶಿಕ್ಷೆಯಿಂದಲೂ ನನ್ನ ಪಾಪದ ಘೋರತೆಯು ಕಿಂಚಿತ್ತಾದರೂ ಕಡಿಮೆಯಾಗಿರುವದೋ ಇಲ್ಲವೋ ನಾನರಿಯೆ. ಆದರೆ ತಾಯಿಯು ಈಗ ಕೆಲವು ಕ್ಷಣಗಳ ಮುಂಚೆ ನನ್ನ ಕನಸಿನಲ್ಲಿ ಕಾಣಿಸಿಕೊಂಡು, ನನ್ನ ತಲೆಯ ಮೇಲೆ ತನ್ನ ಪವಿತ್ರ ಪಾದೋದಕವನ್ನೆರಚಿ, ನನ್ನ ಆ ಘೋರ ಪಾತಕವನ್ನು ತುಸ ಹಗುರ ಮಾಡಿರುವಳು.''

ರಾಮಚಂದ್ರನ ಈ ಮಾತನ್ನು ಶಿವರಾಯನು ನಿಜವೆಂದು ತಿಳಿಯಲಿಲ್ಲ. ಈ ಮೊದಲು ದಾಕ್ತರನು ಹೇಳಿರುವಂತೆ ಇವನು ಬಡಬಡಿಸುತ್ತಿರುವನೆಂದು ಭಾವಿಸಿ, ಅವನನ್ನು ಮತ್ತೆ ಮಾತಾಡಗೊಡದೆ ''ನೀನು ನನ್ನನ್ನು ಭೇಟಿಯಾಗಬಯಸಿದ್ದೇಕೆ?'' ಎಂದು ಕೇಳಲು,

ರಾಮಚಂದ್ರನು—''ತಮ್ಮ ಬಳಿಯಲ್ಲಿ ಕ್ಷಮೆಯನ್ನು ಯಾಚಿಸುವದಕ್ಕಾಗಿ. ನಾನು ತಮ್ಮಿಂದ ಕ್ಷಮೆಬೇಡಿಕೊಳ್ಳಲು ಯೋಗ್ಯನಲ್ಲೆಂಬದು ನನಗೆ ಗೊತ್ತಿರುತ್ತದೆ; ಆದರೆ ತಾವು ದೇವಸಮಾನರು. ತಾಯಿಯು ಹ್ಯಾಗೂ ಈಗಾಗಲೆನನಗೆ ಕ್ಷಮೆಯನ್ನು

ನೀಡಿರುವಳು. ಆದುದರಿಂದ ತಾವೂ ನನ್ನ ಈ ದೀನನ ಬೇಡಿಕೆಯ ಭಿಕ್ಷೆಯನ್ನು ನೀಡದೆ ಇರಲಾರಿರೆಂದು ನನ್ನ ಭರವಸೆಯಿರುತ್ತದೆ.''

ಶಿವರಾಯನಿಗೆ ರಾಮಚಂದ್ರನ ಅಂಬೋಣದ ಅರ್ಥವಾಗದ್ದರಿಂದ ಅವನು—''ನನ್ನನ್ನು ಕ್ಷಮಿಸೆಂದು ಬೇಡಿಕೊಳ್ಳುವೆಯಷ್ಟೆ? ಆದರೆ ನೀನು ನನಗೆ ಮಾಡಿದ ಆ ಅಪರಾಧವಾದರೂ ಯಾವದು?''

''ತಾಯಿಯ ವಿಷಯವಾಗಿ ಮಿಥ್ಯಾಕಲಂಕವನ್ನೊಳಗೊಂಡ ಪತ್ರವನ್ನು ತಮಗೆ ಬರೆದುದಕ್ಕಾಗಿ''

''ತಾಯಿಯ ಬಗ್ಗೆ ಮಿಥ್ಯಾಕಲಂಕವೆಂದರೇನು? ನಿನ್ನ ತಾಯಿ ಯಾರು?''

''ತಮ್ಮ ಸಹಧರ್ಮಿಣಿಯಾದ ಕಮಲಾದೇವಿಯೇ ನನ್ನ ತಾಯಿಯು''

ಸಕ್ರೋಧದಿಂದ ಶಿವರಾಯನು—''ಏನು-ಏನಂದಿ? ನನ್ನ ಕಮಲಾಸುಂದರಿಯ ಮೇಲೆ ಮಿಥ್ಯಾಕಲಂಕಾರೋಪವನ್ನು ಹೊರಿಸಿ ನನಗೆ ಪತ್ರಬರೆದವನು ನೀನೇ ಏನು? ಹಾಗೆ ಬರೆಯಲಿಕ್ಕೆ ಕಾರಣವೇನೆಂಬದನ್ನು ಶೀಘ್ರವಾಗಿ ತಿಳಿಸು. ತಡ ಮಾಡಿದೆಯೆಂದರೆ ನಾನು ನಿನ್ನ ಖೂನಿ ಮಾಡಲಿಕ್ಕೆ ಕೂಡ ಹೇಸಲಾರೆನು'' ಎಂದು ನುಡಿದು, ರಾಮಚಂದ್ರನ ಮೇಲೆ ಹಲ್ಲು ಕಡಿಯಹತ್ತಿದನು.

''ದಯಾಘನರೇ, ಈ ಪರಮ ಪತಿತನನ್ನು ಮುಟ್ಟಿ ತಮ್ಮ ಪವಿತ್ರ ಕರಗಳನ್ನು ಕಲಂಕಿತ ಮಾಡಿಕೊಳ್ಳುವದೇಕೆ? ತಾವು ನನ್ನ ಖೂನಿಮಾಡುವ ಅವಶ್ಯಕತೆಯೇ ಇಲ್ಲ. ನಾನುಇಲ್ಲಿ ಇನ್ನು ಒಂದೆರಡೇಗಳಿಗೆಯವನು. ನಿಮಗೆ ಆ ಪತ್ರದ ಎಲ್ಲ ಸಂಗತಿಯನ್ನು ತಿಳಿಸಿ ಬಿಡುವದಕ್ಕಾಗಿಯೇ ದೇವರು ನನ್ನನ್ನು ಈ ವರೆಗೆ ಬದುಕಿಸಿರುವನು.''

ರಾಮಚಂದ್ರನ ಆ ಜಾಬಾಳ ಸಂಭಾಷಣವನ್ನು ಕೇಳುತ್ತ ನಿಲ್ಲುವಷ್ಟು ಶಿವರಾಯನ ಹೃದಯದಲ್ಲಿ ಸ್ಥಿರತೆಯಿರದ್ದರಿಂದ ಅವನು—ಹೇಳು, ಬೇಗನೆ ಹೇಳು. ಏಕೆ ನೀನು ಹಾಗೆ ಪತ್ರ ಬರೆದೆಯೆಂಬದನ್ನು ಶೀಘ್ರವಾಗಿ ತಿಳಿಸು; ಎಂದು ನುಡಿಯಲು,

''ತಾಯಿಯಾದ ಕಮಲಾದೇವಿಯು ತವರು ಮನೆಗೆ ಹೋಗಿದ್ದಾಗ ಒಂದು ದಿನ ನಾನು ತಮ್ಮೊಡನೆ ತಮ್ಮ ಶಯನಗೃಹಕ್ಕೆ ಬಂದಿದ್ದೆನು. ಅಲ್ಲಿ ತಾಯಿಯ ಫೋಟೋ ಇತ್ತು. ಫೋಟೋದೊಳಗಿನ ಆ ಕಮಲಾದೇವಿಯ ಭುವನಮೋಹಕ ರೂಪವನ್ನು ನೋಡಿ ನನ್ನ ಪಾಪಿಷ್ಠ ಮನಸ್ಸಿನಲ್ಲಿ ಪಾಪಚಿಂತನೆಯು ಉದಯವಾಯಿತು; ಆದರೆ ನನ್ನ ಆ ಪಾಪಚಿಂತನೆಯಿಂದ ಯಾವಫಲವೂ ಆಗುವಂತಿರದಿದ್ದರೂ, ಅದನ್ನು ನನ್ನಿಂದ ಪರಿತ್ಯಜಿಸುವದಾಗಲಿಲ್ಲ. ಕ್ರಮವಾಗಿ ನನ್ನ ಮನಸ್ಸು ಪಾಪದಾಶೆ

ಯಲ್ಲಿ ನಿಮಗ್ನವಾಗಹತ್ತಿತು. ಆದರೆ ಆ ನನ್ನ ಪಾಪಮಯ ಕಾಮನೆಯನ್ನು ವ್ಯಕ್ತಮಾಡುವಷ್ಟು ಸಾಹಸವು ನನಗಿರಲಿಲ್ಲ. ಆಗ ನಾನು ಆಲೋಚಿಸಿದುದೇನಂದರೆ, ಯಾವ ಬಗೆಯಿಂದಾದರೂ ನಿಮ್ಮಿಬ್ಬರಲ್ಲಿ ವಿಚ್ಛೇದವನ್ನುಂಟುಮಾಡಿದರೆ, ನನ್ನ ಇಚ್ಛೆಯು ಕೈಗೂಡಿದರೆ ಕೈಗೂಡಬಹುದು; ಮತ್ತು ಅದಕ್ಕೋಸ್ಕರವಾಗಿಯೇ ನಾನು ಆ ತರದ ಯೋಗವನ್ನು ನಿರೀಕ್ಷಿಸಹತ್ತಿದ್ದೆನು; ಆದರೆ ಮಾಧವರಾಯನು ನಿಮ್ಮ ಮನೆಗೆ ಬಾರದಿರುವ ವರೆಗೆ ನನಗೆ ಆ ಸುಯೋಗವು ಪ್ರಾಪ್ತವಾಗಲಿಲ್ಲ. ಮಾಧವರಾಯನು ಬಂದ ಕೆಲವು ದಿನಗಳಲ್ಲಿಯೇ ನಾನು ನನ್ನ ಇಂಗಿತವನ್ನು ಸಾಧಿಸಿಕೊಳ್ಳುವದಕ್ಕಾಗಿ ನಿಮಗೆ ಆ ಮಿಥ್ಯಾ ಕಲಂಕಿತ ಪತ್ರವನ್ನು ಬರೆದೆನು. ಭಯಂಕರ ಪಾಪವೂ, ನಿಷ್ಫಲವಾದ ಆಶೆಯೂ ಕೂಡಿ ನನ್ನಿಂದ ಆ ಹೇಯ ಕೆಲಸವನ್ನು ಮಾಡಿಸಿದವು. ಆದುದರಿಂದ, ನಾನು ಮಹಾಪಾಪಿಯು. ಕ್ಷಮೆಯಾಚಿಸಲಿಕ್ಕೆ ಅಪಾತ್ರನು. ಆದರೂ ತಾಯಿಯು ಸ್ವಪ್ನದಲ್ಲಿ ದರ್ಶನ ಕೊಟ್ಟು ಈ ಪಾಪಿಯ ಪಶ್ಚಾತ್ತಾಪಕ್ಕಾಗಿ ನನ್ನ ತಲೆಯ ಮೇಲೆ ತನ್ನ ಪವಿತ್ರ ಪಾದಧೂಲಿಯನ್ನು ಸಂಪಡಿಸಿ ಹೋಗಿರುತ್ತಾಳೆ. ನನಗೋಸ್ಕರ ಅವಳ ಕಣ್ಣಿನ ಅಶ್ರುಬಿಂದುಗಳು ಉದುಂ ಶಾಂತಿವಾರಿರೂಪದಿಂದ ಅವು ನನ್ನಹೃದಯದ ಪರಿತಾಪವನ್ನು ನಂದಿಸಿಬಿಟ್ಟಿರುತ್ತವೆ. ತಾವಿಷ್ಟು ನನ್ನನ್ನು ಕ್ಷಮಿಸಿಬಿಟ್ಟರೆಂದರೆ, ಸುಖವಾಗಿ ಇಹಲೋಕದಿಂದ ತೆರಳಲಿಕ್ಕೆ ನನಗೆ ಸಹಾಯಮಾಡಿದಂತಾಗುತ್ತದೆ.''

ರಾಮಚಂದ್ರನ ಸಂಭಾಷಣವು ಮುಗಿಯುವಷ್ಟರಲ್ಲಿ ಶಿವರಾಯನಿಗೆ ಸಿಡಿಲು ಬಂದಂತಾಗಿ ಕಣ್ಣುಗಳು ಕತ್ತಲುಗವಿದವು. ಆದರೂ ಆ ಧೀರನು ಒಳ್ಳೇ ಸಾವಧಾನದಿಂದ ಸಾವರಿಸಿಕೊಂಡು ಕೆಲಹೊತ್ತು ಸುಮ್ಮನೆ ನಿಂತನು. ಅವನಿಂದ ಆ ಮೌನವ್ರತವನ್ನು ಬಹಳ ಹೊತ್ತಿನವರೆಗೆ ಪಾಲಿಸುವದಾಗಲಿಲ್ಲ. ಯಾಕಂದರೆ ಅವನ ಹೃದಯದಲ್ಲಿ ರಾಮಚಂದ್ರನಿಗಿಂತಲೂ ಬಹುದೊಡ್ಡ ಪಶ್ಚಾತ್ತಾಪಾಗ್ನಿಯು ಪ್ರಜ್ವಲಿಸಿದ್ದು, ಅದರ ಜ್ವಾಲೆಗಳು ಅವನ ಹೃದಯದಿಂದ ಹೊರಚಿಮ್ಮಹತ್ತಿದವು. ಆಗ ಅವನು ಕರದ್ವಯಗಳಿಂದ ತನ್ನ ಬಾಯಿಯನ್ನು ಬಿಗಿಹಿಡಿದು, ಅಸ್ಫುಟಧ್ವನಿಯಿಂದ—''ಕಮಲೇ, ಪ್ರಿಯಕಮಲೇ, ನಿನ್ನ ದೋಷವಿಲ್ಲದೆ ನಾನು ನಿನಗೆ ಇಷ್ಟು ದುಃಖವನ್ನು ಕೊಟ್ಟೆನಲ್ಲವೆ? ನನ್ನ-ಮೂರ್ಖನ-ಈ ತಪ್ಪಿಗೆ ಈ ಪೃಥ್ವೀತಲದಲ್ಲಿ ಪ್ರಾಯಶ್ಚಿತ್ತವೇ ಇಲ್ಲದಾಗಿದೆ. ಕಮಲೇ, ಪತಿವ್ರತೆಯೇ, ಈ ನಿನ್ನ ಹತಭಾಗಿಯಾದ ಪತಿಯನ್ನು ಕ್ಷಮಿಸು. ಭಗವಂತನೇ, ಈ ವರೆಗೆ ಎಂದೂ ಯಾವ ವಿಷಯವಾಗಿಯೂ ನಿನ್ನನ್ನು ಕುರಿತು ನಾನು ಪ್ರಾರ್ಥಿಸಿರುವದಿಲ್ಲ; ಆದರೆ ಪ್ರಭೋ, ನನ್ನ

ಮೊಟ್ಟಮೊದಲಿನ ಹಾಗು ಕಟ್ಟಕಡೆಯ ಪ್ರಾರ್ಥನೆಯೇನಂದರೆ, ನಾನು ನನ್ನ ದೇಶಕ್ಕೆ ತಿರುಗಿ ಹೋಗುವ ವರೆಗೆ ನನ್ನ ಪ್ರಿಯ ಕಮಲೆಯನ್ನು ಬದುಕಿಸಿಟ್ಟಿರು. ನನ್ನ ಅವಳ ಅಂತವಾಗುವಷ್ಟರಲ್ಲಿ ನಮ್ಮಿಬ್ಬರನ್ನು ಪರಸ್ಪರ ಭೇಟಿಯಾಗಗೊಡು.'' ಎಂದು ಅನನ್ಯಭಾವದಿಂದ ದೇವರನ್ನು ಪ್ರಾರ್ಥಿಸಿದನು. ನಂತರ ಅವನು ತನ್ನ ಮೋರೆಯ ಮೇಲಿನ ಕೈಗಳನ್ನು ತೆಗೆದು—''ರಾಮಚಂದ್ರಾ, ನಾನು ನಿನ್ನನ್ನು ಕ್ಷಮಿಸಿರುವೆನು. ನಿನ್ನ ಅಪರಾಧಕ್ಕಿಂತಲೂ ನನ್ನ ಅಪರಾಧವು ಗುರುತರವಾದದ್ದು. ನಿನ್ನ ಪಾಪಕ್ಕೆ ಪ್ರಾಯಶ್ಚಿತ್ತವು ಕೂಡ ಆಗಿ ಹೋಗಿದೆ. ಆದರೆ ನನ್ನ ಪಾಪಕ್ಕೆ ಪ್ರಾಯಶ್ಚಿತ್ತವೇ ಇಲ್ಲದಾಗಿದೆ.'' ಎಂದಂದು, ಆ ದವಾಖಾನೆಯಿಂದ ಹೊರಬಿದ್ದನು.

---

## ಹತ್ತೊಂಬತ್ತನೆಯ ಪರಿಚ್ಛೇದ.

### ಸೌಭಾಗ್ಯವಿಹೀನ ಸವತಿಯರು!

ತಮ್ಮೆಲ್ಲರ ಸ್ನಾನವಾಗಿ ಒಂದು ೨-೩ ತಾಸುಗಳಾದರೂ ಸ್ನಾನಕ್ಕೆಂದು ಹೋಗಿದ್ದ ಮುರಾರಿ-ಹೇಮಾವತಿಯರು ತಿರುಗಿ ಬಾರದ್ದನ್ನು ಕಂಡು, ಅಮೃತರಾಯನ ಅತ್ತೆ-ಮಾವನಿಗೂ ಸೀತಾಂಬಿಕೆಗೂ ದೊಡ್ಡ ಆಲೋಚನೆಯುಂಟಾಯಿತು. ಹನ್ನೊಂದು ಹೊಡೆದು ಹೋದರೂ ಅವರು ತಿರುಗಿ ಬರಲಿಲ್ಲ. ಅಮೃತರಾಯನಿಗೆ ಈ ಸುದ್ದಿ ತಿಳಿಸುವದಕ್ಕಾಗಿ ಸೀತಾಂಬಿಕೆಯೇ ಗಂಗಾತಟಾಕಕ್ಕೆ ಆತನ ಸ್ನಾನದಸ್ಥಳಕ್ಕೆ ಹೊರಟಳು. ಅಷ್ಟರಲ್ಲಿ ತೊಯ್ದ ಪಂಜೆಯನ್ನೂ ಗಂಗೋದಕ ತುಂಬಿದ ಒಂದು ಪಾತ್ರೆಯನ್ನೂ ಹಿಡಕೊಂಡು ಅವನು ಮನೆ ಗೆಬಂದನು. ಅವನು ಮನೆಯಲ್ಲಿ ಆಕಸ್ಮಿಕವಾಗಿ ಬಂದಿದ್ದ ಅತ್ತೆ-ಮಾವನನ್ನು ನೋಡಿ ಚಕಿತನಾದನು. ಇನ್ನು ಅವನು ಅವರ ಯೋಗಕ್ಷೇಮವನ್ನು ಕೇಳಿಕೊಳ್ಳಬೇಕೆನ್ನುವಷ್ಟರಲ್ಲಿ, ಅವನ ಅತ್ತೆಯೇ ಅವನನ್ನು ಕುರಿತು—''ಅಪ್ಪಾ, ನಾವು ಬೆಳಿಗ್ಗೆ ಬಂದಕೂಡಲೆ ಹೇಮಾವತಿಯು ಮುರಾರಿಯೊಡನೆ ಗಂಗಾಸ್ನಾನಕ್ಕೆಂದು ಹೋದವಳು ಈವರೆಗೂ ಬಂದಿರುವದಿಲ್ಲ; ಅವರು ಎಲ್ಲಿಗೆ ಹೋಗಿರಬಹುದು?'' ಎಂದು ಪ್ರಶ್ನೆ ಮಾಡಿದಳು.

''ಬೆಳಗಿನಿಂದ ಈ ವರೆಗೆ ನಾನು ಗಂಗಾತಟಾಕದಲ್ಲಿಯೇ ಇದ್ದೆನು. ನನಗಂತೂ ಅವರು ಕಾಣಿಸಿಕೊಂಡಿಲ್ಲ; ಅಂದಮೇಲೆ ಅವರು ಗಂಗಾಸ್ನಾನಕ್ಕೆ ಬರದೆ,

ಬೇರೆ ಯಾವದಾದರೂ ತೀರ್ಥದ ಸ್ನಾನಕ್ಕೆ ಹೋಗಿರಬಹುದೇನು?''

''ನಮಗೇನು ಗೊತ್ತಪ್ಪಾ? ನಾವು ಇಂದೇ ಇಲ್ಲಿಗೆ ಬಂದವರು. ಇಲ್ಲಿಯ ತೀರ್ಥ-ಕ್ಷೇತ್ರಗಳ ಸುದ್ದಿ ಕೂಡ ನಮಗೆ ಗೊತ್ತಿಲ್ಲ. ಯಾವುದೊಂದು ತೀರ್ಥದಲ್ಲಿ ಸ್ನಾನಕ್ಕೆಂದು ಹೋಗಿ ಕಾಲುಜಾರಿ ಬಿದ್ದರೋ ಏನಾಯಿತೋ ತಿಳಿಯದು. ನೀನು ಬೇಗನೆ ಒಣದೋತರ ಉಟ್ಟುಕೊಂಡು, ತುಸ ಉಪಾಹಾರ ಮಾಡಿ, ಅವರ ಪತ್ತೆ ಹಚ್ಚಿಕೊಂಡು ಬರುವ ಎತ್ತುಗಡೆ ಮಾಡು'' ಎಂದು ನುಡಿದ ಅತ್ತೆಯ ಮಾತಿನಂತೆ ಅಮೃತರಾಯನು ಒಳಗೆ ಹೋಗಿ, ಬೇರೆ ದೋತರ ಉಟ್ಟು, ನೀಲಾಂಬಿಕೆಯು ಕೊಟ್ಟ ತುಸ ಫಲಾಹಾರವನ್ನು ಸ್ವೀಕರಿಸಿ ಹೊರಗೆ ಬರಲಿಕ್ಕೂ, ಅವರ ಮನೆಯ ಎದುರಿಗೆ ಒಂದು ಗಾಡಿಬಂದು ನಿಲ್ಲಲಿಕ್ಕೂ ಗಂಟೆ ಬಿದ್ದಿತು. ಅಮೃತರಾಯನು ಕಿಟಿಕಿಯೊಳಗಿಂದಲೇ ಆ ಗಾಡಿಯ ಕಡೆಗೆ ದಿಟ್ಟಿಸಿನೋಡಿದನು. ಅದು ವಾರಣಾಸಿಯೊಳಗಿನ ಸಾಮಾನ್ಯ ಗಾಡಿಯಾಗಿರದೆ, ಪ್ರತಿದಿನವೂ ತಾನು ನೋಡುತ್ತಿದ್ದ ಕಮಲಾಸುಂದರಿಯ ಗಾಡಿಯಾಗಿತ್ತು. ಅದು ಅವನ ಕಣ್ಣಿಗೆ ಬಿದ್ದಕೂಡಲೆ ಅವನ ಮನಸ್ಸು ಅತ್ಯಂತ ಚಂಚಲವಾದುದರಿಂದ, ತಾನು ಈಗ ಯಾವ ಕೆಲಸಕ್ಕಾಗಿ ಹೋಗಬೇಕೆಂಬದು ಕೂಡ ಅವನಿಗೆ ವಿಸ್ಮರಣವಾಯಿತು. ಆಗ ಅವನು ಮನದಲ್ಲಿ ಆಲೋಚಿಸಹತ್ತಿದನೇನಂದರೆ—''ಇದು ಕಮಲಾಸುಂದರಿಯ ಗಾಡಿಯು. ಇದು ಎಂದೂ ನಮ್ಮ ಮನೆಗೆ ಬಂದಿರಲಿಲ್ಲ. ಇಂದು ಬಂದಕಾರಣವೇನಿರಬಹುದು? ವಿಮಲೆಯ ಮನಸ್ಸಿನಲ್ಲಿ ಇಲ್ಲಿಗೆ ಬಂದುಬಿಡಬೇಕೆಂಬ ಇಚ್ಛೆಯುಂಟಾದದ್ದರಿಂದ ಅವಳು ಬಂದಿರಬಹುದೇನು? ಇಲ್ಲವೆ ಕಮಲಾಸುಂದರಿಯು ನಮ್ಮ ಅತ್ತೆ-ಮಾವನವರಿಗೆ ಯಾವ ಬಗೆಯಿಂದಾದರೂ ಸಂಬಂಧಿಕಳಾಗಿದ್ದರೆ, ಇವರ ಆಗಮನವನ್ನು ತಿಳಿದು ಇವರ ಭೆಟ್ಟಿಗೆ ಬಂದಿರಬಹುದೇನು?'' ಹೀಗೆ ಅಮೃತರಾಯನು ತನ್ನ ಬೈಠಕಖಾನೆಯಲ್ಲಿ ನಿಂತುಕೊಂಡೇ ಆಲೋಚಿಸುತ್ತಿರಲು, ಆ ಗಾಡಿಯಿಂದಿಳಿದ ಹೇಮಾವತಿ ಹಾಗು ಮುರಾರಿ ಇವರ ಅಪ್ಪಣೆಯನ್ನು ತಕ್ಕೊಂಡು, ಗಾಡಿಹೊಡೆಯುವವನು ಆ ಗಾಡಿಯನ್ನು ಕಮಲಾಸುಂದರಿಯ ಮಂದಿರದ ಕಡೆಗೆ ತೆಗೆದುಕೊಂಡು ನಡೆದನು.

ಮುರಾರಿಯು ತಾಯಿ-ತಂದೆಗಳ ಒಳಗೆ ನಡೆದನು. ಹೇಮಾವತಿಯು ಗಂಡನ ಬಳಿಗೆ ಬಂದಳು. ಅವಳನ್ನು ಕಂಡು ಅಮೃತರಾಯನು ಪ್ರಕೃತಿಸ್ಥನಾಗಿ - ಗಂಗಾಸ್ನಾನ ಮಾಡಿಬರಲಿಕ್ಕೆ ನಿಮಗೆ ಇಷ್ಟು ತಡವೇಕಾಯಿತು? ಎಂದು ಕೇಳಲು, ''ದಿನಾಲು ಗಂಗಾಸ್ನಾನಕ್ಕಾಗಿ ನಿಮಗೆ ಬೆಳಗಿನ ಝಾವದ ೪ ಘಂಟೆಯಿಂದ ಮಧ್ಯಾಹ್ನ ೧೧-೧೨ ಗಂಟೆಯ ವರೆಗೆ ಅವಕಾಶ ಬೇಕಾಗುತ್ತಿರಲು, ಇಂದು ನಾವು

೧-೨ ಗಳಿಗೆ ತಡಮಾಡಿ ಬಂದರೆ ತಪ್ಪೇನು?'' ಎಂದು ನುಡಿದು, ಹೇಮಾವತಿಯು ಪತಿಯನ್ನು ಒಮ್ಮೆ ಭಾವಭಂಗಿತ ದೃಷ್ಟಿಯಿಂದ ನೋಡಿದಳು. ಅಮೃತರಾಯನು ಮನದಲ್ಲಿ ಬಹಳ ನಾಚಿಕೊಂಡನು. ಆದರಿಂದ ಅವನು ಸ್ನಾನದ ವಿಷಯವಾಗಿ ಮತ್ತೆ ಮಾತೇ ಎತ್ತದಾದನು. ಆದರೂ ಇವಳಿಗೆ ಕಮಲಾಸುಂದರಿಯ ಗಾಡಿಯು ಎಲ್ಲಿ ಹಾಗು ಹೇಗೆ ಸಿಕ್ಕಿತೆಂಬದನ್ನು ತಿಳಿಕೊಳ್ಳುವದಕ್ಕಾಗಿ ಅವನು ಹೇಮಾವತಿಯನ್ನು ಕುರಿತು—ನಿಮಗೆ ಆ ಗಾಡಿಯು ಎಲ್ಲಿ ದೊರಕಿತು? ಎಂದು ವಿಚಾರಿಸಿದನು. ಯಾವುದನ್ನೂ ಅರಿಯದವಳಂತೆ ನಟಿಸಿ, ಹೇಮಾವತಿಯು—ಯಾವ ಗಾಡಿಯು? ಎನಲು, ''ಸ್ನಾನಮಾಡಿ ಯಾವ ಗಾಡಿಯಲ್ಲಿ ನೀವು ತಿರುಗಿಬಂದಿರೋ ಅದು'' ಎಂಬ ತನ್ನ ಮಾತಿಗೆ, ''ಬಾಡಿಗೆ ಮಾಡಿಕೊಂಡು ಬಂದೆವು'' ಎಂದು ಹೇಮಾವತಿಯು ಉತ್ತರವಿತ್ತದ್ದನ್ನು ಕೇಳಿ, ಅಮೃತರಾಯನು—ಅದಂತೂ ಬಾಡಿಗೆಯ ಗಾಡಿಯಲ್ಲ. ಅದು ಯಾರದೋ ಮನೆಯ ಗಾಡಿಯು, ಎಂದು ಅಂದನು. ಇದಕ್ಕೆ ''ಹಾಗಲ್ಲವೆ?'' ಎಂದು ವ್ಯಂಗ್ಯಧ್ವನಿಯಿಂದ ನುಡಿದು, ಒಂದು ಕುಟಿಲಕಟಾಕ್ಷವನ್ನು ಅವಳು ಗಂಡನಮೇಲೆ ಎಸೆದಳು. ಪತ್ನಿಯ ಆ ಕುಟಿಲ ದೃಷ್ಟಿ ಹಾಗು ವ್ಯಂಗ್ಯಸ್ವರಗಳನ್ನು ತಿಳಿದು, ಅಮೃತರಾಯನು ಅವಳಿಗೆ ಮತ್ತೆ ಏನು ಕೇಳಬೇಕೆಂದಿದ್ದನೋ ಅದನ್ನು ಕೂಡ ಕೇಳದೆ ಸುಮ್ಮನಾಗಬಿಟ್ಟನು.

ಗಂಡನು ನೀರವನಾದದ್ದನ್ನು ಕಂಡು ಹೇಮಾವತಿಯು ಅವನ ಕೈ ಹಿಡಿದು—''ನನಗೆ ತಿಳಿಸದಹಾಗೆ ನೀವೇನನ್ನಾದರೂ ಸಂಪಾದಿಸಿದ ಹಾಗೆ ಕಾಣುತ್ತದೆ. ಸತ್ಯವಷ್ಟೇ?'' ಎನಲು,

ಅಮೃತರಾಯನು ಚಕಿತನಾಗಿ ಕೇಳಿದನೇನಂದರೆ—'ಅದೇನು?'

''ನೋಡಿರಿ, ನನ್ನೆದುರಿಗೆ ಸುಳ್ಳಾಡಬೇಡಿರಿ. ಈಗಾಗಲೆ ನಿಮ್ಮ ಇಂಗಿತವೆಲ್ಲ ನನಗೆ ತಿಳಿದುಹೋಗಿರುತ್ತದೆ.''

ಅಮೃತರಾಯನು ಮನಸ್ಸಿನಲ್ಲಿ ಅತ್ಯಂತ ಅಂಜಿದನು. ''ಇವಳಿಗೆ ವಿಮಲೆಯ ಸಂಬಂಧದ ಸಂಗತಿಯು ಗೊತ್ತಾಗಿದೆಯೋ? ಅದನ್ನು ಇವಳು ಹೇಗೆ ತಿಳಿದಳು; ತಿಳಿದಿರದಿದ್ದರೆ ಇವಳಿಗೆ ಕಮಲಾಸುಂದರಿಯ ಗಾಡಿಯು ಹೇಗೆ ಸಿಗುತ್ತಿತ್ತು?'' ಎಂದು ಮನದಲ್ಲಿಯೇ ಆಲೋಚಿಸಹತ್ತಿದನು.

ಪತಿಯು ಏಟ್ಟಿಂದು ಮಾತನಾಡದ್ದನ್ನು ಕಂಡು ಹೇಮಾವತಿಯು—''ಇನ್ನು ಗೌಪ್ಯವಾಗಿಟ್ಟು ಪ್ರಯೋಜನವೇನು? ನಾನು ನನ್ನ ಸವತಿಯನ್ನು, ವಿಮಲಕ್ಕನನ್ನು, ಇಂದೇ ಕಂಡು ಬಂದಿರುವೆನು.''

ಆರ್ತಸ್ವರದಿಂದ ಅಮೃತರಾಯನು ಪತ್ನಿಯನ್ನು ಕುರಿತು "ಹೇಮಾ!" ಎಂದು ಕೂಗಿದ ಕೂಡಲೆ, ರುದ್ಧಕಂಠದಿಂದ ಹೇಮಾವತಿಯು ಗಂಡನ ಕೊರಳಿಗೆ ತೆಕ್ಕೆ ಹಾಯ್ದು, ಅಶ್ರುಪೂರ್ಣ ನಯನದಿಂದ—ನಾನು ಮನುಷ್ಯಳೇ ಅಲ್ಲವೇನು? ನಾನು ನಿಮ್ಮ ಹೆಂಡತಿಯಲ್ಲವೇ? ನೀವು ಯಾವಾಗಲೂ ಅನ್ಯಮನಸ್ಕರೂ, ಉದಾಸರೂ ಆದ ಭಾವವನ್ನು ತಿಳಿದು ಸುಮ್ಮನಿರಲಿಕ್ಕೆ ನಾನೇನು ಪಾಷಾಣಮೂರ್ತಿಯೋ?"

ಆಗ ಅಮೃತರಾಯನ ಬಾಯಿಂದ ಪುನಃಶಬ್ದಗಳೇ ಹೊರಡದಾದವು. ಅವನು ಮಹಾಪರಾಧಿಯಂತೆ ಸುಮ್ಮನಿದ್ದನು. ಅವನು ವಿಮಲೆಗೂ ಅಪರಾಧಿಯಾಗಿದ್ದನು; ಹೇಮಾವತಿಗೂ ಅಪರಾಧಿಯಾಗಿದ್ದನು. ವಿಮಲೆಯ ವಿಷಯಕವಾದ ಅವನ ಅಪರಾಧವು ಅಷ್ಟೊಂದು ಗುರುತರವಾದದ್ದಿದ್ದಿಲ್ಲ. ಆದರೆ ಹೇಮಾವತಿಯಲ್ಲಿ ಅವನು ಬುದ್ಧಿಪೂರ್ವಕ ಅಪರಾಧ ಮಾಡಿದ್ದನು. ಹಾಗೆ ಮಾಡಲಿಕ್ಕೆ ಅವನಿಗೆ ವಿಮಲೆಯ ಅನುರೋಧವೇ ಕಾರಣವಾಗಿತ್ತು. ತನ್ನ ಸಂಗತಿಯು ಹೇಮಾವತಿಗೆ ತಿಳಿದಕೂಡಲೆ ಅವಳು ಸವತಿಮತ್ಸರದಿಂದ ಗ್ರಸ್ತಳಾಗಿ ಅಕಾಂಡತಾಂಡವ ಮಾಡಬಹುದೆಂದು ಬಗೆದೇ ವಿಮಲೆಯು ಅದನ್ನು ಅವಳಿಗೆ ತಿಳಿಸಬಾರದೆಂದು ಗಂಡನನ್ನು ನಿರ್ಬಂಧಿಸಿದ್ದಳು; ಹಾಗು ಅಮೃತರಾಯನಾದರೂ ವಿಮಲೆಯ ಮಾತಿನಲ್ಲಿ ತುಸ ಮಟ್ಟಿಗಾದರೂ ತಥ್ಯಾಂಶವಿರುವದೆಂದು ನಂಬಿ ಆ ಸಂಗತಿಯನ್ನು ಬಚ್ಚಿಟ್ಟಿದ್ದನು; ಆದರೆ ವಿಮಲೆಯು ತನ್ನ ಸವತಿಗೆ ತನ್ನ ಸಂಗತಿಯು ತಿಳಿದು ದುಃಖವಾಗಬಾರದೆಂದು ಹೇಗೆ ಸಾವಧಾನವ ತಾಳಿದ್ದಳೋ, ಹಾಗೆಯೇ ಹೇಮಾವತಿಯಾದರೂ ಸಾವಧಾನತಾಳಿ ತನ್ನ ಸವತಿಯ ಸಂಗತಿಯನ್ನು ಬೇರೆ ಮುಖದಿಂದ ಸಂಗ್ರಹಿಸಿ, ಅವಳನ್ನು ತಮ್ಮ ಮನೆಗೆ ಕರೆಯಹೋಗಿದ್ದಳು. ಅಮೃತರಾಯನು ಪುಣ್ಯವಂತನಾದ್ದರಿಂದಲೇ ಅವನಿಗೆ ಇಂಥ ಸುಗುಣಿಯರಾದ ಪತ್ನಿದ್ವಯರು ಲಭಿಸಿದ್ದರು; ಆದರೆ ಅವನ ಒಳ್ಳೇ ಮಹದೆಶೆಯು ತೀರಿತಾದ್ದರಿಂದ, ಅವನ ಮನೋಭಿಲಾಷೆಯು ಕೈಗೂಡುವದು ಅವನ ದೈವದಲ್ಲಿದ್ದಂತೆ ತೋರಲಿಲ್ಲ!

ಅಮೃತರಾಯನು ಅಂದೇ ಮಧ್ಯಾಹ್ನ ಹೇಮಾವತಿಯ ಸಲಹೆಯಂತೆ ವಿಮಲೆಯನ್ನು ತನ್ನ ಮನೆಗೆ ಕರಕೊಂಡು ಬರುವದಕ್ಕಾಗಿ ಕಮಲಾಸುಂದರಿಯ ಮನೆಯಕಡೆಗೆ ನಡೆದನು. ಕೆಲದಾರಿ ಕ್ರಮಿಸುವಷ್ಟರಲ್ಲಿ ಅವನಿಗೆ ತನ್ನ ಪತ್ನಿದ್ವಯರ ಸುಗುಣಗಳ ಅತಿರಿಕ್ತಮನನದಿಂದ ಹರ್ಷವಾಯುವಾಗಿ ಅವನು ದಾರಿಯಲ್ಲಿಯೇ ಪ್ರಜ್ಞಾಹೀನನಾಗಿ ಬಿದ್ದನು. ಆಗ ಎದುರಿನಿಂದ ಬರುತ್ತಿದ್ದ ಅವನ ಒಬ್ಬ ಪರಿಚಯಸ್ಥನು ಅವನ ಆ ದೆಶೆಯನ್ನು ಕಂಡು, ಒಂದು ಬಾಡಿಗೆಯ ಗಾಡಿಯನ್ನು

ಮಾಡಿ, ಅವನನ್ನು ಅವನ ಮನೆಗೆ ತಂದು ಹಾಕಿದನು. ಅತ್ತೆ-ಮಾವಂದಿರೂ, ನೀಲಾಂಬಿಕೆ-ಹೇಮಾವತಿಯರೂ ಎಷ್ಟು ಉಪಚಾರ ಮಾಡಿದರೂ ಅವನಿಗೆ ಸ್ಮೃತಿಯುಂಟಾಗಲೊಲ್ಲದು. ಆಗ ದತ್ತಾತ್ರೇಯರಾಯನು ಒಬ್ಬ ಪ್ರಸಿದ್ಧ ಡಾಕ್ಟರನನ್ನು ಕರೆಯಿಸಿ ಅವನಿಗೆ ಅಮೃತರಾಯನ ಅವಸ್ಥೆಯನ್ನು ತೋರಿಸಿದನು. ಡಾಕ್ಟರನು ನಾನಾ ಉಪಚಾರಗಳಿಂದ ಇವನಿಗೆ ಸ್ಮೃತಿಯುಂಟಾಗುವ ಕುರಿತು ಪ್ರಯತ್ನಿಸಿದನು. ಆದರೆ ಉಪಯೋಗವೇನೂ ಆಗದೆ, ಎಲ್ಲವೂ ನಿರರ್ಥಕವಾಯಿತು. ಕಟ್ಟಕಡೆಗೆ ಅವನು ಹೇಳಿದ್ದೇನಂದರೆ,''ಇವನಿಗೆ ಮಸ್ತಕೋನ್ಮಾದವಾಗಿರುವದರಿಂದ ಅದು ಯಾವ ಬಾಹ್ಯ ಉಪಚಾರಗಳಿಂದಲೂ ಇಳಿಯಲಾರದು. ರೋಗಿಯ ಪುಪ್ಪುಸದಿಂದ ಸಾಕಷ್ಟು ರಕ್ತಸ್ರಾವವಾದರೆ ರೋಗಿಗೆ ತುಸ ಹಗುರಾಗಿ ಸ್ಮೃತಿಯುಂಟಾಗಬಹುದು; ಆದರೆ ರಕ್ತಸ್ರಾವವನ್ನು ಬಲಪೂರ್ವಕವಾಗಿ ಉಂಟುಮಾಡಿದರೆ, ಇನ್ನೆರಡು ದಿನಗಳಿಗೆ ಪ್ರಾಣೋತ್ಕ್ರಮಣವಾಗಬಹುದಾದ ರೋಗಿಯು ಕೂಡಲೆ ಗತಪ್ರಾಣನಾಗಬಹುದು. ಆದ್ದರಿಂದ ನೀವು ಇವನಿಗೆ ಏನೂ ತಿಂದರೆ ಕೊಡಬೇಡಿರಿ. ದೇವರ ದಯೆಯಾದರೆ, ಇವನು ಈ ಬೇನೆಯೊಳಗಿಂದ ಸಹಜವಾಗಿ ಏಳುವನು; ಇಲ್ಲದಿದ್ದರೆ ನನ್ನಂಥ ಶತಚಿಕಿತ್ಸಕರಿಂದಲೂ ಏನೂ ಪ್ರಯೋಜನವಾಗದು.''

ಡಾಕ್ಟರನು ಹೋದಮೇಲೆ ಹೇಮಾವತಿಯು ಗಂಡನ ಆಕಸ್ಮಿಕ ವ್ಯಾಧಿಯ ಸಂಗತಿಯನ್ನು ಪತ್ರಮುಖದಿಂದ ಆಗಲೆ ವಿಮಲೆಗೆ ತಿಳಿಸಿದಳು. ವಿಮಲೆಯಾದರೂ ಮೌಹಾರಿ ಕೂಡಲೆ ಕಮಲಾಸುಂದರಿಯೊಡನೆ ಅಲ್ಲಿಗೆ ಬಂದಳು. ವಿಮಲೆಯು ಮನೆಗೆ ಬಂದಕೂಡಲೆ ಹೇಮಾವತಿಯು ಅವಳನ್ನು ತೆಕ್ಕೆಬಿದ್ದು ಗಟ್ಟಿಯಾಗಿ ಅಳಲಾರಂಭಿಸಿದಳು. ವಿಮಲೆಯಾದರೂ ಕಣ್ಣೀರನ್ನು ಹಾಕಿದಳು; ಆದರೆ ದುಃಖದಪ್ರಸಂಗಗಳಲ್ಲಿ ಮನಸ್ಸನ್ನು ಎಷ್ಟು ಬಿಗಿಹಿಡಿದು ಹೇಗೆ ನಡೆಯಬೇಕೆಂಬದು ಅವಳಿಗೆ ಬಹು ದಿನಗಳಿಂದ ಅಭ್ಯಾಸವಾಗಿತ್ತಾದ್ದರಿಂದ, ಅವಳು ಶೀಘ್ರವೇ ತನ್ನ ದುಃಖವನ್ನು ನಿಲ್ಲಿಸಿ, ಹೇಮಾವತಿಯೊಡನೆ ಪತಿಯ ಉಪಚಾರಕ್ಕೆ ತತ್ಪರಳಾದಳು. ಕಮಲಾಸುಂದರಿಯು ಅಂದು ಸಂಜೆಯವರೆಗೆ ಅಲ್ಲಿಯೇ ಇದ್ದು, ನಾಳೆ ಬೆಳಿಗ್ಗೆ ಪುನಃ ಬರುವೆನೆಂದು ಹೇಳಿ ಹೋದಳು.

ಹರ್ಷವಾಯುವಾಗಿ ಸಂಪೂರ್ಣ ಎರಡು ದಿನಗಳಾದರೂ ಅಮೃತರಾಯನ ಉನ್ಮಾದವು ಕೊಂಚವೂ ಕಡಿಮೆಯಾಗಲಿಲ್ಲ. ಆದರೆ ಆಲ ತಾಸುಗಳು ಕಳೆದನಂತರ, ಮಧ್ಯರಾತ್ರಿಯಲ್ಲಿ ಅಮೃತರಾಯನ ಬಾಯಿಂದ ತಂಬಿಗೆಗಟ್ಟಲೆ ರಕ್ತವು ಹೊರಹೊರಟಿತು. ಆ ಭಯಂಕರ ಶೋಣಿತವನ್ನು ನೋಡಿ, ನಿಲಾಂಬಿಕೆ, ಮುರಾರಿ

ಮುರಾರಿಯ ತಂದೆ-ತಾಯಿ ಇವರೆಲ್ಲರಿಗೆ ಅಲ್ಪಸ್ವಲ್ಪ ಕಾಲದವರೆಗೆ ಮೂರ್ಛೆಯು ಬಂದಿತು. ಆದರೆ ಕಲ್ಲೆದೆಯಿಂದ ಪತಿಸೇವಾರತರಾಗಿದ್ದ ಆ ಸವತಿಯರಿಗೆ ಏನೂ ಆಗಲಿಲ್ಲ. ರಕ್ತಸ್ರಾವವಾಗಹತ್ತಿದಕೂಡಲೆ ಡಾಕ್ಟರನು ಹೇಳಿದ್ದಂತೆ ಅವರು ಗಂಡನ ಕಣ್ಣುಕಟ್ಟಿ, ಮಾಡಬೇಕಾದ ಉಪಚಾರಗಳನ್ನು ಮಾಡಿದರು. ಯಥಾವ ಕಾಶದಲ್ಲಿ ಸ್ರಾವವು ನಿಲ್ಲಲು, ಮಲಗಿದ್ದವನಂತೆ ಅಮೃತರಾಯನು ಚಟಕ್ಕನೆ ಎದ್ದು ಕುಳಿತನು. ರಕ್ತಸ್ರಾವವಾದನಂತರ ರೋಗಿಯನ್ನು ಏಳುಗೊಡಬಾರದು; ಇಷ್ಟೇ ಅಲ್ಲ, ಅವನನ್ನು ಮಾತು ಕೂಡ ಆಡಗೊಡಬಾರದೆಂದೂ, ಇದಕ್ಕೆ ತಪ್ಪಿದರೆ ರೋಗಿಯು ಮುಂದೆ ಯಾವ ಉಪಚಾರಗಳಿಂದಲೂ ಗುಣವಾಗದೆ, ಕೂಡಲೆ ಮರಣಹೊಂದಬಹುದೆಂದೂ ಡಾಕ್ಟರನು ತಿಳಿಸಿದ್ದರಿಂದ, ಆ ಸವತಿದ್ವಯರು ಅಮೃತರಾಯನನ್ನು ಏಳಗೊಡಬಾರದೆಂದು ಬಹಳ ಪ್ರಯತ್ನಿಸಿದರು; ಆದರೆ ಅವರೀರ್ವರ ಸೌಭಾಗ್ಯವಿಹೀನತೆಯ ಮೂಲಕ ಅದು ಸಾಧ್ಯವಾಗದೆ, ಅವನು ತಟ್ಟನೆ ಎದ್ದು ಕುಳಿತನು!

ಅಮೃತರಾಯನು ಹಾಗೆ ಸಶಕ್ತನಂತೆ ಒಮ್ಮೆಲೆ ಎದ್ದು ಕುಳಿತದರಿಂದ, ತೀರ ಅಶಕ್ತವಾಗಿದ್ದ ಅವನ ಅಂತರಿಂದ್ರಿಯಗಳಿಂದ ಅವನ ಶರೀರದ ತೋಲವನ್ನು ಸಂಬಾಳಿಸಿ ಹಿಡಿಯುವದಾಗಲಿಲ್ಲ. ಆಗ ಅವನಿಗೆ ಪುನಃ ಮೂರ್ಛೆಯು ಆವರಿಸ ಹತ್ತಿತು. ಆದರೂ ಅವನು ಅಷ್ಟರಲ್ಲಿ ತನ್ನ ಇಬ್ಬರು ಹೆಂಡಂದಿರನ್ನೂ ತನ್ನ ಎಡ-ಬಲ ಪಾರ್ಶ್ವಗಳಲ್ಲಿ ಕುಳ್ಳಿರಿಸಿಕೊಂಡು, ಅವರೀರ್ವರನ್ನೂ ಒಮ್ಮೆ ಪ್ರೇಮಲದೃಷ್ಟಿಯಿಂದ ನೋಡಿದನು. ಆ ಸವತಿದ್ವಯರಾದರೂ ತಮ್ಮ ಸೌಭಾಗ್ಯತಿಲಕವನ್ನು ಮನಸ್ಸಿನಲ್ಲಿ ಕೊಂಡಾಡುತ್ತ ಗಂಡನ ಬಳಿಯಲ್ಲಿ ಕ್ಷಣಕಾಲ ಕುಳಿತಿದ್ದರು. ದೀಪವು ನಂದುವಾಗ ಹೇಗೆ ಒಳ್ಳೇ ಪ್ರಕಾಶಮಾನವಾಗಿ ಉರಿಯುವದೋ, ಹಾಗೆಯೇ ಆಗ ಅಮೃತ ರಾಯನ ಸ್ಥಿತಿಯಾಗಿತ್ತು. ಉತ್ತರಕ್ಷಣದಲ್ಲಿ ಅಮೃತರಾಯನಿಗೆ ಬಿಕ್ಕು ಹತ್ತಿತು. ಆದರಿಂದ ಅವನು ನಿರ್ವಿಣ್ಣನಾದನಲ್ಲದೆ, ತನ್ನ ಅವಸಾನ ಕಾಲವು ತೀರ ಸಮೀಪಿಸಿ ತೆಂಬದನ್ನು ತಿಳಕೊಂಡನು. ಆಗ ಅವನು ತನ್ನ ಒಂದು ಕೈಯಿಂದ ವಿಮಲೆಯ ಕೈಯನ್ನೂ, ಮತ್ತೊಂದು ಕೈಯಿಂದ ಹೇಮಾವತಿಯ ಕೈಯನ್ನೂ ಹಿಡಿದು ಹೇಮಾ ವತಿಯನ್ನು ಕುರಿತು—"ಹೇಮಾ, ನೀನು ನಿನ್ನ ಈ ಅಕ್ಕನನ್ನು ನೋಡಿಕೊಂಡು ಇರು" ಎಂದೂ, ವಿಮಲೆಯನ್ನುದ್ದೇಶಿಸಿ—"ವಿಮಲೇ, ಹೇಮಾವತಿಯು ಇನ್ನೂ ಚಿಕ್ಕವಳು. ಇವಳನ್ನು ನಾನು ನಿನಗೊಪ್ಪಿಸಿ ಹೋಗುತ್ತೇನೆ. ದುರ್ಭಾಗ್ಯದ ಮೂಲಕ ನಿಮ್ಮಂತಹ ಸುಗುಣಸತ್ನಿದ್ವಯರನ್ನು ಕೂಡಿಕೊಂಡು ಸಂಸಾರ ಮಾಡು

ವದು ನನಗಾಗಲಿಲ್ಲ. ಹೋಗುವೆನು —ಸ-ನ್ನೀ-ಕಡೆಯ -ಇಚ್ಛೆ-ಯು-ಪ್ರ-ಪ್ರ-ಕಾ-ಕಾ-ಕಾ-ರ-ರ-ರ-ರ—ನಿ-ಯಿ-ಯಿ-.........ರಿ''

ಆ ಸೌಭಾಗ್ಯವಿಹೀನ ಸವತಿಯ ಹಣೆಯ ಮೇಲಿನ ಆ ಅಮೃತರೂಪದ ಸೌಭಾಗ್ಯ ತಿಲಕವು ಕೂಡಲೆ ಸರ್ವ ಭಕ್ಷಕನಾದ ಆ ಮಹಾನೀಚ ಕಾಲನ ಉದರಸ್ಥವಾಗಿ ಹೋಯಿತು!!!

* * * * * * * * * * * * *

ಅಮೃತರಾಯನ ಮರಣದಿಂದ ವಿಮಲೆಯು ಅತ್ಯಂತ ದುಃಖಿತಳಾಗಿ ಬಿದ್ದು ಕೊಂಡಳು. ಹೇಮಾವತಿಯಂತೂ ಗಂಡನ ಕಡೆಯ ಸಂದೇಶವು ಕರ್ಣಪಾತವಾಗುವಷ್ಟರಲ್ಲಿ ನಿಶ್ಚೇಷ್ಟಿತಳಾಗಿ ಬಿದ್ದವಳು ಮುಂದೆ ಎರಡು ದಿನಗಳ ವರೆಗೂ ಸ್ಮೃತಿ ಹೊಂದಲಿಲ್ಲ. ಅವಳನ್ನು ಎಬ್ಬಿಸಿ ಅವಳಿಗೆ ಕಾಲಕ್ಕೆ ಸರಿಯಾದ ನಾಲ್ಕು ಸಮಾಧಾನದ ಮಾತುಗಳನ್ನು ಹೇಳಬೇಕೆಂದು ಅವಳ ತಾಯಿ-ತಂದೆಗಳು ಅತ್ಯಂತ ಸಾಹಸಪಟ್ಟರು. ಪ್ರಯೋಜನವೇನೂ ಆಗದೆ, ಕಡೆಗೆ ಅವರು ವಿಮಲೆಯಿಂದಲೇ ಅಮೃತರಾಯನ ಔರ್ಧ್ವದೇಹಿಕ ಕ್ರಿಯೆಗಳನ್ನು ನೆರವೇರಿಸಿದರು.

ಕಾಲನ ಮಹಿಮೆಯು ವಿಚಿತ್ರವಾದದ್ದು! ಅಂತೇ ಜಗತ್ತಿನ ಆಗು-ಹೋಗುಗಳ ಕಾಲಕ್ಕೆ ಜಗತ್ತು ಅಂದರೆ ಜಗತ್ತಿನ ಜನರು ಏಕೋಪ್ರಕಾರವಾಗಿ ಮರಗುತ್ತ ಇಲ್ಲವೆ ದುಃಖಿಸುತ್ತ ಕೂಡ್ರದೆ, ತುಸ ದಿವಸಗಳಲ್ಲಿಯೇ ಮತ್ತೆ ಹೊಸ ಕಾರ್ಯಾಸಕ್ತರಾಗಿ ಮುಂಚಿನ ಆಗು-ಹೋಗುಗಳನ್ನು ಮರೆತು ಬಿಡುತ್ತಿರುತ್ತಾರೆ. ಇದರಂತೆಯೇ ನಮ್ಮ ವಿಮಲೆ ಹಾಗು ಹೇಮಾವತಿಯರ ಗತಿಯಾಯಿತೆಂದು ವಾಚಕರಿಗೆ ತಿಳಿಸುವ ಕಾರಣವಿಲ್ಲ. ಅಮೃತರಾಯನು ಮರಣಹೊಂದಿದ ಕೆಲ ದಿನಗಳ ವರೆಗೆ ಅವರ ದುಃಖವು ಉಕ್ಕೇರುವ ಸಮುದ್ರದಂತೆ ಭರತಿ ಹೊಂದುತ್ತಿತ್ತಾದರೂ, ತುಸುದಿವಸಗಳಲ್ಲಿಯೇ ಅದಕ್ಕೆ ಓಹಟಿಯರೂಪವು ಪ್ರಾಪ್ತವಾಯಿತು. ಅವನ ಉತ್ತರಕ್ರಿಯಾದಿಗಳು ಸಂಪೂರ್ಣವಾದನಂತರ, ದತ್ತಾತ್ರಯರಾಯರು ಹೇಮಾವತಿಯನ್ನೂ, ವಿಮಲೆಯನ್ನೂ ತಮ್ಮೊಡನೆ ಪುಣೆಗೆ ಕರೆದೊಯ್ಯಬೇಕೆಂದು ಅವರ ಬಳಿಗೆ ಪ್ರಸ್ತಾಪ ತೆಗೆದರು. ತಮ್ಮ ಮಗಳನ್ನೊಬ್ಬಳನ್ನೇ ಕರೆದೊಯ್ಯುವದು ಈಗ ಸಮಂಜಸವಾಗದ್ದರಿಂದ ತನ್ನನ್ನು ಔಪಚಾರಾರ್ಥವಾಗಿ ಇವರು ಕರೆಯುತ್ತಿರುವರೆಂಬದನ್ನು ತಿಳಿದ ವಿಮಲೆಯು ಅವರನ್ನು ಕುರಿತು ಹೇಳಿದಳೇನಂದರೆ—''ಬಾಬಾಜಿಯವರೇ, ಈ ಖೋಡಿ ಸೌಭಾಗ್ಯವಿಹೀನ ವಿಮಲೆಯನ್ನು ನಿಮ್ಮಲ್ಲಿಗೆ ಏತಕ್ಕೆ ಕರೆದೊಯ್ಯುತ್ತೀರಿ? ನಾನು ಹುಟ್ಟಾ ದುರ್ಭಾಗ್ಯಳು. ಬಾಲ್ಯದಲ್ಲಿಯೇ ನನಗೆ ಪತಿ

ವಿಯೋಗವುಂಟಾಗಿತ್ತು. ಪ್ರೀತಿಯಿಂದ ಸಲುಹಿದ ತಂದೆ-ತಾಯಿಗಳು ನನ್ನ ದುರ್ದೈವದ ಮೂಲಕ ಬಹುದಿನಗಳ ವರೆಗೆ ಬಾಳಲಿಲ್ಲ. ಇಷ್ಟೇ ಅಲ್ಲ, ನನ್ನ ದುರ್ದೈವದ ಅಲ್ಪ-ಸ್ವಲ್ಪ ಶಕೆತಾಕಿ ನನ್ನ ಪ್ರಿಯ ಗೆಳತಿಯಾದ ಕಮಲಾಸುಂದರಿಗೂ ಪತಿವಿಯೋಗವುಂಟಾಗಿರುತ್ತದೆ; ಹಾಗು ನನ್ನ ದುರ್ದೈವದ ಕಟ್ಟಕಡೆಯ ಮೆಟ್ಟಲೆಂದರೆ, ಮೊನ್ನೆ ಆದ ನನ್ನ-ಅವರ ಆಕಸ್ಮಿಕ ಭೆಟಿಯ ಯೋಗದಿಂದ ಅವರು ಅಕಾಲದಲ್ಲಿ ನಮ್ಮೆಲ್ಲರನ್ನೂ ನಡುನೀರಲ್ಲಿಬಿಟ್ಟು ಹೋದದ್ದು ಇಂದಿನವರೆಗೆ ನನ್ನ ಸಹವಾಸದಿಂದ ಯಾರಿಗೂ ಸುಖವಾಗಿರುವದಿಲ್ಲ. ಆದ್ದರಿಂದ ಪ್ರಿಯ ಬಾಬಾಜಿಯವರೇ, ಈ ಘೋರಿ, ದುರ್ಭಾಗ್ಯ, ಸೌಭಾಗ್ಯವಿಹೀನ ವಿಮಲೆಯ ಅರಿಷ್ಟವನ್ನು ಮತ್ತೆ ನಿಮ್ಮ ಮನೆಗೇತಕ್ಕೆ ಕರೆದೊಯ್ಯುವಿರಿ? ನಾನು ನಿಮ್ಮಲ್ಲಿಗೆ ಇದೇ ಕಾರಣದ ಸಲುವಾಗಿ ಬರಲಾರೆನು. ಇನ್ನು ತುಸದಿವಸಗಳಲ್ಲಿ ಕಮಲಾಸುಂದರಿಯ ಅನಾಥಾಲಯವು ಹೇಗೂ ತೆರೆಯಲ್ಪಡತಕ್ಕದ್ದದೆ. ಅದರಲ್ಲಿ ನಾನು ಆಜೀವಪರ್ಯಂತ ವಾಸವಾಗಿದ್ದು, ನನ್ನಿಂದ ಏನಾದರೂ ಲೋಕಸೇವೆ ಆದರೆ ಮಾಡುವೆನು. ಇಲ್ಲದಿದ್ದರೆ ಕಡೆಗೊಂದು ದಿನ ಈ ವಾರಣಾಸೀ ಕ್ಷೇತ್ರದಲ್ಲಿ, ಯಾವ ಸ್ಥಳದಲ್ಲಿ ಅಗಲಿ ಹೋಗಿದ್ದ ನನ್ನ ಪತಿಯು ೨೦ ವರ್ಷಗಳನಂತರ ನನಗೆ ಭೇಟಿಯಾಗಿದ್ದನೋ, ಆ ಸ್ಥಳದಲ್ಲಿ, ಬಿದ್ದು ಹೋಗುವೆನು.''

ನಂತರ ದತ್ತಾತ್ರಯರಾಯನು ಹೇಮಾವತಿಯನ್ನೊಬ್ಬಳನ್ನೇ ತಮ್ಮೂರಿಗೆ ಹೊರಡಿಸಿಕೊಂಡು ಹೋಗುವ ಸಿದ್ಧತೆಮಾಡತೊಡಗಿದನು. ಆದರೆ ಹೇಮಾವತಿಯು ತಂದೆಯನ್ನು ಕುರಿತು ನಿಷ್ಕರ್ಷವಾಗಿ ಹೇಳಿಬಿಟ್ಟಳೇನಂದರೆ—''ಅಪ್ಪಾ, ನಾನು ನನ್ನ ಅಕ್ಕನನ್ನು ಬಿಟ್ಟು ನಿಮ್ಮಲ್ಲಿಗೆ ಬರಲಾರೆನು. ಸಾಯುವಕಾಲಕ್ಕೆ ನನ್ನ ಪತಿಯು ನನ್ನನ್ನು ನಿಮಗೆ ಒಪ್ಪಿಸಿ ಹೋಗಿರದೆ, ನನ್ನ ಪ್ರಿಯಭಗಿನಿಯ ಕೈಯಲ್ಲಿ ಕೊಟ್ಟು ಹೋಗಿರುತ್ತಾನೆ. ಆದುದರಿಂದ ನೀವು ನನ್ನನ್ನು ಇಲ್ಲದ ಮೋಹಪಾಶದಲ್ಲಿ ಕೆಡವಲು ಯತ್ನಿಸದೆ, ನನ್ನ ಭಗಿನಿಯ ಬಳಿಯಲ್ಲಿಯೇ ಇರಗೊಡಿರಿ. ಇದರಿಂದ ನನಗೂ ನಿಮಗೂ ಕೂಡಿಯೇ ಶ್ರೇಯಸ್ಕರವಾಗುತ್ತದೆ.'' ಮಗಳ ಈ ನಿರ್ಭಿಡೆಯ ಜವಾಬನ್ನು ಕೇಳಿ ದತ್ತಾತ್ರಯರಾಯರು ತಮ್ಮ ಹೆಂಡತಿ, ಮುರಾರಿ ಹಾಗು ನೀಲಾಂಬಿಕೆಯರೊಂದಿಗೆ ಅಂದೇ ತಮ್ಮೂರಿಗೆ ಹೊರಟು ಹೋದರು. ಸೌಭಾಗ್ಯವಿಹೀನ ಹೇಮಾವತಿ ಹಾಗು ವಿಮಲೆಯರು ತುಸ ದಿನಗಳ ವರೆಗೆ ಅದೇ ಮನೆಯಲ್ಲಿದ್ದರು. ಬಳಿಕ ಕಮಲಾಸುಂದರಿಯು ಕಟ್ಟಿಸುತ್ತಿದ್ದ ಆ ಅನಾಥಾಲಯ ಹಾಗು ಸ್ವಾಮಿ ಮಂದಿರಗಳು ಪೂರೈಸಲು, ಕಮಲಾಸುಂದರಿಯು ತಾನೇ ಮೊದ

ಲನೆಯು ಅನಾಥಳೆಂದು ಆ ಆಲಯದಲ್ಲಿ ಪ್ರವೇಶಿಸಿ, ವಿಮಲೆ ಹಾಗು ಹೇಮಾವತಿಯು ರನ್ನೂ ಅಲ್ಲಿಗೆ ಬರಮಾಡಿಕೊಂಡಳು!

## ಇಪ್ಪತ್ತನೆಯ ಪರಿಚ್ಛೇದ.

### ಸೌಭಾಗ್ಯ ತಿಲಕ.

ಶಿವರಾಯನು ಪತ್ತೆಯಿಲ್ಲದಂತೆ ಹೊರಟು ಹೋಗಿ ಒಂದು, ಎರಡು, ಮೂರು ಅನ್ನುತ್ತ ಸಂಪೂರ್ಣವಾಗಿ ಹನ್ನೊಂದು ವರ್ಷಗಳು ಕಳೆದು ಹೋದವು. ಗಂಡನು ಪತ್ತೆಯಿಲ್ಲದಂತಾದರೆ, ಆತನ ಹೆಂಡತಿಯು ಹನ್ನೆರಡು ವರ್ಷಗಳವರೆಗೆ ಅವನ ದಾರೀ ನೋಡಿ, ನಂತರ ದರ್ಭೆಯಿಂದ ಮಾಡಿದ ಪತಿಯ ಮೂರ್ತಿಯನ್ನು ಅಗ್ನಿಯಲ್ಲಿ ದಹನಮಾಡಿ ಅವನ ಉತ್ತರಕ್ರಿಯಾದಿಗಳನ್ನು ಮಾಡಬೇಕೆಂದು ನಮ್ಮ ಹಿಂದೂ ಧರ್ಮಶಾಸ್ತ್ರದ ಕಟ್ಟಳೆಯಿರುತ್ತದಷ್ಟೆ? ತನ್ನ ಪತಿಯು ಇಲ್ಲದಂತಾಗಿದ್ದರೂ ಅವನು ಸತ್ತಿರದೆ, ಎಲ್ಲಿಯಾದರೂ ಜೀವದಿಂದಿರುವನೆಂದು ಈಗಲೂ ಕಮಲಾಸುಂದರಿಯ ಮನಸ್ಸು ಅವಳಿಗೆ ಸೂಚಿಸುತ್ತಿತ್ತು. ಆದರಿಂದ ಅವನು ಹನ್ನೆರಡು ವರ್ಷಗಳು ಮುಗಿಯುವಷ್ಟರಲ್ಲಿ ಬರದಿದ್ದರೆ, ಧರ್ಮಶಾಸ್ತ್ರದ ಕಟ್ಟಳೆಗನುಸಾರವಾಗಿ, ಆದರೆ ತನ್ನ ಮನಸ್ಸಿನ ವಿರುದ್ಧವಾಗಿ ತನ್ನ ಪತಿಯ ಹೆಸರಿನ ಕುಶಮೂರ್ತಿಯನ್ನು ಸುಟ್ಟು ಮುಂದಿನ ಕೆಲಸಗಳನ್ನು ತಾನು ಹೇಗೆ ಮಾಡಬೇಕು? ಬಿಟ್ಟರೂ ನಡೆಯಲಾರದು. ಈ ಬಗೆಯ ಇಕ್ಕಟ್ಟಿನ ಪೇಚಿನಲ್ಲಿಸಿಕ್ಕು ಇತ್ತಿತ್ತಲಾಗಿ ಆಕೆಯು ವಿಪ್ರಿಯಮಾಣಳಂತೆ ತೋರಹತ್ತಿದಳು.

ಒಂದುದಿನ ಕಮಲಾಸುಂದರಿಯು ತನ್ನ ಈ ಭಾವೀಸ್ಥಿತಿಯ ಬಗ್ಗೆ ಆಲೋಚಿಸಿದುದೇನಂದರೆ—''ಪತಿಯ ಕುಶಮೂರ್ತಿಯನ್ನು ದಹಿಸಿ ಶಾಸ್ತ್ರಸಮ್ಮತವಾದ ಮಾರ್ಗದಿಂದ ನಡೆಯಹೋದರೆ, ನನ್ನ ಸಾವಿತ್ರೀ ವ್ರತದ ಉದ್ಯಾಪನೆಯು ಆಗಲಾರದು; ಉದ್ಯಾಪನವಾಗದಿದ್ದರೆ ವ್ರತಗ್ರಹಣ ಮಾಡಿದ್ದು ವ್ಯರ್ಥವಾದಂತಾಗುವದು. ಈ ಪವಿತ್ರ ವ್ರತವನ್ನು ವ್ಯರ್ಥವಾಗಗೊಡುವದು ಸರಿಯಲ್ಲ; ಆದರೆ ವ್ರತದ ಉದ್ಯಾಪನದ ದಿವಸವೇ ಅವರು ಅಜ್ಞಾತವಾಗಿ ಹನ್ನೆರಡು ವರ್ಷಗಳು ಪೂರ್ಣವಾಗುವವು! ಈ ಪ್ರಸಂಗದಲ್ಲಿ ನಾನು ಏನು ಮಾಡಬೇಕು? ಯಾವ

ಮಾರ್ಗವನ್ನು ಹಿಡಿಯಬೇಕು? ವ್ರತೋದ್ಯಾಪನದ ಸಂಗಡ ನನ್ನ ಜೀವಿತದ ಉದ್ಯಾಪವನ್ನು ಕೂಡ ಮಾಡಿಕೊಂಡು ಬಿಡಲೊ? ಇಲ್ಲದಿದ್ದರೆ ನನ್ನ ಜೀವಂತ ಪತಿಯ ಹೆಸರಿನ ಕುಶಮೂರ್ತಿಯನ್ನು ದಹಿಸಿ, ಅವರಿಗೆ ಪಿಂಡಾದಿಗಳನ್ನರ್ಪಿಸಲೋ? ಇದು ನನ್ನಿಂದ ಎಂದೂ ಸಾಧ್ಯವಾಗಲಾರದು. ಆದ್ದರಿಂದ ನಾನು ಅಂದು ಮೊದಲು ಸಾವಿತ್ರೀ ವ್ರತದ ಉದ್ಯಾಪನವನ್ನು ಮುಗಿಸಿ, ಕೂಡಲೆ ಯಾವ ಬಗೆಯಿಂದಲಾದರೂ ನನ್ನ ಜೀವಿತದ ಉದ್ಯಾಪನವನ್ನು ಮಾಡಿಬಿಡುವ ಏರ್ಪಾಡು ಮಾಡಬೇಕು. ಈ ಅತ್ಯಂತ ಪವಿತ್ರ ಹಾಗು ಹೆಣ್ಣುಮಕ್ಕಳ ಪ್ರಾಮುಖ್ಯ ವ್ರತವನ್ನು ಮಾಡುತ್ತಿದ್ದ ಸತೀಸಾವಿತ್ರಿಯು ತನ್ನ ಮೃತಪತಿಯನ್ನು ಮಹಾಕಾಲನ ದವಡೆಯೊಳಗಿಂದ ಸಹ ಬಿಡಿಸಿ, ತನ್ನ ಸೌಭಾಗ್ಯ ತಿಲಕವನ್ನು ಕಾಯ್ದುಕೊಂಡಿರುವಳು. ನಾನಾದರೋ ಈ ವ್ರತವನ್ನು ಈಗ ಹದಿನಾಲ್ಕು ವರ್ಷಗಳಿಂದ ಒಂದೇಸವನೆ ಮಾಡುತ್ತಿದ್ದರೂ, ಈ ಪಾಪಿಷ್ಠಳಿಗೆ ತನ್ನ ಜೀವಂತಪತಿಯು ಕೂಡ ಲಭಿಸಬಾರದೆ? ತಾಯೀ, ಸತೀ ಸಾವಿತ್ರೀ, ಈ ದೀನ ಅಬಲೆಯ ಕಡೆಗೆ ಒಂದಿಷ್ಟು ಕರುಣಾಮಯ ದೃಷ್ಟಿಯಿಂದ ನೋಡು. ನಾನು ವ್ರತದ ಉದ್ಯಾಪನ ಮಾಡಿ ನಿನ್ನ ವರದ ವಾಣಿಯನ್ನು—ಅಂದರೆ ಯಾವ ಸತಿಯು ಈ ವ್ರತವನ್ನು ಹದಿನಾಲ್ಕು ವರ್ಷಗಳ ವರೆಗೆ ತಪ್ಪದೆ ಮಾಡುವಳೋ ಅವಳು ಅಖಂಡ ಸೌಭಾಗ್ಯವತಿಯಾಗುವಳು, ಎಂಬುದನ್ನು—ಒರೆಗೆ ಹಚ್ಚುವದಕ್ಕಾಗಿ ಆ ವರೆಗೆ ಬದುಕಿಕೊಂಡಿರುವೆನೇ ವಿನಃ, ಪತಿಯ ಔರ್ಧ್ವದೇಹಿಕ ಕ್ರಿಯೆಗಳನ್ನು ಮಾಡಲಿಕ್ಕೆ ಬದುಕಿರಲಾರೆನು. ಆದ್ದರಿಂದ ತಾಯೀ, ಸಾವಿತ್ರೀ, ವ್ರತದ ಉದ್ಯಾಪನೆಯ ಒಳಗಾಗಿ ನನ್ನ ಪತಿಯನ್ನು ನನಗೆ ದೊರಕಿಸಿಯಾದರೂ ಕೊಡು; ಇಲ್ಲವೆ ನಿನ್ನ ಈ ವ್ರತೋದ್ಯಾಪನವಾದ ಉತ್ತರಕ್ಷಣದಲ್ಲಿಯೋ ನನ್ನನ್ನು ನಿನ್ನ ಬಳಿಗಾದರೂ ಕರೆದೊಯ್ಯು."

ಹೀಗೆ ಆ ಸತಿಯು ತನ್ನ ಪತಿವಿಷಯದ ಚಿಂತೆಯಿಂದ ಒಂದೇಸವನೆ ಕೊರಗುತ್ತಿದ್ದಳು. ಆದರೆ ಅವಳು ತನ್ನ ಪತಿಯ ಅಸ್ತಿತ್ವದ-ಜೀವಂತನಾಗಿರುವ-ವಿಷಯವಾಗಿ ಎಂದೂ ಅವಿಶ್ವಾಸವ ಪಡಲಿಲ್ಲ. ಅವಳ ಪತಿ ದರ್ಶನದ ಆಶೆಯು-ಜೀವವಿರುವವರೆಗೆ ಒಮ್ಮೆಯಾದರೂ ಆದರೆ ಸಾಕೆಂಬ ಅಭಿಲಾಷೆಯು-ಕುಂದಿರಲಿಲ್ಲ. ಆದರಿಂದ ಪತಿಯು ಅಜ್ಞಾತವಾಗಿ ಹೆಚ್ಚು ಹೆಚ್ಚು ದಿನಗಳಾದಹಾಗೆ ಅವಳ ಚಿಂತಾಕಾತರತೆಯು ಶುಕ್ಲಪಕ್ಷದ ಚಂದ್ರಮನಂತೆ ಒಂದೇಸವನೆ ಅಭಿವೃದ್ಧಿಯಾಗುತ್ತಿತ್ತು. ಹೀಗಿರಲು, ಲೋಕದ ಜನರ ಸುಖ-ದುಃಖಗಳಿಗಾಗಿ ಸ್ವಲ್ಪವೂ ತಡೆಯದೆ ಸವೇಗವಾಗಿ ಸಾಗಿದ್ದ ಮಹಾಕಾಲನು, ತನ್ನ ಕಾಲ ರಥವನ್ನು ಶಿವರಾಯನು

ಅಜ್ಞಾತವಾಗಿ ಹೋಗಿ ಹನ್ನೆರಡು ವರ್ಷಗಳು ಮುಗಿಯುವ ಸ್ಥಳದ ಸಮೀಪಕ್ಕೆ ತಂದು ನಿಲ್ಲಿಸಿದನು. ಬರುವ ಜ್ಯೇಷ್ಠಶುದ್ಧ ಪೌರ್ಣಿಮೆಗೆ ಅಂದರೆ ಸಾವಿತ್ರೀವ್ರತಕ್ಕೆ ಆ ಹನ್ನೆರಡು ವರ್ಷಗಳ ಅವಧಿಯು ಪೂರಯಿಸುತ್ತಿತ್ತು. ಅಂದೇ-ಆ ಶುಭ ದಿನದಲ್ಲಿಯೇ ಕಮಲಾಸುಂದರಿಯು ತನ್ನ ಪತಿವಿಷಯಕವಾದ ಆ ಅಶುಭ ಕಾರ್ಯಗಳನ್ನು ಕೈಕೊಳ್ಳಬೇಕಾಗಿತ್ತು! ಆದರಿಂದ ಅವಳು ಅದೇ ಜ್ಯೇಷ್ಠಶುದ್ಧ ಬಿದಿಗೆಯ ಸುಮುಹೂರ್ತದಲ್ಲಿ ತಾನು ಕಟ್ಟಿಸಿದ್ದ ಸ್ವಾಮಿಮಂದಿರದಲ್ಲಿ ತನ್ನ ಪತಿಯ ಹೆಸರಿನ-ಶಿವನ-ಪ್ರತಿಮೂರ್ತಿಯಾದ ಲಿಂಗವನ್ನು ಒಳ್ಳೇ ವಿಜೃಂಭಣೆಯಿಂದ ಪ್ರತಿಷ್ಠಿಸಿದಳು. ಈ ವರೆಗೆ ನಿರ್ಗುಣ ಭಕ್ತಿಯಿಂದ ಮನಸ್ಸಿನಲ್ಲಿ ಪತಿಯನ್ನು ಸ್ಮರಿಸಿ, ಮನಸ್ಸಿನಲ್ಲಿಯೇ ಅವನನ್ನು ನಾನಾ ಬಗೆಯಿಂದ ಪೂಜಿಸುತ್ತಿದ್ದ ಅವಳು, ಅಂದಿನಿಂದ ಸಗುಣರೂಪಮಯವಾದ ಪತಿಮೂರ್ತಿಯನ್ನು ಆಹ್ಲಾದದಿಂದ ಪೂಜಿಸಲಾರಂಭಿಸಿದಳು. ಬೆಳಗಿನ ಝಾವದ ೪ ಗಂಟೆಗೆ ಶುಚಿರ್ಭೂತಳಾಗಿ ಆ ದೇವಾಲಯವನ್ನು ಪ್ರವೇಶಿಸಿದ ಅವಳು, ಮಧ್ಯಾಹ್ನದ ೧೨ ಗಂಟೆಯವರೆಗೆ ಅಲ್ಲಿಯೇ ಪೂಜಾಸಕ್ತಳಾಗಿರುತ್ತಿದ್ದಳು. ನಂತರ ಅನಾಥಾಲಯದೊಳಗಿನ ಅನಾಥರ ಭೋಜನ, ಸೇವಾ, ಶುಶ್ರೂಷೆಗಳನ್ನು ತೀರಿಸಿಕೊಂಡು, ತಾನು ಸಾಯಂಕಾಲದ ೫ ಗಂಟೆಗೆ ತುಸ ಆಹಾರವನ್ನು ಸ್ವೀಕರಿಸುತ್ತಿದ್ದಳು.

ಇಕ್ಷುದ್ವೀಪದಲ್ಲಿ ಯಾವ ದಿವಸ ಮಧ್ಯಾಹ್ನ ಕಮಲಾಸುಂದರಿಯು ಶಿವರಾಯನ ಕನಸಿನಲ್ಲಿ ಬಂದು ಅವನನ್ನು ಕುರಿತು—"ಬರ್ರಿ-ಬರ್ರಿ-ಬೇಗನೆ ಬರ್ರಿ" ಎಂದು ಪ್ರಾರ್ಥಿಸಿದಂತಾಗಿತ್ತೋ, ಅಂದು ಜ್ಯೇಷ್ಠ ಶುದ್ಧ ಬಿದಿಗೆಯ ತಿಥಿಯಿದ್ದು, ಅಂದೇ ಕಮಲಾಸುಂದರಿಯು ವಾರಣಾಸಿ ಕ್ಷೇತ್ರದಲ್ಲಿ ಸ್ವನಿರ್ಮಿತ ಸ್ವಾಮಿಮಂದಿರದಲ್ಲಿ ಸ್ವಾಮಿಯ ಹೆಸರಿನ ಪ್ರತಿಮೂರ್ತಿಯನ್ನು ಸ್ಥಾಪಿಸಿದ್ದಳು; ಹಾಗು ಅದೇ ಮಧ್ಯಾಹ್ನ ಆ ಮೂರ್ತಿಯನ್ನು ಪೂಜಿಸಿ, ಅವರ ಪಾದದಮೇಲೆ ತನ್ನ ಶಿರವನ್ನಿಟ್ಟು ಪತಿಯನ್ನು ಕುರಿತು—"ಬರ್ರಿ-ಬರ್ರಿ-ಬೇಗನೆ ಬರ್ರಿ.........ನಿಮ್ಮ ಈ ಕಮಲೆಯು ಅವಿಶ್ವಾಸಿನಿಯಲ್ಲೆಂಬದನ್ನು ನೋಡಿ ಖಾತ್ರಿಮಾಡಿಕೊಳ್ಳ ಬನ್ನಿರಿ... ಇನ್ನು ನಾನು ಈ ಲೋಕದೊಳಗೆ ಬಹುದಿನಗಳವರೆಗೆ ಬದುಕಲಾರೆನಾದ್ದರಿಂದ ತೀವ್ರ ಬರ್ರಿ" ಎಂದು ನಿಜವಾಗಿಯೇ ಪ್ರಾರ್ಥಿಸಿದಳು. ಆ ಸತಿಯ ಸತ್ತ್ವಾತಿಶಯದ ಪ್ರಭಾವದಿಂದ ಅವಳ ಆ ಕೂಗು-ಪ್ರಾರ್ಥನೆಯು ಸಪ್ತಸಾಗರಗಳ ಆಚೆಯಲ್ಲಿರುವ ಅವಳ ಪತಿಗೆ ಆಧುನಿಕ ಟೆಲಫೋನಿನ ಸಂದೇಶದಂತೆ ಸಹಜವಾಗಿ ಕೇಳಿಸಿ ಅವನನ್ನು ಜಾಗ್ರತಗೊಳಿಸಿತು. ನಮ್ಮ ಹಿಂದೂ ಸತಿಗಳೆಂದರೆ ಸಾಮಾನ್ಯರಲ್ಲ;

ಇವರ ಸತಿತ್ವದ ಪ್ರಭಾವವು ತ್ರಿಕಾಲಾಬಾಧಿತವಾಗಿರುವದು. ಕೌರವರ ಸಭೆಯಲ್ಲಿ ವಸ್ತ್ರಾಪಹರಣದ ಕಾಲಕ್ಕೆ ದ್ರೌಪದಿಯು ಆರ್ತಧ್ವನಿಯಿಂದ ಜಗದೀಶನನ್ನು ಕರೆಯಲು, ದ್ವಾರಕೆಯೊಳಗೆ ಕ್ರೀಡಾಸಕ್ತನಾಗಿದ್ದ ಶ್ರೀಕೃಷ್ಣನಿಗೆ ಅದು ಕೇಳಿಸಿ, ಅವನು ಕೂಡಲೆ ಬಂದು ಆ ಸತಿಯ ಮಾನಕಾಯ್ದನೆಂಬ ಪೌರಾಣಿಕ ಪ್ರಸಂಗವೂ, ಸ್ವರಾಜ್ಯಸಂಸ್ಥಾಪಕನಾದ ಛತ್ರಪತಿ ಶ್ರೀ ಶಿವಾಜಿಯ ತಾಯಿಯು ತನ್ನ ಮಗನಿಗುಂಟಾದ ಸಂಕಟಸಮಯಗಳಲ್ಲಿ ಇದ್ದಲ್ಲಿಂದಲೇ ಪ್ರಾರ್ಥಿಸಿ ಬಹುದೂರದಲ್ಲಿರುವ ಶ್ರೀ ಸಮರ್ಥ ರಾಮದಾಸ ಸ್ವಾಮಿಗಳನ್ನು ಬರಮಾಡಿಕೊಳ್ಳುತ್ತಿದ್ದಳೆಂಬ ಐತಿಹಾಸಿಕ ಪ್ರಸಂಗವೂ, ಈಗಲೂ ಕರ್ಣಗೋಚರವಾಗುತ್ತಿರುವ ಇಂಥ ಸತಿಯರ ಎಷ್ಟೋ ಆಧುನಿಕ ಪ್ರಸಂಗಗಳೂ ನಮ್ಮ ಹಿಂದೂ ಮಹಿಳೆಯರ ಸತಿತ್ವದ ಗೌರವವನ್ನು ಚೆನ್ನಾಗಿ ವ್ಯಕ್ತಗೊಳಿಸುತ್ತವೆ. ಆದರೆ ಈಚೆಗೆ ಗಂಡಸರಾದ ನಾವೇ ನವನಾಗರಿಕತೆಯ ಮಬ್ಬಿಗೆ ಬಿದ್ದು, ನಮ್ಮ ಪ್ರಾಚೀನ ಸಂಸ್ಕಾರಗಳನ್ನು ಕಿತ್ತೊಗೆದು, ಧರ್ಮಲಂಡರಾಗುತ್ತ ನಡೆದ ಬಳಿಕ, ನಮ್ಮ ಗೃಹಿಣಿಯರು ತಮ್ಮ ಧರ್ಮದಿಂದ ಚ್ಯುತರಾಗುತ್ತ ನಡೆದಿರುವರೆಂದು ಉಪಹಾಸ್ಯ ಮಾಡುತ್ತ ಕೂಡ್ರುವದರಲ್ಲಿ ಅರ್ಥವೇನಿದೆ? ಇರಲಿ.

ಇತ್ತ ವಾರಾಣಾಸಿಯಲ್ಲಿ ಕಮಲಾಸುಂದರಿಯು ಪತಿವಿರಹದಿಂದ ಒಂದೇ ಸವನೆ ಹೀಗೆ ಕೊರಗುತ್ತಿರಲು, ಅತ್ತ ಇಕ್ಷುದ್ವೀಪದಲ್ಲಿದ್ದ ಶಿವರಾಯನಾದರೂ ಇವಳಿಗಿಂತ ಹೆಚ್ಚು ತಾಪದಿಂದ ಕೊರಗುತ್ತಿದ್ದನು. ಅವನು ರಾಮಚಂದ್ರನು ಮಲಗಿದ್ದ ದವಾಖಾನೆಯಿಂದ ಅಂದೇ ರಾತ್ರಿ ೧೧ ಗಂಟೆಗೆ ಹೊರಟು, ನೆಟ್ಟಗೆ ಸ್ಟೇಶನ್ನಿಗೆ ಬಂದನು; ಹಾಗು ಅಧಿಕಾರಭಾವದಿಂದ ಸ್ಟೇಶನ್ನ ಮಾಸ್ತರನನ್ನು ಕುರಿತು— ನಾಳೆ ಬೆಳಗ್ಗೆ ೭ ಗಂಟೆಗೆ ನಾನು ಬಂದರಕ್ಕೆ ತಲುಪಲೇ ಬೇಕಾಗಿರುತ್ತದೆ. ಡಬಲ್ ಇಂಜನ್ನುಗಳನ್ನು ಜೋಡಿಸಿ, ಒಂದು ಸ್ಪೆಶಲ ಗಾಡಿಯನ್ನು ಹೊರಡಿಸು. ಈ ಬಂಡಿಯು ಬಂದರಕ್ಕೆ ಮುಟ್ಟುವ ತನಕ ಇಲ್ಲಿಂದ ಅಲ್ಲಿಯ ವರೆಗೆ ಸಂಪೂರ್ಣ ದಾರಿಯಲ್ಲಿ ಒಂದೂ ಗಾಡಿಯೋಡಾಡದಂತೆ ಇಡಿ ಲಾಯಿನನ್ನು ಕ್ಲೀಅರ ಮಾಡಿಡುವದಕ್ಕೆ ಎಲ್ಲ ಸ್ಟೇಶನ್ನಮಾಸ್ತರಿಗೂ ತಾರಿನಿಂದ ತಿಳಿಸು. ಹೂ ನಡೆ, ಎಂದವನೇ ತನ್ನ ರಿಝರ್ವ ಸಲೂನನ್ನು ಏರಿ, ಬಾಗಿಲವನ್ನು ಇಕ್ಕಿಕೊಂಡನು. ಮುಂದೆ ಕೆಲವು ಕ್ಷಣಗಳಲ್ಲಿಯೇ ಅವನ ಆ ಸ್ಪೆಶಲ್ ಗಾಡಿಯು ಸವೇಗವಾಗಿ ಧಾವಿಸಹತ್ತಿತು

ಈಗ ಹನ್ನೆರಡು ವರ್ಷಗಳ ಪೂರ್ವದಲ್ಲಿ ನಾಗಪೂರದಿಂದ ಮುಂಬಯಿಗೆ ಬರುವಾಗ ಹೇಗೆ ಒಬ್ಬನೇ ಆಲೋಚಿಸುತ್ತ ಒಂದು ಡಬ್ಬಿಯಲ್ಲಿ ಬಿದ್ದುಕೊಂಡಿದ್ದನೋ

ಅದೇ ಪ್ರಕಾರವಾಗಿ ಈ ದಿನವೂ ಶಿವರಾಯನು ಆ ರಿಝರ್ವ್ಡ್ ಸಲೂನಿನಲ್ಲಿ ಆಲೋಚಿಸುತ್ತ ಬಿದ್ದುಕೊಂಡಿದ್ದನು. ಆಗ ತನ್ನ ಪತ್ನಿಯು ವಿಶ್ವಾಸಘಾತಕ-ದುಶ್ಚರಿತ್ರದ-ಅವಹೇಲನೆಯ ಮೂಲಕ ಅವನು ದೇಶತ್ಯಾಗ ಮಾಡುವದಕ್ಕಾಗಿ ಆ ಗಾಡಿಯಲ್ಲಿ ಆಲೋಚಿಸುತ್ತ ಬಿದ್ದುಕೊಂಡಿದ್ದನು; ಹನ್ನೆರಡು ವರ್ಷಗಳನಂತರ ಇಂದು, ಅದೇ ಪತ್ನಿಯ ಸದ್ಗುಣಗಳನ್ನು ನೆನೆನೆನೆಸಿ, ತನ್ನ ಮೂರ್ಖತನದ ಮೂಲಕ ಅವಳಿಗೆಷ್ಟು ದುಃಖವಾಗಿದ್ದೀತು? ತನ್ನ ಪತ್ನಿಯು ಆ ದುಃಖವನ್ನು ಸಹಿಲಾರದೆ ಸತ್ತಿರುವಳೋ ಬದುಕಿರುವಳೋ? ತನಗೆ ಇಂದು ಮಧ್ಯಾಹ್ನ ಬಿದ್ದ ಸ್ವಪ್ನವು ನಿಜವೋ ಸುಳ್ಳೋ? ತನ್ನ ತಪ್ಪಿಗೆ ಪ್ರಾಯಶ್ಚಿತ್ತವೇ ಇಲ್ಲದ್ದರಿಂದ ಅವಳು ತನ್ನನ್ನು ಕ್ಷಮಿಸುವ ಬಗೆ ಹೇಗೆ? ಎಂದು ಹಳಿದುಕೊಳ್ಳುತ್ತ ಕುಳಿತಿರುವಷ್ಟರಲ್ಲಿ, ಆ ಗಾಡಿಯ ಒಂದು ಭಾಗದಲ್ಲಿ ಕಮಲೆಯು ನಿಂತುಕೊಂಡು, ದಯಾರ್ದ್ರದೃಷ್ಟಿಯಿಂದ ತನ್ನನ್ನು ನೋಡುತ್ತಿರುವಂತೆ ಅವನಿಗೆ ತೋರಲು, ಆ ಅಪೂರ್ವ ದೃಶ್ಯದಿಂದ ಅವನಿಗೆ ಒಮ್ಮಿಲೆ ಮೂರ್ಛೆಬಂದಿತು. ಅವನು ಆ ಮೂರ್ಛಾವಸ್ಥೆಯಲ್ಲಿಯೇ ಬೆಳಗುಗಳೆದನೆನ್ನಬಹುದು; ಯಾಕಂದರೆ ಅವನು ಮೂರ್ಛೆ ತಿಳಿದೆದ್ದು ಹೊರಗೆ ನೋಡುವಷ್ಟರಲ್ಲಿ ಅವನ ಆ ಸ್ಪೆಶಲ್ ಗಾಡಿಯು ಬಂದರದ ಜಂಗ್‌ಶನ್ ಸ್ಟೇಶನ್ನಿಗೆ ಬಂದಿದ್ದು, ಆ ಗಾಡಿಯ ಗಾರ್ಡನು ಗಾಡಿಯನ್ನು ಇಲ್ಲಿಯೇ ನಿಲ್ಲಿಸಬೇಕೋ, ಬಂದರದ ತೀರ ಸಮೀಪದಲ್ಲಿರುವ ಮುಂದಿನ ಸ್ಟೇಶನ್ನಿಗೆ ಒಯ್ಯಬೇಕೋ ಎಂಬದನ್ನು ಕೇಳಿ ತಿಳಿಯುವದಕ್ಕಾಗಿ ಅವನೆಡೆಗೆ ಬಂದಿದ್ದನು. ಗಾಡಿಯು ಮುಂದಿನ ಸ್ಟೇಶನ್ನಿಗೇ ಹೋಗಲೆಂದು ಶಿವರಾಯನು ಹೇಳಿದ ಪ್ರಕಾರ ಅರೆನಿಮಿಷದಲ್ಲಿ ಗಾಡಿಯು ಆ ಬಂದರದ ಕಟ್ಟಕಡೆಯ ಸ್ಟೇಶನ್ನಿಗೆ ಹೋಗಿ ನಿಂತಿತು. ಕೂಡಲೆ ಶಿವರಾಯನು ಗಾಡಿಯಿಂದಿಳಿದು ನೆಟ್ಟಗೆ ಹಡಗಗಳು ರವಾನಿಸಲ್ಪಡುವ ಆಫೀಸಿಗೆ ಹೋಗಿ, ಅಲ್ಲಿಯ ಮುಖ್ಯಸ್ಥನಿಗೆ ಹೇಳಿದನೇನಂದರೆ— "ಇನ್ನೆರಡು ಗಂಟೆಗೆ ನಾನು ಕಲ್ಕತ್ತೆಗೆ ಹೋಗಲಿಕ್ಕೆ ಹೊರಡಬೇಕಾಗಿದೆ. ಆದ್ದರಿಂದ ನನ್ನ ಸ್ಟೀಮಲಾಂಚ (ಸಣ್ಣಹಡಗ) ವನ್ನು ಶೀಘ್ರವಾಗಿ ತಯಾರಿಡಿಸು. ಅದಕ್ಕೆ ಯೋಗ್ಯ ಕಪ್ತಾನನಿರದಿದ್ದರೆ, ಬೇರೆ ಯಾವುದೊಂದು ಹಡಗಿನನಾವಿಕನನ್ನು ಅದಕ್ಕೆ ನೇಮಿಸು. ಆ ಬೇರೆ ಹಡಗವು ಒಂದೆರಡುದಿನ ತಡವಾಗಿ ಹೊರಟರೂ ಚಿಂತೆಯಿಲ್ಲ. ಅದರಿಂದ ನನಗೆ ಬೇಕಾದಷ್ಟು ಆರ್ಥಿಕ ಹಾನಿಯಾದರೂ ಅಡ್ಡಿಯಿಲ್ಲ; ಆದರೆ ಮೊದಲು ನನ್ನ ಸ್ಟೀಮಲಾಂಚದ ಸಾರಣೆಯನ್ನು ಬಹುಬೇಗ ಮಾಡು."

ನಂತರ ಶಿವರಾಯನು ಅಲ್ಲಿಂದ ತನ್ನ ಬಂಗ್ಲೆಗೆ ಬಂದು, ತನ್ನ ಖಾಸಗೀ ಕಾರಭಾರಿಯಾದ ನಾರಾಯಣದೀಕ್ಷಿತನಿಗೆ ತಾನು ಇಂದೇ ಕಲ್ಕತ್ತೆಗೆ ಹೊರಡುವೆನೆಂದು

ಹೇಳಿದನು; ಹಾಗು ಆ ನಾರಾಯಣದೀಕ್ಷಿತನನ್ನೇ ಆ ಇಕ್ಷುದ್ವೀಪದೊಳಗಿನ ತನ್ನ ಸಂಪೂರ್ಣ ಮಾಲಕಿಯುಳ್ಳ ನ್ಯೂಯಾರ್ಕಚಂದ್ರಕಂಪನಿಯ ಇಕ್ಷುಕ್ಷೇತ್ರಗಳ ಮತ್ತು ರೇಲ್ವೆಯ ಮ್ಯಾನೇಜಿಂಗ ಏಜಂಟನನ್ನಾಗಿ ನೇಮಿಸಿ, ಅದರಂತೆ ಕಾಗದ ಪತ್ರಗಳನ್ನು ಕೂಡ ಮಾಡಿ ಇಟ್ಟನು. ಅಂದಿನಿಂದ ನಾರಾಯಣದೀಕ್ಷಿತನಿಗೆ ತಿಂಗಳಿಗೆ ಎರಡು ಸಾವಿರ ರೂಪಾಯಿ ಸಂಬಳವಲ್ಲದೆ, ಆ ಕಂಪನಿಯ ಉತ್ಪನ್ನದಲ್ಲಿ ೧೦೦ ಕ್ಕೆ ೫ ರಂತೆ ಕಮಿಶನ್ನ ಸಹ ಸಿಗಲಾರಂಭಿಸಿತು!

ಶಿವರಾಯನು ತನ್ನನ್ನು ಹೀಗೆ ಆಕಸ್ಮಿಕವಾಗಿ ಈ ಉಚ್ಚಪದವಿಗೇರಿಸಿದ್ದಕ್ಕಾಗಿ ತಾನು ಅವನಿಗೆ ಯಾವಬಗೆಯಿಂದ ಕೃತಜ್ಞತೆಯನ್ನು ತೋರಿಸಬೇಕೆಂಬದು ನಾರಾಯಣದೀಕ್ಷಿತನಿಗೆ ತಿಳಿಯದ್ದರಿಂದ ಅವನು ಮೌನದಿಂದಲೇ ಅವನ ಆಭಾರವನ್ನು ಮನ್ನಿಸಿದನು. ಒಳಿಕ ಅವನು ಶಿವರಾಯನನ್ನು ಕುರಿತು—"ಮರಳಿ ಬರಲಿಕ್ಕೆ ತಮಗೆ ಎಷ್ಟು ದಿನಗಳು ಬೇಕಾಗುವವು?" ಇತ್ಯಾದಿ ಪ್ರಶ್ನೆ ಮಾಡಲು, "ನಾನು ಇಲ್ಲಿಗೆ ಪುನಃ ಬರಲಿಕ್ಕೇ ಇಲ್ಲೆಂಬ ಗುಪ್ತಸಂಗತಿಯನ್ನು ನಿನಗೆ ತಿಳಿಸಿರುತ್ತೇನೆ; ಆದರೆ ನೀನು ಇದನ್ನು ನನ್ನ ಇನ್ನೊಂದು ಪತ್ರ ಬರುವವರೆಗೆ ಯಾರ ಮುಂದೂ ಉಸುರಬೇಡ. ನೀನು ಈ ಇಕ್ಷುದ್ವೀಪದಲ್ಲಿ ಕೂಲಿಗಳಿಗಾಗುವ ಅತ್ಯಾಚಾರವನ್ನು ನಿವಾರಿಸುವದಕ್ಕಾಗಿ ಎಲ್ಲ ಬಗೆಯಿಂದಲೂ ಪ್ರಯತ್ನಮಾಡು. ಆ ಕಾರ್ಯಕ್ಕೆ ಎಷ್ಟು ದ್ರವ್ಯ ವ್ಯಯವಾದರೂ ಖರ್ಚ ಮಾಡು. ಇಗೋ, ಕಂಪನಿಯ ಸಂಬಂಧದ ಈ ಕಾಗದ ಪತ್ರಗಳನ್ನೆಲ್ಲ ಜೋಕೆಯಿಂದ ಇಟ್ಟುಕೋ." ಎಂದು ಹೇಳಿ, ಶಿವರಾಯನು ಅವನೊಡನೆ ಅವಸರವಸರದಿಂದ ಊಟತೀರಿಸಿಕೊಂಡು, ಆ ಇಕ್ಷುದ್ವೀಪಕ್ಕೊಮ್ಮೆ ಕಡೆಯಸಾರೆ ಕೈಮುಗಿದು, ತನ್ನ ಸ್ವಾಮಿಲಾಂಛನವನ್ನೇರಿ ಸ್ವದೇಶಕ್ಕೆ ಹೊರಟನು.

ಇಂದು ಸಾವಿತ್ರೀವ್ರತವು; ಇಂದೇ ಕಮಲಾಸುಂದರಿಯ ಸಾವಿತ್ರೀವ್ರತದ ಉದ್ಯಾಪನೆಯು. ಅವಳು ಆ ವ್ರತವನ್ನು ಗ್ರಹಣಮಾಡಿ ಇಂದಿಗೆ ಹದಿನಾಲ್ಕು ವರ್ಷಗಳು ಸಂಪೂರ್ಣವಾಗುತ್ತಿದ್ದವು. ವಿಮಲೆ ಹಾಗು ಹೇಮಾವತಿಯರ ಸಹಾಯದಿಂದ ಅವಳು ಆ ಉದ್ಯಾಪನೆಯ ಎಲ್ಲ ಸಿದ್ಧತೆಯನ್ನು ಪ್ರಾತಃಕಾಲದಲ್ಲಿಯೇ ಮಾಡಿಟ್ಟಿದ್ದಳು. ನಂತರ ಅವಳು ವಿಮಲೆಯನ್ನು ಒತ್ತಟ್ಟಿಗೆ ಕರೆದು—"ಅಕ್ಕಾ, ಇಂದು ನಾನು ಈ ಸಾವಿತ್ರೀವ್ರತದ ಉದ್ಯಾಪನೆಯನ್ನು ಮಾಡುವೆನಲ್ಲದೆ, ನನ್ನ ಜೀವಿತದ ಉದ್ಯಾಪನೆಯನ್ನು ಸಹ ಮಾಡಿಬಿಡಬೇಕೆಂದಿರುವೆನು. ಯಾಕೆಂದರೆ ನನ್ನ ಪತಿಯು ಅಜ್ಞಾತವಾಗಿ ಇಂದಿಗೆ ಹನ್ನೆರಡು ವರ್ಷಗಳು ಮುಗಿಯುವವು. ನಾನು ಅವರ ಪುನರ್ದರ್ಶನದ ಆಶೆಯಿಂದ ಈ ವರೆಗೂ ಮನಸ್ಸನ್ನು ಸಂಯಮಿಸ

ಮಾಡಿಕೊಂಡು ಉಳಿದಿದ್ದೆನು; ಆದರೆ ಇನ್ನು ಉಳಿಯುವದು ಶಕ್ಯವಿಲ್ಲ. ನನ್ನ ಆಶೆಯು ಫಲಿತವಾಗಲಿಲ್ಲ; ಅವರ ಪುನರ್ದರ್ಶನವು ನನಗಾಗಲಿಲ್ಲ. ಅಕ್ಕಾ, ಹೋಗಿಬರುವೆನು, ಅಪ್ಪಣೆಕೊಡು'' ಎಂದಳು.

"ತಂಗೀ, ಕಮಲಕ್ಕಾ, ನೀನು ಹೋಗುವದಾದರೂ ಎಲ್ಲಿಗೆ?'' ಎಂದು ವಿಸ್ಮಯಚಕಿತಳಾಗಿ ವಿಮಲೆಯು ಪ್ರಶ್ನೆ ಮಾಡಲು,

"ಈ ಜಗತ್ತಿನ ಕೂಡ ಯಾವ ದೇಶದ ಸಂಬಂಧವಿರುವದಿಲ್ಲವೋ, ಯಾವ ಸ್ಥಳಕ್ಕೆ ಹೋದರೆ ಜಗತ್ತಿನ ಸಮಸ್ತ ದುಃಖ-ಕಷ್ಟಗಳು ಅವಸಾನಹೊಂದುವವೋ, ಯಾವ ದೇಶಕ್ಕೆ ಹೋದವರು ಯಾರೂ ಎಂದೂ ತಿರುಗಿ ಬರುವದಿಲ್ಲವೋ, ಆ ಅಜ್ಞಾತ ಹಾಗು ನೋಡಲಿಕ್ಕೆ ಅಶಕ್ಯವಾದ ದೇಶಕ್ಕೆ ಪ್ರಯಾಣಮಾಡುವೆನು. ಅಕ್ಕಾ, ಇಂದೇ ನನಗೆ ಇಹಲೋಕದಲ್ಲಿಯ ಕಟ್ಟಕಡೆಯ ದಿವಸವು.''

"ಛೀ, ತಂಗೀ, ಇಂಥ ಅಭದ್ರಭಾಷಣವನ್ನು ಮಾಡಲಾಗದು. ಈ ವರೆಗೆ ಎಂದೂ ಈ ತರದ ಉದ್ಗಾರಗಳನ್ನು ತೆಗೆಯದ ನೀನು, ಇಂದು ಹೀಗೇಕೆ ನುಡಿಯುವೆ?''

"ಅಕ್ಕಾ, ಯಾಕೆ ನುಡಿಯಬಾರದು? ಮರಣ ಸಂಬಂಧದ ಮಾತಾಡಿದರೆ ತಪ್ಪೇನು? ಇಂದು ನಾನು ಹೀಗೇಕೆ ಮಾತಾಡಿದೆನೆನ್ನುವದರ ಕಾರಣವನ್ನು ಕೇಳು:—ಇಂದು ನನ್ನ ಪತಿಯು ಅಜ್ಞಾತವಾಗಿ ಹನ್ನೆರಡು ವರ್ಷಗಳು ಸಂಪೂರ್ಣವಾಗುವವು. ಶಾಸ್ತ್ರವಿಧಿಗನುಸಾರವಾಗಿ—ಅವರು ಇನ್ನೂ ಜೀವಂತವಾಗಿದ್ದರೂ—ನಾನು ಅವರ ಹೆಸರಿನ ದರ್ಭೆಯ ಮೂರ್ತಿಯನ್ನು ಮಾಡಿ ಸುಟ್ಟು, ಅವರ ಶ್ರಾದ್ಧಾದಿಗಳನ್ನು ಮಾಡಬೇಕಾಗುವದು. ಅವರು ಇನ್ನೂ ಜೀವಂತರಾಗಿರುವರೆಂದು ನನ್ನ ದೃಢವಿಶ್ವಾಸವಿರುತ್ತದೆ. ಆದರೂ ಧರ್ಮಶಾಸ್ತ್ರದ ಕಟ್ಟಳೆಯ ಪ್ರಕಾರ ನಾನು ವಿಧವೆಯಾಗಲೇ ಬೇಕಾಗುತ್ತದೆ, ಹಾಗೆ ಆಗಿರಲಿಕ್ಕೆ ನನ್ನ ಮನಸ್ಸು ಒಪ್ಪುವದಿಲ್ಲ. ಆದ್ದರಿಂದ ನಾನು ಇಂದು ಮರಣಹೊಂದಬೇಕಾಗಿರುತ್ತದೆ ಮರಣದಬಗ್ಗೆ ನನಗೆ ಎಳ್ಳಷ್ಟೂ ಅಂಜಿಕೆಯಿರುವದಿಲ್ಲ; ಆದರೆನನ್ನ ಒಂದೇಒಂದು ಆಶೆಯೇನಂದರೆ, ಸಾಯುವ ಮೊದಲು ನನಗೆ ಅವರ ಸಾಕ್ಷಾತ್ಕಾರವಾಗಬೇಕೆಂಬದು. ನನಗೆಅವರ ಪುನರ್ದರ್ಶನವಾಗದಿದ್ದರೆ, ನನ್ನ ನಾರೀಜನ್ಮವು ವ್ಯರ್ಥವು; ನನ್ನ ಸ್ವಾಮಿಪೂಜೆ, ನನ್ನ ಸ್ವಾಮಿಭಕ್ತಿ ಮುಂತಾದವುಗಳು ವ್ಯರ್ಥವೇ ಸರಿ. ನನ್ನ ಮರಣದ ತರುವಾಯ ನೀನೇ ಈ ಅನಾಥಾಲಯದ ವ್ಯವಸ್ಥೆಯನ್ನು ಯಥಾಪ್ರಕಾರವಾಗಿ ನಡಿಸಬೇಕೆಂದು ನಾನು ನಿನಗೆ ವಿನಂತಿಪೂರ್ವಕವಾಗಿ ಕೇಳಿಕೊಳ್ಳುತ್ತೇನೆ; ಹಾಗು ನಿನ್ನ ಅವಸಾನಕಾಲದಲ್ಲಿ ಯಾವಳೊಬ್ಬ

ಯೋಗ್ಯ ವ್ಯಕ್ತಿಗೆ ನೀನು ಇದರ ವ್ಯವಸ್ಥೆಯನ್ನು ಒಪ್ಪಿಸಿ ಹೋಗು."

ಕಮಲಾಸುಂದರಿಗೆ ಈ ಪ್ರಸಂಗದಲ್ಲಿ ಯಾವ ಸಮಾಧಾನದ ಮಾತುಗಳನ್ನು ಹೇಳಿದರೆ, ಅವಳು ಕೃತನಿಶ್ಚಯದಿಂದ ಪರಾವೃತ್ತಳಾಗಬಹುದೆಂಬದು ತಿಳಿಯದ್ದರಿಂದ ವಿಮಲೆಯು ಏನೂ ಮಾತಾಡದೆ ಸ್ತಬ್ಧಳಾಗಿ ನಿಂತು ತನ್ನ ಮನದಲ್ಲಿಯೇ ಆಲೋಚಿಸುತ್ತಿದ್ದಳೇನಂದರೆ- "ನಾನೂ ಇವಳಂತೆ ಪತಿವಿಯೋಗದಿಂದ ಬಳಲಿದವಳು. ಇವಳಂತೆ ನನಗೂ ನನ್ನ ಪತಿಯು ಜೀವಂತನಾಗಿರುವನೆಂಬ ವಿಶ್ವಾಸವಿದ್ದದರಿಂದಲೇ ನಾನು ಆ ಶಾಸ್ತ್ರಕಟ್ಟಳೆಯನ್ನು ಪಾಲಿಸಲಿಲ್ಲ. ಪೂರ್ವಕೃತ-ಸುಕೃತದಿಂದ ನನಗೆ ನನ್ನ ಪತಿಯು ವಿಯೋಗವಾದ ೨೦ ವರ್ಷಗಳನಂತರ ದರ್ಶನಕೊಟ್ಟನು; ಆದರೆ ಧರ್ಮಕಟ್ಟಳೆಯ ವಿರುದ್ಧ ನಡೆದುದಕ್ಕಾಗಿ ನನ್ನ ತಂದೆ ತಾಯಿಗಳಿಗೆ ಸ್ವದೇಶವನ್ನು ತ್ಯಜಿಸಿ, ಸ್ವನಾಮಗಳನ್ನು ಮರೆಮಾಚಿ ಗುಪ್ತವಾಗಿಟ್ಟುಕೊಳ್ಳಬೇಕಾಗಿ, ಕಡೆಗೆ ಆ ಅಪ್ರತಿಷ್ಠೆಯ ಚಿಂತೆಯಿಂದಲೇ ಅವರು ಕೊರಗಿ ಕೊರಗಿ ಸಾಯಬೇಕಾಯಿತು. ಕಮಲಾಸುಂದರಿಗೆ ನನ್ನ ತಂದೆ-ತಾಯಿಗಳ ಆ ಸ್ಥಿತಿಯು ಗೊತ್ತೇ ಇದೆ. ಆದರಿಂದ ಎಷ್ಟು ಹೇಳಿದರೂ ಇವಳು ಆ ಮಾರ್ಗವನ್ನು ಸ್ವೀಕರಿಸಲಾರಳು."

ಅಷ್ಟರಲ್ಲಿ ಕಮಲಾಸುಂದರಿಯೇ ವಿಮಲೆಯನ್ನು ಕುರಿತು ಪುನಃ— ಅಕ್ಕಾ, ನನ್ನ ಮರಣದ ನಂತರ ಯಾವ ವೇಳೆ ಅವರು ಅಕಸ್ಮಾತ್ತಾಗಿ ಬಂದರೆ,-ಅವರು ಬಂದೇ ಬರುವರೆಂದು ನನ್ನ ವಿಶ್ವಾಸವಿದೆ; ಯಾಕೆಂದರೆ, ನನ್ನ ಸಲುವಾಗಿಯೇ ಅವರ ಅಜ್ಞಾತವಾಸವು. ನಾನು ಸತ್ತುಹೋದರೆ ಅವರ ಅಜ್ಞಾತವಾಸದ ಕಾರಣವೇ ಅಳಿದು ಹೋಗುವದರಿಂದ ಅವರು ಬಂದೇ ಬರುವರು.-ಅವರಿಗೆ ಹೀಗೆಂದು ತಿಳಿಸು:— "ನಿಮ್ಮ ಕಮಲೆಯು ಆ ಶಾಸ್ತ್ರಾನುಯಾಯಿಳಲ್ಲ. ನಿಮ್ಮ ಚರಣಗಳಹೊರತು ಅವಳು ಯಾವದನ್ನು ಎಂದೂ ಸ್ಮರಿಸುತ್ತಿರಲಿಲ್ಲ." ಅಕ್ಕಾ, ಸಾಯುವಾಗ ನಾನು ಅವರ ನಾಮವನ್ನು ಸ್ಮರಿಸುತ್ತಲೇ ಸಾಯಬೇಕೆಂದಿರುವೆನು. ದೇವರು ಆ ಕಾಲಕ್ಕೆ ಏನು ಮಾಡುವನೋ ನೋಡಬೇಕು. ಸತ್ತಬಳಿಕ ಎಲ್ಲ ವಿಯೋಗಗಳೂ ಲೋಪವಾಗದಿರದಿದ್ದರೆ, ಈ ಜೀವನಕ್ಕೆ ಬೇರೆ ಯಾವತ್ತಾದರೂ ಸ್ಥಳದಲ್ಲಿ ಹೋಗಬೇಕಾಗಿದ್ದರೆ,-ಅವರಿಗೆ ತಿಳಿಸು, ನಾನು ಆ ಎರಡನೇ ಸ್ಥಳಕ್ಕೆ ಹೋಗುವ ದಾರಿಯಲ್ಲಿ ಕುಳಿತು ನಾನು ಅವರ ಹಿತಚಿಂತನವನ್ನು ಮಾಡುತ್ತಿರುವೆನೆಂದು" ಅಕ್ಕಾ, ನನ್ನ ಸಲುವಾಗಿ ದುಃಖಿಸಬಾರದೆಂದು ಅವರಿಗೆ ಖಂಡಿತವಾಗಿ ನಿವೇದಿಸು.

ಈ ಬಗೆಯಾಗಿ ಕಮಲಾಸುಂದರಿಯು ಹೇಳುತ್ತಿರುವಾಗ ವಿಮಲೆಯ ಕಣ್ಣುಗಳಿಂದ ಅಶ್ರುಗಳು ಧಾರೆಗಟ್ಟಿ ಸುರಿಯುತ್ತಿದ್ದವು. ಕಮಲೆಯು ನೇತ್ರ

ಗಳೂ ಆಗಾಗ್ಗೆ ಅಶ್ರುಗಳಿಂದ ತುಂಬಿತುಳುಕುತ್ತಿದ್ದವು. ಹೀಗೆ ಸಾವಿತ್ರೀವ್ರತದ ದಿವಸ ಪ್ರಾತಃಕಾಲದಲ್ಲಿ ವಾರಣಾಸಿಯೊಳಗಿನ ಕಮಲಾಸುಂದರಿಯ ಅನಾಥಾಲಯದಲ್ಲಿ ಕಮಲಾಸುಂದರಿ ಹಾಗು ವಿಮಲೆ ಇವರಲ್ಲಿ ಸಂಭಾಷಣ ನಡೆದಿರಲು, ಇತ್ತ ಇಳ್ಳುದ್ವೀಪದಿಂದ ವೇಗಶಾಲಿಯಾದ ಸ್ಟೀಮಲಾಂಚದಲ್ಲಿ ಹೊರಟ ಶಿವರಾಯನು ಸಾವಿತ್ರೀವ್ರತದದಿವಸವೇ ಕಲ್ಕತ್ತೆಗೆ ಬಂದು ತಲುಪಿದನು. ಕೂಡಲೆ ಅವನು ಟೆಲಿಗ್ರಾಫ್ ಆಫೀಸಿಗೆ ಹೋಗಿ, ನಾಗಪೂರಪ್ರಾಂತದೊಳಗಿನ ತನ್ನ ಕಾರಖಾನೆಯ ಮ್ಯಾನೇಜಿಂಗ ಇಂಜನೀಯರನಾದ ರಾಮರಾಯನಿಗೆ ಒಂದು ಅರ್ಜಂಟತಾರು ಮಾಡಿ, ತನ್ನ ಹೆಂಡತಿಯಾದ ಕಮಲೆಯು ಹ್ಯಾಗಿರುವಳು? ಎಲ್ಲಿರುವಳು? ಮುಂತಾದುದನ್ನು ವಿಚಾರಿಸಿದನು. ತಾಸರ್ಧತಾಸಿನಲ್ಲಿ ಅವನಿಂದ ಜವಾಬು ಬಂದು— "ತಾವು ಹೊರಟು ಹೋದಂದಿನಿಂದ ಕಮಲಾದೇವಿಯವರು ಕಾಶಿಯ ಅನಾಥಾಲಯದಲ್ಲಿಯೇ ಇರುತ್ತಿರುವರೆ"ಂಬ ಸಂಗತಿಯು ತಿಳಿಯಿತು. ನಂತರ ಶಿವರಾಯನು ಒಂದು ಅರಗಳಿಗೆಕೂಡ ತಡೆಯದೆ 'ಈಸ್ಟ ಇಂಡಿಯನ್ ರೇಲ್ವೆ'ಯ ಜಂಕ್ಶನ್‌ವಾದ ಹಾವರಾ ಸ್ಟೇಶನ್ನಿಗೆ ಬಂದು, ಅಲ್ಲಿಂದ ಕಾಶಿಯವರೆಗೆ ಒಂದು ಬಹು ವೇಗವುಳ್ಳ ಸ್ಪೆಶಲ್ ಗಾಡಿಯನ್ನು ಹೊರಡಿಸಿದನು. ಆ ಬಗ್ಗೆ ಅಂದು ಅವನಿಗೆ ಸಾವಿರಾರು ರೂಪಾಯಿ ಖರ್ಚು ಮಾಡಬೇಕಾದರೂ ಅತ್ತಕಡೆಗೆ ಅವನ ಲಕ್ಷ್ಯವೇ ಇದ್ದಿಲ್ಲ. ಜೀವವಿರುವಷ್ಟರಲ್ಲಿ ತನ್ನ ಹೆಂಡತಿಯು ತನಗೆ ಲಭಿಸಿದರೆ ಸಾಕೆಂದು ಅವನು ಕೈಸಡಿಲು ಬಿಟ್ಟು ಖರ್ಚು ಮಾಡಹತ್ತಿದ್ದನು. ಬೆಳಗಿನ ಹತ್ತಕ್ಕೆ ಸರಿಯಾಗಿ ಹಾವರಾ ಸ್ಟೇಶನ್‌ದಿಂದ ಹೊರಟ ಶಿವರಾಯನ ಸ್ಪೆಶಲ್ ಟ್ರೇನು ಭೀಮವೇಗದಿಂದ ಗುಡ್ಡ, ಗಂಹ್ವರ, ನದಿ ಮುಂತಾದವುಗಳನ್ನು ಹಿಂದೂಡುತ್ತ ಒಂದೇಸವನೆ ಓಡುತ್ತಿತ್ತು. ಅದು ನಡುವಿನ ಸಣ್ಣದೊಡ್ಡ ಸ್ಟೇಶನ್ನುಗಳಲ್ಲಿ ನಿಲ್ಲುತ್ತಿರಲಿಲ್ಲ; ಆದರೆ ಬಾಯಾರಿಕೆಯಾದಾಗ ನೀರು ಕುಡಿದು ದಣುವಾರಿಸಿಕೊಳ್ಳುವದಕ್ಕಾಗಿ ಮಾತ್ರ ಆ ಸ್ಪೆಶಲ್‌ಗಾಡಿಯು ದೊಡ್ಡ ದೊಡ್ಡ ವಾಟರಿಂಗ ಸ್ಟೇಶನ್ನುಗಳಲ್ಲಿ ಅನಿವಾರ್ಯಪಕ್ಷ ನಿಂತು, ತುಸ ಹೊತ್ತಿನಲ್ಲಿಯೇ ತನ್ನ ಮುಂದಿನ ಮಾರ್ಗಕ್ರಮಣಕ್ಕೆ ಹತ್ತುತ್ತಿತ್ತು. ಹೀಗೆ ಅವಿಶ್ರಾಂತ ದಾರಿನಡೆದು ಬಂದ ಆ ಸ್ಪೆಶಲ್ ಟ್ರೇನು ಕಾಶೀ ಸ್ಟೇಶನ್ನಿಗೆ ಅಂದೇ ರಾತ್ರಿ ಸರಿಯಾಗಿ ೧೨|| ಗಂಟೆಗೆ ತಲುಪಿತು. ಗಾಡಿ ನಿಂತೊಡನೆಯೇ ಶಿವರಾಯನು ಇಳಿದನು. ಆದರೆ ಅವನು ಈ ಮೊದಲು ಎಂದೂ ಕಾಶಿಗೆ ಬಂದಿದ್ದಿಲ್ಲ; ಮೇಲಾಗಿ ಗಾಡಿಯು ಅಲ್ಲಿಗೆ ಬಂದಾಗ ಬೇರೆ ಯಾವ ಗಾಡಿಗಳೂ ಬರಹೋಗುವವಿರದ್ದರಿಂದ ಸ್ಟೇಶನ್ನಿನಲ್ಲಿ ಪ್ರವಾಸಿಕರೂ ಇರಲಿಲ್ಲ. ಆದರಿಂದ ಆ ವಿಸ್ತಾರವಾದ ವಾರಣಾಸೀ ಕ್ಷೇತ್ರದಲ್ಲಿ ಅವನಿಗೆ

ತನ್ನ ಕಮಲಾಸುಂದರಿಯ ಆ ಅನಾಥಾಲಯದ ಪತ್ತೆ ಹತ್ತುವ ಬಗೆ ಹೇಗೆ?

ಕೆಲಹೊತ್ತು ಆಲೋಚಿಸಿ, ಶಿವರಾಯನು ಸ್ಟೇಶನ್ ಮಾಸ್ತರನಕಡೆಗೆ ಹೋಗಿ, ತನ್ನನ್ನು ಈ ವಾರಣಾಸೀ ಕ್ಷೇತ್ರದಲ್ಲಿರುವ ಕಮಲಾಸುಂದರಿಯ ಅನಾಥಾಲಯಕ್ಕೆ ಈಗಲೆ ತಲುಪಿಸುವ ಬಗ್ಗೆ ವಿನಂತಿ ಮಾಡಿಕೊಂಡನು. ಆ ಸದ್ಗೃಹಸ್ಥನು ಕೂಡಲೆ ಪೋರ್ಟರನ ಮುಖಾಂತರ ಒಂದು ಜಾಟಕಿಯನ್ನು ತರಿಸಿ, ಆ ಪೋರ್ಟರನೊಡನೆ ಅವನನ್ನು ಅವನ ಉದ್ದಿಷ್ಟಸ್ಥಳಕ್ಕೆ ಕಳಿಸಿದನು. ಶಿವರಾಯನು ಕುಳಿತ ಜಾಟಕಿಯು ಕಮಲಾಸುಂದರಿಯ ಅನಾಥಾಲಯಕ್ಕೆ ಬಂದಾಗ ರಾತ್ರಿ ಹನ್ನೊಂದು ಹೊಡೆದು ಹೋಗಿತ್ತು. ಅಂದು ಮಧ್ಯಾಹ್ನವೇ ಕಮಲಾಸುಂದರಿಯು ಸಾವಿತ್ರೀವ್ರತದ ಉದ್ಯಾಪನೆಯನ್ನು ಯಥಾಸಾಂಗವಾಗಿ ನೆರವೇರಿಸಿದ್ದಳು; ಹಾಗು ಸಾಯಂಕಾಲದ ಆರುಗಂಟೆಯಿಂದ ರಾತ್ರಿ ೧೧ ರವರೆಗೆ ಅಲ್ಲಿ ನೆರೆದಿದ್ದ ಎಲ್ಲ ಅನಾಥರ ಊಟ-ಉಪಚಾರಗಳ ವ್ಯವಸ್ಥೆಯನ್ನು ನಡೆಸಿದ್ದಳು. ಆಕೆಯು ವಾರಣಾಸಿಗೆ ಬಂದಂದಿನಿಂದ ಪ್ರತಿವರ್ಷ ಸಾವಿತ್ರೀ ವ್ರತದ ದಿವಸ ಈ ರೀತಿ ಅನಾಥರಿಗೆ ಭಿಕ್ಷೆ ನೀಡುವ ವ್ರತವನ್ನು ಕೈಕೊಂಡಿದ್ದರಿಂದ, ಆ ಪ್ರಾಂತದೊಳಗಿನ ಎಲ್ಲ ಭಿಕ್ಷುಕರೂ ಅಂದು ಅಲ್ಲಿಗೆ ಬಂದಿದ್ದರು. ಮೇಲಾಗಿ ಅಂದು ಕಮಲಾಸುಂದರಿಯ ಸಾವಿತ್ರೀವ್ರತದ ಉದ್ಯಾಪನೆಯಾಗಿದ್ದು ಅವಳು ಪ್ರತಿಯೊಬ್ಬ ಭಿಕ್ಷುಕನಿಗೆ ವಿಶೇಷವಾದ ಭಿಕ್ಷೆಯನ್ನು ನೀಡುವಳೆಂದು ಸುದ್ದಿ ಹಬ್ಬಿತ್ತು. ಅದರಿಂದ ಎಷ್ಟೋ ಜನ ದೂರ ದೂರ ದೇಶದ ಭಿಕ್ಷುಕರು ಕೂಡ ಅಂದು ಅಲ್ಲಿಗೆ ಬಂದುಸೇರಿದ್ದರು. ಕಮಲಾಸುಂದರಿಯು ಅವರೆಲ್ಲರಿಗೂ ಪಂಚಪಕ್ವಾನ್ನಗಳ ಅಡಿಗೆಯನ್ನು ಯಥೇಷ್ಟವಾಗಿ ಬಡಿಸಿದ್ದಳು; ಹಾಗು ಪ್ರತಿಯೊಬ್ಬ ಭಿಕ್ಷುಕನಿಗೆ ಒಂದು ಉಟ್ಟುಕೊಳ್ಳುವ ವಸ್ತ್ರವನ್ನೂ, ಹೊದೆಯುವುದಕ್ಕೆ ಒಂದು ಕಂಬಳಿಯನ್ನೂ ಕೊಟ್ಟಿದ್ದಲ್ಲದೆ, ಒಬ್ಬೊಬ್ಬನಿಗೆ ಒಂದೊಂದು ರೂಪಾಯಿಯ ದಕ್ಷಿಣೆಯನ್ನೂ ಕೊಟ್ಟಿದ್ದಳು. ಅದರಿಂದ ಆ ಭಿಕ್ಷುಕವೃಂದವು ಪರಮಾನಂದಭರಿತವಾಗಿ, ಆಕೆಯ ಗುಣಗಾನ ಮಾಡುತ್ತ, ಸಂತುಷ್ಟಚಿತ್ತದಿಂದ ಅವಳನ್ನು ಹರಸುತ್ತ ನಡೆದಿತ್ತು. ಅನಾಥಾಲಯದಿಂದ ಗುಂಪುಗುಂಪಾಗಿ ಬರುತ್ತಿರುವ ಆ ಅಸಂಖ್ಯ ಜನರ ಸಂದಣಿಯಿಂದ ಮೊದಲೇ ಇಕ್ಕಟ್ಟಾದ ಆ ವಾರಣಾಸೀ ಕ್ಷೇತ್ರದ ಓಣಿಗಳಲ್ಲಿ ಶಿವರಾಯನು ಕುಳಿತಿದ್ದ ಜಾಟಕಿಯು ಹಾದು ಬರಲಿಕ್ಕೆ ಬಹಳ ತಡವಾಯಿತು.

ಅನಾಥಾಲಯವು ಸಮೀಪಿಸಿದ ಹಾಗೆ ಶಿವರಾಯನ ಕುತೂಹಲವು ವೃದ್ಧಿಸಿತು. ಅವನು ಆಗಾಗ್ಗೆ ಜಾಟಕಿಯ ಕೋಚಮನ್ನನನ್ನು ಕೇಳುತ—"ಆ ಸ್ಥಳವು ಬಂದಿತೇನು?" ಎಂತಲೂ, ಎಲ್ಲಿಯವರೆಗೂ ಜಾಟಕಿಯ ಕುದುರೆಯು ತುಸ

ನಿಂತಕೂಡಲೆ—"ಇದೇ ಆ ಸ್ಥಳವೋ?" ಎಂತಲೂ ತವಕದಿಂದ ಕೇಳುತ್ತಿದ್ದನು. ಹೀಗೆ ಕುತೂಹಲ ಪೂರ್ಣನಾದ ಅವನು ಕಡೆಗೆ ಒಮ್ಮೆ ಆ ಅನಾಥಾಲಯದ ಮುಖ್ಯದ್ವಾರದ ಬಳಿಯಲ್ಲಿ ಹೋಗಿ ಚೌಕಿಯಿಂದಿಳಿದು, ಚೌಕಿಯವನಿಗೂ, ಪೋರ್ಟರನಿಗೂ ಯಥೇಷ್ಟವಾಗಿ ಪುರಸ್ಕಾರಕೊಟ್ಟು ಅವರನ್ನು ಮರಳಿ ಹೋಗಹೇಳಿ, ತಾನು ಅನಾಥಾಲಯದಲ್ಲಿ ಪ್ರವೇಶಿಸಿದನು.

ಶಿವರಾಯನು ಅನಾಥಾಲಯವನ್ನು ಪ್ರವೇಶಿಸಿ, ಸಮ್ಮುಖದಲ್ಲಿಯೇ ಪ್ರಜ್ವಲಿಸುತ್ತಿರುವ ದೀಪದಬಳಿಗೆ ಹೋದನು. ಅದೇ ಕಮಲಾಸುಂದರಿಯು ಸ್ಥಾಪಿಸಿದ್ದ ಸ್ವಾಮಿಮಂದಿರವಾಗಿತ್ತು. ಇಂದು ಸಾವಿತ್ರೀವ್ರತದ ಉದ್ಯಾಪನೆ, ಅಗಣಿತ ಅನಾಥರ ಭೋಜನ ಮುಂತಾದ ಆಗಂತುಕ ಕೆಲಸಗಳು ಮುಗಿಯುವವರೆಗೆ ಕಮಲಾಸುಂದರಿಯು ಸಾಯಂಕಾಲದ ಸ್ವಾಮಿಪೂಜೆಗೆ ಅವಕಾಶವಾಗಿರಲಿಲ್ಲ. ಮೇಲಾಗಿ ಅಂದೇ ಸ್ವಾಮಿಪೂಜೆಯ ನಂತರ ಯಾವ ಬಗೆಯಿಂದಾದರೂ ಅವಳಿಗೆ ಇಹಲೋಕದಿಂದ ಮುಕ್ತವಾಗಬೇಕಾದುದರಿಂದ, ಅವಳು ತನ್ನ ಆ ಕಾರ್ಯಕ್ಕೆ ವ್ಯತ್ಯಯ ಬಾರದಹಾಗೆ ಅನುಕೂಲ ಕಾಲವನ್ನು ನಿರೀಕ್ಷಿಸುತ್ತ, ಸ್ವಾಮಿಪೂಜೆಗಾಗಿ ಬೇಕಂತ ತುಸ ತಡಮಾಡಿದ್ದಳು. ತನ್ನ ಎಲ್ಲ ಕೆಲಸಗಳೂ ಮುಗಿದು, ತನಗೆ ಅನುಕೂಲವಾದ ಪರಿಸ್ಥಿತಿಯು ಉತ್ಪನ್ನವಾಗಲು, ಕಮಲಾಸುಂದರಿಯು ದೇವಾಲಯವನ್ನು ಪ್ರವೇಶಿಸಿ, ಪೂಜೆಯನ್ನು ಪ್ರಾರಂಭಿಸಿದಳು. ಅಷ್ಟರಲ್ಲಿ ಶಿವರಾಯನು ತಡವರಿಸುತ್ತ ಬಂದು ಆ ದೇವಾಲಯದ ಪಟಾಂಗಣವನ್ನು ಪ್ರವೇಶಿಸಿದನು. ಆಗ ಆ ಮಂದಿರದ ಪ್ರವೇಶದ್ವಾರದಲ್ಲಿ ಒಬ್ಬ ಭವ್ಯಕಾಯದ ಭಯ್ಯಾನು ಒಂದು ಎತ್ತರವಾದ ಕಾಷ್ಠಾಸನದ ಮೇಲೆ ಕುಳಿತು ಪಹರೆಯನ್ನು ಮಾಡುತ್ತಿದ್ದನು. ಕಮಲಾಸುಂದರಿಯು ದೇವಾಲಯದಲ್ಲಿ ಪೂಜೆಮಾಡುತ್ತಿರುವಾಗ ವಿಮಲೆ ಹಾಗು ಹೇಮಾವತಿಯರ ಹೊರತು ಬೇರೆ ಯಾರಿಗೂ ಅಲ್ಲಿ ಪ್ರವೇಶಕ್ಕೆ ಆಸ್ಪದವಿರಲಿಲ್ಲ. ಆದರಿಂದಲೇ ಆ ಭೂಪಾಲಸಿಂಹ ಭಯ್ಯಾನು ಅವಳ ಪೂಜೆ ಪೂರೈಸುವ ವರೆಗೆ ಅಲ್ಲಿ ಪಹರೆ ಮಾಡಿ, ನಂತರ ಅವಳನ್ನು ಅವಳ ಬಿಡಾರಕ್ಕೆ ತಲುಪಿಸಿ, ತಾನು ತನ್ನ ಊಟ ಉಡಿಗೆಗಳ ಉದ್ಯೋಗಕ್ಕೆ ಹತ್ತುವ ಪರಿಪಾಠವನ್ನಿಟ್ಟುಕೊಂಡಿದ್ದನು.

ಆಕಸ್ಮಿಕವಾಗಿ ಯಾವನೊಬ್ಬನು ಮಂದಿರದ ಮಹಾದ್ವಾರವನ್ನು ಪ್ರವೇಶಿಸಿದೊಡನೆ, ಭೂಪಾಲಸಿಂಹನು ಆಸನದಿಂದೆದ್ದು, ಮುಂದೆ ಹೋಗದಂತೆ ಅವನನ್ನು ಅಡ್ಡಗಟ್ಟಿ, ಕಠೋರಸ್ವರದಿಂದ—"ಎಲ್ಲಿಗೆ ಹೋಗುತ್ತಿರುವಿರಿ?" ಎಂದು ಪ್ರಶ್ನೆಮಾಡಿದನು.

"ದೇವರ ದರ್ಶನಕ್ಕೆ ಹೋಗುತ್ತಿರುವೆನು." ಎಂದು ಶಿವರಾಯನು ತನ್ನ ದನಿಬದಲಿಸಿ ಉತ್ತರವಿತ್ತನು.

"ಈಗ ದೇವಿಯವರು ಪೂಜೆ ಮಾಡುತ್ತಿರುವದರಿಂದ ನಿಮಗೆ ಒಳಗೆ ಹೋಗಲಿಕ್ಕೆ ಹುಕುಮು ಇರುವದಿಲ್ಲ. ನಾಳೆ ಬೆಳಿಗ್ಗೆ ಬರ್ರಿ."

ಪುನಃ ಶಿವರಾಯನು—"ನಾನು ನಿಮ್ಮ ದೇವಿಯವರ ಭೆಟ್ಟಿಯಾಗಬೇಕಾಗಿರುತ್ತದೆ"

"ಬೆಳಿಗ್ಗೆ ಬಂದರೇ ಅವರ ದರ್ಶನವಾಗುವದು. ರಾತ್ರಿಯಲ್ಲಿ ಅವರಾರಿಗೂ ಭೆಟ್ಟಿಯಾಗುತ್ತಿರುವದಿಲ್ಲ."

ಆಗ ಶಿವರಾಯನು ತನ್ನ ಸ್ವಾಭಾವಿಕ ಸ್ವರದಿಂದ—ಭೂಪಾಲಸಿಂಹ, ನಿನಗೆ ನನ್ನ ಗುರುತು ಹತ್ತುವದಿಲ್ಲವೋ? ನೀನು ಚೆನ್ನಾಗಿರುವೆಯಾ?

ಭೂಪಾಲಸಿಂಹನು ಚಕಿತನಾದನು. ಅವನಿಗೆ ಅವನ ಒಡೆಯನಾದ ಶಿವರಾಯನ ದನಿಯೇ ಇದೆಂದು ಭಾಸವಾಯಿತು. ಇವನೇ ನನ್ನ ಪ್ರಭುವಿರಬಹುದೇನೆಂದು ಅವನಿಗೆ ಅನುಮಾನವಾಯಿತು. ಆಗ ಅವನು ತನ್ನ ಸಂಶಯ ನಿವಾರಣ ಮಾಡಿಕೊಳ್ಳುವದಕ್ಕೆಂದು—"ಈಚೆಗೆ ನನಗೆ ರಾತ್ರಿಯಲ್ಲಿ ಚೆನ್ನಾಗಿ ಕಣ್ಣು ಕಾಣುತ್ತಿರುವದಿಲ್ಲ. ಆದ್ದರಿಂದ ನನಗೆ ತಮ್ಮ ಗುರುತು ಸರಿಯಾಗಿ ಹತ್ತಲೊಲ್ಲದು. ಈ ಬೆಳಕಿಗೆ ಬರುವಿರೇನು?" ಎಂದು ಸೂಚಿಸಲು, ಶಿವರಾಯನು—"ಒಳ್ಳೇದು, ಚೆನ್ನಾಗಿ ದಿಟ್ಟಿಸಿ ನೋಡಿ ಗುರುತು ಹಿಡಿ." ಎಂದೆನ್ನುತ್ತ ದೀಪದ ತೀರಹತ್ತಿರಕ್ಕೆ ಬಂದನು. ಭೂಪಾಲಸಿಂಹನು ಶಿವರಾಯನನ್ನು ಬೆಳಕಿನಲ್ಲಿ ನೋಡಿದ ಕೂಡಲೆ ಗುರ್ತಿಸಿ— "ಸೀತಾರಾಮ! ನನ್ನ ಮಹಾಪರಾಧವನ್ನು ಕ್ಷಮಿಸಬೇಕು ಮಹಾರಾಜ," ಎಂದೆಂದು ಅವನ ಕಾಲುಹಿಡಿದನು. ಶಿವರಾಯನು ಅವನನ್ನು ಹಿಡಿದೆತ್ತಿ,— "ನಿನ್ನದೇನೂ ತಪ್ಪಿರುವದಿಲ್ಲ. ಇದ್ದರೆ ನಿನ್ನಂಥ ಪ್ರಾಮಾಣಿಕ ಸೇವಕನಿರಬೇಕೆ" ಎಂದು ಅಂದು, ಅವನ ಉತ್ತರದ ನಿರೀಕ್ಷಣೆಮಾಡದೆ ನೆಟ್ಟಗೆ ಗುಡಿಯೊಳಗೆ ಪ್ರವೇಶಿಸಿದನು. ಬಹುದಿನಗಳ ನಂತರವಾದ ಒಡೆಯನ ದರ್ಶನಲಾಭದಿಂದ ಭೂಪಾಲಸಿಂಹನು ಆನಂದಾಶ್ರುಗಳನ್ನು ದುರಿಸುತ್ತ ತನ್ನ ಸ್ಥಳದಲ್ಲಿಯೇ ಕುಳಿತನು.

ಶಿವರಾಯನು ಒಳಗೆ ಪ್ರವೇಶಿಸಿ ನೋಡುತ್ತಾನೆ, ಕ್ಷೀಣಕಾಯದ ಕಮಲಾಸುಂದರಿಯು ದೇವರ ಎದುರಿಗೆ ತಲೆಬಾಗಿ—"ಸ್ವಾಮಿ, ಪತಿಯೇ, ಕಮಲೆಯ ದೇವರೇ, ಕಮಲೆಯ ಸರ್ವಸ್ವವೇ; ನೀನು ಎಲ್ಲಿದ್ದರೂ ಬಂದು ಈ ದೀನ ದಾಸಿಗೆ ದರ್ಶನಕೊಡು. ಇವಳ ಅಂತವನ್ನು ನೋಡಬೇಡ. ನಿನ್ನ ಕಮಲೆಯು

ಅವಿಶ್ವಾಸಿನಿಯಲ್ಲ. ನಿನ್ನ ಹೊರತು ಇವಳು ಬೇರೆ ಯಾವುದನ್ನೂ ಎಂದೂ ಚಿಂತಿಸಿರುವದಿಲ್ಲ. ನೀನು ಇಲ್ಲದಂತಾಗಿ ಈ ಸಾವಿತ್ರೀವ್ರತದ ದಿವಸಕ್ಕೆ ೧೨ ವರ್ಷಗಳು ಪೂರಯಿಸಿ ಹೋದವು. ಈ ಲೋಕದಲ್ಲಿ ಇಂದೇ ನನಗೆ ಕಟ್ಟಕಡೆಯ ದಿವಸವು. ಎಲ್ಲಿದ್ದರೂ ಶೀಘ್ರವಾಗಿ ಬಂದು ಒಮ್ಮೆ ನನಗೆ ನಿನ್ನ ಪಾದಗಳ ದರ್ಶನ ಮಾಡಿಸು. ನಾನು ಇನ್ನು ಹೆಚ್ಚು ಕಾಲದವರೆಗೆ ಇಲ್ಲಿ ಇರಲಾರೆನು.'' ಎಂದು ಇಕ್ಷುಕ್ಷೇತ್ರದಲ್ಲಿ ಒಂದುದಿನ ಮಧ್ಯಾಹ್ನ ಸ್ವಪ್ನದಲ್ಲಿ ತಾನು ಯಾವ ತರದ ನೋಟವನ್ನು ನೋಡಿದ್ದನೋ ಅದೇ ರೀತಿ ಪ್ರಾರ್ಥಿಸುತ್ತಿದ್ದಳು.

ಬಹಳಹೊತ್ತು ನಿಂತು ಅವಳ ಈ ಕರುಣಾವಾಣಿಯನ್ನು ಶಿವರಾಯನಿಂದ ಕೇಳುವದಾಗಲಿಲ್ಲ. ಅವನ ಕಣ್ಣಿನಿಂದ ಒಂದೇಸವನೆ ನೀರು ಹರಿಯುತ್ತಿರಲು, ಅವನು ಅವಳ ಹತ್ತಿರಕ್ಕೆ ಹೋಗಿ ಹಿಂದಿನಿಂದ ಅವಳನ್ನು ತನ್ನ ಎರಡೂ ಬಾಹುಗಳಿಂದ ಬಿಗಿದಪ್ಪಿಕೊಂಡು ನಡುಗುವ ದನಿಯಿಂದ——''ಕಮಲಾ!'' ಎಂದು ಕರೆದನು. ಮೈಗೆ ಯಾರೋ ಸ್ಪರ್ಶಮಾಡಿದ ಕೂಡಲೆ ಮುದಿತನಯನದ ಕಮಲೆಯು ತನ್ನ ಪತಿಯು ನಿಜವಾಗಿಯೇ ಬಂದು ತನ್ನನ್ನು ಆಲಿಂಗಿಸಿಕೊಂಡನೆಂದು ಭಾವಿಸಿ, ಕಣ್ತೆರೆದು ನೋಡಿ ಪರಮಾಹ್ಲಾದಿತಳಾಗಿ——''ನೀವು ನಿಜವಾಗಿಯೇ ಬಂದಿರೊ? ನನ್ನ ಸಾವಿತ್ರೀವ್ರತವು ಇಂದು ಸಾರ್ಥಕವಾಯಿತು!'' ಎಂದು ನುಡಿದಳು.

ಆಗ ಅನುತಾಪದಗ್ಧ ಶಿವರಾಯನು ನಡುಗುವದನಿಯಿಂದ ನುಡಿದನೇನೆಂದರೆ——''ಕಮಲೇ, ನಾನು ಘೋರಪಾತಕಿಯು; ನಿನ್ನೆಡೆಯಲ್ಲಿ ಕ್ಷಮೆ ಬೇಡುವದಕ್ಕೆ ಕೂಡ ನನಗಧಿಕಾರವಿಲ್ಲ. ಸುಹೃದಯಳಾದ ನೀನೇ ದಯಮಾಡಿ ನಿನ್ನ ಈ ನಿಷ್ಠುರಪತಿಯನ್ನು ಕ್ಷಮಿಸುತ್ತಿದ್ದರೆ ಕ್ಷಮಿಸು.''

''ಛೀ! ನೀವು ಹಾಗೆ ಮಾತಾಡಿ, ಈ ಪಾಪಿಷ್ಠಳ ಪಾಪವನ್ನು ಹೆಚ್ಚಿಸದಿರಿ. ನೀವು ನನ್ನ ಭಾಗ್ಯದ ದೇವರು. ದೇವರಲ್ಲಿಯಾದರೂ ಅಪರಾಧ ಮಾಡುವದುಂಟೆ? ಈಗ ಹನ್ನೆರಡು ವರ್ಷಗಳಿಂದ ಚಾತಕ ಪಕ್ಷಿಯಂತೆ ನಾನು ನಿಮ್ಮ ದರ್ಶನಕ್ಕಾಗಿ ಕಾದಿದ್ದೆನು. ಇಂದು ಮೇಘರಾದ ನೀವು ವರ್ಷಿಸಿ ನನ್ನ ಇಷ್ಟಾರ್ಥವನ್ನು ಕೈಗೂಡಿಸಿದಿರಿ. ಎಲ್ಲಕ್ಕೂ ಮೊದಲು ನಾನು ನಿಮಗೆ ತಿಳಿಸಬೇಕೆಂದಿದ್ದ ಸಂಗತಿಯೇನಂದರೆ ''ನಾನು ಅವಿಶ್ವಾಸಿನಿಯಲ್ಲ. ತಮ್ಮ ಹೊರತು ನಾನು ಯಾರನ್ನೂ ಚಿಂತಿಸಿರುವದಿಲ್ಲ'' ಎಂದು ನನ್ನ ಆಸೆಯು ಫಲಿಸಿತು, ನಿಮ್ಮ ಭೇಟಿಯಾಯಿತು; ಇನ್ನು ನನ್ನ ಮನಸ್ಸಿನಲ್ಲಿ ಯಾವ ದುಃಖವೂ ಕ್ಷೋಭವೂ ಕಿಂಚಿತ್ತಾದರೂ ಉಳಿದಿರುವದಿಲ್ಲ. ನೀವು ನನ್ನನ್ನು ಬಿಗಿದಪ್ಪಿಕೊಂಡು ಬಹು ಹೊತ್ತು ಕುಳಿತುಕೊಳ್ಳಿರಿ.

ನನಗೆ ಹೇಗೆ-ಹೇಗೋ ಆಗುತ್ತದೆ ....'' ಎಂದಳು.

ಶಿವರಾಯನು ಕಮಲೆಯನ್ನು ತನ್ನ ತೊಡೆಯಮೇಲೆ ಕುಳ್ಳಿರಿಸಿಕೊಂಡು ಅಶ್ರುಗಳಿಂದ ಅವಳ ಮುಖಮಾರ್ಜನ ಮಾಡಹತ್ತಿದನು. ಆಗ ಕ್ಷೀಣಸ್ವರದಿಂದ ಕಮಲೆಯು—''ಛೀ, ಅಳಬೇಡಿರಿ. ನನ್ನಸಲುವಾಗಿ ತಾವೆಂದೂ ಕಣ್ಣೀರು ಹಾಕಬೇಡಿರಿ. ನಾನು ಪರಮಭಾಗ್ಯವತಿಯು. ನನ್ನ ಸೌಭಾಗ್ಯತಿಲಕದ ಬಲದಿಂದಲೇ ನೀವು ಇಂದು ನನಗೆ ಆಕಸ್ಮಿಕವಾಗಿ ಲಭಿಸಿರುವಿರಿ'' ಎಂದು ನುಡಿದು, ಒಮ್ಮೆಲೆ ನೆಲಕ್ಕೆ ಹೌಹಾರಿ ಬಿದ್ದುಕೊಂಡಳು.

ಎಷ್ಟೋ ಹೊತ್ತಿನವರೆಗೆ ಪತ್ನಿಯು ಹಾಗೇಕೆ ಬಿದ್ದುಕೊಂಡಿರುವಳೆಂಬುದು ಶಿವರಾಯನಿಗೆ ತಿಳಿಯಲಿಲ್ಲ. ನಂತರ ಅವನು ಹೆಂಡತಿಯ ಮೂಗಿಗೆ ಕೈಹಿಡಿದು ನೋಡಲು, ಅವಳ ಉಸುರು ಕೂಡ ಮಂದವಾಗಿ ಆಡಲಾರಂಭಿಸಿತ್ತು. ಅದನ್ನು ಕಂಡು ಗಾಬರಿಯಾಗಿ ಅವನು ಭಯ್ಯಾನನ್ನು ಕೂಗಿದನು. ಭಯ್ಯಾನು ವಿಮಲೆ ಹಾಗು ಹೇಮಾವತಿಯರನ್ನು ಕೂಗಿ ಅವರಿಗೆ ತನ್ನ ಒಡೆಯನ ಆಕಸ್ಮಿಕ ಆಗಮನವನ್ನೂ ತನ್ನ ಒಡೆಯಳು ನಿಶ್ಚೇಷ್ಟಿತಳಾಗಿ ಬಿದ್ದಿರುವುದನ್ನೂ ತಿಳಿಸಿದನು. ಅವರು ಧಾವಿಸುತ್ತ ಬಂದು ಕಮಲೆಯ ಮುಖಲಕ್ಷಣವನ್ನು ನೋಡಿ ಊಹಿಸಿದರೇನೆಂದರೆ— ಇವಳಿಗೆ ತಮ್ಮ ಪತಿಗಾದಂತೆ ಹರ್ಷವಾಯುವೇ ಆಗಿರಲಿಕ್ಕಬೇಕು. ಕೂಡಲೆ ಡಾಕ್ಟರನ್ನು ಕರೆಯಿಸಿ ಪರೀಕ್ಷೆಮಾಡಿಸಲು, ಅವರ ತರ್ಕವು ನಿಜವಾಯಿತು. ಡಾಕ್ಟರನು ಅಮೃತರಾಯನಿಗೆ ಆ ವಿಕಾರವಾದಾಗ ಹೇಳಿದಂತೆ, ಈಕೆಗೂ ಹಾಗೆಯೇ ಉಪಚಾರಮಾಡ ಹೇಳಿದನು. ಶಿವರಾಯ, ಭೂಪಾಲಸಿಂಹ ವಿಮಲೆ ಹಾಗು ಹೇಮಾವತಿಯರು ಕಮಲಾಸುಂದರಿಯು ಆ ವಿಕಾರದಿಂದ ಪಾರಾಗುವವರೆಗೆ ಬಹು ಜೋಕೆಯಿಂದ ಅವಳ ಶುಶ್ರೂಷೆ ಮಾಡಿದರು.

## ಇಪ್ಪತ್ತೊಂದನೆಯ ಪರಿಚ್ಛೇದ.

# ಉಪಸಂಹಾರ.

ಮುಂದೆರಡುದಿನಗಳಿಗೆ ಕಮಲಾಸುಂದರಿಯು ಆ ಘೋರಬೇನೆಯಿಂದ ಎದ್ದಳು. ಆಗ ಶಿವರಾಯನಿಗಾದ ಆನಂದವನ್ನು ಯಥಾರ್ಥವಾಗಿ ಬಣ್ಣಿಸಿ ಹೇಳುವಷ್ಟು ಶಕ್ತಿಯು ನಮ್ಮ ಲೆಕ್ಕಣಿಕೆಯಲ್ಲೆಲ್ಲಿಂದ ಬರಬೇಕು? ಆ ಆನಂದದ ಪಡಿಕಟ್ಟನ್ನು ಸುಗುಣಪೂರ್ಣವಾಚಕ ದಂಪತಿಗಳು ಸ್ವಾನುಭವದಿಂದಲೇ ತಿಳಕೊಳ್ಳತಕ್ಕದ್ದಾಗಿದೆ; ಇರಲಿ.

ನಂತರ ಶಿವರಾಯನು ಪುನಃ ಇಕ್ಷುದ್ವೀಪದೊಳಗಿನ ತನ್ನ ಮಾಲಕಿಯ ಆ ಕಂಪನಿಗೆ ಹೋಗಲೇ ಇಲ್ಲ. ಆ ಕಂಪನಿಯ ಸಂಪೂರ್ಣ ಹಕ್ಕನ್ನು ನಾರಾಯಣ ದೀಕ್ಷಿತನಿಗೇ ಇನಾಮುಪತ್ರ ಬರೆದು ಒಪ್ಪಿಸಿಬಿಟ್ಟನು; ಹಾಗೂ ನಾಗಪೂರಪ್ರಾಂತದ ಕಾರಖಾನೆಗಳನ್ನಾದರೂ ರಾಮರಾಯನಿಗೇ ಒಪ್ಪಿಸಿ, ಅವನಿಂದ ಅಲ್ಪಸ್ವಲ್ಪ ಉಳಿಕಾಯವು ಬರುವ ವ್ಯವಸ್ಥೆ ಮಾಡಿ, ತಾನು ತನ್ನ ಪ್ರಿಯಪತ್ನಿಯೊಡನೆ ಆ ಕೈಲಾಸಪುರಿಯಲ್ಲಿಯೇ ಸುಖವಾಗಿ ಇರಹತ್ತಿದನು. ಮುಂದೆ ಕೆಲದಿನಗಳಲ್ಲಿಯೇ ಆ ದಂಪತಿಗಳು ಶಿವರೂಪ ರಜ್ಜುವಿನಿಂದ ಬಿಗಿಯಲ್ಪಟ್ಟು, ಪರಮಾನಂದದಿಂದ ಶ್ರೀ ವಿಶ್ವೇಶ್ವರನ ಸನ್ನಿಧಿಯಲ್ಲಿ ಕಾಲಹರಣ ಮಾಡತೊಡಗಿದರು.

* * * * * * * * * * * * * * *

ಈಚೆಗೆ ವಿಮಲೆಯೇ ಕಮಲಾಸುಂದರಿಯು ಸ್ಥಾಪಿಸಿದ್ದ ಆ ಅನಾಥಾಲಯದ ಮುಖ್ಯಸ್ಥಳು. ಸೋಮಾವತಿಯು ಒಡಹುಟ್ಟಿದ ಸಹೋದರಿಯಂತೆ ಅವಳ ಪ್ರತಿಯೊಂದು ಕೆಲಸದಲ್ಲಿ ಸಹಾಯಕಳು. ಆ ಇಬ್ಬರು ಭಗಿನಿಯರ ಸುವ್ಯವಸ್ಥೆಯ ಮೂಲಕ ಆ ಅನಾಥಾಲಯವು ಬಹು ಚನ್ನಾಗಿ ನಡೆದಿರುತ್ತದೆ; ಅದರಿಂದ ಆ ಸೌಭಾಗ್ಯವಿಹೀನ ಭಗಿನಿಯರ ಆತ್ಮಗಳಿಗೂ ಹೆಚ್ಚಾಗಿ ಸಮಾಧಾನವುಂಟಾಗುತ್ತಲಿದೆ.

† † † † † † † † † † † † † † †

ಶಿವರಾಯನು ಆಸ್ಪತ್ರೆಯಿಂದ ಕಾಲ್ತೆಗೆದ ಕೆಲವು ತಾಸುಗಳಲ್ಲಿಯೇ ನಮ್ಮ ಪಾಪಿಹೃದಯದ ಕೃತಘ್ನ ರಾಮಚಂದ್ರನು ತನ್ನ ಇಹಲೋಕದ ಘೋರಯಾತ್ರೆಯನ್ನು ಮುಗಿಸಿ ನಡೆದನು. ಆ ಭಯಂಕರ ಪಾಪಿಯು ಯಮಲೋಕದಲ್ಲಿ ಎಂಥ ನೀಚಸ್ಥಾನದಲ್ಲಿ ಕೊಳೆಯಬೇಕಾಗುವದೋ ಯಾರುಬಲ್ಲರು! ಆದರೂ ನಮ್ಮ ರಾಮಚಂದ್ರನನ್ನು ಅಷ್ಟು ಭಯಂಕರ ಕೀಳು ನರಕಕ್ಕೆ ಒಯ್ಯಿರಲಿಕ್ಕಿಲ್ಲೆಂತ ನಮ್ಮ ಭರವಸೆಯಿದೆ. ಯಾಕಂದರೆ, ಸಾಯುವಕಾಲಕ್ಕೆ ಕೃತಕರ್ಮದ ಬಗ್ಗೆ ಪಶ್ಚಾತ್ತಾಪವಾಯಿತೆಂದರೆ, ಎಂಥ ಘೋರಪಾತಕಿಗಾದರೂ ಸದ್ಗತಿಯು ಲಭಿಸುವದೆಂದು ನಮ್ಮ ಹಿಂದೂ ಧರ್ಮಶಾಸ್ತ್ರಗಳಲ್ಲಿ ಹೇಳಿರುವದರಿಂದ, ಮರಣಕಾಲಕ್ಕೆ ಪಶ್ಚಾತ್ತಾಪಾಗ್ನಿಯಿಂದ ಸಂಪೂರ್ಣವಾಗಿ ಬೆಂದುಹೋಗಿದ್ದ ನಮ್ಮ ರಾಮಚಂದ್ರನಿಗೆ ಸದ್ಗತಿಯೇ ಲಭಿಸಿರಲಿಕ್ಕೆ ಬೇಕು.

ಶಿವರಾಯನು ಕಾಶೀನಗರದಿಂದ ಬರೆದ ಪತ್ರವು ಯಥಾವಕಾಶದಲ್ಲಿ ಇಕ್ಷುಕ್ಷೇತ್ರದಲ್ಲಿರುವ ನಾರಾಯಣದೀಕ್ಷಿತನಿಗೆ ಬಂದು ತಲುಪಿತು. ಆ ಪತ್ರದಲ್ಲಿ ಬರೆದಿದ್ದ "ನಾನು ಇನ್ನು ಬರಲಾರೆನು. ಕಂಪನಿಯ ಸಂಪೂರ್ಣ ಮಾಲಕಿಯನ್ನು ನಿನಗೇ ಒಪ್ಪಿಸಿರುವೆನು. ನಮ್ಮ ಹಿಂದು ಕೂಲಿಗಳಿಗೆ ಇಕ್ಷುಕ್ಷೇತ್ರಗಳಲ್ಲಾಗುತ್ತಿರುವ ಅಪಮಾನ-ಪೀಡೆಗಳನ್ನು ನಷ್ಟಗೊಳಿಸುವ ಕೆಲಸವನ್ನು ನೀನು ಶಕ್ತಿಮೀರಿ ಮಾಡಬೇಕೆಂಬುದೇ ನನ್ನ ಕಡೆಯ ಸೂಚನೆಯಿರುತ್ತದೆ" ಸಂಗತಿಯನ್ನು ಓದಿ ನಾರಾಯಣದೀಕ್ಷಿತನಿಗೆ ತಾನು ಒಂದು ಕಂಪನಿಯ ಮಾಲಕನಾದೆನೆಂಬ ಅಲಭ್ಯಲಾಭದ ಆನಂದಕ್ಕಿಂತ, ಶಿವರಾಯನಂಥ ಪ್ರೇಮಲ ಅಂತಃಕರಣದ ಒಡೆಯನು ತನ್ನನ್ನಗಲಿ ಸ್ವದೇಶಕ್ಕೆ ಹೋದನೆಂಬ ದುಃಖವು ವಿಶೇಷವಾಯಿತು. ಆದರೆ ಮಾಡುವದೇನು? ನಾರಾಯಣದೀಕ್ಷಿತನು ಒಳ್ಳೇ ವಿವೇಕಿಯೂ ಪ್ರಸಂಗಾವಧಾನಿಯೂ ಇದ್ದದರಿಂದ ಅವನು ಆ ತನ್ನ ದುಃಖವನ್ನು ಬದಿಗೊತ್ತಿ, ಸ್ವಕರ್ತವ್ಯಕ್ಕೆ ಸಿದ್ಧನಾದನು. ನಾರಾಯಣದೀಕ್ಷಿತನೇ ಮಾಲಕನೆಂದು ಜಾಹೀರಾದ ಬಳಿಕ ಆ ಇಕ್ಷುದ್ವೀಪದೊಳಗಿನ ಎಲ್ಲ ಕರಾರುಬದ್ಧ ಹಿಂದೀ ಕೂಲಿಗಳಿಗೂ ಅತ್ಯಾನಂದವಾಯಿತು. ಯಾಕಂದರೆ ಅಲ್ಲಿಯ ಕೂಲೀ ಜನರಿಗೆ ಇಕ್ಷುಕ್ಷೇತ್ರಗಳ ವಣಿಕರಿಂದ ಯಾವ ಅಲ್ಪ-ಸ್ವಲ್ಪ ರಿಯಾಯತಿಗಳು ದೊರೆತಿದ್ದವೋ, ಅವೆಲ್ಲವುಗಳೂ ನಾರಾಯಣದೀಕ್ಷಿತನ ಪ್ರಯತ್ನದಿಂದಲೇ.

ನಂತರ ನಾರಾಯಣದೀಕ್ಷಿತನು ಇಂಗ್ಲಂಡ ಅಮೇರಿಕಾ ಮುಂತಾದ ಸ್ವತಂತ್ರರಾಷ್ಟ್ರಗಳಲ್ಲಿನ ಪ್ರಮುಖ್ಯವಾದ ವರ್ತಮಾನಪತ್ರಗಳ ಸಂಪಾದಕರಿಗೆ ಕೈಸಡಿಲಬಿಟ್ಟು ಧನಸಹಾಯ ಮಾಡಿ, ಅವರ ಪತ್ರಗಳ ಮುಖಾಂತರ ಇಕ್ಷುದ್ವೀಪಗಳಲ್ಲಿ ಹಿಂದೀ ಕೂಲಿಕಾರರಿಗಾಗುತ್ತಿರುವ ಘೋರ ಹಿಂಸೆಗಳನ್ನು ಜಗತ್ತಿನ ಜನರ ನಿದರ್ಶನಕ್ಕೆ ತರಲಾರಂಭಿಸಿದನು. ಅವನ ಆ ಪ್ರಯತ್ನಕ್ಕೆ ತೀವ್ರವೇ ಕಲ್ಪನಾತೀತ ಯಶದೊರೆತು, ದ್ವೀಪಾಂತರಗಳಲ್ಲಿ ಕರಾರುಬದ್ಧ ಕೂಲಿಗಳನ್ನು ಒಯ್ಯಬಾರದೆಂದು ಸರಕಾರದಿಂದ ಮೊನ್ನೆ ಮೊನ್ನೆ ನಿಷ್ಕರ್ಷಿಸಲ್ಪಟ್ಟಿತು. ಆದರೂ ಅಲ್ಲಿಯ ಘಾತಕ ವಣಿಕರು ದಂಡಧಾರಿಗಳಿಗೂ ಪ್ರಜೆಗಳಿಗೂ ಅನೇಕತರದ ಆಮಿಷವನ್ನು ತೋರಿಸಿ, ಈಗಲೂ ಇಲ್ಲಿಯ ಎಷ್ಟೋ ಜನಪದ ಹಿಂದೀ ಕೂಲಿಗಳನ್ನು ಅಲ್ಲಿಗೆ ಒಯ್ಯು ಹಿಂಸಿಸುತ್ತಿರುವದು ಕಡು ಶೋಚನೀಯ ಸ್ಥಿತಿಯಾಗಿರುತ್ತದೆ!!!

**ದೇವರು ಎಲ್ಲರಲ್ಲಿಯೂ ಭ್ರಾತೃಭಾವವನ್ನು ನೆಲೆಗೊಳಿಸಲಿ!**

[ಸಂಪೂರ್ಣ.]